
ಡಿ.ಎ.ಪಾಂಡು ಸ್ಮೃತಿ ಗ್ರಂಥಮಾಲೆ – 31

ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ



ವಿನಯ್ ಫೌಂಡೇಷನ್, ಬೆಂಗಳೂರು

ಡಿ.ಎ ಪಾಂಡು ಸ್ಮೃತಿ ಗ್ರಂಥಮಾಲೆ-31

ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ

ಪ್ರಧಾನ ಸಂಪಾದಕರು
ಡಾ. ಟಿ.ವಿ ರಾಜು

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ
ಪ್ರೊ. ಬಿ.ಕೆ ಗೋಪಣ್ಣ

ಪ್ರಕಾಶಕರು
ವಿನಯ್ ಫೌಂಡೇಷನ್
ಬೆಂಗಳೂರು
2024

ಗ್ರಂಥ : ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ
(ಡಿ.ಎ ಪಾಂಡು ಸ್ಮೃತಿ ಗ್ರಂಥಮಾಲೆ–31)
ಪ್ರಕಾಶಕರು : ವಿನಯ್ ಫೌಂಡೇಷನ್, ಬೆಂಗಳೂರು
ಆಕಾರ : 1/8 ಡೆಮ್ಮಿ
ಬಳಸಿದ ಕಾಗದ : 70 ಜಿಎಸ್ಎಂ
ಪುಟಗಳು : xvi + 294
ಮೊದಲ ಮುದ್ರಣ : 2024
ಬೆಲೆ : ರೂ. 250/–

ಮುದ್ರಕರು : ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ನಂ. 3/3, 1ನೇ ಮುಖ್ಯರಸ್ತೆ,
ಹೊಸ ತರಗುಪೇಟೆ, ಬೆಂಗಳೂರು – 560 002
ದೂರವಾಣಿ : 080 2670 8126/87, 2670 9026
E-mail : omkaroffset@gmail.com
Website : www.omkaroffset.com

ಪ್ರಕಾಶಕರ ನುಡಿ

ಕರ್ನಾಟಕ ಇತಿಹಾಸದಲ್ಲಿ ಬೆಂಗಳೂರು ನಗರದ ಇತಿಹಾಸವು ವಿಶಿಷ್ಟವಾಗಿದೆ; ವಿಶೇಷವಾಗಿದೆ. ಕನ್ನಡಿಗರ ರಾಜಧಾನಿಯಾದ ಬೆಂಗಳೂರಿನಲ್ಲಿ ಅತ್ಯಧಿಕ ಶಿಕ್ಷಣ ಸಂಸ್ಥೆಗಳು 19 ನೇ ಶತಮಾನದಲ್ಲಿ ವಿದೇಶೀ ಮಿಷನರಿ ಸಂಸ್ಥೆಗಳಿಂದ ಮತ್ತು ದೇಶೀಯ ಶಿಕ್ಷಣ ಪ್ರೇಮಿಗಳ ಹಾಗೂ ಸಾಹಿತಿ-ವಿದ್ವಾಂಸರಿಂದ ಪ್ರಾರಂಭಗೊಂಡವು. ಸಾರ್ವಜನಿಕ ಸೇವಾ ದುರಂಧರರಾದ ಅನೇಕ ಗಣ್ಯ ವ್ಯಕ್ತಿಗಳು ವೈಯಕ್ತಿಕ ಬದುಕಿನ ಕಷ್ಟ ನಷ್ಟಗಳನ್ನು, ಸುಖ ದುಃಖಗಳನ್ನು ಸಾಂಸಾರಿಕ ತಾಪತ್ರಯಗಳನ್ನು, ರೋಗ ರುಜಿನ, ಬಡತನ ದಾರಿದ್ರ್ಯಗಳನ್ನು ಲೆಕ್ಕಿಸದೆ ಹಲವಾರು ಮಹನೀಯರು ನಮ್ಮ ಜನ ವಿದ್ಯಾವಂತರಾಗಬೇಕು, ಅಕ್ಷರ ಶ್ರೀಮಂತರಾಗಬೇಕು ಎಂದು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು.

ಹಾಗೇ ಶ್ರಮಿಸಿದ ಮಹನೀಯರ ನಿಸ್ವಾರ್ಥ ಸೇವೆ, ಸತತ ಪರಿಶ್ರಮ, ಆದರ್ಶಗಳ ಪರಿಪಾಲನೆ, ಸಾರ್ವಜನಿಕ ಹಿತದೃಷ್ಟಿ ಮುಂದಿನ ಜನಾಂಗವಾದ ಕನ್ನಡ ಮಕ್ಕಳು ಸುಸಂಸ್ಕೃತರಾಗಿ ನಾಡಿಗೆ ನುಡಿಗೆ ಅಪೂರ್ವ ಸೇವೆ ಸಲ್ಲಿಸುವ ರೀತಿಯಲ್ಲಿ ಶಿಕ್ಷಣ ಪಡೆಯಬೇಕು ಎಂಬ ಧ್ಯೇಯೋದ್ದೇಶಗಳಿಂದ ಶ್ರಮಿಸಿದವರು ಶಾಲಾ ಕಾಲೇಜುಗಳನ್ನು ಸ್ಥಾಪಿಸಿದವರು ಅನೇಕರಿದ್ದಾರೆ. ಅಂಥ ಮಹನೀಯರ ಪರಿಶ್ರಮದಿಂದ ತ್ಯಾಗಜೀವನದಿಂದ ಬೆಂಗಳೂರು ಇಂದು ಆಧುನಿಕ ವಿದ್ಯಾಸಂಸ್ಥೆಗಳ

ನಗರಿಯಾಗಿದೆ. ಹೀಗೆ ಬೆಂಗಳೂರಿನ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ದುಡಿದ ಮಹನೀಯರನ್ನು ಅವರ ಸೇವೆಯನ್ನು, ವ್ಯಕ್ತಿತ್ವವನ್ನು ಇಂದಿನ ತಲೆಮಾರಿಗೆ ಪರಿಚಯಿಸಬೇಕು. ಅವರ ವ್ಯಕ್ತಿತ್ವ, ಜೀವನ ಸಾಧನೆ ಯುವ ಜನಾಂಗಕ್ಕೆ ಸ್ಫೂರ್ತಿ ಚೈತನ್ಯ ನೀಡಬೇಕು ಎಂಬ ಧ್ಯೇಯ ನಮ್ಮದು. ಬೆಂಗಳೂರಿನಲ್ಲಿ ವಿನಯ್ ಫೌಂಡೇಷನ್ ಅನೇಕ ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ವಿದ್ಯಾರ್ಥಿಗಳಿಗೆ, ಯುವಜನರಿಗೆ ಉಪಯುಕ್ತವಾದ ಹಲವಾರು ಬಿಡಿ ಕನ್ನಡ ಗ್ರಂಥಗಳನ್ನು ಪ್ರಕಟಿಸಿದೆ.

ಇದುವರೆಗೆ ಆರ್.ವಿ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನ ಸಂಸ್ಥೆ ಸಿಂಚನ ಕನ್ನಡ ವೇದಿಕೆಯಿಂದ ಡಿ.ಎ ಪಾಂಡು ಸ್ಮೃತಿ ಗ್ರಂಥಮಾಲೆಯಲ್ಲಿ 30 ಗ್ರಂಥಗಳು ಪ್ರಕಟವಾಗಿ ಅವೆಲ್ಲವೂ ಜನಾದರಣೀಯವಾಗಿವೆ. ಡಿ.ಎ ಪಾಂಡು ಸ್ಮೃತಿ ಗ್ರಂಥಮಾಲೆಯ 31 ನೇ ಪ್ರಕಟನೆಯಿಂದ ವಿನಯ್ ಫೌಂಡೇಷನ್ ಸಾಹಿತ್ಯ ಪ್ರಕಟನ ಮಾಲೆಯನ್ನು ಮುಂದುವರೆಸಿಕೊಂಡು ಹೋಗಲು ನಿರ್ಧರಿಸಿ 2024 ರಲ್ಲಿ ವಿನಯ್ ಫೌಂಡೇಷನ್ ಸಾಹಿತ್ಯ ಮಾಲೆ ಹೆಸರಿನಲ್ಲಿ ಕನ್ನಡ ಗ್ರಂಥಗಳ ಪ್ರಕಟನ ಕಾರ್ಯವನ್ನು ಮುಂದುವರೆಸಲು ನಿರ್ಧರಿಸಿದೆ. ಈ ಮೂಲಕ ಡಿ.ಎ ಪಾಂಡು ಸ್ಮೃತಿಯ ಗ್ರಂಥಮಾಲೆಯಲ್ಲಿ 100 ಗ್ರಂಥಗಳನ್ನು ಪ್ರಕಟಿಸುವ ಸಂಕಲ್ಪವನ್ನು ವಿನಯ್ ಫೌಂಡೇಷನ್ ಮಾಡಿದೆ. ಇದರಂಗವಾಗಿ ಡಿ.ಎ ಪಾಂಡು ಸ್ಮೃತಿ ಗ್ರಂಥಮಾಲೆಯ 31ನೇ ಪ್ರಕಟನೆಯಾಗಿ ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ ವೆಂಬ ಗ್ರಂಥ ಇದೀಗ ವಿನಯ್ ಫೌಂಡೇಷನ್ ನಿಂದ ಪ್ರಕಟವಾಗುತ್ತಿದೆ.

ಈಗ ಪ್ರಕಟವಾಗುತ್ತಿರುವ ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ ಗ್ರಂಥವು ಬೆಂಗಳೂರಿನಲ್ಲಿ 20 ನೇ ಶತಮಾನದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ತಮ್ಮ ತನುಮನ ಧನಗಳನ್ನು ಸವೆಸಿ, ಕಡುಬಡತನವಿದ್ಧರೂ ಲೆಕ್ಕಿಸದೆ ಹಗಲಿರುಳು ಸಾರ್ವಜನಿಕ ಸೇವೆಯಲ್ಲಿ ತೊಡಗಿ, ಶಿಕ್ಷಣ ಪ್ರೇಮಿಗಳಾಗಿ ವಿದ್ಯಾ ಸಂಸ್ಥೆಗಳನ್ನು ನರ್ಸರಿ ಶಾಲೆಗಳು, ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಅವುಗಳನ್ನು ವಿಶ್ವವಿದ್ಯಾಲಯಗಳಾಗುವ ಹಂತದವರೆಗೆ ಬೆಳೆದು ನಾಡು ನುಡಿಗಳ ಸೇವೆಗೆ ಕಾರಣಕರ್ತರಾದ ಸ್ಥಾಪಕ ಮಹನೀಯರ ಜೀವನ ಸಾಧನೆ ಇಂದಿನ ಯುವ ಜನಕ್ಕೆ ತಿಳಿಸಬೇಕು ಆ ಮೂಲಕ ಅವರು ಸ್ಫೂರ್ತಿ ಹೊಂದಿ ನವಚೈತನ್ಯದಿಂದ ಇನ್ನೂ ಹೆಚ್ಚುಹೆಚ್ಚಾಗಿ ಶಿಕ್ಷಣ ಸೇವೆಯಲ್ಲಿ ಮುನ್ನಡೆಯಬೇಕು ಎಂಬ ಸದಾಶಯದಿಂದ ಈ ಗ್ರಂಥವನ್ನು

ಪ್ರಕಟಿಸುತ್ತಿದ್ದೇವೆ. ಅಂದು ಹತ್ತಾರು ವರ್ಷಗಳ ಹಿಂದೆ ದುಡಿದು ಮಾಡಿದ ಶಿಕ್ಷಣ ಸೇವೆ ಮೂಲಕ ಅಮರರಾದ ಧನ್ಯರಾದ ಮಹನೀಯರ ಪರಿಚಯವನ್ನು, ಅವರು ಸಸಿಯಾಗಿ ನೆಟ್ಟ ಶಿಕ್ಷಣ ಸಂಸ್ಥೆ ಇಂದು ಬೃಹದ್ ವೃಕ್ಷವಾಗಿ ಬೆಳೆದುದನ್ನು, ಆ ಮಹಾವೀರರ ಸಾರ್ಥಕ ಜೀವನ, ಆದರ್ಶ ಧ್ಯೇಯಗಳನ್ನು ಈ ಕೃತಿ ಸರಳ ಸುಂದರವಾಗಿ ನಿರೂಪಿಸುತ್ತದೆ. ಕನ್ನಡಿಗರಿಗೆ ಇಂತಹ ನೂರಾರು ಗ್ರಂಥಗಳನ್ನು ನೀಡಬೇಕೆಂದಿರುವ ವಿನಯ್ ಫೌಂಡೇಷನ್ ನನ್ನು ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಟಿ. ವಿ ರಾಜು
ಪ್ರಧಾನ ಸಂಪಾದಕರು
ವಿನಯ್ ಫೌಂಡೇಷನ್ ಸಾಹಿತ್ಯ ಸಮಿತಿ

ಸಂಪಾದಕರ ಮಾತು

ಕನ್ನಡ ನಾಡಿನಲ್ಲಿ ಶಿಕ್ಷಣ ರಂಗಕ್ಕೆ ಸಂಬಂಧಿಸಿದಂತೆ ಸಾವಿರಾರು ಗ್ರಂಥಗಳು ಪ್ರಕಟವಾಗಿವೆ. ಆ ಪೈಕಿ ಶಾಲಾ ಕಾಲೇಜುಗಳ ಸ್ಥಾಪನೆಗೆ, ವಿದ್ಯಾ ಪ್ರಸಾರಕ್ಕೆ ಶ್ರಮಿಸಿದವರು, ಅದಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟು ದುಡಿದವರು, ಮಡಿದವರು ಹತ್ತಾರು ಮಂದಿ. ಏಕಾಂಗಿಗಳಾಗಿ ತಮ್ಮ ಕುಟುಂಬ ಜೀವನ ನಡೆಸುವುದೇ ಕಷ್ಟವಾಗಿದ್ಧರೂ ಲೆಕ್ಕಿಸದೇ ಕನ್ನಡ ಮಕ್ಕಳು ವಿದ್ಯಾವಂತರಾಗಬೇಕೆಂದು ತನು ಮನ ಧನಗಳಿಂದ, ರೋಗ ರುಜಿನಗಳಿಂದ ಪೀಡಿತರಾದರೂ ಲೆಕ್ಕಿಸದೇ ಅಹೋರಾತ್ರಿ ಶ್ರಮಿಸಿದ ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಜೀವನ - ಸಾಧನೆ, ಎಲ್ಲಕಾಲಕ್ಕೂ ಆದರ್ಶಪ್ರಾಯವಾಗಿದೆ, ಸ್ಫೂರ್ತಿದಾಯಕವಾಗಿದೆ. ಆದರೆ ಹಿಂದಿನ ತಲೆಮಾರಿನ ಆ ಮಹಾಪುರುಷರ ತ್ಯಾಗ, ಜೀವನಾದರ್ಶಗಳು ಇಂದಿನ ಯುವ ಜನಾಂಗಕ್ಕೆ ತಿಳಿದಿಲ್ಲ. ಇದನ್ನು ತಿಳಿಸುವ ಕಾರ್ಯದ ಅಂಗವಾಗಿ ಒಂದು ಕಿರು ಪ್ರಯತ್ನವಾಗಿ ಬೆಂಗಳೂರು ನಗರದಲ್ಲಿರುವ ಹಳೆಯ, ಹಿರಿಯ, ಗಣ್ಯ ಶಾಲಾ-ಕಾಲೇಜುಗಳ ಸ್ಥಾಪಕರನ್ನು ಹತ್ತಾರು ಮಂದಿಯ ಜೀವನ ಮತ್ತು ಸಂಸ್ಥೆಗಳಿಗೆ ಶ್ರಮಿಸಿದ ಪರಿಯನ್ನು ಜನರ ಮುಂದಿಡಬೇಕು. ನೆನ್ನೆಯಿಂದ ಇಂದು, ಇಂದಿನಿಂದ ನಾಳೆ ಎಂಬ ತತ್ವದ ಅನುಸಾರ ನಿನ್ನೆಯ ಇತಿಹಾಸ ಇಂದಿಗೆ ಸ್ಫೂರ್ತಿ ಮುಂದಿನ ಜನಕ್ಕೆ

ಬುನಾದಿ ಎಂಬ ದೃಷ್ಟಿಯಿಂದ ನಮಗೆ ಸಾಧ್ಯವಾದಷ್ಟು ಹಿರಿಯ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ಪರಿಚಯವನ್ನು ನೀಡುವ ಶಿಕ್ಷಣ ಗ್ರಂಥವನ್ನು ಸಂಪಾದಿಸಿದ್ದೇವೆ. ಇನ್ನೂ ಅನೇಕ ವಿದ್ಯಾಸಂಸ್ಥೆಗಳ ಸಂಸ್ಥಾಪಕರನ್ನು ಗುರುತಿಸಬೇಕಾಗಿದೆ. ಅವರ ಬಗ್ಗೆ, ಅವರು ಕಟ್ಟಿದ ಸಂಸ್ಥೆಗಳ ಇತಿಹಾಸದ ಬಗ್ಗೆ ಗ್ರಂಥಗಳು ಬರಬೇಕಾಗಿದೆ. ಆ ದಿಸೆಯಲ್ಲಿ ಈ ಗ್ರಂಥ ಒಂದು ಅಳಿಲ ಸೇವೆ. ಉಳಿದ ಪ್ರಕಾಶನ ಸಂಸ್ಥೆಗಳು ಮಹನೀಯರು ಈ ಕೆಲಸವನ್ನು ಮುಂದುವರೆಸುತ್ತಾರೆ. ಅದಕ್ಕೆ ವಿದ್ಯಾ ಸಂಸ್ಥೆಗಳ ಸಂಸ್ಥಾಪಕರ ಕಥನ ಗ್ರಂಥ ನಾಂದಿಯಾಗಿದೆ ಎಂದು ಭಾವಿಸಿದ್ದೇವೆ.

ಈ ಗ್ರಂಥದಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ಸಂಸ್ಥೆಯೂ ಒಂದೊಂದು ಸಾಹಸಮಯ ಬೆಳವಣಿಗೆಯ ಕಥೆ ಆಗಿದೆ. ಒಂದಕ್ಕಿಂತಲೂ ಒಂದು ಮೇಲು ಎನ್ನುವಂತಹ ಕಥಾಪ್ರಸಂಗಗಳು, ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿತವಾದ ಹಲವಾರು ಶಾಲೆಗಳು. ಪ್ರತಿಯೊಂದರ ಸ್ಥಾಪನೆಗೆ ಒಂದೊಂದು ಮಹತ್ತರವಾದ ಕಾರಣ. ಕೆಲವು ಶಾಲೆಗಳಲ್ಲಿ ಶಿಕ್ಷಣ ಬೋಧನೆಯ ಜೊತೆ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಸಿರುವ ಪ್ರಸಂಗಗಳು ನಡೆದಿವೆ. ಎರಡು ಮೂರು ಶಾಲೆಗಳ ಪ್ರಾರಂಭದ ಹಿಂದೆ ಮಹಾತ್ಮ ಗಾಂಧೀಜಿಯವರ ಆದರ್ಶಗಳು ಎದ್ದು ಕಾಣುತ್ತವೆ. ಕೆಲವು ಸಂಸ್ಥೆಗಳ ಸ್ಥಾಪಕರು ಶಾಲೆ ಬೆಳವಣಿಗೆಗಾಗಿ, ಶಿಕ್ಷಕರಿಗೆ ಸಂಬಳ ನೀಡಲೂ ಪಡಬಾರದ ಕಷ್ಟಪಟ್ಟಿದ್ದಾರೆ. ಸೈಕಲ್ ಏರಿ ದಾನಿಗಳ ಮನೆ ಮನೆಗಳಿಗೆ ಮಳೆ ಬಿಸಿಲೆನ್ನದೆ ಸುತ್ತಿದ್ದಾರೆ, ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಸ್ವತಃ ದುಡಿದ ಅಷ್ಟೂ ಹಣವನ್ನು ವಿನಿಯೋಗಿಸಿದ್ದಾರೆ, ತಮ್ಮ ಮನೆಯವರ ಆಭರಣಗಳನ್ನು ಒತ್ತೆ ಇಟ್ಟಿದ್ದಾರೆ. ಇಂಥ ಹಲವಾರು ಪ್ರಸಂಗಗಳು ಈ ಲೇಖನಗಳಲ್ಲಿ ದಾಖಲಾಗಿವೆ. ಆ ಮಹನೀಯರು ನೆಟ್ಟ ಬೀಜ, ಟಿಸಿಲೊಡೆದು ಇಂದು ಬೃಹದಾಕಾರವಾಗಿ ಬೆಳೆದು ಸಾವಿರಾರು ಕುಟುಂಬಗಳಿಗೆ ಆಶ್ರಯ ನೀಡುತ್ತಿದೆ ಎಂಬುದು ಹರ್ಷದಾಯಕವಾದುದೇ ಸರಿ. ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಶಾಲೆಗಳಿಂದ ಇಂದು ಅನೇಕ ಗಣ್ಯ ಮಹನೀಯರು ಬೆಳಕಿಗೆ ಬಂದಿದ್ದಾರೆ. ಈ ಮಹನೀಯರ ಜೀವನ ಸಾಧನೆಗಳು ಇಂದು ಯುವ ಜನಾಂಗಕ್ಕೆ ಆದರ್ಶಪ್ರಾಯವಾಗಿವೆ.

ವಿನಯ್ ಫೌಂಡೇಷನ್ ಸ್ಥಾಪಕರೂ, ನಿರ್ವಾಹಕರೂ ಆಗಿರುವ ಮತ್ತು ವಿನಯ್ ಫೌಂಡೇಷನ್ ಸಾಹಿತ್ಯ ಸಮಿತಿ ಪ್ರಕಟನೆಗಳ ಪ್ರಧಾನ ಸಂಪಾದಕರಾದ

ಡಾ. ಟಿ.ವಿ ರಾಜು ಅವರು ನಮಗೆ ಶಿಕ್ಷಣ ಸಂಸ್ಥೆಗಳ ಸ್ಥಾಪಕರನ್ನು ಕುರಿತ ಗ್ರಂಥವನ್ನು ಸಂಪಾದಿಸಬೇಕೆಂದು ಸೂಚಿಸಿದರು. ಇದು ಅಗತ್ಯವಾಗಿ ಆಗಬೇಕಾದ ಕೆಲಸವೆಂದೆನಿಸಿ ನಾವು ಯಥಾಶಕ್ತಿಯಾಗಿ ಮಾಹಿತಿ ಕಲೆಹಾಕಿ ಈ ಗ್ರಂಥವನ್ನು ಸಂಪಾದಿಸಿ ನಾಡಿನ ಜನತೆಯ ಮುಂದಿಟ್ಟಿದ್ದೇವೆ. ಈ ಅವಕಾಶವನ್ನು ನೀಡಿದ್ದಕ್ಕೆ ವಿನಯ್ ಫೌಂಡೇಷನ್ನಿಗೆ ಕೃತಜ್ಞರಾಗಿದ್ದೇವೆ. ಈ ಗ್ರಂಥಕ್ಕೆ ಮಾಹಿತಿಯನ್ನು ಒದಗಿಸಿದ ಬೆಂಗಳೂರಿನ ವಿದ್ಯಾ ಸಂಸ್ಥೆಗಳ ಸ್ಥಾಪಕರ ಕುಟುಂಬದವರಿಗೆ, ಸಂಸ್ಥೆಗಳ ಆಡಳಿತ ವರ್ಗಕ್ಕೆ ನಾವು ಚಿರಋಣಿಗಳಾಗಿದ್ದೇವೆ.

ದಿನಾಂಕ: 29–03–2024 ರಂದು ಪರಮಪೂಜ್ಯ ಸ್ವಾಮೀಜಿ ಶ್ರೀ ವೀರೇಶಾನಂದ ಸರಸ್ವತಿ ಅವರ ಅಮೃತಹಸ್ತದಿಂದ ಲೋಕಾರ್ಪಣೆಯಾಗುತ್ತಿರುವುದು ಹರ್ಷದಾಯಕವೇ ಸರಿ.

01.03.2024
ಬೆಂಗಳೂರು ಸಂಪಾದಕರು

ಪರಿವಿಡಿ

ಕ್ರ ಸಂ.	ಸ್ಥಾಪ-ನೆಯ ವರ್ಷ	ಸಂಸ್ಥೆಯ ಹೆಸರು	ಮಾಹಿತಿ ನೀಡಿದವರ ಹೆಸರು	ವಿಳಾಸ	ಪುಟ ಸಂಖ್ಯೆ
1	1905	ಎಸ್.ಎಲ್.ಎನ್. ಧರ್ಮ ಸಂಸ್ಥೆಗಳು	ಶ್ರೀ.ಸುರೇಶ ಮೂನ	ಸಿಟಿ ಮಾರುಕಟ್ಟೆ, ಬೆಂಗಳೂರು-560002	1
2	1909	ಆರ್ಯ ವಿದ್ಯಾ ಶಾಲಾ	ಶ್ರೀ ಕೆ. ಆರ್ ಗೋಪಾಲ್	ನಂ.16, 5ನೇ ಮುಖ್ಯ ರಸ್ತೆ, ಗಾಂಧಿ ನಗರ, ಬೆಂಗಳೂರು – 560009	8
3	1917	ನ್ಯಾಷನಲ್ ಹೈ ಸ್ಕೂಲ್	ಶ್ರೀಮತಿ ಪಲ್ಲವಿಶ್ರೀ	ಕೆ.ಆರ್ ರಸ್ತೆ, ಬಸವನಗುಡಿ, ಬೆಂಗಳೂರು – 560004	15
4	1927	ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್	ಡಾ.ಗಣಪತಿ ಹೆಗಡೆ	15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003	24
5	1930	ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್	ಶ್ರೀ ಮಂಜುನಾಥ್	27, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು-560020	30
6	1935	ಬಾಪೂಜಿ ವಿದ್ಯಾ ಸಂಸ್ಥೆ	ಶ್ರೀ ರಾಮಮೂರ್ತಿ	ನಂ.143, ಗೋಪಾಲಪುರ, ಮಾಗಡಿ ರಸ್ತೆ, ಬೆಂಗಳೂರು-560023	34
7	1935	ಆಚಾರ್ಯ ಪಾಠಶಾಲಾ	ಶ್ರೀಮತಿ ಉಮಾ	ಎನ್.ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು-560019	39
8	1939	ಕಡಾಂಬಿ ಸಮೂಹ ಶಿಕ್ಷಣ ಸಂಸ್ಥೆಗಳು	ಡಾ.ಕೆ. ಶೇಷಮೂರ್ತಿ	ಸಿ ಎ – 2, 10 ನೇ ಮುಖ್ಯ ರಸ್ತೆ, 2 ನೇ ಅಡ್ಡ ರಸ್ತೆ, ಬಸವೇಶ್ವರ ನಗರ 3 ನೇ ಹಂತ, ಬೆಂಗಳೂರು- 560079	45
9	1940	ರಾಷ್ಟ್ರೀಯ ವಿದ್ಯಾಲಯ ಶಿಕ್ಷಣ ಸಂಸ್ಥೆಗಳು	ಡಾ॥ ಟಿ ವಿ ರಾಜು	15, ಅಶೋಕ ಪಿಲ್ಲರ್ ರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011	51

10	1942	ಬೆಂಗಳೂರು ಪ್ರೌಢಶಾಲೆ	ಡಾ.ಎಸ್.ಎಲ್. ಮಂಜುನಾಥ್	ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬಸವನಗುಡಿ, ಬೆಂಗಳೂರು- 560004	59
11	1942	ಎಂ.ಇ.ಎಸ್ ಕಿಶೋರ್ ಕೇಂದ್ರ	ಶ್ರೀಮತಿ ಸರಳಾ ಬಿ.ಎ	ಬ್ರಾಹ್ಮಿ, 15ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಂಗಳೂರು-560003	66
12	1942	ಹಿಮಾಂಶು ಜ್ಯೋತಿ ಕಲಾಪೀಠ	ಶ್ರೀ ಚಂದ್ರಮೌಳಿ ಬಿ.ಟಿ	74, ಹಿಮಾಂಶು ಶಾಸ್ತ್ರಿ ರಸ್ತೆ, 4ನೇ ಮುಖ್ಯ ರಸ್ತೆ, ಮಲ್ಲೇಶ್ವರ, ವೀಣಾ ಸ್ಟೋರ್ಸ್ ಹತ್ತಿರ, ಬೆಂಗಳೂರು-560055	76
13	1950	ಶ್ರೀ ಸರಸ್ವತಿ ವಿದ್ಯಾ ಮಂದಿರ	ಶ್ರೀ ನಿರಂಜನ್	ನಂ.9, ವಾಣಿವಿಲಾಸ್ ರಸ್ತೆ, ವಿಶ್ವೇಶ್ವರಪುರಂ, ಬಸವನಗುಡಿ, ಬೆಂಗಳೂರು-560004	82
14	1950	ಮಹಿಳಾ ಮಂಡಲಿ	ಶ್ರೀಮತಿ ಶಾಂತಾ ರಾವ್	46, ಸನ್ನಿಧಿ ಕ್ರಾಸ್ ರಸ್ತೆ, ಎನ್ ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು-560004	86
15	1951	ಮಲ್ಲೇಶ್ವರಂ ಶಿಶುವಿಹಾರ	ಶ್ರೀಮತಿ ಲಕ್ಷ್ಮೀ ಶ್ರೀಧರನ್	ನಂ.39, 4ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಶಿಶುವಿಹಾರ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003	91
16	1951	ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆ	ಶ್ರೀಮತಿ ನಾಗಮ್ಮ ಎಸ್	18/2, 10ನೇ ಅಡ್ಡ ರಸ್ತೆ, ರೆಡ್ ಫೀಲ್ಡ್ ಹತ್ತಿರ, ಹೊಂಬೇಗೌಡ ನಗರ, ವಿಲ್ಸನ್ ಗಾರ್ಡನ್, ಬೆಂಗಳೂರು-560027	97
17	1953	ವಿಮೆನ್ಸ್ ಪೀಸ್ ಲೀಗ್	ಶ್ರೀಮತಿ ರುಕ್ಮಿಣಿ	36, ಶಂಕರ ಮಠ ರಸ್ತೆ, ಬಸವನಗುಡಿ, ಬೆಂಗಳೂರು-560004	102

18	1954	ಜೆ.ಎಸ್.ಎಸ್ ಶಿಕ್ಷಣ ಸಂಸ್ಥೆಗಳು	ಶ್ರೀ ಪ್ರಸನ್ನ ಕುಮಾರ್	ಜೆಎಸ್‌ಎಸ್ ಸರ್ಕಲ್, 1ನೇ ಮುಖ್ಯರಸ್ತೆ, 38ನೇ ಅಡ್ಡರಸ್ತೆ, ಜಯನಗರ 8ನೇ ಬ್ಲಾಕ್, ಬೆಂಗಳೂರು-560070	107
19	1956	ವಿಜಯ ವಿದ್ಯಾ ಸಂಸ್ಥೆ	ಶ್ರೀ ರಘುನಂದನ್	ನಂ.32, 15ನೇ ಅಡ್ಡರಸ್ತೆ, ಸೌತ್ ಎಂಡ್ ಸರ್ಕಲ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560 011	113
20	1956	ಕಮ್ಯುನಿಟಿ ಸೆಂಟರ್ ವಿದ್ಯಾ ಸಂಸ್ಥೆಗಳು	ಶ್ರೀ ಚಿಕ್ಕಯ್ಯ	2/1, 9ನೇ ಅಡ್ಡ ರಸ್ತೆ, 9ನೇ ಮುಖ್ಯರಸ್ತೆ, 2ನೇ ಬ್ಲಾಕ್, ಬಿಬಿಎಂಪಿ ಕಚೇರಿ ಎದುರು, ಜಯನಗರ, ಬೆಂಗಳೂರು-560011	119
21	1956	ರಾಣಿ ಸರಳಾದೇವಿ ವಿದ್ಯಾ ಸಂಸ್ಥೆ	ಶ್ರೀ ಪಿ ಎಸ್ ವಿಶ್ವನಾಥ್	281, 7ನೇ ಅಡ್ಡರಸ್ತೆ, 1ನೇ ಬ್ಲಾಕ್, ಜಯ ನಗರ ಪೂರ್ವ, ಜಯನಗರ, ಬೆಂಗಳೂರು-560011	123
22	1957	ಭಾರತೀಯ ಸಂಸ್ಕೃತಿ ವಿದ್ಯಾಪೀಠ	ಶ್ರೀಮತಿ ನಾಗವಲ್ಲಿ	4ನೇ ಮುಖ್ಯರಸ್ತೆ (4ನೇ ಮತ್ತು 5ನೇ ಕ್ರಾಸ್ ನಡುವೆ), ಚಾಮರಾಜಪೇಟೆ ಬೆಂಗಳೂರು-560018	127
23	1957	ಕಮಲಾ ನೆಹರು ವಿದ್ಯಾ ಸಂಸ್ಥೆ	ಶ್ರೀ.ಚಿಕ್ಕಯ್ಯ	ನಂ.81, ಸೌತ್ ಎಂಡ್ ಸರ್ಕಲ್, ನಿಟ್ಟೂರು ಶ್ರೀನಿವಾಸ್ ರಾವ್ ರಸ್ತೆ, ಬಸವನಗುಡಿ, ಬೆಂಗಳೂರು – 560004	135
24	1957	ಬಿ.ಇ.ಎಲ್. ಶಿಕ್ಷಣ ಸಂಸ್ಥೆ	ಡಾ.ರವಿ.ಎಸ್	ಎಂ ಇ ಎಸ್ ರಿಂಗ್ ರೋಡ್, ಜೆ.ಪಿ. ರಾಜರತ್ನಂ ವೃತ್ತ, ಜಾಲಹಳ್ಳಿ, ಬೆಂಗಳೂರು-560013	138
25	1959	ವಿವೇಕಾನಂದ ಎಜುಕೇಷನಲ್ ಸೆಂಟರ್	ಶ್ರೀ ಆನಂದ್	ಸಂಖ್ಯೆ .1, ಬಿ ಎಚ್ ಎಸ್ ಶಾಲೆ ಎದುರು. , 4ನೇ ಟಿ ಬ್ಲಾಕ್ ಪೂರ್ವ, ಜಯನಗರ 3ನೇ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು-560011	144

26	1959	ಜನತಾ ವಿದ್ಯಾಲಯ	ಶ್ರೀ ಚಿದ್ಘನ ಸ್ವಾಮಿಗಳು	2ನೇ ಮುಖ್ಯ ರಸ್ತೆ, 8ನೇ ಅಡ್ಡ, ಚಾಮರಾಜಪೇಟೆ, ಬೆಂಗಳೂರು-560 018	149
27	1964	ದಿ ಬೆಂಗಳೂರು ಎಜುಕೇಷನ್ ಸೊಸೈಟಿ	ಶ್ರೀ ರಂಗರಾಜು	4ನೇ ಮುಖ್ಯ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003	151
28	1964	ಸ್ಪ್ರೇಸಿ ಸ್ಮಾರಕ ಶಿಕ್ಷಣ ಸಂಸ್ಥೆ	ಡಾ.ಕೃಬಾನಂದನ್	52, ಸೇಂಟ್ ಮಾರ್ಕ್ಸ್ ರಸ್ತೆ, ಶಾಂತಲಾ ನಗರ, ಅಶೋಕ್ ನಗರ, ಬೆಂಗಳೂರು-560001	159
29	1965	ಶ್ರೀ ರಾಜೇಶ್ವರಿ ವಿದ್ಯಾಲಯ	ಶ್ರೀ ಗೋಪಾಲನ್	ಕೆಂಚೇನಹಳ್ಳಿ, ಆರ್ ಆರ್ ನಗರ, ಬೆಂಗಳೂರು - 560098	163
30	1966	ಶ್ರೀ ವಾಣಿ ಬಾಲಕಿಯರ ಪ್ರೌಢಶಾಲೆ	ಶ್ರೀಮತಿ. ಕವಿತಾ	449, 3ನೇ ಅಡ್ಡರಸ್ತೆ, 2ನೇ ಹಂತ, ರಾಜಾಜಿನಗರ, ಬೆಂಗಳೂರು-560010	168
31	1967	ಶ್ರೀ ಸುದರ್ಶನ ವಿದ್ಯಾ ಮಂದಿರ	ಶ್ರೀಮತಿ ಸುಮತಿ	1163, 26ನೇ ಎ ಮುಖ್ಯ ರಸ್ತೆ, 4ನೇ ಟಿ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು- 560041	172
32	1968	ಕಾರ್ಮೆಲ್ ಹೈ ಸ್ಕೂಲ್	ಶ್ರೀಮತಿ ಸಂಧ್ಯಾ ಮೆನೇಜಸ್	4ನೇ ಮುಖ್ಯರಸ್ತೆ, 3ನೇ ಬ್ಲಾಕ್, ನ್ಯಾಯಾಧೀಶರ ಕಾಲೋನಿ, ಬಸವೇಶ್ವರನಗರ, ಬೆಂಗಳೂರು 560 079	175
33	1968	ಬಾಪು ಶಿಕ್ಷಣ ಸಂಸ್ಥೆ	ಡಾ. ವೆಂಕಟ ರೆಡ್ಡಿ	ತ್ರಿವೇಣಿ ರಸ್ತೆ, ಯಶವಂತಪುರ, ಬೆಂಗಳೂರು-560022	180
34	1968	ಕೆ.ಟಿ.ಎಸ್.ವಿ ಸಂಘ	ಶ್ರೀ ಶ್ರೀಕಂಠಯ್ಯ	ಸರ್ವೆ ನಂ. 13, 10ನೇ ಅಡ್ಡರಸ್ತೆ, ರಾಮಮಂದಿರದ ಎದುರು, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010	186

35	1969	ಜಿಂದಾಲ್ ಫಿಲಾಂಥ್ರೋಫಿಕ್ ಸಂಸ್ಥೆ	ಶ್ರೀಮತಿ. ವೀಣಾ ಟಿ	ತುಮಕೂರು ರಸ್ತೆ, ಜಿಂದಾಲ್ ನಗರ, ಅಂಚೆಪಾಳ್ಯ, ಬೆಂಗಳೂರು–560073	192
36	1970	ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ	ಶ್ರೀ ಷಣ್ಮುಖ ಹೆಗಡೆ	11 ನೇ ಅಡ್ಡರಸ್ತೆ, ಪಶ್ಚಿಮ ಪಾರ್ಕ್ ರಸ್ತೆ, ವೇಣುಗೋಪಾಲಸ್ವಾಮಿ ದೇವಸ್ಥಾನ ಎದುರು, ಮಲ್ಲೇಶ್ವರಂ, ಬೆಂಗಳೂರು–560003	196
37	1971	ಭಾರತ್ ಎಜುಕೇಷನ್ ಸೊಸೈಟಿ	ಶ್ರೀಮತಿ. ಸುಜಾತ	27, 16ನೇ ಮುಖ್ಯ ರಸ್ತೆ, 4ನೇ ಟಿ ಬ್ಲಾಕ್ ಪೂರ್ವ, ಪಟ್ಟಾಭಿರಾಮ ನಗರ, ಜಯನಗರ, ಬೆಂಗಳೂರು–560011	201
38	1971	ಪಾಂಚಜನ್ಯ ವಿದ್ಯಾಪೀಠ	ಶ್ರೀಮತಿ ಅಹಲ್ಯಾದೇವಿ ಎಸ್.ಡಿ	19ನೇ ಮುಖ್ಯರಸ್ತೆ, 1ನೇ 'ಎನ್' ಬ್ಲಾಕ್, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಹಂತ, ನಾಗಪುರ, ಬೆಂಗಳೂರು–560010	206
39	1971	ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ	ಡಾ॥ ನಾಗರಾಜು	ಸಿ.ಎ. ನಂ. 2, 3ನೇ ಮುಖ್ಯ ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ,2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು –560086	211
40	1972	ಎಂ ಇ ಸಿ ಪಬ್ಲಿಕ್ ಸ್ಕೂಲ್	ಡಾ. ವಿದ್ಯಾ. ಸಿ	ಪ್ಲಾಟ್ ನಂ. 12, 9ನೇ ಎ ಕ್ರಾಸ್ ರಸ್ತೆ, ಸೆರ್ಕ್ಲ್ ಎ, ಯಲಹಂಕ ಸ್ಯಾಟಲೈಟ್ ಟೌನ್, ಯಲಹಂಕ ನ್ಯೂ ಟೌನ್, ಬೆಂಗಳೂರು–560064	217
41	1976	ಗುಡ್ ಷಫರ್ಡ್ ಶಾಲೆ	ಡಾ॥ಹೆಚ್.ಎ ಗಂಗಪ್ಪ	143, 7ನೇ ಮುಖ್ಯರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು –560041	224

42	1976	ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ವಿದ್ಯಾಕೇಂದ್ರ	ಪ್ರೊ. ಶ್ರೀಕಂಠ ಎ ಎಸ್	ರಾಗೀಗುಡ್ಡ 9ನೇ ಬ್ಲಾಕ್, ಜಯನಗರ, ಬೆಂಗಳೂರು–560069	230
43	1976	ಮಾಡಲ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್	ಶ್ರೀಮತಿ ಚೈತ್ರ	ಸಿ.ಎ ನಂ.1, ಟಿಂಬರ್ ಯಾರ್ಡ್ ಲೇಔಟ್, ಮುನೇಶ್ವರ ಬ್ಲಾಕ್, ಬೆಂಗಳೂರು–560026	235
44	1980	ಸಿ.ಎಂ ನ್ಯಾಷನಲ್ ಪಬ್ಲಿಕ್ ಶಾಲೆ	ಶ್ರೀ ಪಿಳ್ಳಾಂಜನಪ್ಪ	ಮಣಿಗ್ರೀವಧಾಮ, ಬಂಡೆಪ್ಪ ಗಾರ್ಡನ್ ಮುಖ್ಯ ರಸ್ತೆ, ಮುತ್ಯಾಲ ನಗರ, ಬೆಂಗಳೂರು – 560054	238
45	1981	ಬಾಲಮೋಹನ ವಿದ್ಯಾ ಮಂದಿರ	ಡಾ.ಸತ್ಯಪ್ರಕಾಶ್	1ನೇ ಕೆ ಬ್ಲಾಕ್, ನಂ 44/1, 19ನೇ ಬಿ ಮುಖ್ಯ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010	242
46	1982	ಶ್ರೀ ಸಿದ್ದಗಂಗಾ ಎಜುಕೇಶನ್ ಸೊಸೈಟಿ	ಶ್ರೀ ಹೆಚ್.ವಿ.ಹೆಚ್	29/೦, ಕನಕಪುರ ರಸ್ತೆ, ರಘುವನಹಳ್ಳಿ, ಬೆಂಗಳೂರು ನಗರ ಮಹಾನಗರ ಪಾಲಿಕೆ ಲೇಔಟ್, ಬೆಂಗಳೂರು–560062	247
47	1985	ವಿಶ್ವಚೇತನ ಶಿಕ್ಷಣ ಸಂಸ್ಥೆ	ಶ್ರೀ ಕರಿಬಸಪ್ಪ	ಜಿ ಕೆ ಡಬ್ಲ್ಯೂ ಲೇಔಟ್, 4ನೇ ಅಡ್ಡ ರಸ್ತೆ, ವಿಜಯನಗರ, ಬೆಂಗಳೂರು–560040	252
48	1988	ವಾಸವಿ ವಿದ್ಯಾನಿಕೇತನ	ಶ್ರೀಮತಿ. ಸರಸ್ವತಿ	ವಿಶ್ವೇಶ್ವರಪುರ, ಬೆಂಗಳೂರು, ವಾಣಿವಿಲಾಸ್ ರಸ್ತೆ, ಬಸವನಗುಡಿ, ಬೆಂಗಳೂರು – 560004	255
49	1989	ಜ್ಯೋತಿ ಕೇಂದ್ರೀಯ ವಿದ್ಯಾಲಯ	ಶ್ರೀ ಸಿ ಎಸ್ ಪ್ರಸಾದ್	556, ಕನಕಪುರ ರಸ್ತೆ, ಕನಕಪುರ ಮೆಟ್ರೋ ನಿಲ್ದಾಣದ ಹಿಂದೆ, ಕನಕಪುರ, ಬಸವನಗುಡಿ, ಬೆಂಗಳೂರು–560078	259

50	1993	ಸೌಂದರ್ಯ ಶಿಕ್ಷಣ ಸಂಸ್ಥೆಗಳು	ಶ್ರೀ ಮಹಾಬಲೇಶ್ವರ ತುಂಗಾ	ಸೌಂದರ್ಯ ರಸ್ತೆ, ಹೆಸರಘಟ್ಟ ಮುಖ್ಯ ರಸ್ತೆ, ನಾಗಸಂದ್ರ ಅಂಚೆ, ಬೆಂಗಳೂರು–560073	264
51	1993	ಪ್ರಜ್ಞಾಭಾರತಿ ವಿದ್ಯಾಲಯ	ಶ್ರೀಮತಿ ಸವಿತಾ	ಪ್ರಜ್ಞಾಭಾರತಿ ಪ್ರೌಢಶಾಲೆ, 63, ದೊಡ್ಡಕಲ್ಲಸಂದ್ರ, ನಾರಾಯಣನಗರ 3ನೇ ಬ್ಲಾಕ್, ಬೆಂಗಳೂರು–560062	269
52	1996	ಮೌರ್ಯ ಪಬ್ಲಿಕ್ ಸ್ಕೂಲ್	ಶ್ರೀ ಬಿ.ಶಂಕರಲಿಂಗೇಗೌಡ	79, 4ನೇ ಮುಖ್ಯ ರಸ್ತೆ, ಮಾರುತಿ ನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು–560079	272
53	2004	ಚಿನ್ಮಯಿ ಎಜುಕೇಶನ್ ಟ್ರಸ್ಟ್	ಶ್ರೀ ಹೆಚ್ ಆರ್ ಮಲ್ಲಿಕಾರ್ಜುನಯ್ಯ	ನ್ಯೂ ಕಾರ್ಮೆಲ್ ಶಾಲೆ, 1ನೇ ಮುಖ್ಯರಸ್ತೆ, ಹೆಗ್ಗನಹಳ್ಳಿ, ಪೀಣ್ಯ 2ನೇ ಹಂತ, ಬೆಂಗಳೂರು–560091	277
54	2004	ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆ	ಶ್ರೀ ಹರೀಶ್	ಸೈ ನಂ. 77/2, 77/3ಬಿ, 77/4, 77/5, ಮುನ್ನೇಕೊಳಲು, ಮಾರತಹಳ್ಳಿ ಅಂಚೆ, ಬೆಂಗಳೂರು – 560 037	280
55	2006	ವಿಷನ್ ಸಮೂಹ ಸಂಸ್ಥೆ	ಶ್ರೀ ಚಲಂ	802, 9ನೇ ಬಿ ಮುಖ್ಯ ರಸ್ತೆ, ಹೆಚ್ ಆರ್ ಬಿ ಆರ್ ಲೇಔಟ್, ಕಲ್ಯಾಣ್ ನಗರ 1ನೇ ಬ್ಲಾಕ್, ಬಾಣಸವಾಡಿ, ಬೆಂಗಳೂರು–560043	285
56	2008	ಶ್ರೀ ವಿದ್ಯಾ ಕೇಂದ್ರ	ಶ್ರೀ ಶಾಮಸುಂದರ ಶರ್ಮ	ಶ್ರೀ ವಿದ್ಯಾ ಕೇಂದ್ರ – ಸ್ಮಾರ್ಟ್ ಸ್ಕೂಲ್, ಸ.ಸಂ. 77/2, ಮಾಚೋಹಳ್ಳಿ, ಮಾಗಡಿ ರಸ್ತೆಯಿಂದ 17ನೇ ಕಿಮೀ, ಬಾಪಗ್ರಾಮ ಪೋಸ್ಟ್, ಬೆಂಗಳೂರು–560091	290

ಎಸ್.ಎಲ್.ಎನ್. ಧರ್ಮ ಸಂಸ್ಥೆಗಳು

ಸಿಟಿ ಮಾರುಕಟ್ಟೆ, ಬೆಂಗಳೂರು – 560 002

ಜನೋಪಕಾರಿ ದೊಡ್ಡಣ್ಣನವರ ಜೀವನ ಹಾಗೂ ಅವರ ಎಸ್.ಎಲ್.ಎನ್. ಧರ್ಮ ಸಂಸ್ಥೆಗಳು ಕೆ.ಆರ್. ರಸ್ತೆಯಷ್ಟೆ ಅಲ್ಲ, ಇಡೀ ಬೆಂಗಳೂರಿನ ಇತಿಹಾಸದ ಒಂದು ಪ್ರಮುಖ ಅಧ್ಯಾಯ. ನಗರದ ಶಿಕ್ಷಣ, ಧಾರ್ಮಿಕ ಹಾಗೂ ಸೇವಾ ಕ್ಷೇತ್ರಗಳಲ್ಲಿ ದೊಡ್ಡಣ್ಣನವರ ಕೊಡುಗೆ ಅಪಾರ ಹಾಗೂ ಅಮೋಘ. ದೊಡ್ಡಣ್ಣನವರ ತಂದೆ ನಂಜುಂಡಪ್ಪನವರು ಜ್ಯೋತಿ ನಗರದ ವೈಶ್ಯ ಜನಾಂಗದವರು. ಧಾರ್ಮಿಕ ಮನೋಭಾವವುಳ್ಳ ಇವರಿಗೆ ದೈವಭಕ್ತಿ, ಪರೋಪಕಾರ, ಅತಿಥಿ ಸತ್ಕಾರದಂಥ ಗುಣಗಳೆಲ್ಲ ದೈವದತ್ತವಾಗಿದ್ದವು. ಅದಕ್ಕನುಗುಣವಾಗಿದ್ದ ಧರ್ಮಪತ್ನಿ ಸಿದ್ದಮ್ಮ, ಸುಸಂಸ್ಕೃತ ಗೃಹಿಣಿ. ಇವರಿಗೆ 1840ರ ಫೆಬ್ರವರಿ ಮೂರರಂದು ಜನಿಸಿದ ಮಗುವೇ ಶ್ರೀ ದೊಡ್ಡಣ್ಣ ಶೆಟ್ಟಿ. ಮನೆಯಲ್ಲಿ ಎರಡನೆ ಮಗನಾದರೂ ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಲಿರುವನೆಂದು



ಶ್ರೀ ದೊಡ್ಡಣ್ಣ ಶೆಟ್ಟಿ

'ದೊಡ್ಡಣ್ಣ' ಹೆಸರು ಸೂಚಿಸುವಂತಿತ್ತು. ಬಾಲ್ಯದಲ್ಲಿ ಓದು ಬರಹ ಹಾಗೂ ವ್ಯಾಪಾರಕ್ಕೆ ತಕ್ಕಷ್ಟು ವಿದ್ಯಾಭ್ಯಾಸವೂ ದೊರೆಯಿತು. ಕಾಲಕ್ರಮೇಣ ತಂದೆ ತಾಯಿಯರು ನಿಧನರಾದ ನಂತರ ಅವರಂತೆಯೇ ಇದ್ದ ಅಣ್ಣ ಅತ್ತಿಗೆಯ ಆಶ್ರಯದಲ್ಲಿ ಬೆಳೆದು ಕುಟುಂಬದ ವೃತ್ತಿಯಾದ ಎಣ್ಣೆ ವ್ಯಾಪಾರದಲ್ಲಿ ತೊಡಗಿದರು. ಹಿರಿಯರಿಂದ ಬಳುವಳಿಯಾಗಿ ಪಡೆದ ಧಾರ್ಮಿಕ ಮನೋಭಾವದಿಂದಾಗಿ ಅತಿಯಾಸೆ, ಅಪಾರ ಲಾಭಗಳ ಕಡೆಗೆ ಮನಸ್ಸು ಹೋಗದಿದ್ದರೂ ಅವರು ಬಹುಬೇಗ ಲಕ್ಷ್ಮೀಪುತ್ರರಾದರು. ಲಕ್ಷ್ಮೀಕಟಾಕ್ಷ ಹಾಗೂ ಪರರ ಕಲ್ಯಾಣ ಚಿಂತನೆ ಇವೆರಡೂ ಒಟ್ಟಿಗೆ ಸೇರುವುದು ಅಪರೂಪವೇ. ದೊಡ್ಡಣ್ಣನವರಲ್ಲಿ ಅದು ಹಾಲು ಜೇನಿನಂತೆ ಸಮ್ಮಿಶ್ರವಾಗಿತ್ತು. ಈ ವೇಳೆಗೆ ವಂಶಪಾರಂಪರ್ಯವಾಗಿ ಬಂದ ತಮ್ಮ ಜನಾಂಗದ ಯಜಮಾನ್ ಪದವಿಯನ್ನು ಸ್ವೀಕರಿಸಿದರು. ಅವರ ಸರ್ವಾಂಗೀಣ ಬೆಳವಣಿಗೆಗಾಗಿ ಜೀವನಪರ್ಯಂತ ದುಡಿಯುವ ಸಂಕಲ್ಪವನ್ನು ಮಾಡಿದರು. ಅವರ ಕಷ್ಟ ಸುಖಗಳು, ನೋವು ನಲಿವುಗಳಲ್ಲಿ ಭಾಗಿಯಾದರು. ದಂಡು ಪ್ರದೇಶದಲ್ಲಿದ್ದ ತಮ್ಮ ಮನೆದೇವರಾದ ಲಕ್ಷ್ಮೀನರಸಿಂಹ ದೇವಾಲಯದ ಜೀರ್ಣೋದ್ಧಾರ ಮಾಡಿದುದಲ್ಲದೆ ಬೆಂಗಳೂರಿನ ಅನೇಕ ದೇವಾಲಯಗಳ ಅಭಿವೃದ್ಧಿ, ಬೆಳವಣಿಗೆಯಲ್ಲಿ ಇವರ ಪ್ರಮುಖ ಪಾತ್ರವಿತ್ತು. ಬೆಂಗಳೂರು ಪೂರ್ವ ರೈಲ್ವೆ ನಿಲ್ದಾಣದ ಬಳಿ ಇವರ ತುಲಸೀ ತೋಟದ ಒಂದು ಭಾಗವನ್ನು ಬುದ್ಧ ವಿಹಾರಕ್ಕೆ ದಾನ ಮಾಡಿದರು. ಹೀಗೆ ದಾನಕಾರ್ಯ ಅವಿರತವಾಗಿ ಸಾಗಿದರೂ ಎಲ್ಲೂ ತಾನು ಇದನ್ನು ಮಾಡುತ್ತಿದ್ದೇನೆಂಬ ಅಹಂಭಾವವಾಗಲೀ ತಮ್ಮ ಹೆಸರು ಇದರಿಂದ ಪ್ರಸಿದ್ಧಿ ಹೊಂದಬೇಕೆಂದಾಗಲೀ ಸಹಾಯಕ್ಕೆ ಪ್ರತಿ ಫಲಾಪೇಕ್ಷೆಯನ್ನಾಗಲಿ ಇವರು ಬಯಸಲಿಲ್ಲ. ಆಡಂಬರವಿಲ್ಲದ ಈ ಮಹಾತ್ಕಾರ್ಯಗಳಿಂದಾಗಿ ಇವರು 'ಅಭಿನವ ದಾನ ಶೂರಕರ್ಣ' ಎಂದೇ ಕರೆಯಲ್ಪಟ್ಟರು. ಹೀಗೆ ಇವರು ಸಮಾಜದ ಜನಾರ್ಧನ ಸೇವೆಯಲ್ಲಿ ನಿರತರಾಗಿದ್ದರೂ ಇವರ ಕೌಟುಂಬಿಕ ಜೀವನದಲ್ಲಿ ವಿಧಿ ತನ್ನ ಕೈವಾಡ ತೋರಿಸಿಬಿಟ್ಟಿತ್ತು. ಒಬ್ಬರಾದ ಮೇಲೆ ಒಬ್ಬರಂತೆ ಮೂವರು ಪತ್ನಿಯರು ಮೃತರಾದ ಮೇಲೆ ನಾಲ್ಕನೇ ಪತ್ನಿ ಹಾಗೂ ಅವರಿಂದ ಪಡೆದ ಇಬ್ಬರು ಗಂಡು ಮಕ್ಕಳಿಂದ ಸಂಸಾರದಲ್ಲಿ ನೆಮ್ಮದಿ ನೆಲಸಿತೇನೋ ಅನ್ನುವಷ್ಟರಲ್ಲಿ ಆ ಪತ್ನಿಯೂ ನಿಧನರಾದರು. ಇದರಿಂದ ವಿಚಲಿತರಾಗದೆ ದೊಡ್ಡಣ್ಣ ಶೆಟ್ಟರು ಸೇವಾ ಕಾರ್ಯಗಳ ಮೂಲಕವೇ ತಮ್ಮ ಪ್ರೀತಿಯ ಪತ್ನಿಯ ಆತ್ಮಕ್ಕೆ ಶಾಂತಿ ಕೋರಿದರು. ಇವರ ಅಂತಃ ಸತ್ವವನ್ನು, ಮನೋದಾರ್ಢ್ಯವನ್ನು ವಿಧಿಯ ಪರೀಕ್ಷೆ ಅಲ್ಲಿಗೆ

ನಿಲ್ಲಿಸಲಿಲ್ಲ. 1898ರಲ್ಲಿ ಮೊದಲ ಬಾರಿ ಪ್ಲೇಗ್ ಮಾರಿಯ ಹಾವಳಿಯಾಯಿತು. ಇದು ಇವರ ಮೊದಲನೆಯ ಮಗ ಲಕ್ಷ್ಮೀನಾರಾಯಣನನ್ನೇ ಬಲಿ ತೆಗೆದುಕೊಂಡಿತು. ಮನಸ್ಸಿಗೆ ಆಘಾತವಾದರೂ ದೊಡ್ಡಣ್ಣನವರು ತತ್ತರಿಸಲಿಲ್ಲ. ಈ ಉಪದ್ರವಕ್ಕೆ ಸಿಕ್ಕಿದ ತಮ್ಮ ಮತಬಾಂಧವರಿಗೆ ವೆಂಕಟಾಪುರ ಎಂಬ ಗ್ರಾಮದಲ್ಲಿ ನೂರಾರು ಗುಡಿಸಲುಗಳನ್ನು ನಿರ್ಮಿಸಿ ಅವರನ್ನು ಎರಡು ವರ್ಷಗಳ ಕಾಲ ಪೋಷಿಸಿದರು. ಇಷ್ಟೆಲ್ಲಾ ಸೇವಾ ಕಾರ್ಯಗಳಿಂದಲೂ ತೃಪ್ತರಾಗದೆ ಇವರು ಬಡತನದಿಂದಾಗಿ ಶಾಲೆಗೆ ಹೋಗಲಾಗದ ಅನೇಕ ಮಕ್ಕಳನ್ನು ಕಂಡು ಒಂದು ಉಚಿತ ಲೋಯರ್ ಸೆಕೆಂಡರಿ ಶಾಲೆ ತೆರೆಯಲು ನಿರ್ಧರಿಸಿದರು. ಅದಕ್ಕಾಗಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿದ್ದಾಗ ವಿಧಿ ಮತ್ತೆ ಪೆಟ್ಟು ಕೊಟ್ಟಿತು. ಎರಡನೆಯ ಮಗನೂ ಮೃತ್ಯುವಶನಾದನು. ಈ ವೇಳೆಗೆ ಇವರು ಎಂತಹ ಸ್ಥಿತ ಪ್ರಜ್ಞತೆಯನ್ನು ಬೆಳೆಸಿಕೊಂಡಿದ್ದರೆಂದರೆ ಅಂದಿನ ಹಿರಿಯ ಸಾಹಿತಿಗಳೆಲ್ಲರೂ ಒಟ್ಟಿಗೆ ಅವರನ್ನು ಸಂತೈಸಲು ಬಂದಾಗ ತಾವೇ ಅವರನ್ನು ಸಂತೈಸಿದರಂತೆ.



ಇಂದಿನ ಕೆ.ಆರ್. ರಸ್ತೆಯ ಬದಿಯಲ್ಲೇ ಸಿಟಿ ಮಾರ್ಕೆಟ್ ಬಳಿ ದೊಡ್ಡಣ್ಣನವರ ಶಾಲೆಯ ಕಟ್ಟಡದ ನಿರ್ಮಾಣ ಕಾರ್ಯ 1905ರಲ್ಲಿ ಮುಗಿಯಿತು. ಇವರು ತಮ್ಮ ಮನೆದೇವರ ಹೆಸರಿನಲ್ಲಿ 'ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಧರ್ಮಪಾಠ ಶಾಲೆ' ಎಂದು ಹೆಸರಿಸಿದರೂ ಮುಂದೆ ಅದು ದೊಡ್ಡಣ್ಣ ಹಾಲ್ ಎಂದೇ ಪ್ರಸಿದ್ಧಿಯಾಯಿತು. 10.03.1905 ರಂದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೇ ಇದನ್ನು ಉದ್ಘಾಟನೆ ಮಾಡಿದರು. 1906 ರಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಶಾಲೆ ಪ್ರಾರಂಭಿಸಿದ ಮೇಲೆ ಪರ ಊರುಗಳಿಂದ ಬರುವ ಮಕ್ಕಳ ಅನುಕೂಲಕ್ಕಾಗಿ ಶ್ರೀ ಲಕ್ಷ್ಮೀ ನರಸಿಂಹ ಆಶ್ರಮವನ್ನು ಈಗಿನ ಕೆ.ಆರ್ ರಸ್ತೆಯ ಬಳಿಯಲ್ಲೇ ಸ್ಥಾಪಿಸಿ ತಾವೂ ದಂಡು ಪ್ರದೇಶದಿಂದ ಬಂದು ಇಲ್ಲೇ ಉಳಿದರು. ಅವರ ಊಟ, ತಿಂಡಿ, ನಿದ್ದೆ, ಉಡುಪು, ವ್ಯಾಸಂಗ ಎಲ್ಲದರ ಬಗ್ಗೆಯೂ ಅಪಾರ ಕಾಳಜಿ ವಹಿಸಿದರು. ಮಕ್ಕಳಿಗೆ ತಾವೇ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಿದ್ದರು. ಮಕ್ಕಳೂ ಅವರನ್ನು ಅಷ್ಟೇ ಪ್ರೀತಿಯಿಂದ 'ತಾತಾ' ಎನ್ನುತ್ತಿದ್ದರು. ವಿದ್ಯಾರ್ಥಿಗಳಿಗೆ ಅಹಂಕಾರ ಮರ್ದನ,

ವಿನಯ ಶೀಲತೆ ಮುಂತಾದ ಸದ್ಗುಣಗಳ ಬಗೆಗೆ ಉಪದೇಶ ನೀಡುತ್ತಿದ್ದರು. ಭಜನೆ, ಧ್ಯಾನ, ಭಕ್ತಿ ಇವುಗಳು ಎಂತಹ ಕಷ್ಟಗಳನ್ನು ಎದುರಿಸಲೂ ಶಕ್ತಿ ನೀಡುತ್ತವೆ ಎಂಬುದನ್ನು ತಿಳಿಸಿದ್ದರು.

ಕೆ.ಆರ್ ರಸ್ತೆಯ ಬದಿಗಿರುವ ಶ್ರೀ ಲಕ್ಷ್ಮೀ ನರಸಿಂಹ ಆಶ್ರಮ, ಶ್ರೀ ಲಕ್ಷ್ಮೀ ನರಸಿಂಹ ಧರ್ಮ ಸಂಸ್ಥೆಗಳು, ದೊಡ್ಡಣ್ಣ ಹಾಲ್, ಅವರು ಜೀರ್ಣೋದ್ಧಾರ ಮಾಡಿದ ಹಾಗೂ ಸಹಾಯ ಮಾಡಿದ ದೇವಾಲಯಗಳು ಇಂದಿಗೂ ದೊಡ್ಡಣ್ಣನವರ ಔದಾರ್ಯವನ್ನು ಬೆಂಗಳೂರು ನಗರದ ಬೆಳವಣಿಗೆಗೆ ಅವರ ದೊಡ್ಡ ಕೊಡುಗೆಯನ್ನು ನೆನೆಪಿಸಿಕೊಡುತ್ತದೆ.

ಮೈಸೂರು ರಾಜ್ಯದ ಪ್ರಗತಿಗೆ ಸರಕಾರ ಕೈಗೊಂಡ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗುವಂಥ ಕಾರ್ಯಗಳನ್ನು ದೊಡ್ಡಣ್ಣನವರು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನೆರವೇರಿಸುತ್ತಿದ್ದುದನ್ನು ಕಂಡು ಮಹಾರಾಜರು ಸಂತೋಷಗೊಂಡು ಇವರನ್ನು ದಸರಾ ಉತ್ಸವದ ಸಂದರ್ಭದಲ್ಲಿ ಮೈಸೂರಿಗೆ ಕರೆಸಿ 18–10–1907 ರಂದು 'ಜನೋಪಕಾರಿ' ಎಂಬ ಬಿರುದನ್ನು ಗಂಡಭೇರುಂಡವುಳ್ಳ ಚಿನ್ನದ ಪದಕವನ್ನು ಇನ್ನಿತರ ರಾಜಮರ್ಯಾದೆಗಳನ್ನು ಇತ್ತು ಗೌರವಿಸಿ ಅವರ ಬೆಂಗಳೂರಿನ ಅಭಿವೃದ್ಧಿಯ ಕಾರ್ಯಗಳನ್ನು ಶ್ಲಾಘಿಸಿದರು. ಮುಂದಿನ ವರ್ಷಗಳಲ್ಲೂ ದಸರಾ ಮುಂತಾದ ಸಂದರ್ಭಗಳಲ್ಲಿ ಮೈಸೂರಿಗೆ ಕರೆಸಿಕೊಳ್ಳುತ್ತಿದ್ದರು. ದೊಡ್ಡಣ್ಣನವರಿಗೆ ಮಹಾರಾಜರು ಬಿರುದು ನೀಡಿದುದು ಇಡೀ ಬೆಂಗಳೂರು ಜನತೆಗೆ ಅಪಾರ ಸಂತೋಷವುಂಟು ಮಾಡಿತು. 3–1–1908ರಂದು ಅವರ ದೊಡ್ಡಣ್ಣ ಹಾಲ್‌ನಲ್ಲೇ ಅಭಿನಂದನಾ ಸಮಾರಂಭವೇರ್ಪಡಿಸಿ ದಿವಾನ್ ಕೌನ್ಸಿಲ್‌ನ ದ್ವಿತೀಯ ಸದಸ್ಯರಾದ ಕೆ.ಪಿ. ಪುಟ್ಟಣ ಚೆಟ್ಟಿಯವರು, ಸಂಘ ಸಂಸ್ಥೆಗಳ ಮುಖ್ಯಸ್ಥರು ಗಣ್ಯ ವ್ಯಕ್ತಿಗಳು ಅವರ ಸೇವಾ ಕಾರ್ಯಗಳನ್ನು ಕೊಂಡಾಡಿದರು.

ದೊಡ್ಡಣ್ಣನವರಿಗೆ ಪ್ರೌಢಶಾಲೆಯನ್ನು ಸ್ಥಾಪಿಸಬೇಕೆಂಬ ಆಸೆಯಿತ್ತು. ಇದಕ್ಕಾಗಿ ಒಂದು ವ್ಯವಸ್ಥೆಯನ್ನು ಮಾಡಿದರು. ಅವರ ಧರ್ಮ ಸಂಸ್ಥೆಯ ಆಡಳಿತವನ್ನು ಥಿಯಾಸಾಫಿಕಲ್ ಶಿಕ್ಷಣ ಟ್ರಸ್ಟಿಗೆ ವಹಿಸಿಕೊಡಲಾಯಿತು. ಆಗ ಪ್ರಸಿದ್ಧರಾಗಿದ್ದ ಅನ್ನಿ ಬೆಸೆಂಟರು ಅದರ ಅಧ್ಯಕ್ಷಿಣಿಯಾಗಿದ್ದರು. ಇದರ ಆಶ್ರಯದಲ್ಲಿ 1916ರಲ್ಲಿ ಶ್ರೀ ಲಕ್ಷ್ಮೀ ನರಸಿಂಹ ದೇಶಿಯ ಪ್ರೌಢಶಾಲೆ ಪ್ರಾರಂಭವಾಯಿತು.



ಶ್ರೀ ಕೆ.ಪಿ. ಪುಟ್ಟಣ ಚೆಟ್ಟಿ

ಆದರೆ ಕಾರಣಾಂತರಗಳಿಂದ ಇದು ಇಲ್ಲಿ ಮುಂದುವರೆಯದೆ ಚಾಮರಾಜಪೇಟೆಗೆ, ನಂತರ ಬಸವನಗುಡಿಗೆ ಸ್ಥಳಾಂತರಗೊಂಡು ಮುಂದೆ ನ್ಯಾಷನಲ್ ಹೈಸ್ಕೂಲ್ ಎಂದು ಪ್ರಸಿದ್ಧವಾಯಿತು. ದೊಡ್ಡಣ್ಣಶೆಟ್ಟರಿಗೆ ತಮ್ಮ ಸಂಸ್ಥೆಯನ್ನು ಬೇರೆಯವರ ಆಡಳಿತಕ್ಕೆ ಒಪ್ಪಿಸಿದುದು ಸರಿ ಹೋಗದೆ 1918ರಲ್ಲಿ ಸಂಸ್ಥೆಯ ಆಡಳಿತವನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡರು. ಇವರ ನಂತರ ವಿವಿಧ ಮಹನೀಯರ ಆಡಳಿತ ಮಂಡಳಿಗಳು ಶ್ರೀ ಲಕ್ಷ್ಮೀ ನರಸಿಂಹ ಧರ್ಮ ಸಂಸ್ಥೆಯನ್ನು ವಿಸ್ತರಿಸಿದರು. ಇಂದು ಈ ಧರ್ಮ ಸಂಸ್ಥೆಯಲ್ಲಿ ಉನ್ನತ ಪ್ರಾಥಮಿಕ ಶಾಲೆ, ಉನ್ನತ ಪ್ರೌಢಶಾಲೆ, ಶಿಕ್ಷಕರ ತರಬೇತಿ ವಿದ್ಯಾಲಯ, ಪದವಿ ಪೂರ್ವ ಕಲೆ ಮತ್ತು ವಾಣಿಜ್ಯ ಕಾಲೇಜು, ಕಲೆ ಮತ್ತು ವಾಣಿಜ್ಯ ಮಹಾ ವಿದ್ಯಾಲಯ, ಪಾಲಿಟೆಕ್ನಿಕ್ ಹಾಗೂ ವಿದ್ಯಾರ್ಥಿ ನಿಲಯ ಇವುಗಳು ಕಾರ್ಯ ನಿರ್ವಹಿಸುತ್ತಿವೆ.



ಪ್ಯಾರಾಮೌಂಟ್ ಚಿತ್ರಮಂದಿರ

ಸಂಪತ್ತು, ಕೀರ್ತಿ, ಮನ್ನಣೆ, ಗೌರವಾದರಗಳಲ್ಲಿ ಮುಳುಗಿದರೂ ಇವರ ಮನಸ್ಸು ಮಾತ್ರ ಇದೆಲ್ಲದರಿಂದ ಬಿಡಿಸಿಕೊಂಡು ಆಧ್ಯಾತ್ಮಿಕ ಜೀವನದೆಡೆಗೆ ವಾಲುತ್ತಿತ್ತು. ಸಾಧು ಸಂತರೊಡನೆ, ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿದ್ದ 'ಕಂಬಳಿ ಸ್ವಾಮಿಗಳೊಡನೆ' ಈ ಬಗ್ಗೆ ಚರ್ಚೆಯಲ್ಲಿ ತೊಡಗುತ್ತಿದ್ದರು. ತೀರ್ಥಯಾತ್ರೆಗೆ ಹೋಗಿ ಬಂದರು. ತಮ್ಮ ಆಸ್ತಿ, ಸಂಸ್ಥೆ ಎಲ್ಲವನ್ನು ಅನುಭವ ಹಾಗೂ ಜವಾಬ್ದಾರಿಯುತ ವ್ಯಕ್ತಿಗಳನ್ನುಳ್ಳ ಟ್ರಸ್ಟನ್ನು ರಚಿಸಿ ಅದರ ಮೇಲ್ವಿಚಾರಣೆಗೆ ಒಪ್ಪಿಸಿದರು. ಈ ಎಲ್ಲ ಬಂಧನಗಳಿಂದ ಮುಕ್ತರಾಗಿ 1920ರ ಏಪ್ರಿಲ್ 17ರಂದು ಬ್ರಹ್ಮ ವಿದ್ಯಾಶ್ರಮದ ಶ್ರೀ ಮುನಿಸ್ವಾಮಿ ಆರ್ಯ ಸ್ವಾಮಿಗಳವರಿಂದ ಸನ್ಯಾಸ ದೀಕ್ಷೆ ಪಡೆದು ಶ್ರೀ ದೊಡ್ಡಣ್ಣ ಸ್ವಾಮಿಗಳಾದರು. ಸುಮಾರು ಒಂದು ವರ್ಷಗಳಿಗೂ ಹೆಚ್ಚು ಕಾಲ ಪಾರಮಾರ್ಥಿಕ ಚಿಂತನೆ ಹಾಗೂ ಜೀವನದಲ್ಲಿ ತೊಡಗಿ ಶ್ರೀ ದೊಡ್ಡಣ್ಣ ಸ್ವಾಮಿಗಳು 1921ರ ಆಗಸ್ಟ್ 5 ರಂದು ದೈವ ಸಾನ್ನಿಧ್ಯ ಪಡೆದರು.

ದೊಡ್ಡಣ್ಣ ಶೆಟ್ಟರು ಬೆಂಗಳೂರು ನಗರಕ್ಕೆ ಇತ್ತ ಮತ್ತೊಂದು ಮಹತ್ತರ ಕೊಡುಗೆಯೆಂದರೆ 'ದೊಡ್ಡಣ್ಣ ಹಾಲ್'. ಇವರ ಶ್ರೀ ಲಕ್ಷ್ಮೀ ನರಸಿಂಹ ಧರ್ಮ ಪಾಠಶಾಲೆಯನ್ನು ಆಗ ದೊಡ್ಡಣ್ಣ ಹಾಲ್ ಎಂದೇ ಕರೆಯುತ್ತಿದ್ದರು. ಇಲ್ಲಿ ಬೆಳಗಿನ ಮತ್ತು ಮಧ್ಯಾಹ್ನದ ವೇಳೆ ಶಾಲೆ, ಸಂಜೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ ನಾಟಕ ಹಾಗೂ ಸಿನಿಮಾ ಪ್ರದರ್ಶನಗಳಿರುತ್ತಿದ್ದವು. 1935ರಲ್ಲಿ ಪುಟ್ಟಣ್ಣ ಚೆಟ್ಟಿಯವರ ಪುರಭವನ ನಿರ್ಮಾಣವಾಗುವವರೆಗೂ ಇದೊಂದೇ ಪ್ರಮುಖ ಸಭಾ ಭವನವಾಗಿತ್ತು. ಡಿ.ವಿ.ಜಿ.ಯವರು ತಮ್ಮ ಜ್ಞಾಪಕ ಚಿತ್ರ ಶಾಲೆಯಲ್ಲಿ ಇಲ್ಲಿ ನಡೆಸಿದ ಸಮಾರಂಭಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಸರ್. ಎಂ.ವಿಶ್ವೇಶ್ವರಯ್ಯನವರೇ ಮೊದಲಾಗಿ ಅನೇಕ ಗಣ್ಯ ವ್ಯಕ್ತಿಗಳು ಇಲ್ಲಿ ಉಪನ್ಯಾಸ ಮಾಡಿದ್ದಾರೆ. ವಿಶ್ವ ಕವಿ ರವೀಂದ್ರನಾಥ ಠಾಗೂರರಿಗೆ, ಸರೋಜಿನಿ ನಾಯ್ಡುರವರಿಗೆ, ಸರ್.ಎಂ.ವಿಶ್ವೇಶ್ವರಯ್ಯನವರಿಗೆ ಮಹಾತ್ಮಾ ಗಾಂಧೀಜಿಯವರಿಗೆ ಬೆಂಗಳೂರು ಜನತೆ ಸನ್ಮಾನ ಮಾಡಿದುದು ಇಲ್ಲೇ. ಪ್ರಥಮ ಮೂಕಿ ಚಿತ್ರ, ಚಲನಚಿತ್ರಗಳಿಗೂ, ಸರ್ಕಸ್, ನಾಟಕ, ಬಾಂಬೆ ಶೋ ಮುಂತಾದ ಚಟುವಟಿಕೆಗಳಿಗೆ ಇದೇ ಪ್ರಮುಖ ಕೇಂದ್ರವಾಗಿತ್ತು. ಕೈಲಾಸಂರವರು ತಮ್ಮ ಟೊಳ್ಳು ಗಟ್ಟಿ ನಾಟಕದಲ್ಲೂ 'ಈ ಜನೋಪಕಾರಿ ಗೇಟಿದೆಯಲ್ಲಾ....' ಎಂದು ಉಲ್ಲೇಖಿಸಿದ್ದಾರೆ. ಮುಂದೆ ಈ ದೊಡ್ಡಣ್ಣ ಹಾಲ್ ಪ್ಯಾರಾಮೌಂಟ್ ಚಿತ್ರಮಂದಿರ ಎಂದು ಕರೆಯಲ್ಪಟ್ಟಿತು. ಇದೊಂದು ಸುಂದರ ಪಾರಂಪರಿಕ ಕಟ್ಟಡವೂ ಆಗಿತ್ತು. ಈಗ ಇದರ ಜಾಗದಲ್ಲಿ



ಹೊಸ ಕಟ್ಟಡಗಳ ಚಿತ್ರಮಂದಿರಗಳಿವೆ. ಹೀಗೆ ನಗರಕ್ಕೆ ಸರ್ವತೋಮುಖ ಸೇವೆ ಸಲ್ಲಿಸಿದ ಈ ಮಹಾತ್ಮರ ನೆನಪು ಚಿರಸ್ಥಾಯಿಯಾಗಿರಲಿ ಎಂದು ಕೆ.ಆರ್. ಮಾರ್ಕೆಟ್ ವೃತ್ತವನ್ನು 1994ರಲ್ಲಿ 'ಜನೋಪಕಾರಿ ದೊಡ್ಡಣ್ಣ ಶೆಟ್ಟರ ವೃತ್ತ' ಎಂದು ನಾಮಕರಣ ಮಾಡಲಾಗಿತ್ತು. ಈ ವೃತ್ತದಿಂದ ಬಸಪ್ಪ ವೃತ್ತದವರೆಗೂ ಇದ್ದ ರಸ್ತೆಗೆ ದೊಡ್ಡಣ್ಣ ರಸ್ತೆ ಎಂಬ ಹೆಸರನ್ನು ಇಡಲಾಯಿತು. ಹೀಗೆ ಸರ್ವಸ್ವವನ್ನೂ ತಮ್ಮ ಈ ಊರಿನ ಏಳ್ಗೆಗೆ ಸಮರ್ಪಿಸಿದ ಈ ನಗರ ನಿರ್ಮಾಪಕರು ಇಂದಿನ ಬೆಂಗಳೂರಿಗೆ ಆದರ್ಶಪುರಷರು.

2024ನೇ ಸಾಲಿಗೆ 42ನೇ ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರಾಗಿ ಸುರೇಶ್ ಎಸ್., ಸದಸ್ಯರಾಗಿ ಶ್ರೀ ವಿನೋದ್ ಎಂ.ಜಿ., ಶ್ರೀ ಮಂಜುನಾಥ್ ವಿ.ಎನ್., ಶ್ರೀ ನಿರಂಜನ್ ಗಾಣಿಗ ಎನ್., ಶ್ರೀ ಮುನಿಚೆಟ್ಟಿ ವಿ., ಶ್ರೀ ರಾಜಣ್ಣ ಎಂ.ಸಿ., ಶ್ರೀ ಷಹ ಸಂಜಯ್, ಶ್ರೀಮತಿ ಉಮಾದೇವಿ ಜಿ.ಎ., ಶ್ರಿಮತಿ ಸ್ವಪ್ನ ಚಂದ್ರ ಶೆಟ್ಟಿ, ಶ್ರೀಮತಿ ಕೃಷ್ಣವೇಣಿ ಡಿ.ಸಿ. ಇವರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಆರ್ಯ ವಿದ್ಯಾ ಶಾಲೆ

(ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಕಾಲೇಜು) ಗಾಂಧಿನಗರ,
ಬೆಂಗಳೂರು – 560 009.

ಗಾಂಧಿನಗರದಲ್ಲಿರುವ ಆರ್ಯ ವಿದ್ಯಾ ಶಾಲೆಯು ಇಡೀ ಕರ್ನಾಟಕದಲ್ಲಿಯೇ ನೋಂದಣಿಯಾದ ಮೊಟ್ಟ ಮೊದಲ ಶಾಲೆಯಾಗಿದೆ. ವಿಶಾಲವಾದ ಜಾಗದಲ್ಲಿ ಭವ್ಯವಾದ ಕಲ್ಲಿನ ಕಟ್ಟಡದ ಸಂಸ್ಥಾಪಕರು ದಿ॥ ಕೆ.ಆರ್. ಗೋಪಾಲಾಚಾರ್ಲು ಅವರು. ಶ್ರೀಯುತ ಶ್ರೀನಿವಾಸ ಚಕ್ರವರ್ತಿ ಆಚಾರ್ಯ ಮತ್ತು ಸೌ॥ ಅಲಮೇಲಮ್ಮ ದಂಪತಿಗೆ ಕ್ರಿ.ಶ. 1882 ರಲ್ಲಿ ಆಚಾರ್ಯರು ಜನಿಸಿದರು. ಪ್ರಾರಂಭಿಕ ಶಿಕ್ಷಣವನ್ನು ಆನೇಕಲ್ಲಿನಲ್ಲಿ ಪಡೆದು, ಪ್ರೌಢ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿದರು. ನಂತರ ಬೆಂಗಳೂರಿನ ಲಂಡನ್ ಮಿಷನರಿ ಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಆರಂಭಿಸಿದರು.



ಶ್ರೀ ಗೋಪಾಲಾಚಾರ್ಲು
ಸ್ಥಾಪಕರು

ಆ ಶಾಲೆಯಲ್ಲಿ ಕ್ರೈಸ್ತ ಮತಕ್ಕೆ ಸಂಬಂಧಪಟ್ಟ ಪ್ರಾರ್ಥನೆಗಳನ್ನು ಎಲ್ಲರೂ ಕಡ್ಡಾಯವಾಗಿ ಮಾಡಲೇಬೇಕಿತ್ತು. ಇದನ್ನು ವಿರೋಧಿಸಿ

ಆಚಾರ್ಯರು ಹೊರನಡೆದಾಗ ಆ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ 25 ಜನ ಹಿಂದೂ ವಿದ್ಯಾರ್ಥಿಗಳೂ ಸಹ ಇವರನ್ನು ಹಿಂಬಾಲಿಸಿ ಹೊರ ಬಂದರು. ಆ ವಿದ್ಯಾರ್ಥಿಗಳಿಗೆ ನಿಮ್ಮ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸದಿರಿ ಎಂದು ಬಹಳಷ್ಟು ರೀತಿಯಲ್ಲಿ ಮನಗಾಣಿಸುವ ಪ್ರಯತ್ನ ಪಟ್ಟರೂ ಸಫಲವಾಗಲಿಲ್ಲ ಆಗ ಆ ವಿದ್ಯಾರ್ಥಿಗಳಿಗೋಸ್ಕರ ಹಾಗೂ ಆರ್ಯ ಸಂಸ್ಕೃತಿಯ ಉಳಿವಿಗಾಗಿ 'ಆರ್ಯನ್ ಲೋಯರ್ ಸೆಕೆಂಡರಿ ಶಾಲೆ' ಎಂಬ ವಿದ್ಯಾಸಂಸ್ಥೆಯನ್ನು ಬೆಂಗಳೂರಿನ ಚಿಕ್ಕಪೇಟೆಯ ಸಾಹೂಜಿ ಗಲ್ಲಿಯಲ್ಲಿನ ಒಂದು ಸಣ್ಣ ಕೋಣೆಯಲ್ಲಿ 1909 ರಲ್ಲಿ ಪ್ರಾರಂಭಿಸಲಾಯಿತು. 1925 ರವರೆಗೂ ಈ ಶಾಲೆಯ ಉಪಾಧ್ಯಾಯ ಹಾಗೂ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಲೇ ಅದೇ ವರ್ಷ ಫೆಬ್ರವರಿ ತಿಂಗಳಿನಲ್ಲಿ ಸ್ವರ್ಗಸ್ಥರಾದರು. ಇವರ ನಿಸ್ವಾರ್ಥ ಸೇವೆ ಹಾಗೂ ಕಠಿಣ ಪರಿಶ್ರಮದ ಮಹಾಫಲವೇ ಇಂದು ಗಾಂಧಿನಗರದಲ್ಲಿ ನೆಲೆಗೊಂಡಿರುವ ಆರ್ಯ ವಿದ್ಯಾ ಶಾಲಾ.

ಶ್ರೀ ಗೋಪಾಲಾಚಾರ್ಲು ಸಂಸ್ಥಾಪಕರಾಗಿದ್ದಾಗ ಶ್ರೀ ಪುಟ್ಟಯ್ಯನವರು ಕಾರ್ಯಕಾರಿ ಸಮಿತಿಯ ಖಜಾಂಚಿಗಳಾಗಿದ್ದರು. ಇವರಿಬ್ಬರೂ ಆಪ್ತ ಸ್ನೇಹಿತರು. ಉಪಾಧ್ಯಾಯರಿಗೆ ಸಂಬಳ ನೀಡಲು ತಡವಾದಾಗ ಶ್ರೀ ಪುಟ್ಟಯ್ಯನವರ ಬಳಿ ಆಚಾರ್ಯರು ಹಣ ಪಡೆದು ಸಂಬಳ ಬಂದ ಕೂಡಲೇ ತಲುಪಿಸುತ್ತಿದ್ದರು. 3 ರೂಪಾಯಿಯ ಕಟ್ಟಡದ ಬಾಡಿಗೆ ಕೊಡುವುದೂ ಬಹಳ ಕಷ್ಟವಾಗುತ್ತಿತ್ತು. ಅವರು ತೊಡುತ್ತಿದ್ದ ಕೋಟಿಗೂ ತೇಪೆ ಹಾಕಲಾಗಿತ್ತು. ಅಷ್ಟೊಂದು ಬಡತನದಲ್ಲಿಯೂ ಆರ್ಯ ಸಂಸ್ಕೃತಿಯನ್ನು ಬ್ರಿಟೀಷರ ದಬ್ಬಾಳಿಕೆಯಿಂದ ಕಾಪಾಡುವ ಆಗತ್ಯವನ್ನು ಅವರು ಕಂಡುಕೊಂಡಿದ್ದರು. ಪ್ರಥಮ ಮಹಾಯುದ್ಧದ ಕಾಲದಲ್ಲಿ ಇಡೀ ದೇಶವೇ ಬಡತನದಲ್ಲಿ ನರಳುತ್ತಿರುವ ಸಂದರ್ಭದಲ್ಲಿ ಇಂತಹಾ ಒಂದು ಕಲ್ಪನೆಯ ಕೂಸು ಸಾಕಾರವಾಗಬೇಕಾದರೆ ಇವರ ಅಂತಃಶಕ್ತಿ ಹಾಗೂ ದೃಢನಿರ್ಧಾರ ಪಟ್ಟ ಯಾತನೆ ಸೀಮಾತೀತ.

1928 ರಲ್ಲಿ ಆರ್ಯ ವಿದ್ಯಾ ಶಾಲೆ ಅಸೋಸಿಯೇಷನ್ ಆಗಿ ರೂಪಗೊಂಡು ಸೊಸೈಟಿ ಆಫ್ ರಿಜಿಸ್ಟ್ರೇಷನ್ ಆಕ್ಟ್ ಅಡಿಯಲ್ಲಿ 16 ನೇ ತಾರೀಖು ಮಾರ್ಚ್ ತಿಂಗಳಿನಲ್ಲಿ ನೊಂದಣಿಗೊಂಡಿತು. 1927 ರಿಂದ 1937 ರವರೆಗೆ ಈ ಶಾಲೆಯು ಹಾಸ್ಪಿಟಲ್ ರಸ್ತೆಯಲ್ಲಿದ್ದ ಬಾಡಿಗೆ ಕಟ್ಟಡವೊಂದರಲ್ಲಿ

ನಡೆಯುತ್ತಿತ್ತು. ಇಲ್ಲಿ ವಿದ್ಯಾರ್ಥಿಗಳಿಗೆ ಕೂರಲು ಬೆಂಚುಗಳ ಸೌಲಭ್ಯವಿಲ್ಲದ್ದರಿಂದ ಮೆಜೆಸ್ಟಿಕ್ ಥಿಯೇಟರ್‌ನಿಂದ ಬೆಂಚುಗಳನ್ನು ಹೊತ್ತು ತಂದು ತರಗತಿಗಳು ಮುಗಿದ ಬಳಿಕ ಆ ಬೆಂಚುಗಳನ್ನು ಥಿಯೇಟರ್‌ಗೆ ವಾಪಸ್ಸು ತೆಗೆದುಕೊಂಡು ಹೋಗುತ್ತಿದ್ದರು. ಈ ರೀತಿಯ ದುಃಸ್ಥಿತಿಯಲ್ಲೂ 1936ರಲ್ಲಿ ಇವರ ಮತ್ತೊಂದು ಶಾಖೆ ಶೇಷಾದ್ರಿಪುರಂನಲ್ಲಿ ಪ್ರಾರಂಭವಾಯಿತು. ಕಾರಣಾಂತರಗಳಿಂದ ಮುಂದೆ ಈ ಶಾಲೆಯನ್ನು ಮುಚ್ಚಲಾಯಿತು. 1936ರ ಸುಮಾರಿಗೆ ಶಾಲೆ ಕೆಂಪೇಗೌಡ ರಸ್ತೆಯ ಈಗಿನ ಅಲಂಕಾರ ಪ್ಲಾಜಾ ಇರುವೆಡೆಯಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ಮುಂದುವರೆಸಲಾಯಿತು. 1938 ರಲ್ಲಿ ಗಾಂಧಿನಗರದಲ್ಲಿ ನಿವೇಶನವೊಂದನ್ನು ಅಂದಿನ ಸಿಟಿ ಮುನಿಸಿಪಾಲಿಟಿ ಶಾಲೆಗಾಗಿ ಮಂಜೂರು ಮಾಡಲಾಯಿತು. ಮತ್ತೆ 1944ರಲ್ಲಿ ಮತ್ತೊಂದು ನಿವೇಶನವನ್ನು ಮಂಜೂರು ಮಾಡಿತು. 1940-41 ರಲ್ಲಿ ಹೊಸ ಜಾಗದಲ್ಲಿ ಪ್ರಾರಂಭಗೊಂಡ ಶಾಲೆಯಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು.

1950ರ ಸುಮಾರಿನಲ್ಲಿ ನಡೆದ ಒಂದು ಘಟನೆ. ಶೇಷಾದ್ರಿಪುರಂ ಶಾಲೆಯಲ್ಲಿ ಸಂಸ್ಥಾಪಕಾರ ದಿನಾಚರಣೆ ಬಹಳ ಸಂಭ್ರಮದಿಂದ ನಡೆಯುತ್ತಿತ್ತು. ಆ ಸಮಯದಲ್ಲಿ ಸಂಸ್ಥಾಪಕರ ಪತ್ನಿ ಅದೇ ಮಾರ್ಗದಲ್ಲಿ ಮಗನೊಂದಿಗೆ ನಡೆದು ಹೋಗುತ್ತಿದ್ದರು, ಅವರು ಶಾಲೆಯ ಒಳಗೆ ಬೊಟ್ಟು ಮಾಡಿ ತೋರಿಸುತ್ತಾ, "ನೋಡು, ನಿನ್ನ ಅಪ್ಪನ ಜಯಂತಿಯನ್ನು ಒಳಗೆ ಆಚರಿಸುತ್ತಿದ್ದಾರೆ"ಎಂದು ಹೇಳುತ್ತಾ ಹಾಗೇ ಮುನ್ನಡೆದರಂತೆ.

1960ರ ಆಸುಪಾಸಿನಲ್ಲಿ ಅಲ್ಲಿಯವರಿಗೆ ತಗಡಿನ ಮೇಲ್ಚಾವಣಿಯಿರುವ ಕೋಣೆಗಳಲ್ಲಿ ತರಗತಿಗಳು ನಡೆಯುತ್ತಿತ್ತು. ದಾನಿಗಳಿಂದ ಚಂದಾ ವಸೂಲಿ, ಲಾಟರಿ ನಡೆಸಲಾಯಿತು. ಬೆನಿಫಿಟ್ ಶೋಗಳನ್ನು ನಡೆಸಿ ಹಣ ಸಂಗ್ರಹಿಸಿ ಕಲ್ಲಿನ ಭವ್ಯ ಕಟ್ಟಡವನ್ನು ನಿರ್ಮಿಸಲಾಯಿತು. ಶಾಲಾ ಅವಧಿಯ ನಂತರ ವಿದ್ಯಾರ್ಥಿಗಳು, ಉಪಾಧ್ಯಾಯರು, ಪೋಷಕರು ಶಾಲಾ ಕಟ್ಟಡದ ನಿರ್ಮಾಣದಲ್ಲಿ ಕೈ ಜೋಡಿಸಿರುವುದು ಗಮನಿಸಬೇಕಾದ ಅಂಶ.

ಈ ಶಾಲೆಗೆ ಶಾಶ್ವತ ನೆಲೆ ಹಾಗೂ ಉತ್ತಮ ಕಟ್ಟಡ ಸೌಲಭ್ಯವು ಸಮಾಜದ ಮಹನೀಯರ ಉದಾರ ಸಹಾಯದಿಂದ ಸಫಲವಾಯಿತು. ಈ ಶಾಲೆ ನಿಜಕ್ಕೂ

ಒಂದು ಪುಣ್ಯಭೂಮಿ. ದೇಶದ ಎಲ್ಲೆಡೆಯಲ್ಲಿ ಸ್ವಾತಂತ್ರ್ಯ ಹೋರಾಟದ ಚಳುವಳಿ ತೀವ್ರವಾಗಿರುವ ಸಮಯದಲ್ಲಿ ಈ ಶಾಲೆಯ ವಿಶಾಲವಾದ ಆಟದ ಮೈದಾನದಲ್ಲಿ ಬಹಳಷ್ಟು ಸ್ವಾತಂತ್ರ್ಯ ಹೋರಾಟದ ಸಮಾವೇಶಗಳು ನಡೆದಿವೆ ಹಾಗೂ ಗುಟ್ಟಾಗಿ ಜನರು ಒಂದುಗೂಡಿ ಇಲ್ಲಿಂದಲೇ ಹೋರಾಟವನ್ನು ತೀವ್ರಗೊಳಿಸಿದ್ದರು. ಪಂಡಿತ ಮದನಮೋಹನ ಮಾಳವೀಯರಂಥಾ ಮಹಾನುಭಾವರು ಈ ಶಾಲೆಗೆ ಭೇಟಿ ನೀಡಿ ಶ್ಲಾಘಿಸಿರುವರು. ಶ್ರೀ ಸಿ. ರಾಜಗೋಪಾಲಾಚಾರಿ (ರಾಜಾಜಿ), ಶ್ರೀ ರಾವ್ ಸಾಹೇಬ್, ಶ್ರೀ ಸಿ.ಎನ್.ಆರ್. ರೆಡ್ಡಿ, ಶ್ರೀ ವೆಂಕಟರಮಣ ಅಯ್ಯರ್, ಶ್ರೀ ಟಿ.ಎಸ್. ಜಾಕಬ್, ಶ್ರೀ ಎಂ.ಶೇಷಾದ್ರಿ ಅಯ್ಯರ್, ಇಂತಹ ಮಹನೀಯರು ಈ ಶಾಲೆಗೆ ಭೇಟಿ ನೀಡಿ ಸಮಾಜದ ಸೇವಾ ಮನೋಭಾವ ಹಾಗೂ ಕಾರ್ಯದಕ್ಷತೆಯನ್ನು ಶ್ಲಾಘಿಸಿರುವರು.

1909 ರಲ್ಲಿ ಪ್ರಾರಂಭವಾದ ಈ ಶಿಕ್ಷಣ ಸಂಸ್ಥೆ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕಳೆದಿದ್ದರೂ ಇಂದಿಗೂ ಕಾರ್ಯ ನಿರ್ವಹಿಸುತ್ತಿರುವ ಬೆಂಗಳೂರಿನ ಅತ್ಯಂತ ಹಳೆಯ ಸರ್ಕಾರೇತರ ಶಿಕ್ಷಣ ಸಂಸ್ಥೆಯಾಗಿರುವುದು ಗಮನಾರ್ಹ ಸಂಗತಿ. ಇಂದು ಇದು ಆರ್ಯ ವಿದ್ಯಾ ಶಾಲಾ – ಪೇರೆಂಟ್ಸ್ ಅಸೋಸಿಯೇಷನ್ ಎಂಬ ಹೆಸರಿನಿಂದ ಕಾರ್ಯ ನಿರ್ವಹಿಸುತ್ತಿದೆ. ಅಂದರೆ ಇಲ್ಲಿ ತಮ್ಮ ಮಕ್ಕಳನ್ನು ವ್ಯಾಸಂಗಕ್ಕಾಗಿ ಸೇರಿಸಿರುವ ಪೋಷಕರೆ ಆ ಮಕ್ಕಳ ವ್ಯಾಸಂಗ ಮುಗಿಯುವವರೆಗೂ ಪೋಷಕ ಸದಸ್ಯರಾಗಿರುತ್ತಾರೆ. ಇವರಲ್ಲದೇ "ಆಜೀವ ಸದಸ್ಯರೂ ಇರುತ್ತಾರೆ. ಮೂರು ವರ್ಷಗಳಿಗೊಮ್ಮೆ ಆಡಳಿತ ಮಂಡಳಿಗೆ ಚುನಾವಣೆಯಾಗಿ ಹೊಸ ಆಡಳಿತ ಮಂಡಳಿಯ ಕಾರ್ಯ ನಿರ್ವಹಿಸುವುದು. ಇಂತಹ ಆಡಳಿತ ಮಂಡಳಿಯಲ್ಲಿ ದಿ॥ ಹೆಚ್. ಹನುಮಂತಪ್ಪ ಹಾಗೂ ಇವರ ಪುತ್ರ ಜೂನಿಯರ್ ಡಬ್ಲ್ಯೂ.ಹೆಚ್. ಹನುಮಂತಪ್ಪ ನವರು, ಹಿಂದೆ ಮೇಯರ್ ಆಗಿದ್ದ ದಿ॥ ಆರ್.ಎಸ್. ದೇವಕುಮಾರ್‌ರವರು, ದಿ॥ ಮಾಸ್ತಿ ವೀರಣ್ಣನವರು, ದಿ॥ ಕೆ.ಸಿ. ಪುಟ್ಟನರಸಯ್ಯ (ಇವರು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ) ದಿ॥ ಎಸ್.ವಿ. ಕೆ. ರಾಜನ್ ರವರು ಅಲ್ಲದೇ ಈ ಹಿಂದೆ ಸದರಿ ಶಿಕ್ಷಣ ಸಂಸ್ಥೆಯ ವ್ಯಾಸಂಗ ನಂತರ ಆಜೀವ ಸದಸ್ಯರಾಗಿದ್ದ ದಿ॥ ಬಿ.ಕೆ. ಗಂಗಪ್ಪನವರು, ದಿ॥ ಟಿ.ಕೆ. ಜನಾರ್ದನ್‌ರವರು, ದಿ॥ ಮುನಿಸ್ವಾಮಿಯವರು ಮೊದಲಾದ ಮಹನೀಯರು ಈ ಶಿಕ್ಷಣ ಸಂಸ್ಥೆಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.



ಶ್ರೀ ದೇವುಡು ನರಸಿಂಹ ಶಾಸ್ತ್ರಿ



ಶ್ರೀ. ಉದಯಕುಮಾರ್

ಶಿಕ್ಷಣ ಸಂಸ್ಥೆ ಎಂದ ಮೇಲೆ ಅಧ್ಯಾಪಕರ ಪಾತ್ರ ಹಿರಿದಾದುದು. ಹಲವಾರು ಮಂದಿ ಉತ್ತಮ ಶಿಕ್ಷಕರು ಇಲ್ಲಿ ಸೇವೆ ಸಲ್ಲಿಸಿದ್ದಾರೆ. ದಿ॥ ದೇವುಡು ನರಸಿಂಹ ಶಾಸ್ತ್ರಿಗಳು ಅಧ್ಯಾಪಕರಾಗಿದ್ದುದು ಈ ಶಿಕ್ಷಣ ಸಂಸ್ಥೆಯ ಒಂದು ಹೆಗ್ಗಳಿಕೆ.


ಕನ್ನಡ ಚಲನಚಿತ್ರರಂಗ ಜನಪ್ರಿಯ "ತ್ರಿವಳಿ ಕುಮಾರ" ರಲ್ಲಿ ಒಬ್ಬರೆನಿಸಿದ್ಧ ದಿ॥ ಉದಯಕುಮಾರ್‌ರಂತವರೂ ಇಲ್ಲಿ ಉಪಾಧ್ಯಾಯರಾಗಿದ್ದರು. ಈ ಸಂಸ್ಥೆಯ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ದಿ॥ ಆನಂದಮೂರ್ತಿ, ದಿ॥ ಕೆ.ಆರ್. ಸುಬ್ಬರಾಯರ ಸೇವೆ ಗಮನಾರ್ಹ. ಈ ಇಬ್ಬರೂ ತಮ್ಮ ನಿವೃತ್ತಿಯ ನಂತರವೂ ಆಡಳಿತ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈಗ ರಾಜ್ಯದ ಉಪಮುಖ್ಯಮಂತ್ರಿಗಳಾಗಿರುವ ಶ್ರೀ. ಡಿ.ಕೆ. ಶಿವಕುಮಾರ್‌ರವರು ಹಾಗೂ ಅವರ ಸಹೋದರರೂ ಸಂಸದರೂ ಶ್ರೀ. ಡಿ.ಕೆ.ಸುರೇಶ್‌ರವರು ಆಡಳಿತ ಮಂಡಲಿಯ ಜವಾಬ್ದಾರಿ ವಹಿಸಿಕೊಂಡಿರುವುದು ಗಮನಾರ್ಹವಾದುದು.

ಈ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗಕ್ಕಾಗಿ ಶ್ರೀಮಂತರ ಮಕ್ಕಳಲ್ಲದೆ ಕಬ್ಬನ್‌ಪೇಟೆ, ಕಾಟನ್‌ಪೇಟೆ, ಅರಳೆಪೇಟೆ, ರಾಣಾಸಿಂಗ್ ಪೇಟೆ, ಸುಭಾಷ್ ನಗರ, ಲಕ್ಷ್ಮಣಪುರಿ ಮುಂತಾದ ಕಡೆಗಳಿಂದ ಸಾಮಾನ್ಯ ಕುಟುಂಬದಿಂದ ಬರುತ್ತಿರುವ ಮಕ್ಕಳಾದ್ದರಿಂದ ಯಾವುದೇ ಹೆಚ್ಚಿನ ಶುಲ್ಕವನ್ನು ಪಡೆಯದೆ ಇಲಾಖೆ ನಿಗದಿಪಡಿಸಿರುವ ಸಾಮಾನ್ಯ ಶುಲ್ಕವನ್ನು ಮಾತ್ರ ಪಡೆಯಲಾಗುತ್ತಿದೆ. ಶುಲ್ಕ

ಕಟ್ಟಲಾಗದವರಿಗೆ ಕೆಲವು ಅಧ್ಯಾಪಕರೇ ಶುಲ್ಕ ಪಾವತಿ ಮಾಡಿದ ನಿದರ್ಶನಗಳಿವೆ. ಇಂತಹ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿ ಉತ್ತಮ ಫಲಿತಾಂಶ ನೀಡುತ್ತಿರುವುದು ಶಿಕ್ಷಕರ ಪಾಲಿಗೆ ಒಂದು ಸವಾಲೇ ಸರಿ.

ಇಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಅನೇಕರು ವೈದ್ಯರಾಗಿ, ಇಂಜಿನಿಯರ್ಗಳಾಗಿ, ಸರ್ಕಾರಿ ಅಧಿಕಾರಿಗಳಾಗಿರುವುದು ಒಂದು ಹೆಮ್ಮೆಯ ವಿಚಾರ. ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಲ್ಲಿ ಕಲಾವಿದರಾಗಿದ್ದಾರೆ. ಅಂಥವರಲ್ಲಿ ಚಲನಚಿತ್ರ ಹಾಸ್ಯನಟರಾಗಿರುವ ಹಿರಿಯ ಕಲಾವಿದ ಶ್ರೀ ಡಿಂಗ್ರಿ ನಾಗರಾಜ್ ಪ್ರಮುಖರು. ಇವರಲ್ಲದೇ ವಾಮನಮೂರ್ತಿ, ಶ್ರೀ ಸೋಮನಾಥ, ಹಾಸ್ಯ ಕಲಾವಿದರಾಗಿದ್ದ ದಿ॥ ಶ್ರೀ ಮೋಹನ್ ಜುನೇಜ ಇವರನ್ನು ಸ್ಮರಿಸಬಹುದು.

ಈ ಶಿಕ್ಷಣ ಸಂಸ್ಥೆಯಲ್ಲಿ ಉತ್ತಮ ಅಧ್ಯಾಪಕರಿದ್ದು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದಾರೆ.ಇಲ್ಲಿನ ಅಧ್ಯಾಪಕರಲ್ಲಿ ಕೆಲವಾರು ಮಂದಿ ಇಲಾಖೆ ನೀಡಿರುವ ಗುರುತರ ಜವಾಬ್ದಾರಿ ಹೊತ್ತು ಕಾರ್ಯ ನಿರ್ವಹಿಸಿದ್ದಾರೆ. ಅವು ಪಠ್ಯಪುಸ್ತಕ ರಚನೆ, ಪರೀಕ್ಷಾ ಪ್ರಶ್ನೆಪತ್ರಿಕೆ ತಯಾರಿ, ಪಠ್ಯ ವಿಷಯದ



ಬೋಧನಾನುಭವಗಳನ್ನು ಕಾರ್ಯಾಗಾರಗಳ ಮೂಲಕ ಇತರ ಶಾಲೆ ಶಿಕ್ಷಕರೊಡನೆ ಹಂಚಿಕೊಂಡಿದ್ದಾರೆ.

ಶಾಲೆಯಲ್ಲಿ ಈ ಹಿಂದೆ ಒಳ್ಳೆಯ ಕ್ರಿಕೆಟ್ ತಂಡವಿದ್ದು ಪ್ರತಿವರ್ಷ ಜರುಗುತ್ತಿದ್ದ ಬಿ.ಟಿ. ರಾಮಯ್ಯ ಶೀಲ್ಡ್ ನಲ್ಲಿ ಭಾಗವಹಿಸಿ ಶಿಕ್ಷಣ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ವೈ.ಎಂ.ಸಿ.ಎ ಯಲ್ಲಿ ಉತ್ತರ ವಲಯದ ಜಿಲ್ಲಾ ಕ್ರೀಡೆಯನ್ನು ನಡೆಸಿಕೊಟ್ಟಿರುತ್ತದೆ. ಹೀಗೆ ಅಥ್ಲೆಟಿಕ್ಸ್, ತಂಡ ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಉದಾತ್ತ ಮನಸ್ಸಿನ ವ್ಯಕ್ತಿ ದಿ॥ ಶ್ರೀ ಕೆ.ಆರ್. ಗೋಪಾಲಾಚಾರ್ಲು 1909 ರಲ್ಲಿ ಸ್ಥಾಪಿಸಿದ ಈ ಶಿಕ್ಷಣ ಸಂಸ್ಥೆಯು ಇಂದು ಬೃಹದಾಕಾರವಾಗಿ ಬೆಳೆದು ಅವರ ಕೀರ್ತಿಯು ಶಾಶ್ವತವಾಗಿ ಉಳಿದಿರುವುದಕ್ಕೆ ಈ ಆರ್ಯ ವಿದ್ಯಾ ಶಾಲೆಯೇ ಸಾಕ್ಷಿಯಾಗಿದೆ.

॥ ಶ್ರದ್ಧಾಹಿ ಪರಮಾ ಗತಿಃ ॥

ನ್ಯಾಷನಲ್ ಎಜುಕೇಷನ್ ಸೊಸೈಟಿ

ಕೆ ಆರ್ ರಸ್ತೆ, ಬಸವನಗುಡಿ,
ಬೆಂಗಳೂರು – 560 004

ನ್ಯಾಷನಲ್ ಎಜುಕೇಷನ್ ಸೊಸೈಟಿಯು ನಡೆದು ಬಂದ ದಾರಿಯನ್ನು ಒಮ್ಮೆ ಹಿಂದಿರುಗಿ ನೋಡಿದಾಗಿ ಸೇವಾ ಮನೋಭಾವವನ್ನು ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡು ಸಂಸ್ಥೆಯ ಶ್ರೇಯೋಭಿವೃದ್ಧಿಗಾಗಿ ದುಡಿದು ನಿಸ್ವಾರ್ಥ ಸೇವೆಯಿಂದ ಮನಸ್ಸಿಗೆ ತೃಪ್ತಿಯನ್ನು ಕಂಡುಕೊಂಡು ನಮ್ರತಾಭಾವವನ್ನು ಮೆರೆದ ಹಿರಿಯ ಚೇತನಗಳು ಸಾಲಾಗಿ ನಿಲುತ್ತಾರೆ. ಕಲಿಕೆಯಿಂದ ಸಿಗುವುದು ಬದುಕಿನಲ್ಲಿ ಮತ್ತಾವುದರಿಂದಲೂ ಸಿಗಲು ಸಾಧ್ಯವಿಲ್ಲ ಎಂದು ನಿರೂಪಿಸಿದ ಧೀಮಂತರು ನಮ್ಮ ದೇಸಿ ಸಂಸ್ಥೆಯ ಮಹನೀಯರು.



ಅನ್ನಿ ಬೆಸೆಂಟ್

ಅನ್ನಿ ಬೆಸೆಂಟ್ ಎಂಬ ಮಹಿಳೆ 1893 ರಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಬಂದು ಸೆಂಟರ್ ಫಾರ್ ವರ್ಲ್ಡ್ ಥಿಯೋಸಫಿ

ಎಂಬ ವಿಶಾಲ ಮನೋಭಾವದ ಅಂತಾರಾಷ್ಟ್ರೀಯ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿದರು. ಆಕೆಗೆ ಭಾರತ ಗುಲಾಮ ದೇಶವಾಗಿರುವುದನ್ನು ಸಹಿಸಿಕೊಳ್ಳಲು ಆಗಲಿಲ್ಲ. 1916 ರಲ್ಲಿಯೇ ದೇಶ ಪ್ರೇಮವನ್ನು ಮೂಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದರಲ್ಲಿ ಮುಖ್ಯವಾದ ಒಂದು ಭಾಗ ದೇಶದ ಕೆಲವು ಕಡೆ ನ್ಯಾಷನಲ್ ಹೈಸ್ಕೂಲ್ ಅನ್ನು ಸ್ಥಾಪಿಸುವುದು. ಮದ್ರಾಸಿನಲ್ಲಿ, ಮದನಪಲ್ಲಿಯಲ್ಲಿ ಇಂತಹ ಶಾಲೆಗಳನ್ನು ಸ್ಥಾಪಿಸಿದರು.

ಇಂತಹ ಒಂದು ನ್ಯಾಷನಲ್ ಹೈಸ್ಕೂಲ್ ಅನ್ನು ಸ್ಥಾಪಿಸಲು ಯೋಜಿಸಿ ಸ್ವತಃ ಥಿಯೋಸಫಿಯಾದ ಬೆಂಗಳೂರಿನ ನ್ಯಾಯಮೂರ್ತಿ ಕೆ.ಎಸ್.ಚಂದ್ರಶೇಖರ್ ಐಯ್ಯರ್ ರವರೊಂದಿಗೆ ಸಮಾಲೋಚಿಸಿದ ನಂತರ ಸಿಟಿ ಮಾರ್ಕೆಟ್ಟು ಸಮೀಪ ಜನೋಪಕಾರಿ ದೊಡ್ಡಣ್ಣ ಶೆಟ್ಟರ ಮಾಧ್ಯಮಿಕ ಶಾಲಾ ಆವರಣದಲ್ಲಿ 1917ನೆಯ ಇಸವಿಯಲ್ಲಿ ತಮ್ಮ ಆಸ್ತಿಯನ್ನು ಒಂದು ಟ್ರಸ್ಟನ ಮೂಲಕ ಥಿಯೋಸಫಿಕಲ್ ಸೊಸೈಟಿಗೆ ನೀಡಿದರು. ಹೀಗೆ ಶಾಲೆಯು 1917ನೇ ಜೂನ್ 5 ರಂದು ಎಸ್.ಎಲ್.ಎನ್ ನ್ಯಾಷನಲ್ ಹೈಸ್ಕೂಲ್ ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು.


ಶ್ರೀ. ದೊಡ್ಡಣ್ಣ ಶೆಟ್ಟಿ

ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಪದವೀಧರರಾದ ಶ್ರೀ. ಎನ್.ಎಸ್. ರಾಮರಾವ್ ಅವರು ಶಾಲೆಯ ಮೊದಲ ಮುಖ್ಯೋಪಾಧ್ಯಾಯರಾದರು. ದೇಶಾಭಿಮಾನಿ ಅನ್ನಿಬೆಸೆಂಟ್ ಹೆಸರು, ಜೊತೆಗೆ ಶ್ರದ್ಧಾವಂತ ವಿದ್ಯಾರ್ಹತೆಯಿಂದ ಕೂಡಿದ ಅಧ್ಯಾಪಕರ ತಂಡ ಸಹಜವಾಗಿಯೇ ಎಲ್ಲರನ್ನು ಆಕರ್ಷಿಸಿತ್ತು. ಅಲ್ಲದೇ ಮೊದಲ ವರ್ಷವೇ ಸಾಕಷ್ಟು ವಿದ್ಯಾರ್ಥಿಗಳು ಶಾಲೆಗೆ ದಾಖಲಾದರು.


ಶ್ರೀ. ಎನ್.ಎಸ್. ರಾಮರಾವ್

ಕಾರಣಾಂತರಗಳಿಂದ ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟಿಯವರಿಗೂ ಥಿಯೋಸಾಫಿಕಲ್ ಸೊಸೈಟಿಗೂ ಮನಸ್ತಾಪ ಉಂಟಾಗಿ ಅವರು ಕೊಟ್ಟ ಆಸ್ತಿಯನ್ನು ವಾಪಾಸು ತೆಗೆದುಕೊಂಡರು. ಹೀಗಾಗಿ ಎಸ್.ಎಲ್.ಎನ್ ವಿದ್ಯಾಸಂಸ್ಥೆ ಆವರಣ ಬಿಡಬೇಕಾದ ಅನಿವಾರ್ಯತೆ ಬಂದೊದಗಿತು ಮತ್ತು ಶಾಲೆಯನ್ನು ಮುಚ್ಚಬೇಕಾದ ಸಂದಿಗ್ಧ ಪರಿಸ್ಥಿತಿ ಎದುರಾಯಿತು. ಈ ಸಂದರ್ಭದಲ್ಲಿ ಮುಂದೆ ಬಂದವರೇ ವಿಶಾಲ ಮನೋಭಾವದ ವಿದ್ಯಾಭಿಮಾನದಿಂದ ಕೂಡಿದ ಪ್ರಜ್ಞಾವಂತರಾದ ಮೂವರು ಮಹನೀಯರು. ಹಿತವಾಗಿರುವುದನ್ನು


ಶ್ರೀ. ಬಿ.ಕೆ ಗರುಡಾಚಾರ್


ಶ್ರೀ. ಎಂ. ರಾಮಚಂದ್ರರಾವ್ ಸಿಂಧ್ಯ


ಶ್ರೀ. ಎಸ್.ಕೆ. ನರಸಿಂಹಯ್ಯ


ಶ್ರೀ. ಕಲ್ಯಾಣ ಸುಂದರಂ

ಹುಡುಕುವುದರಿಂದಲೇ ಉತ್ತಮವಾಗಿರುವುದು ಲಭಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಯಿತು. ಆ ಮೂವರು ಮಹನೀಯರು ಶ್ರೀ.ಬಿ.ಕೆ. ಗರುಡಾಚಾರ್, ಎಣ್ಣೆ ಕಾರ್ಖಾನೆಯ ಮಾಲೀಕರು, ನಗರ ಸಭೆಯ ಅಧ್ಯಕ್ಷರು. ನಂತರ ಶ್ರೀ. ಎಂ. ರಾಮಚಂದ್ರರಾವ್ ಸಿಂಧ್ಯ ಮತ್ತು ಶ್ರೀ.ಎಸ್.ಕೆ. ನರಸಿಂಹಯ್ಯನವರು, ವಾಣಿಜ್ಯೋದ್ಯಮಿಗಳು. ಶ್ರೀ.ಅರಗಂ ರಾಮರೆಡ್ಡಿ ಅವರ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಶಾಲೆ ಮುಂದುವರಿಸಿದರು. ಅದು ತುಂಬಾ ಜನನಿಬಿಡ ಪ್ರದೇಶದಲ್ಲಿ ಇದ್ದ ಕಾರಣ ಪಾಠ ಪ್ರವಚನಕ್ಕೆ ಅಡಚಣೆಯಾಗುತ್ತಿತ್ತು. ಇದಾದ ನಂತರ ಥಿಯೋಸಫಿಕಲ್ ಎಜುಕೇಷನಲ್ ಟ್ರಸ್ಟ್ ತಾವು ಶಾಲೆಯನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂದು ಕೈ ಚೆಲ್ಲಿದರು. ಇದರಿಂದ ಮತ್ತೊಂದು ಬಿಕ್ಕಟ್ಟು ಎದುರಾಯಿತು. ಇದರ ಪರಿಣಾಮ ಈ ಸಂಸ್ಥೆ ಮದ್ರಾಸ್‌ನಿಂದ ಕಳುಹಿಸಿದ್ದ ಅಧ್ಯಾಪಕರು ವಾಪಾಸಾದರು. ಶ್ರೀ ಕಲ್ಯಾಣ ಸುಂದರಂ ಅವರನ್ನು ಬಿಟ್ಟು, ಆಗ ಕಲ್ಯಾಣ ಸುಂದರಂ ರವರು ಮುಖ್ಯೋಪಾಧ್ಯಾಯರಾಗಿ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಿಕೊಂಡು ಹೇಗೋ ಒಂದು ವರ್ಷ ಕಾಲ ಶಾಲೆಯನ್ನು ನಡೆಸಿದರು.

ಒಂದು ವರ್ಷವಾದ ಮೇಲೆ ಈ ತಾತ್ಕಾಲಿಕ ಸಮಿತಿ ಸುದೀರ್ಘವಾಗಿ ಆಲೋಚಿಸಿ ಶಾಲೆಯನ್ನು ಒಂದು ಭದ್ರವಾದ ವ್ಯವಸ್ಥೆಯ ಮೂಲಕ ನಡೆಸುವ ಉದ್ದೇಶದಿಂದ 9 ಜನ ಸದಸ್ಯರಿರುವ 'ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಮೈಸೂರು' ಎಂಬ ಸಂಸ್ಥೆಯನ್ನು 1919 ರ ಮಾರ್ಚ್ ತಿಂಗಳಲ್ಲಿ ಸ್ಥಾಪಿಸಿದರು. ಆ ಸಮಿತಿಯ ಸದಸ್ಯರೆಂದರೆ: ರಾವ್‌ಬಹದ್ದೂರ್ ಕೆ. ಕೃಷ್ಣ ಐಯ್ಯಂಗಾರ್ (ಮೈಸೂರು ರಾಜ್ಯದ ಚೀಫ್ ಇಂಜಿನಿಯರ್, ಅಧ್ಯಕ್ಷರು), ರಾವ್‌ಬಹದ್ದೂರ್ ಎಂ. ಶ್ಯಾಮ್ ರಾವ್ (ರಾಜ್ಯದ ಶಿಕ್ಷಣ ವಿಭಾಗದ ನಿವೃತ್ತ ಇನ್ಸ್‌ಪೆಕ್ಟರ್), ಶ್ರೀ ಬಿ.ಕೆ. ಗರುಡಾಚಾರ್ (ವಾಣಿಜ್ಯೋದ್ಯಮಿಗಳು), ಶ್ರೀ.ಎಸ್.ಕೆ. ನರಸಿಂಹಯ್ಯ (ವಾಣಿಜ್ಯೋದ್ಯಮಿಗಳು), ಶ್ರೀ. ಎಂ. ರಾಮಚಂದ್ರರಾವ್ ಸಿಂಧ್ಯ (ವಾಣಿಜ್ಯೋದ್ಯಮಿಗಳು), ಶ್ರೀ.ಬಿ.ವಿ. ವೆಂಕಟಸ್ವಾಮಿ ನಾಯ್ಡು (ದಂಡಿನ ಕಟ್ಟಡದ ಕಾಂಟ್ರಾಕ್ಟರ್) ಶ್ರೀ.ಎಂ.ಎಲ್. ಶ್ಯಾಮೇಗೌಡ (ಜಮೀನುದಾರರು ಮತ್ತು ನಿವೃತ್ತ ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಚೀಫ್ ಕೋರ್ಟ್), ಶ್ರೀ. ಕೆ.ಎಸ್. ಕೃಷ್ಣ ಐಯ್ಯರ್ (ಬೆಂಗಳೂರು ಐರಿಷ್ ಪ್ರಿನ್ಸೆಸ್ ಮಾಲೀಕರು), ಶ್ರೀ. ಎಸ್. ಕಲ್ಯಾಣ ಸುಂದರಂ (ಮುಖ್ಯೋಪಾಧ್ಯಾಯರು ಮತ್ತು ಕಾರ್ಯದರ್ಶಿಗಳು)

ಮೊದಲ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶ ಆಶಾದಾಯಕವಾಗಿರಲಿಲ್ಲ. ಆದರೆ ಮುಂದಿನ ವರ್ಷಗಳಲ್ಲಿ ಚೇತರಿಸಿಕೊಂಡು ಉತ್ತಮ ಫಲಿತಾಂಶ ನೀಡಲು ಸಾಧ್ಯವಾಯಿತು. ಆರ್ಥಿಕವಾಗಿ ಶಾಲೆಯನ್ನು ನಡೆಸಲು ಕಷ್ಟಕರವಾಗಿಯೇ ಇತ್ತು. ಸಾರ್ವಜನಿಕರಿಂದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪ್ರತಿ ವರ್ಷ ಹಣವನ್ನು ಸಂಗ್ರಹಿಸುತ್ತಿದ್ದರು. ಹೀಗಿರುವಾಗ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕಲ್ಯಾಣ ಸುಂದರಂ ಹಾಗೂ ಅಧ್ಯಾಪಕರ ನಡುವೆ ಭಿನ್ನಾಭಿಪ್ರಾಯ ಉದ್ಭವಿಸಿದ ಪರಿಣಾಮ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀಸಂಪತ್ಗಿರಿರಾಯರು ಮುಖ್ಯೋಪಾಧ್ಯಾಯರಾಗಿ ಬಂದರು. ನಾಲ್ಕು ದಶಕಗಳ ನ್ಯಾಷನಲ್ ಎಜುಕೇಷನ್ ಸೊಸೈಟಿಯೊಡನೆ ಸಂಬಂಧ ಹೊಂದಿದ್ದ ಶ್ರೀ ಸಂಪತ್‌ಗಿರಿರಾವ್ ಅವರು ಇಡೀ ಸಂಸ್ಥೆಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟ ಮೇಧಾವಿಗಳು. ಇವರ ಕಾಲ ಸಂಸ್ಥೆಯ ಬೆಳವಣಿಗೆಯಲ್ಲಿ ಸುವರ್ಣಯುಗವಾಗಿಯೆ ಪರಿಣಮಿಸಿತೆಂದರೆ ಅತಿಶಯೋಕ್ತಿಯೇನಲ್ಲ.



ಶ್ರೀ ಸಂಪತ್ಗಿರಿರಾವ್

ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ 'ನೆಚ್ಚಿನ ಉಪಾಧ್ಯಾಯರಾದರು. ಇಂಗ್ಲಿಷ್ ಭಾಷೆಯಲ್ಲಿ ಪ್ರಬುದ್ಧತೆಯನ್ನು ಗಳಿಸಿದ್ದರಲ್ಲದೆ ಉತ್ತಮ ವಾಗ್ಮಿಗಳು ಭಾಷಣಕಾರರೂ ಆಗಿದ್ದರು. ರಾಜಾಜಿಯವರ ಹಲವು ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ವಿವಿಧ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಾಧಿಸಿದ್ದರು. ಸಂಗೀತ ಕಲೆ ನಾಟಕಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಹವ್ಯಾಸಿ ನಾಟಕ ಸಂಘದ ಸಕ್ರಿಯ ಸದಸ್ಯರಾಗಿದ್ದರು. ವಿಧಾನಪರಿಷತ್ತಿನಲ್ಲಿ ಶಿಕ್ಷಕ ಕ್ಷೇತ್ರವನ್ನು ಪ್ರತಿನಿಧಿಸಿ ಅದರ ತಾತ್ಕಾಲಿಕ ಅಧ್ಯಕ್ಷರಾಗಿದ್ದರು. ಶ್ರೀ ಸಂಪತ್‌ಗಿರಿರಾವ್ ಅವರಿಗಿಂತ ಮಿಗಿಲಾದ ಸಹೃದಯರನ್ನು ಹುಡುಕುವುದು ಕಷ್ಟ. ನ್ಯಾಷನಲ್ ಹೈಸ್ಕೂಲ್ ಹಾಗೂ ಎನ್‌ಇಎಸ್ ಸಂಸ್ಥೆಗೆ ಇವರ ಚೈತನ್ಯ ಸಹಕಾರಿಯಾಗಿದೆ ಎಂದು ನಿಟ್ಟೂರು ಶ್ರೀನಿವಾಸರಾವ್ ಅವರು ಅಭಿಪ್ರಾಯವನ್ನು ಪಟ್ಟಿದ್ದರು. ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ ಮಧ್ಯಾಹ್ನದ

ಉಪಹಾರಕ್ಕಾಗಿ ವಿದ್ಯಾರ್ಥಿಗಳು ಮನೆ ಮನೆಗೆ ಹೋಗಿ ಅಕ್ಕಿ ಮತ್ತು ಹಣವನ್ನು ಸಂಗ್ರಹಿಸುತ್ತಿದ್ದರು. ಶಾಲೆಯು ಹಲವಾರು ಶೈಕ್ಷಣಿಕ ಮತ್ತು ಸೇವಾ ಕಾರ್ಯಗಳನ್ನು ಅಳವಡಿಸಿಕೊಂಡು ಇಡೀ ರಾಜ್ಯಕ್ಕೆ ಮಾದರಿಯಾಯಿತು. ಅತ್ಯುತ್ತಮ ಅಧ್ಯಾಪಕ ವರ್ಗದ ಜೊತೆಗೆ ಅವರ ಅಮೂಲ್ಯವಾದ ಕೊಡುಗೆ ಸಂಸ್ಥೆಯನ್ನು ಮೇರು ಸ್ಥಿತಿಗೆ ಕರೆದೊಯ್ಯುವಂತೆ ಮಾಡಿತು.

'ಶ್ರದ್ಧಾ ಹಿ ಪರಮಾ ಗತಿಃ' ಶ್ರದ್ದೆಯಿಂದ ಅತ್ಯುನ್ನತ ಸ್ಥಾನವನ್ನು ಗಳಿಸಬೇಕೆಂಬುದು ಧ್ಯೇಯಮೂರ್ತಿಗಳನ್ನಾಗಿಸಿ ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡುತ್ತಾ ಬಂದಿರುತ್ತಾರೆ. ವಯಸ್ಕರ ಶಿಕ್ಷಣಕ್ಕಾಗಿ ತಿಲಕ್ ರಾತ್ರಿ ಶಾಲೆಯನ್ನು ಮೊದಲು ನ್ಯಾಷನಲ್ ಶಾಲೆಯಲ್ಲಿ ಪ್ರಾರಂಭಿಸಲಾಯಿತು. ವಿಜ್ಞಾನ ಪ್ರಯೋಗಾಲಯಗಳನ್ನು ನಡೆಸುವ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮ ಮೊದಲು ಪ್ರಾರಂಭಿಸಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.

ನ್ಯಾಷನಲ್ ಹೈಸ್ಕೂಲ್ ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಿಗೆ ನೇರ ಸಂಬಂಧ ಹೊಂದಿರದಿದ್ದರು, ಶಾಲೆಯು ರಾಷ್ಟ್ರೀಯ ಮನೋಭಾವನೆಯನ್ನು ಮೊಳೆಯುವಂತೆ ಮಾಡುವಲ್ಲಿ ಮುಂಚೂಣಿಯಲ್ಲಿ ಇದ್ದಿತು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಶಾಲೆಯ ಉಪಾಧ್ಯಾಯರಾಗಿದ್ದ ಶ್ರೀ. ಕೆ. ಶ್ರೀನಿವಾಸ ರಾವ್ ಅವರು ತಮ್ಮ ಜವಾಬ್ದಾರಿಯನ್ನು ಸಹ ಅಧ್ಯಾಪಕರಿಗೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆಯನ್ನು ಸೇರಿದ್ದರು. ಹಾಗೆ ಕೆ. ವೆಂಕಟರಾಮಯ್ಯ ನವರೂ ಕೆಲಸಕ್ಕೆ ರಾಜೀನಾಮೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದರು. ಮುಂದೆ ಎಚ್.ಎನ್ ರವರೂ ಸಹ ವಿದ್ಯಾರ್ಥಿಯಾಗಿದ್ದಾಗ ಮತ್ತು ಅಧ್ಯಾಪಕರಾಗಿದ್ದಾಗಲೂ ಅವರು ಸ್ವಾತಂತ್ರ ಚಳುವಳಿಯಲ್ಲಿ ಭಾಗಿಯಾಗಿದ್ದರು. ಗಾಂಧಿಜಯಂತಿಯ ದಿನ 24 ಗಂಟೆಗಳ ಕಾಲಸೂತ್ರ ಯಜ್ಞವನ್ನು ಕೆ. ಸಂಪತ್‌ಗಿರಿರಾಯರು ಮತ್ತು ಎಚ್. ರಾಮರಾಯರ ನೇತೃತ್ವದಲ್ಲಿ ನಡೆಸುತ್ತಿದ್ದರು. ಎನ್.ಎಸ್. ಹರ್ಡಿಕರ್ ರವರ 'ಹಿಂದೂಸ್ಥಾನಿ ಸೇವಾದಳ', ರಾಷ್ಟ್ರೀಯ ಸೇವಾದಳ, ಇದಕ್ಕೂ ನ್ಯಾಷನಲ್ ಹೈಸ್ಕೂಲಿಗೂ ನೇರ ಸಂಪರ್ಕ ಇತ್ತು. ಶ್ರೀ. ಎಚ್. ರಾಮರಾವ್ ಅವರ ನೇತೃತ್ವದಲ್ಲಿ ಸೇವಾದಳ ತಂಡ ಬೆಳಗಾಂ ಅಧಿವೇಶನಕ್ಕೆ ಭಾಗಿಯಾಗಿತ್ತು.

ಸಂಸ್ಥೆಯ ಹಿಂದಿನ ಚೇತನಗಳು




ಶ್ರೀ ಕೆ.ಎಸ್ ಕೃಷ್ಣಯ್ಯರ್



ಕಂದಾಡೆ ಕೃಷ್ಣಯ್ಯಂಗಾರ್




ಎಚ್. ರಾಮರಾವ್



ಶ್ರೀ ವಿ. ಗೋಪಾಲಸ್ವಾಮಿ ಐಯ್ಯಂಗಾರ್

ಆನಂತರ ಡಾ. ಹೆಚ್. ಎನ್. ರವರು ವಿದ್ಯಾರ್ಥಿಯಾಗಿ ನ್ಯಾಷನಲ್ ಹೈಸ್ಕೂಲ್ಗೆ ಬಂದು ಸೇರಿದ್ದು ತಮ್ಮ ಜೀವನದ ಅತ್ಯಂತ ಪ್ರಮುಖ ಘಟನೆ ಎಂದು ಅವರೆ ಹೇಳಿಕೊಂಡಿದ್ದಾರೆ.ಎಚ್.ಎನ್ ರವರ ಜೀವನ ವಿಧಾನ ರೂಪಿಸುವಲ್ಲಿ ಶಾಲೆಯ ಪಾತ್ರ ಮಹತ್ವದ್ದಾಗಿದೆ. ಡಾ. ಹೆಚ್.ಎನ್ ಹಿರಿಯರ ಈ ಸಂಪ್ರದಾಯಗಳನ್ನು ಒಗ್ಗೂಡಿಸಿಕೊಂಡು ಹೋಗಿ ಸಂಸ್ಥೆಯನ್ನು ಉಚ್ಛ್ರಾಯ

ಸ್ಥಿತಿಗೆ ಕೊಂಡು ನಡೆದರು. ಮಾನವನಲ್ಲಿ ಮಾನವತೆ ಮತ್ತು ಧರ್ಮಪಾಲನೆ ಎದ್ದು ನಿಂತಾಗ ಭೂಮಿಗೆ ಆನಂದ ಉಂಟಾಗುತ್ತದೆ. ಹಾಗೆಯೇ ದೇಸಿ ಸಂಸ್ಥೆಯ ತೇರನೆಳೆದವರು ಇವರು.



ಡಾ. ಹೆಚ್. ನರಸಿಂಹಯ್ಯ
ಅಧ್ಯಕ್ಷರು

ಹೆಚ್.ಎನ್ ರವರು ಸಾಮಾನ್ಯ ವಿದ್ಯಾರ್ಥಿಯಂತೆ ಬಂದು ನ್ಯಾಷನಲ್ ಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಸಂಸ್ಥೆಯ ಅಧ್ಯಕ್ಷರಾಗಿ ಸಂಸ್ಥೆಯನ್ನು ಮತ್ತೊಂದು ಹಂತಕ್ಕೆ ಕರೆದೊಯ್ದರು. ಗ್ರಾಮಾಂತರ ಪ್ರದೇಶದಲ್ಲಿ ಶಾಲಾ ಕಾಲೇಜು ಸ್ಥಾಪಿಸುವ ನಿಟ್ಟಿನಲ್ಲಿ ಯೋಚಿಸಿದ ಹೆಚ್ ಎನ್ ರವರು ತಮ್ಮ ಹುಟ್ಟೂರಾದ ಹೊಸೂರಿನಲ್ಲಿ ಸ್ಥಳೀಯ ದಾನಿಗಳ ನೆರವಿನಿಂದ ಹೈಸ್ಕೂಲನ್ನು ಪ್ರಾರಂಭಿಸಿದರು. ಹಾಗೆ ಗೌರಿಬಿದನೂರಿನಲ್ಲಿ ಕಾಲೇಜನ್ನು ಅಲ್ಲಿನ ದಾನಿಗಳ ಸಹಕಾರದಿಂದ ಪ್ರಾರಂಭಿಸಿದರು. ನಂತರ



ಬಾಗೇಪಲ್ಲಿ, ಯಳಂದೂರು ಮುಂತಾದ ಗ್ರಾಮಾಂತರ ಪ್ರದೇಶದಲ್ಲಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಅಲ್ಲಿನ ವಿದ್ಯಾರ್ಥಿಗಳ ಆಶಾದೀಪವಾದರು.

ಈಗ ಅದೇ ಸಂಪ್ರದಾಯವನ್ನು ಇಂದಿನ ಎನ್.ಇ.ಎಸ್ ಸಂಸ್ಥೆಯ ಕಾರ್ಯಕಾರಿ ಸಮಿತಿಯವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಸಂಸ್ಥೆಯ ಅಧ್ಯಕ್ಷರಾದ ಹೆಚ್.ಎನ್. ರವರ ಒಡನಾಡಿಗಳಾದ ಶ್ರೀ ಹೆಚ್.ಎನ್. ಸುಬ್ರಹ್ಮಣ್ಯರವರು ಅಧ್ಯಕ್ಷರಾಗಿದ್ದು, ಉಪಾಧ್ಯಕ್ಷರಾಗಿ ಶ್ರೀ ವೈ.ಜಿ. ಮಧುಸೂದನ ರವರು, ಗೌರವ ಕಾರ್ಯದರ್ಶಿಗಳಾಗಿ ಶ್ರೀ ವಿ. ವೆಂಕಟಶಿವಾರೆಡ್ಡಿ ಹಾಗೂ ಶ್ರೀ ಬಿ.ಎಸ್. ಅರುಣ್ ಕುಮಾರ್ ರವರು, ಖಜಾಂಚಿಗಳಾಗಿ ಶ್ರೀ ತಲ್ಲಂ ದ್ವಾರಕಾನಾಥ್ ರವರು, ಜಂಟಿ ಕಾರ್ಯದರ್ಶಿಗಳಾಗಿ ಶ್ರೀ ಸುಧಾಕರ್ ಇಸ್ತೂರಿರವರು ಸಹ ಉಪಾಧ್ಯಕ್ಷರಾಗಿ ಶ್ರೀ ವಿ.ಮಂಜುನಾಥ್ ರವರು ದಕ್ಷ ಆಡಳಿತವನ್ನು ನಡೆಸುತ್ತಾ ಸಂಸ್ಥೆಯನ್ನು ಮುಂದುವರೆಸಿಕೊಂಡು ತೇರನ್ನು ಎಳೆಯುತ್ತಿದ್ದಾರೆ.

ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್

15 ನೇ ಅಡ್ಡರಸ್ತೆ, ಮಲ್ಲೇಶ್ವರ,

ಬೆಂಗಳೂರು–560003

ಮಲ್ಲೇಶ್ವರಕ್ಕೊಂದು ಅಸ್ಮಿತೆಯ ಕುರುಹು ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್. ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ 'ಮಲ್ಲೇಶ್ವರಂ' ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ನಾಡಿನ ಖ್ಯಾತನಾಮರನೇಕರು ಈ ಕ್ಷೇತ್ರದಿಂದಲೇ ಸಾಧನೆಯ ಶಿಖರವನ್ನೇರಿದವರು. ಅಧ್ಯಾತ್ಮ, ರಾಜಕೀಯ, ಶೈಕ್ಷಣಿಕ, ವೈಜ್ಞಾನಿಕ, ಸಾಂಸ್ಕೃತಿಕ, ಕ್ರೀಡೆ, ಸಮಾಜಸೇವೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿನ ಸಾಧಕರು ಹೆಚ್ಚಿನವರು ಮಲ್ಲೇಶ್ವರದವರೇ ಎಂಬುದು ಹೆಮ್ಮೆಯ ವಿಚಾರ. ಕಾಡುಮಲ್ಲೇಶ್ವರನ ಗುಡಿ ಇಲ್ಲಿ ಅನಾದಿಕಾಲದಿಂದ ಪ್ರಸಿದ್ಧ. ಈ ಗುಡಿಯ ಕಾರಣದಿಂದಲೇ ಈ ಕ್ಷೇತ್ರಕ್ಕೆ ಮಲ್ಲೇಶ್ವರ ಎಂಬ ಹೆಸರು ಬಂತು ಎಂಬುದು ಇತಿಹಾಸ. ಇಂತಹ ಮಲ್ಲೇಶ್ವರದಲ್ಲಿ ನಾವು ಹಿಂದೆಂದೂ ಕಂಡು ಕೇಳರಿಯದ ಬೆರಗುಗಳಿವೆ, ವಿಶೇಷಗಳಿವೆ. ಅನೇಕ ಅದ್ಭುತಗಳು ನಡೆದಿವೆ. ಅಸಂಖ್ಯಾತ ನೇತಾರರು ಇಲ್ಲಿಂದಲೇ ರಾಷ್ಟ್ರಕ್ಕೆ ಸಮರ್ಪಣೆಯಾಗಿದ್ದಾರೆ. ಹಲವು ಸಿನಿಮಾ ನಟರು, ಕ್ಷೇತ್ರದಲ್ಲಿ ಸಾಧನೆಗೈದಿದ್ದಾರೆ. ಇವರೆಲ್ಲರ ಮೂಲ ಮಲ್ಲೇಶ್ವರವೇ ಎಂಬುದು ಅಭಿಮಾನವನ್ನೂ ಹೆಮ್ಮೆಯನ್ನೂ ತರುವ ವಿಷಯವಾಗಿದೆ. ಇಂತಹ ವಿಶಿಷ್ಟವಾದ ಮಲ್ಲೇಶ್ವರದ ಯಶಸ್ಸಿನ ಮುಕುಟಕ್ಕೆ ಅಲಂಕಾರದ ಗರಿಯಾಗಿ

ತನ್ನನ್ನು ತಾನು ಗುರುತಿಸಿಕೊಂಡಿರುವ ಶಿಕ್ಷಣ ಸಂಸ್ಥೆ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಅಥವಾ ಎಂ ಎಲ್ ಎ ವಿದ್ಯಾ ಸಂಸ್ಥೆ.

ಎಂಎಲ್ಎ ಹೆಸರು ಕೇಳಿದ ತಕ್ಷಣದಲ್ಲಿ ಸಾವಿರಾರು ಮಹಿಳೆಯರ ಮುಖದಲ್ಲಿ ಮಂದಹಾಸವು ಮೂಡುತ್ತದೆ. ಅವರು ತಮ್ಮ ಬಾಲ್ಯವನ್ನೊಮ್ಮೆ, ಅಧ್ಯಯನವನ್ನೊಮ್ಮೆ ನೆನಪಿಸಿಕೊಂಡು ಇಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ತಾನು ಅಧ್ಯಯನ ಮಾಡಿದ್ದೆ ಎಂದು ಹೇಳುತ್ತ ರೋಮಾಂಚಿತರಾಗುತ್ತಾರೆ.



ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಲ್ಲೇಶ್ವರಂನಲ್ಲಿ ಮಾರ್ಗೋಸಾ ಮತ್ತು ಸಂಪಿಗೆ ರಸ್ತೆ ಮಧ್ಯದ 14ನೇ ಅಡ್ಡರಸ್ತೆಯಲ್ಲಿ ಸ್ಥಾಪಿತವಾಗಿದೆ. ಈ ಸಂಸ್ಥೆ ಮೈಸೂರಿನ ಮಹಾರಾಜರಾದ ದಿವಂಗತ ಶ್ರೀ. ಕೃಷ್ಣರಾಜೇಂದ್ರ ಒಡೆಯರ್ ಅವರ ವಜ್ರಮಹೋತ್ಸವದ ಸಂದರ್ಭದಲ್ಲಿ 8.8.1927ರಂದು ಸ್ಥಾಪಿತವಾದುದು.

ಮಹಿಳೆಯರು ಮನೆಯ ನಾಲ್ಕು ಗೋಡೆಯೊಳಗಿನ ಪ್ರಪಂಚಕ್ಕೆ ಸೀಮಿತಗೊಂಡಿದ್ದ ಆಗಿನ ಕಾಲದಲ್ಲಿ ಕೆಲವೇ ಕೆಲವು ಮಹಿಳೆಯರು ಸ್ವಲ್ಪ ಭಿನ್ನವಾಗಿ ಚಿಂತಿಸುತ್ತಿದ್ದರು. ಅವರು ತಮ್ಮ ಮನೆವಾರ್ತೆಯ ಜೊತೆ ಜೊತೆಗೆ ಹಲವು ಪ್ರಗತಿಪರ ಕಾರ್ಯಗಳಲ್ಲಿ, ಅದರಲ್ಲೂ ಶಿಕ್ಷಣಸಂಸ್ಥೆಗಳನ್ನು ನಡೆಸುವಂತಹ ಪವಿತ್ರ ಸಮಾಜಸೇವೆಗಳಲ್ಲಿ ತೊಡಗಿಕೊಂಡಿದ್ದರು. ಹತ್ತು ಹಲವು ಎಡರು ತೊಡರುಗಳನ್ನು ಎದುರಿಸಿಯೂ ತಾವು ಯಾರಿಗೇನೂ ಕಮ್ಮಿಯಿಲ್ಲ ಎಂಬ ಮಾತನ್ನು ಸಮಾಜದೆದುರು ತೋರಿಸಿಕೊಟ್ಟವರು ಎಂ ಎಲ್ಎ ಸದಸ್ಯರು. ವಿಶೇಷವಾಗಿ ಮಹಿಳೆಯರಿಗಾಗಿ ಮಹಿಳೆಯರಿಂದಲೇ ಪ್ರಾರಂಭವಾದ 'ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್' ಅಂದರೆ ಎಂ.ಎಲ್.ಎ ಎಂದೇ ಮನೆ ಮಾತಾಗಿರುವ ಈ ಸಂಸ್ಥೆಯು ಕಳೆದ 97 ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳೆರಡಲ್ಲೂ ಕೂಡ ಸಮರ್ಥವಾದ ಸೇವೆಯನ್ನು ಒದಗಿಸುತ್ತಿದೆ ಎಂದರೆ ಅದು ಅತಿಶಯೋಕ್ತಿ ಅಲ್ಲ.

ಆರಂಭದಲ್ಲಿ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಮಹಿಳೆಯರ ಕಲೆ ಮತ್ತು ಕೌಶಲ್ಯಗಳ ಕೇಂದ್ರವಾಗಿತ್ತು. ಮಲ್ಲೇಶ್ವರದ ಹಲವಾರು ವಿದ್ಯಾವಂತ ಮತ್ತು ಸುಸಂಸ್ಕೃತ ಕುಟುಂಬದ ಮಹಿಳೆಯರು ಈ ಸಂಸ್ಥೆಯನ್ನು ಹುಟ್ಟು ಹಾಕಿದರು. ಇದರ ಮೂಲ ಉದ್ದೇಶವು ಸ್ವಲ್ಪ ಭಿನ್ನವಾಗಿತ್ತು. ವಾರಕ್ಕೊಮ್ಮೆ ಎಲ್ಲರೂ ಒಂದೆಡೆ ಸೇರುವುದು, ಪುರಾಣಪ್ರವಚನಗಳನ್ನು ಶ್ರವಣ ಮಾಡುವುದು, ನಾಡಿನ ಗಣ್ಯ ವಿದ್ವಾಂಸರನ್ನು ಕರೆಸಿ ಉಪನ್ಯಾಸಗಳನ್ನೇರ್ಪಡಿಸುವುದು, ಸಂಗೀತ ಸತ್ಸಂಗದಂತಹ ಕಾರ್ಯಕ್ರಮಗಳನ್ನು ಏರ್ಪಡಿಸಿ, ಪೂಜೆ ಮಂಗಳಾರತಿಗಳನ್ನು ಮುಗಿಸಿ ಹೋಗುವುದು. ಇವು ಕೆಲವು ದಿನಗಳ ಕಾಲ ನಡೆದವು. ಆದರೆ ಈ ಮಹಿಳೆಯರಿಗೆ ಇಷ್ಟಕ್ಕೇ ತೃಪ್ತಿಯಾಗಲಿಲ್ಲ. ಮುಂದುವರಿದು, ಒಬ್ಬರನ್ನೊಬ್ಬರು ಭೇಟಿಯಾಗಿ ಸಾಮಾಜಿಕ ಸೇವಾಚಿಂತನೆಗಳನ್ನು ನಡೆಸಿ, ವಿಚಾರ ವಿನಿಮಯ ಮಾಡುವಂತಹ ಅವಕಾಶಗಳನ್ನು ಆ ಸಭೆಗಳಲ್ಲಿ ಒದಗಿಸಲಾರಂಭಿಸಿದರು. ಮಲ್ಲೇಶ್ವರದ ಸುತ್ತಮುತ್ತಲಿನ ಪರಿಧಿಯಲ್ಲಿ ಹೆಚ್ಚು ಜನಪ್ರಿಯವಾದ ಇಂತಹ ಚಟುವಟಿಕೆಗಳಲ್ಲಿ ಮಹಿಳೆಯರು ಬಹಳ ಸಡಗರದಿಂದ ಪಾಲ್ಗೊಳ್ಳುತ್ತಿದ್ದರು.

ನಿತ್ಯವೂ ಸಂಭ್ರಮ ಸಡಗರಗಳಿಂದ ಬಂದು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ ಹೆಣ್ಣುಮಕ್ಕಳು ಕಾಲಕ್ರಮೇಣ ಕೇವಲ ಈ ರೀತಿಯ ಕಥಾಕಾಲಕ್ಷೇಪಕ್ಕಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಬದಲು ರಚನಾತ್ಮಕವಾದ ಮಹಿಳೆಯರ ಮತ್ತು ಹೆಣ್ಣುಮಕ್ಕಳಿಗೆ ಉಪಯೋಗವಾಗುವಂತಹ ಶೈಕ್ಷಣಿಕ ಯೋಜನೆಗಳನ್ನು ಕೈಗೊಳ್ಳಬೇಕೆಂದು ದೃಢವಾದ ಸಂಕಲ್ಪವೊಂದನ್ನು ಸ್ವೀಕರಿಸಿದರು. ಹೀಗೆ ಪರಸ್ಪರ ಚಿಂತನೆಯ ಮೂಲಕ 1927 ರಲ್ಲಿ ಆರಂಭವಾದ ಈ ಸಂಸ್ಥೆಗೆ ಮೊದಲ ಬಾರಿಗೆ ಕಾರ್ಯದರ್ಶಿಯಾಗಿ ಶ್ರೀಮತಿ ರುಕ್ಮಿಣಿಯಮ್ಮ ನರಸಿಂಹಯ್ಯನವರು ಚುನಾಯಿತರಾದರು. ಆರಂಭದ ದಿನಗಳಲ್ಲಿ ಇಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಜೊತೆ ಜೊತೆಗೆ ಸಂಸ್ಕೃತ, ಇಂಗ್ಲಿಷ್, ಸಂಗೀತ ಕಲಿಕೆ ಗಳ ಜೊತೆಗೆ ಹೊಲಿಗೆ ತರಬೇತಿ, ಚರಕದಲ್ಲಿ ನೂಲುವುದು, ನೆಯ್ಯುವುದು, ಬೆತ್ತದ ಕೆಲಸ, ಬುಟ್ಟಿ ತಯಾರಿಕೆ, ಕಸೂತಿ ಮುಂತಾದ ತರಗತಿಗಳು ಮಧ್ಯಾಹ್ನ 3.00 ರಿಂದ 6.00 ಗಂಟೆಯವರೆಗೆ ನಡೆಯುತ್ತಿದ್ದವು. ಹೆಣ್ಣುಮಕ್ಕಳಿಗೆ ಬಹಳ ಉಪಯೋಗಿಯಾಗಿದ್ದ ಈ ಚಟುವಟಿಕೆಗಳು ಬಹುಬೇಗ ಜನಪ್ರಿಯವಾದವು.



ಆರಂಭದಲ್ಲಿ 25 ರೂ.ಗಳ ಬಾಡಿಗೆಗೆ ಒಂದು ಮನೆ ಪಡೆದು ಅಲ್ಲಿ ಎಲ್ಲ ಚಟುವಟಿಕೆಗಳು ನಡೆಯುತ್ತಿದ್ದವು. ಸಮಿತಿಯ ಸದಸ್ಯರ ಆಸ್ಥೆಯಿಂದ, ಶ್ರಮದ ಪ್ರಯತ್ನದಿಂದ ಹೊಸ ಕಟ್ಟಡ ನಿರ್ಮಾಣವಾಯಿತು. 1933ರ ಫೆಬ್ರವರಿ 4ನೇ ತಾರೀಖು ವಿಧಿವತ್ತಾಗಿ ಸ್ವಂತ ಸ್ಥಳದ ಕಟ್ಟಡದೊಳಗೆ ಪ್ರವೇಶ ಮಾಡಲಾಯಿತು. ಹೀಗೆ ಸತ್ಕಾರ್ಯ ಕಾಲಕ್ಷೇಪಕ್ಕಾಗಿ ಸೇರುತ್ತಿದ್ದ ಮಹಿಳೆಯರ ತಂಡ ಕೇವಲ 5 ವರ್ಷಗಳ ಅವಧಿಯಲ್ಲಿ ತಮ್ಮ ಅವಿರತವಾದ ಪರಿಶ್ರಮದಿಂದ ತಮ್ಮದೇ ಆದ ಸ್ವಂತ ಕಟ್ಟಡವನ್ನು ಹೊಂದಿ ಹೊಸದಾಗಿ ಶೈಕ್ಷಣಿಕ ಸಂಸ್ಥೆ ಒಂದನ್ನು ಪ್ರಾರಂಭಿಸಿದರು. 1934 ರಲ್ಲಿ ಮಹಾತ್ಮ ಗಾಂಧೀಜಿಯವರು ಈ ಸಂಸ್ಥೆಗೆ ಭೇಟಿ ನೀಡಿ ಮಹಿಳೆಯರ ಅಭಿವೃದ್ಧಿಗಾಗಿ ಸಂಘ ಮಾಡುವ ಕೆಲಸಗಳನ್ನು ಬಾಯಿ ತುಂಬ ಹೊಗಳಿದ್ದಾರೆ. ಅವರ ಆಣತಿಯಂತೆ ಸಂಜೆ ಹೊತ್ತಿನ ಪ್ರಾರ್ಥನೆಯನ್ನು ಇಲ್ಲಿ ಪ್ರಾರಂಭಿಸಲಾಯಿತು.

ಮಲ್ಲೇಶ್ವರದ ಮಹಿಳೆಯರ ಕ್ಷೇಮಾಭಿವೃದ್ಧಿಗಾಗಿ ಆರಂಭವಾದ 'ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್' ಸಂಸ್ಥೆಯು ನರ್ಸರಿಯಿಂದ ಆರಂಭವಾಗಿ ಪ್ರಾಥಮಿಕ ಶಿಕ್ಷಣದ ಹಂತಕ್ಕೇರಿತು. ತದನಂತರ ಕೆಲವೇ ವರ್ಷಗಳಲ್ಲಿ ಮಾಧ್ಯಮಿಕ ಶಾಲೆಯನ್ನೂ ಆರಂಭಮಾಡಿತು. ಹೀಗೆ ಹಂತ ಹಂತವಾಗಿ ಬೆಳೆಯ ತೊಡಗಿದ ಸಂಸ್ಥೆಯು 1956ರಲ್ಲಿ ಪ್ರೌಢಶಾಲೆಯನ್ನು ಆರಂಭಿಸಿತು. ಶ್ರೀಮತಿ. ಜಯಮ್ಮನವರು ಪ್ರಪ್ರಥಮ ಮುಖ್ಯೋಪಾಧ್ಯಾಯಿನಿಯಾಗಿ ಶಾಲೆ ಬೆಳವಣಿಗೆಗೆ ಸಹಕರಸಿದ್ದಾರೆ. 1959 ರಲ್ಲಿ, ಶಾಲಾ ಪ್ರಥಮ ತಂಡ ಎಸ್. ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಂಡಿತು. ಪ್ರೌಢಶಾಲೆಯಲ್ಲಿ ಪಠ್ಯಕ್ರಮದ ಜೊತೆ ಜೊತೆಗೆ ವಿದ್ಯಾರ್ಥಿನಿಯರು ಮುಂದಿನ ಸಮಾಜದ ಜವಾಬ್ದಾರಿಯುತ ಮಹಿಳೆಯಾಗಿ ರೂಪುಗೊಳ್ಳಲು ಪೂರಕವಾದ ಎಲ್ಲ ವಿಧದ ಚಟುವಟಿಕೆಗಳನ್ನು ಕಲಿಯುವುದು ಇಲ್ಲಿನ ವಿಶೇಷವಾಗಿದೆ.

ಮೌಲ್ಯಾಧಾರಿತ ಶಿಕ್ಷಣ ನೀಡುತ್ತ ಪೋಷಕರ ಮತ್ತು ವಿದ್ಯಾರ್ಥಿಗಳ ಸಹಾಯ ಮತ್ತು ಸಹಕಾರದಿಂದ ಉತ್ತಮ ಶಿಕ್ಷಣ ಸಂಸ್ಥೆಯಾಗಿ ಪರಿವರ್ತನೆಗೊಂಡು ಸಂಸ್ಥೆಯ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕಾಗಿ ಪದವಿ ಪೂರ್ವ ಕಾಲೇಜನ್ನು 1973 ರಲ್ಲಿ ಹಾಗೂ ಪದವಿ ಕಾಲೇಜನ್ನು 2006 ರಲ್ಲಿ ಪ್ರಾರಂಭಿಸಲಾಯಿತು. ಹೀಗೆ ನರ್ಸರಿಯಿಂದ ಆರಂಭಿಸಿ ಎಲ್.ಕೆ.ಜಿ, ಯು.ಕೆ.ಜಿ ಮತ್ತು ಪ್ರಾಥಮಿಕ ಶಾಲಾವಿಭಾಗ, ಮಾಧ್ಯಮಿಕ ಶಾಲಾವಿಭಾಗ, ಪ್ರೌಢಶಾಲಾ ವಿಭಾಗ ಹಾಗೂ ಪದವಿಪೂರ್ವ ಶಿಕ್ಷಣವಿಭಾಗ, ಪದವಿ ಶಿಕ್ಷಣ ವಿಭಾಗ, ಸ್ನಾತಕೋತ್ತರ ಶಿಕ್ಷಣ ವಿಭಾಗ ಹೀಗೆ ಹಂತ ಹಂತವಾಗಿ ಸಂಸ್ಥೆಯು ತನ್ನನ್ನು ಮೇಲ್ದರ್ಜೆಗೆ ಏರಿಸಿಕೊಂಡಿತು. ಹಲವಾರು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಯ ಅಡಿಯಲ್ಲಿ ಸಾವಿರಾರು ಜನ ವಿದ್ಯಾರ್ಥಿನಿಯರು ತಮ್ಮ



ಬದುಕಿನ ಬೆಳಕನ್ನು ಕಂಡುಕೊಳ್ಳುತ್ತಿದ್ದಾರೆ. ಅವರೆಲ್ಲರಿಗೂ ಯೋಗ್ಯವಾದ ಸಮರ್ಥವಾದ ಮಾರ್ಗದರ್ಶನ ಮಾಡುವಂತಹ ಶಿಕ್ಷಕವೃಂದವು ಅಹರ್ನಿಶಿ ಮಕ್ಕಳ ಧ್ಯೇಯೋನ್ನತಿಗಾಗಿ ಶ್ರಮಿಸುತ್ತಿದೆ. ಅಷ್ಟೇ ಅಲ್ಲದೆ ಸಮಿತಿಯ ಅಧ್ಯಕ್ಷರಾಗಿ – ಶ್ರೀಮತಿ ಶೈಲಜಾ ಶ್ರೀನಿವಾಸ, ಉಪಾಧ್ಯಕ್ಷರಾಗಿ – ಶ್ರೀಮತಿ ಕವಿತಾ ಕೃಷ್ಣಪ್ರಸಾದ್, ಕಾರ್ಯದರ್ಶಿಗಳಾಗಿ – ಶ್ರೀಮತಿ ಲಕ್ಷ್ಮಿ ವಿ., ಜಂಟಿ ಕಾರ್ಯದರ್ಶಿಗಳಾಗಿ – ಶ್ರೀಮತಿ ರಮಾ ಸುದರ್ಶನ್, ಖಜಾಂಚಿಗಳಾಗಿ – ಶ್ರೀಮತಿ ಉಮಾ ಶ್ರೀನಿವಾಸ್, ಸದಸ್ಯರುಗಳಾಗಿ – ಶ್ರೀಮತಿ ಚಿತ್ರಾ ಭಾಷ್ಯಂ, ಶ್ರೀಮತಿ ನಾಗವಲ್ಲಿ ನರಸಿಂಹ, ಶ್ರೀಮತಿ. ರಾಗಿಣಿ ಬಿ.ಆರ್, ಶ್ರೀಮತಿ ಮಾಲಾ ಜಯಸಿಂಹ, ಶ್ರೀಮತಿ ಉಷಾ ಉದಯ್, ಶ್ರೀಮತಿ ಅಮೃತಾ ಆರ್. ರವರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಯೊಬ್ಬರೂ ಕೂಡ ತಮ್ಮದೇ ಮನೆಯ ಕೆಲಸವೇನೋ ಎಂಬಷ್ಟರ ಮಟ್ಟಿಗೆ ತನ್ಮಯತೆಯಿಂದ ತದಾತ್ಮ್ಯ ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವುದು ವಿಶೇಷ. ಇಲ್ಲಿಯ ಎಲ್ಲಾ ಸಿಬ್ಬಂದಿಗಳು ಅತ್ಯಂತ ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಎಂಬುದೊಂದು ಕೇವಲ ವಿದ್ಯಾಲಯವಾಗಿರದೇ ಒಂದು ಮನೆಯ ವಾತಾವರಣದಂತಿದದ್ದನ್ನು ನೆನಪಿಸಿಕೊಂಡು ಅತ್ಯಂತ ಆನಂದದಿಂದ ವಿದ್ಯಾರ್ಜನೆಯನ್ನು ಮಾಡುತ್ತಿದ್ದಾರೆ. ಎಂಎಲ್ಎ ಸಂಸ್ಥೆಯು ಕೇವಲ ಒಂದು ಶೈಕ್ಷಣಿಕ ಸಂಸ್ಥೆಯಷ್ಟೇ ಅಲ್ಲ, ಹೊರತಾಗಿ ಸಮಗ್ರ ಜೀವನ ಶಿಕ್ಷಣದೊಂದಿಗೆ ಸಂಸ್ಕಾರ ಹಾಗೂ ಮೌಲ್ಯಗಳನ್ನು ಕಟ್ಟಿಕೊಡುವ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.

ಇಪ್ಪತ್ತು ಮಕ್ಕಳಿಂದ ಆರಂಭವಾದ ಈ ಸಂಸ್ಥೆಯು ಶಿಕ್ಷಣವನ್ನು ಮತ್ತು ಸಾಮಾಜಿಕ ಸೇವೆ ಮಾಡಲು ಆರಂಭಿಸಿತು. ಪ್ರಾಥಮಿಕದಿಂದಾರಂಭಿಸಿ ಪದವಿಯವರೆಗಿನ ತರಗತಿಗಳು ಇಂತಹ ವಿಶಿಷ್ಟವಾದ ಸಂಸ್ಥೆಯ ಅಂಗಳಕ್ಕೆ ರಾಜ್ಯ ಹಾಗೂ ರಾಷ್ಟ್ರಸ್ತರದ ಅನೇಕ ನಾಯಕರು ಭೇಟಿ ನೀಡಿ ಇಲ್ಲಿನ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿ ಪ್ರಶಂಸಿಸಿದ್ದಾರೆ.

ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್

ನಾಗಪ್ಪ ಬೀದಿ, 4ನೇ ಬ್ಲಾಕ್, ಕುಮಾರ ಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು – 560 020

ಬೆಂಗಳೂರು ನಗರದ ಹೃದಯ ಭಾಗವಾದ ಶೇಷಾದ್ರಿಪುರದಲ್ಲಿ ಇಬ್ಬರು ಅಕ್ಷರಸ್ಥ ಮಹಿಳೆಯರು ಬಡ ಮತ್ತು ಮಧ್ಯಮ ವರ್ಗದವರಿಗೆ ಶಿಕ್ಷಣ ಕಲ್ಪಿಸಿಕೊಡಬೇಕೆಂಬ ಮಹದಾಸೆಯಿಂದ ರೂಪಿಸಿರುವುದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ. ಸಾವಿರಾರು ವರ್ಷಗಳ ಸಾಂಸ್ಕೃತಿಕ ಪರಂಪರೆಯನ್ನೊಳಗೊಂಡ ಸನಾತನ ದೇಶ ನಮ್ಮದು. ಗುರುಕುಲಗಳಲ್ಲಿ ಶಿಕ್ಷಣ ನೀಡುತ್ತಾ ಬರುತ್ತಿತ್ತು. ಆಂಗ್ಲರ ಆಳ್ವಿಕೆ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಿತು. ಆದರೂ ಹೆಣ್ಣು ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರು ಒಂದು ಆಶಾಕಿರಣ ಮೂಡಿಸಿದರು. ಆ ಸನ್ನಿವೇಶದಲ್ಲಿ ಸ್ತ್ರೀ ಶಿಕ್ಷಣ ಸಾಧಕರು ತೆರೆ ಮೇಲೆ ಮೂಡಿ ಬಂದರು. ಅಂತವರ ಸಾಲಿಗೆ ಸೇರಿದವರು ಶೇಷಾದ್ರಿಪುರಂ ಸ್ತ್ರೀ ಸಮಾಜ ಶಾಲೆಯ ಸ್ಥಾಪಕರಾದ ಶ್ರೀಮತಿ ಆನಂದಮ್ಮ ಮತ್ತು ಶ್ರೀಮತಿ ಸೀತಮ್ಮನವರು.

ಈಗಿನ ಶೇಷಾದ್ರಿಪುರಂ ಬಡಾವಣೆಯಾದದ್ದು ದಿವಾನ್ ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ. ಇದಕ್ಕೆ ಮುಂಚೆ ಐದಾರು ಮನೆಗಳು ಮಾತ್ರ ಇದ್ದವು. ಅವುಗಳಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು ತಿಲಾಂಗ್ ರವರು, ಮಾಜಿ ಮೇಯರ್ ಡಾ॥ ಶೇಷಾದ್ರಿಯವರ ತಾತಂದಿರು, ಶ್ರೀ ಸಿ.ಗೋಪಾಲಕೃಷ್ಣ ರವರ



ಶ್ರೀಮತಿ ಆನಂದಮ್ಮ



ಶ್ರೀಮತಿ ಸೀತಮ್ಮ


ತಂದೆ ಶ್ರೀ ಶ್ರೀನಿವಾಸ ಮೊದಲಾದವರು ವಾಸವಾಗಿದ್ದರು. ಕಾಲರಾ ಸಾಂಕ್ರಾಮಿಕ ರೋಗ ಹರಡುತ್ತಿದ್ದಾಗ ಶ್ರೀ ನಾರಾಯಣ ಸ್ವಾಮಯ್ಯಂಗಾರ್, ರಾಮಚಂದ್ರ ರಾಯರು, ಲಕ್ಷ್ಮಣ ಶಾಸ್ತ್ರಿಗಳು, ಸೋಮನಾಥಯ್ಯರ್ ಮೊದಲಾದವರು ಇಲ್ಲಿ ಬಂದು ನೆಲೆಸಲು ಆರಂಭ ಮಾಡಿದರು. ಹೀಗೆ ಬಂದು ನೆಲೆಸಿದ ನಾರಾಯಣ ಸ್ವಾಮಿ ಅಯ್ಯಂಗಾರರ ಪುತ್ರಿಯೇ ಶ್ರೀಮತಿ ಸೀತಮ್ಮನವರು. ಗೋಪಾಲಕೃಷ್ಣರವರ ಪುತ್ರಿಯೇ ಶ್ರೀಮತಿ ಆನಂದಮ್ಮ. ಈಕೆಗೆ ಸಾಹಿತ್ಯದಲ್ಲಿ ಅಭಿರುಚಿ ಇತ್ತು.

ಶ್ರೀಮತಿ ಸೀತಮ್ಮ ಮತ್ತು ಶ್ರೀಮತಿ. ಆನಂದಮ್ಮನವರು "ಹೆಣ್ಣು ಅಬಲೆಯಲ್ಲ, ಅವಳು ಸಬಲೆ" ಯಾರ ಹಂಗಿಗೂ ಒಳಗಾಗದೇ ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಬೇಕು. ಸುಭದ್ರ ಸಮಾಜ ಸ್ಥಾಪನೆಗೆ ಹೆಣ್ಣು ವಿದ್ಯಾವಂತಳಾಗಬೇಕು. ಅದಕ್ಕಾಗಿ ಪ್ರಯತ್ನಿಸಲು ಮಹಿಳಾ ಸಮಾಜ ಸ್ಥಾಪನೆಗೆ 1930 ರಲ್ಲಿ ಮುಂದಾದರು. ಶ್ರೀಮತಿ ಶಾರದಮ್ಮ, ಶ್ರೀಮತಿ ಕಲ್ಯಾಣಮ್ಮ, ಶ್ರೀಮತಿ ಗೋಪಿ ಬಾಯಿ ಯವರೂ ಜೊತೆಯಾಗಿ ಸ್ತ್ರೀ ಸಮಾಜ ಸ್ಥಾಪಿಸಿದರು. ಮನೆ ಮನೆಗೆ ಹೋಗಿ ಸಮಾಜಕ್ಕೆ ಸೇರಲು ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸಿದರು. ಮಹಿಳೆಯರು ಕಾಲ ಹರಣ ಮಾಡದೇ ಸ್ತ್ರೀಯರಿಗೆ ಉಪಯುಕ್ತವಾದ ಹೊಲಿಗೆ ಕೆಲಸ, ಕಸೂತಿ, ಚಮಕಿ ಕೆಲಸ, ಬೆತ್ತದ ಬುತ್ತಿ ಹೆಣೆಯುವುದು, ತಟ್ಟೆಗಳನ್ನು ಹೆಣೆಯುವ, ಚರಕ ಮತ್ತು ತಕಲಿಗಳಿಂದ ಹತ್ತಿದಾರ ತೆಗೆಯುವುದು, ಸಂಗೀತ, ಚಿತ್ರಕಲೆ ಕಲಿಯುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಸುವುದು ಸ್ತ್ರೀ ಸಮಾಜದ ಉದ್ದೇಶ ಎಂದು ತಿಳಿಸಿದರು.

ಆಗಿನ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಕೈ ಕೆಲಸ ಕಲಿಸುವುದರ ಪ್ರಾಶಸ್ತ್ಯ ಹೆಚ್ಚಾಗಿದ್ದುದರಿಂದ ಒಳ್ಳೆಯ ಪ್ರತಿಫಲ ಸಿಕ್ಕಿದುದರ ಜೊತೆ ಓಡಿದ ಕೆಲಸ ಆಸಕ್ತಿಯಿಂದ, ಶ್ರದ್ಧೆಯಿಂದ ಮಾಡಿ ಸಮಾಜ ಬೆಳೆಯಲು ಒಳ್ಳೆಯ ಅಡಿಪಾಯ ಹಾಕಿದರು. ಈ ಸಮಾಜವನ್ನು ನಡೆಸಲು ಕೈಗಾರಿಕಾ ಇಲಾಖೆಯಿಂದ ಮಾಹೆಯಾನ 50 ರೂ.ಗಳ ಸಹಾಯಧನವೂ ದೊರೆಯುವಂತಾಯಿತು.

ಹೀಗೆ ಪ್ರಾರಂಭವಾದ ಸ್ತ್ರೀ ಸಮಾಜ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಪ್ರಾಥಮಿಕ ಶಾಲೆಯನ್ನು ಆರಂಭಿಸಿತು. ಮಂಗಳೂರು ಹೆಂಚಿನ ಎರಡು ಕೊಂಡಿಗಳಲ್ಲಿ ಕೇವಲ ಇಪ್ಪತ್ತು ಮಕ್ಕಳಿಂದ ಪ್ರಾರಂಭ. ಅನಂತರ ಮೈಸೂರಿನ ಮಹಾರಾಜರು 2.5 ಎಕರೆ ಪ್ರದೇಶವನ್ನು ಸಮಾಜಕ್ಕೆ ನೀಡಿದರು. ಸಂಸ್ಥೆ ತನ್ನದೇ ಆದ ಸುಸಜ್ಜಿತ ಕಟ್ಟಡ ಪಡೆಯುವಂತಾಯಿತು. ಕಾಲಕ್ರಮೇಣ ಶಿಕ್ಷಣ ಸಂಸ್ಥೆಯು ತನ್ನ ವಿಸ್ತರಣ ಕಾರ್ಯ ಆರಂಭಿಸಿತು.


1944 ರಲ್ಲಿ ನೊಂದಣಿಯಾದ ಶಿಕ್ಷಣ ಸಂಸ್ಥೆ 1980 ರಲ್ಲಿ ಸಾರ್ವಜನಿಕ ಚಾರಿಟಬಲ್ ಟ್ರಸ್ಟ್ ಆಗಿ ನೋಂದಣಿಯಾಗಿದೆ. ಹಲವಾರು ಸಮಾಜಮುಖಿ ಕಾರ್ಯ ತತ್ಪರರಾಗಿದ್ದ ಅಧ್ಯಕ್ಷರು, ಕಾರ್ಯದರ್ಶಿಗಳು ಆಡಳಿತ ಮಂಡಳಿಯ ನಿರ್ದೇಶಕರು ಶಿಕ್ಷಣ ಸಂಸ್ಥೆಯ ಬೆಳವಣಿಗೆ ಮಾರ್ಗದರ್ಶನ ನೀಡಿರುವ ಫಲ ಬೃಹದಾಕಾರದಲ್ಲಿ ಬೆಳೆದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ನರ್ಸರಿಯಿಂದ ಪಿ.ಹೆಚ್‌ಡಿ ವರೆಗಿನ 9 ಶಾಲೆಗಳು, 8 ಪದವಿಪೂರ್ವ ಕಾಲೇಜುಗಳು, 8 ಪದವಿ ಕಾಲೇಜುಗಳು, 3 ಸ್ನಾತಕೊತ್ತರ ಕಾಲೇಜುಗಳು, 1 ಗ್ಲೋಬಲ್ ಅಕಾಡೆಮಿ, 2 ಕಾನೂನು ಕಾಲೇಜುಗಳು, 2 ಸಂಶೋಧನಾ ಕೇಂದ್ರಗಳು ಮತ್ತು 2 ಇತರೆ ಸಂಸ್ಥೆಗಳು ಬೆಂಗಳೂರು ಮಾತ್ರವಲ್ಲದೇ ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಶಿಕ್ಷಣ ಕಾರ್ಯ ನಿರ್ವಹಿಸುತ್ತಿವೆ. ಕೇವಲ ಇಪ್ಪತ್ತು ವಿದ್ಯಾರ್ಥಿಗಳಿಂದ ಆರಂಭವಾದ ಶಿಕ್ಷಣ ಸಂಸ್ಥೆಯಲ್ಲಿ ಇಂದು ಇಪ್ಪತ್ತನಾಲ್ಕು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.


ಡಾ॥ ವೂಡೇ ಪಿ. ಕೃಷ್ಣ

2001 ರಿಂದ ಟ್ರಸ್ಟಿನ ಗೌರಕಾರ್ಯದರ್ಶಿಗಳಾಗಿ ಸಂಸ್ಥೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವವರು ಡಾ॥ ವೂಡೇ ಪಿ. ಕೃಷ್ಣ ಅವರು.



1963 ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಡಾ.ಕೃಷ್ಣ ಅವರು ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದವರು. ಮೈಸೂರಿನ ಹೆಸರಾಂತ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡಿದ ನಂತರ ಎಂಜಿನಿಯರಿಂಗ್ ಹಾಗೂ ಕಾನೂನು ಸ್ನಾತಕೋತ್ತರ ಪದವಿಗಳೊಂದಿಗೆ ನಿರ್ವಹಣಾ ಶಾಸ್ತ್ರದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ವೃತ್ತಿಯಲ್ಲಿ ಚಾರ್ಟರ್ಡ್ ಇಂಜಿನಿಯರ್ ಆಗಿರುವ ಇವರು ಸ್ವತ್ತುಗಳ ಮೌಲ್ಯಮಾಪನದಲ್ಲಿ ಪರಿಣಿತರು. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ ರಾಜ್ಯ ಸಚಿವ ದರ್ಜೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಭಾರತದ ಎಂಜಿನಿಯರುಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಇಂಗ್ಲೆಂಡಿನ ಎಂಜಿನಿಯರಿಂಗ್ ಹಾಗೂ ಟೆಕ್ನಾಲಜಿ ಸಂಸ್ಥೆಯ ಅತ್ಯುನ್ನತ ಅಂತರಾಷ್ಟ್ರೀಯ ಮಟ್ಟದ ಫೆಲೋ ಗೌರವ ಪಡೆದಿರುವ ಭಾರತೀಯ ಎಂಬ ಕೀರ್ತಿಗೂ ಪಾತ್ರರಾಗಿದ್ದಾರೆ. ಕೆನಡಾದ ವಿಶ್ವ ಉತ್ಪಾದನಾ ವಿಜ್ಞಾನ ಅಕಾಡೆಮಿ ಇವರಿಗೆ ಫೆಲೋಶಿಪ್ ನೀಡಿ ಗೌರವಿಸಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯಿಂದ ಪುರಸ್ಕೃತರಾಗಿದ್ದಾರೆ. ಹಂಪಿ ಕನ್ನಡ ವಿವಿಯು ಗೌರವ ಡಾಕ್ಟರೇಟ್ ತತ್ಸಮಾನದ ನಾಡೋಜ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.



ಬಾಪೂಜಿ ವಿದ್ಯಾ ಸಂಸ್ಥೆ

143, 1ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ಗೋಪಾಲಪುರ,

ಬೆಂಗಳೂರು – 560 023

ಚಾಮರಾಜಪೇಟೆಯಿಂದ ಶಿರಸಿ ಸರ್ಕಲ್ ಮುಖಾಂತರ ಬಿನ್ನಿ ಮಿಲ್ಸ್ ಮತ್ತು ಮಾಗಡಿ ಮುಖ್ಯ ರಸ್ತೆಯನ್ನು ಪ್ರವೇಶಸುತ್ತಿದ್ದಂತೆ ಕಂಗೊಳಿಸುತ್ತಿರುವ ಕಟ್ಟಡವೇ ಬಾಪೂಜಿ ವಿದ್ಯಾ ಸಂಸ್ಥೆ.

ಶಿಕ್ಷಣ ವಂಚಿತ ಬಡ ಮಕ್ಕಳ, ಶಿಕ್ಷಣಾರ್ಥಿಗಳ ವಸತಿಗೆಂದೇ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದುದು. ರಾಜ್ಯದ ಮೂಲೆ ಮೂಲೆಗಳಿಂದ ಬರುವ ಬಡ ವಿದ್ಯಾರ್ಥಿಗಳಿಗೆ ಒಂದು ವಸತಿಯ ನೆಲೆಯನ್ನು ಕಲ್ಪಿಸುವುದೇ ಆದಿಜಾಂಬವ ವಿದ್ಯಾರ್ಥಿ ನಿಲಯ. ಸರ್ಕಾರದ ಪ್ರೋತ್ಸಾಹದಿಂದ ಪ್ರಾರಂಭಿಸಿದ ಈ ವಸತಿನಿಲಯದಲ್ಲಿ ಹಲವಾರು ವಿದ್ಯಾರ್ಥಿಗಳು ಬಂದು ಸೇರಿದರು. ಇವರಿಗೆಲ್ಲಾ ತಂದೆ ತಾಯಿಯಂತೆ ಮೇಲ್ವಿಚಾರಣೆ ಮಾಡುತ್ತಿದ್ದವರು ಶ್ರೀ ವಿಶ್ವಾನಂದ ಸ್ವಾಮಿಗಳು. ಸುತ್ತಮುತ್ತ ಮನೆಗಳಿಂದ ಭಿಕ್ಷೆ ಬೇಡಿ ಅವರು ನೀಡಿದ ಧಾನ್ಯದಿಂದ ಮಕ್ಕಳ ಆಹಾರ ಸಮಸ್ಯೆ ಪೂರೈಸುತ್ತಿದ್ದರು. ಬೆಳಿಗ್ಗೆ ರಾತ್ರಿ ಎರಡು ಹೊತ್ತು ಊಟ ಇಲ್ಲಿ ದೊರೆಯುತ್ತಿದ್ದು ಎದುರಿಗೆ ಇದ್ದ ಕಾರ್ಪೊರೇಷನ್ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದರು. ಶ್ರೀ ವಿಶ್ವಾನಂದ ಸ್ವಾಮಿಗಳ ಈ ಶ್ರಮಕ್ಕೆ ಹಲವಾರು ಹಿರಿಯ ಮುಖಂಡರೂ ಕೈ ಜೋಡಿಸುತ್ತಿದ್ದರು.

ಕಾಲ ಕಳೆದಂತೆ ಈ ಮುಖಂಡರಲ್ಲಿ ವಸತಿ ನಿಲಯದಲ್ಲಿಯೇ ಒಂದು ಶಾಲೆ ಪ್ರಾರಂಭಿಸುವ ಯೋಚನೆ ಮೂಡಿತು. ಕಾರ್ಯಗತವಾಗಲು ತುಂಬಾ ಸಮಯ ತೆಗೆದುಕೊಳ್ಳಲಿಲ್ಲ. ಸ್ವಲ್ಪದಿನಗಳಲ್ಲಿಯೇ ಸರ್ಕಾರದ ಅನುಮತಿಯಿಂದ ಒಂದರಿಂದ ನಾಲ್ಕನೇ ತರಗತಿಯವರೆಗಿನ ಪ್ರಾಥಮಿಕ ಶಾಲೆ ಆರಂಭವಾಯಿತು. ವಿದ್ಯಾರ್ಥಿಗಳು ಒಂದೇ ಜಾಗದಲ್ಲಿ ಪಾಠ ಕೇಳುವ, ಕಲಿಯುವ, ಊಟ ಮಾಡುವ ಹಾಗೂ ಮಲಗುವ ಅವಕಾಶ ಸಿಕ್ಕಿತು. ಕಾಲ ಕಳೆಯುತ್ತಿದ್ದಂತೆ ಶಾಲೆಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಬಂತು. ಎಷ್ಟೇ ಮಂದಿ ವಸತಿ ನಿಲಯಕ್ಕೆ ಪ್ರವೇಶ ಪಡೆದರೂ ಶ್ರೀ ವಿಶ್ವಾನಂದ ಸ್ವಾಮಿಗಳು ಭಯಪಡಲಿಲ್ಲ. ಜೊತೆಗೆ ಇವರೆಲ್ಲರ ಆಹಾರ ದಾಹವನ್ನು ಭಗವಂತನ ಅನುಗ್ರಹದಿಂದ ಪೂರೈಸುತ್ತಿದ್ದರು. ಹೀಗೆ ಅನ್ನದಾಸೋಹದ ಜೊತೆಯಲ್ಲಿ ಅಕ್ಷರದಾಸೋಹ ಅವಿರತವಾಗಿ ನಡೆಯುತ್ತಿದ್ದಾಗ ಒಂದು ಅವಿಸ್ಮರಣೀಯ ಘಟನೆ ಸಂಭವಿಸುತ್ತದೆ. ಅದೇನೆಂದರೆ ಬೆಂಗಳೂರಿಗೆ ಆಗಮಿಸಿದ್ದ ಮಹಾತ್ಮಾ ಗಾಂಧಿಯವರು ಈ ವಸತಿ ನಿಲಯಕ್ಕೆ ಆಗಮಿಸುತ್ತಾರೆ. ಹೀಗಾಗಿಯೇ ಮುಂದೆ “ಬಾಪೂಜಿ ವಿದ್ಯಾರ್ಥಿ ನಿಲಯ” ಎಂದೇ ಪ್ರಸಿದ್ಧವಾಯಿತು. ಗಾಂಧೀಜಿಯವರ ಪಾದ ಸ್ಪರ್ಶ ವಿದ್ಯಾರ್ಥಿ ನಿಲಯದಲ್ಲಿ ಹೊಸ ಕಾಂತಿಯನ್ನು ಮೂಡಿಸಿತು. ಹೀಗೆ ಬಾಪೂಜಿ ವಿದ್ಯಾ ಸಂಸ್ಥೆ ಸನಿವಾಸ ನಿಲಯವಾಯಿತು. ವಸತಿ ಶಾಲೆಯಲ್ಲಿನ ಮಕ್ಕಳ ಜೊತೆ ಸುತ್ತಮುತ್ತಲ ಪ್ರದೇಶಗಳಲ್ಲಿನ ಮಕ್ಕಳು ಶಾಲೆಯಲ್ಲಿ ಪ್ರವೇಶ ಪಡೆದು ವಿದ್ಯಾಭ್ಯಾಸ ಮುಂದುವರೆಸಿದರು.

ಒಂದರಿಂದ ನಾಲ್ಕನೇ ತರಗತಿಯವರೆಗಿನ ಶಾಲೆ ಮುಂದುವರೆದು ಐದು, ಆರು, ಏಳನೇ ತರಗತಿಗಳ ಬೋಧನೆ ಆರಂಭವಾಗಿ 1970 ರವರೆಗೂ ಯಾವುದೇ ಅಡಚಣೆಗಳಿಲ್ಲದಂತೆ ಸಾಗಿತು. ಏಳನೇ ತರಗತಿ ಉತ್ತೀರ್ಣರಾದ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮತ್ತೆ ಮುಂದುವರೆಸಲು ಕಾರ್ಪೊರೇಷನ್ ಶಾಲೆಗೆ ಹೋಗುತಿದ್ದರು. ಇದನ್ನ ಮನಗೊಂಡು ಸ್ಥಾಪಕರು ಪ್ರೌಢಶಾಲೆಯನ್ನು ಆರಂಭಿಸುವ ಚಿಂತನೆ ಮಾಡಿದರು. ಚಿಂತನೆ ಫಲಪ್ರದವಾಗಿ 1970 ರಲ್ಲಿ ಬಾಪೂಜಿ ಪ್ರೌಢ ಶಾಲೆ ಪ್ರಾರಂಭವಾಯಿತು. ಪ್ರತಿವರ್ಷ ಒಂದೊಂದು ತರಗತಿ ಪ್ರಾರಂಭವಾಗುತ್ತಾ ಎಂಟು, ಒಂಭತ್ತು ಮತ್ತು ಹತ್ತನೆಯ ತರಗತಿಗಳು ಕಾರ್ಯಪ್ರದವಾದವು.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಲಕ್ಷ್ಮಣರಾಯರು ತನ್ನ ಸಹೋದ್ಯೋಗಿಗಳ ಜೊತೆ ಶಾಲೆ ಪ್ರಗತಿಗಾಗಿ ವಿದ್ಯಾರ್ಥಿಗಳ

ಪುರೋಭಿವೃದ್ಧಿಗಾಗಿ ಲಭ್ಯವಾಗಿದ್ದ ಸಂಪನ್ಮೂಲದಲ್ಲಿಯೇ ಕಾಯೇನ ವಾಚಾ ಮನಸಾ ಶ್ರಮಿಸುತ್ತಿದ್ದರು. ಇವರ ನಂತರ ಮುಖ್ಯೋಪಾಧ್ಯಾಯರಾದ ಶ್ರೀ ರಾಮಮೂರ್ತಿಯವರು ಶಾಲೆಯ ಶೈಕ್ಷಣಿಕ ಪತಾಕೆಯನ್ನು ಮುಗಿಲೆತ್ತರಕ್ಕೆ ಕೊಂಡೊಯ್ದರು. ಒಂದೆಡೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಾ ಮತ್ತೊಂದೆಡೆ ಅಗತ್ಯವಾಗಿ ಬೇಕಾದ ಪೀಠೋಪಕರಣಗಳು, ಪಾಠೋಪಕರಣಗಳು, ಪ್ರಯೋಗ ಶಾಲಾ ಸಲಕರಣೆಗಳು, ಅಗತ್ಯ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯ, ಕ್ರೀಡಾ ಸಲಕರಣೆಗಳು ಇತ್ಯಾದಿಗಳನ್ನು ಶಾಲೆಯ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಒದಗಿಸುವಲ್ಲಿ ಮಹತ್ತರ ಸಾಧನೆ ಮಾಡಿದರು. ಇವರ ಪ್ರಯತ್ನದ ಫಲವಾಗಿ ಬೆಂಗಳೂರು ನಗರದ ಕಾರ್ಪೊರೇಷನ್ ಶಾಲೆಗೆ ಅಗತ್ಯವಾಗಿ ಬೇಕಾದ ವಸ್ತುಗಳನ್ನು ಪೂರೈಸಿತು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಯಿತು. ಉತ್ತಮ ಫಲಿತಾಂಶ ಬರಲಾರಂಭಿಸಿತು. ವಿಶೇಷವಾಗಿ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಜನವರಿ ತಿಂಗಳಿನಿಂದಲೇ ಶಾಲಾ ಸಮಯದಲ್ಲಿ ನಂತರ ಪ್ರತಿದಿನ ವಿಶೇಷ ತರಗತಿಗಳನ್ನು ನಡೆಸುವ ಏರ್ಪಾಟು ಮಾಡಲಾಯಿತು. ಶಾಲಾ ಸುತ್ತಮುತ್ತಲ ಪ್ರದೇಶಗಳಿಂದ ಬರುತ್ತಿದ್ದ ಹೆಣ್ಣುಮಕ್ಕಳನ್ನು ಈ ವಿಶೇಷ ತರಗತಿಗಳು ಮುಗಿದ ನಂತರ ಶಾಲೆಗೆ ಪೋಷಕರು ಬಂದು ತಮ್ಮೊಡನೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಯಿತು. ಈ ಕಾರ್ಯಕ್ರಮ ಫಲಿತಾಂಶ ಹೆಚ್ಚಾಗಲು ತುಂಬಾ ಸಹಕಾರ ನೀಡಿತು. ಶಾಲೆಗೆ ಮಾಗಡಿ ಮುಖ್ಯರಸ್ತೆಯಲ್ಲಿ ಒಳ್ಳೆಯ ಹೆಸರು ಬರುವಂತಾಯಿತು. ಆಡಳಿತ ಮಂಡಳಿಗೆ ಉಂಟಾದ ಸಂತಸವನ್ನು ವಿವರಿಸಲು ಅಸಾಧ್ಯವಾಯಿತು. ಬೆಳಗ್ಗೆ ಮತ್ತು ರಾತ್ರಿ ಎರಡು ಹೊತ್ತು ಶಾಲೆಯಲ್ಲೇ ಇರುತ್ತಿದ್ದ ಮಕ್ಕಳಿಗೆ ಊಟ ದೊರೆಯುತ್ತಿತ್ತು. ಉಳಿದ ಎಲ್ಲ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನ ಸಿಗುವ ಒಂದು ಪ್ರಸಂಗ ನಡೆದು ಹೋಯಿತು. ಶ್ರೀಯುತ ದೇವಪ್ರಕಾಶ ಅವರು ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕರಾಗಿದ್ದಾಗ, ಒಮ್ಮೆ ಜಿಲ್ಲೆಯ ಪ್ರೌಢಶಾಲೆಯ ಮುಖೋಪಾಧ್ಯಾಯರ ಸಭೆಯನ್ನು ರಾಜಾಜಿನಗರದಲ್ಲಿರುವ ಇಸ್ಕಾನ್ ದೇವಾಲಯದ ಆವರಣದಲ್ಲಿ ನಡೆಸಿದರು. ಸಭೆಗಾಗಿ ಆಗಮಿಸಿದ್ದ ಎಲ್ಲಾ ಮುಖ್ಯ ಶಿಕ್ಷಕರಿಗೆ ಪ್ರಸಾದವನ್ನು ದೇವಾಲಯದಿಂದ ವಿತರಿಸಲಾಯಿತು. ಪ್ರಸಾದ ಸ್ವೀಕರಿಸಿದ ನಂತರ ಬಾಪೂಜಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಇಸ್ಕಾನ್ ನ ಪ್ರಧಾನರನ್ನು ಕಂಡು ತಮ್ಮ ಶಾಲೆಯಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳ ಸ್ಥಿತಿಯನ್ನು ವಿವರಿಸಿ ಪ್ರತಿದಿನ ಮಧ್ಯಾಹ್ನ ಎಲ್ಲಾ ಮಕ್ಕಳಿಗೂ

ಪ್ರಸಾದ ವಿತರಿಸುವಂತೆ ವಿನಂತಿಸಿಕೊಂಡರು. ಈ ಮನವಿಯನ್ನು ಒಪ್ಪಿ ಇಸ್ಕಾನ್ ದೇವಾಲಯ ಪ್ರತಿದಿನ ಶಾಲೆಯಲ್ಲಿನ ಎಲ್ಲಾ ಮಕ್ಕಳಿಗೆ ಪ್ರಸಾದ ವಿತರಿಸಲು ಒಪ್ಪಿಕೊಂಡಿತು. ಮಾರನೆ ದಿನದಿಂದ ಶುಚಿಯಾದ ರುಚಿಯಾದ ಪ್ರಸಾದ ಇಸ್ಕಾನ್ ವಾಹನದಲ್ಲಿ ಶಾಲೆಯನ್ನು ಪ್ರವೇಶಿಸುತ್ತಿದ್ದಂತೆ ಮಕ್ಕಳ ಮುಖದಲ್ಲಿ ಮಂದಹಾಸವನ್ನು ನೋಡಿ ಆನಂದವಾಗದಿರುವುದಿಲ್ಲ.

ಇದೇ ರೀತಿ ಮತ್ತೊಂದು ಘಟನೆ. ಒಮ್ಮೆ ಮುಖ್ಯೋಪಾಧ್ಯಾಯರ ಕಛೇರಿಗೆ ಅಪರಿಚಿತರೊಬ್ಬರು ಬರುತ್ತಾರೆ. ಕಛೇರಿಗೆ ಬಂದವರನ್ನು ಕೂಡಿಸಿ ಬಂದ ಕಾರ್ಯವೇನೆಂದು ಕೇಳಿದಾಗ, ಅವರು ತಾನೊಬ್ಬ ಮಾರವಾಡಿ ವರ್ತಕನೆಂದೂ ಬಳೆಪೇಟೆಯಲ್ಲಿ ಬಟ್ಟೆಯ ಅಂಗಡಿ ಇಟ್ಟುಕೊಂಡಿರುವುದಾಗಿಯೂ ಹಲವು ಮಕ್ಕಳಿಗೆ ಅಂಗಡಿಯಲ್ಲಿನ ಬಟ್ಟೆ ಕೊಟ್ಟು ಹೋಗೋಣ ಎಂದು ಬಂದಿದ್ದೇನೆ ಎಂದಾಗ ಮುಖ್ಯೋಪಾಧ್ಯಾಯರಿಗೆ ಉಂಟಾದ ಆನಂದವನ್ನು ವಿವರಿಸಲು ಅಸಾಧ್ಯವಾಯಿತು. ತುಂಬಾ ಸಂತೋಷವನ್ನು ವ್ಯಕ್ತಪಡಿಸಿ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಬಡತನದ ಬವಣೆಯನ್ನು ಅವರಿಗೆ ಅರ್ಥವಾಗುವಂತೆ



ವಿವರಿಸುತ್ತಾರೆ. ಆ ಮಾರವಾಡಿ ಶಾಲೆಯಲ್ಲಿರುವ ಎಲ್ಲಾ ಮಕ್ಕಳಿಗೂ ಒಂದೊಂದು ಜೊತೆ ಬಟ್ಟೆ ಕೊಡುವೆನೆಂದು ಆಶ್ವಾಸನೆ ನೀಡಿ ಹೊರಟರು. ಕೆಲ ದಿನಗಳಲ್ಲಿಯೇ ಮಕ್ಕಳಿಗೆ ಅಗತ್ಯವಾಗಿ ಬೇಕಾದ ಬಟ್ಟೆಯನ್ನು ಒಂದು ವ್ಯಾನ್ ನಲ್ಲಿ ತುಂಬಿಸಿಕೊಂಡು ಬಂದು ಎಲ್ಲಾ ಮಕ್ಕಳಿಗೆ ವಿತರಿಸಿ ಹೋದರು. ಆರಂಭದಲ್ಲಿ ಎಲ್ಲಾ ಕೆಲಸಕಾರ್ಯಗಳನ್ನು ತಮ್ಮ ಹೆಗಲ ಮೇಲೆ ಹೊತ್ತು ಸಾಗುತ್ತಿದ್ದ ಶ್ರೀ ವಿಶ್ವಾನಂದ ಸ್ವಾಮಿಗಳು ಮರೆಯಾದರು. ಹೊಸ ಆಡಳಿತ ವ್ಯವಸ್ಥೆ ಮುನ್ನಲೆಗೆ ಬಂತು. ಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದ ಮಕ್ಕಳು ಉತ್ತಮ ಸ್ಥಾನಮಾನ ಪಡೆದುಕೊಂಡು ಸರ್ಕಾರಿ ಹುದ್ದೆಗಳಲ್ಲಿ,ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಎಸ್.ಎಸ್.ಎಲ್.ಸಿ ನಂತರ ವಿದ್ಯಾಭ್ಯಾಸ ತಮ್ಮ ಸಂಸ್ಥೆಯಲ್ಲಿಯೇ ಮುಂದುವರೆಸಲು ಅನುಕೂಲವಾಗುವಂತೆ ಪದವಿ ಪೂರ್ವ ಕಾಲೇಜನ್ನು ಸ್ಥಾಪಿಸಿದರು. ಪ್ರಾಥಮಿಕ ಹಂತದಿಂದ ಪದವಿ ಪೂರ್ವ ಕಾಲೇಜಿನವರೆಗೆ ಪಾಠ ಮಾಡುತ್ತಿರುವ ಸಿಬ್ಬಂದಿಗೆ ಸರ್ಕಾರದಿಂದ ಅನುದಾನ ಬರುತ್ತಿದೆ.

ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆ

47, ಸನ್ನಿಧಿ ಕ್ರಾಸ್ ರಸ್ತೆ, ಎನ್.ಆರ್ ಕಾಲೋನಿ, ಬಸವನಗುಡಿ,

ಬೆಂಗಳೂರು– 560004

ಆಧುನಿಕ ಭಾರತದ ಶಿಕ್ಷಣ ತಜ್ಞರಲ್ಲಿ ಒಬ್ಬರಾದ ಪ್ರೊ. ಎನ್. ಅನಂತಾಚಾರ್ ಅವರ ಬದುಕು, ಕಾರ್ಯವೈಖರಿಯನ್ನು ಮನಗಂಡರೆ ಅವರೊಬ್ಬ ವಿಭೂತಿ ಪುರುಷರು!" ಎಂಬುದು ವೇದ್ಯವಾಗುತ್ತದೆ. ಅವರ ಜೀವಿತವೇ ಬಹು ದೊಡ್ಡ ಸಂದೇಶವಾಗಿ, ಆದರ್ಶಪ್ರಾಯವಾಗಿ, ದಾರಿದೀಪವಾಗಿರುತ್ತದೆ. ತಾವು ಸಾಧಿಸಬೇಕೆಂಬ ಮಹತ್ವಾಕಾಂಕ್ಷೆ, ಛಲ, ಮಾನವೀಯತೆ, ಹೃದಯವಂತಿಕೆ, ತಾಯ್ನೆಲಕ್ಕಾಗಿ ಮಿಡಿದ ಅಂತರಂಗ, ಎದುರಾಗುವ ಕಷ್ಟಗಳಿಗೆ ಕುಗ್ಗದ ಮನೋಬಲ, ಸತತ ಪರಿಶ್ರಮ, ಹದವರಿತ ಮಾತು, ಈ ಎಲ್ಲ ಸದ್ಗುಣಗಳ ಸಾಕಾರ ಮೂರ್ತಿಯಾಗಿ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ ಉನ್ನತಿಗಾಗಿ ದುಡಿದವರೆ ಪೂಜ್ಯ ಪ್ರೊ|| ಎನ್. ಅನಂತಾಚಾರ್ಯರು. ಎನ್ ಆರ್ ಕಾಲೋನಿಯಲ್ಲಿ 1935 ರಲ್ಲಿ



ಪ್ರೊ|| ಎನ್. ಅನಂತಾಚಾರ್

ಪಿತವಾದ ಆಚಾರ್ಯ ಪಾಠಶಾಲಾ ಶಿಕ್ಷಣ

ಸಂಸ್ಥೆ ಹತ್ತಿರ ಹತ್ತಿರ 90 ವರ್ಷಗಳ ಅರ್ಥಪೂರ್ಣ ಸಾರ್ಥಕ ಸೇವೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದೆ.

ಈ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿ, ಅದರ ಸರ್ವತೋಮುಖ ಪ್ರಗತಿಗಾಗಿ ಹಗಲಿರುಳು ದುಡಿದು, ಜೀವತೇಯ್ದವರು ಶ್ರೀ. ಎನ್. ಅನಂತಾಚಾರ್ಯ ಅವರು 1910, ಸೆಪ್ಟೆಂಬರ್ 5 ರಂದು, ನ್ಯಾಮಗೊಂಡ್ಲು ಎಂಬ ಗ್ರಾಮದಲ್ಲಿ ಶ್ರೀ ಎಂ. ನರಸಿಂಹಮೂರ್ತಿ ಆಚಾರ್ ಮತ್ತು ಶ್ರೀಮತಿ ತುಲಸಮ್ಮ ದಂಪತಿಗಳ ಜೇಷ್ಠ ಪುತ್ರರಾಗಿ ಜನಿಸಿದರು. ನಮ್ಮ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಂಕವು ಸೆಪ್ಟೆಂಬರ್ 5 ಆಗಿರುವುದು ಕಾಕತಾಳೀಯವಾಗಿದೆ. ಈರ್ವರು ಶ್ರೇಷ್ಠ ಶಿಕ್ಷಣವೇತ್ತರು.


ಸಂಪ್ರದಾಯ ನಿಷ್ಠ ಬ್ರಾಹ್ಮಣರಾದ ಶ್ರೀ ಅನಂತಾಚಾರ್ಯರ ಮಾತಾಪಿತೃಗಳು ಸಿರವಂತರಲ್ಲದಿದ್ದರೂ, ಅವರಲ್ಲಿ ಹೃದಯ ಶ್ರೀಮಂತಿಕೆ, ಮೌಲ್ಯ, ಸೌಜನ್ಯದ ಗುಣಗಳಿಗೆ ಕೊರತೆ ಇರಲಿಲ್ಲ. ಮಕ್ಕಳನ್ನು ಸಂಸ್ಕಾರ, ಸಭ್ಯತೆಯಿಂದ ಬೆಳಸಿದ ಶ್ರೀ ಎಂ. ನರಸಿಂಹಮೂರ್ತಿ ಆಚಾರ್ ದಂಪತಿಗಳಿಗೆ ಮಗ ಪ್ರಾಧ್ಯಾಪಕನಾಗಬೇಕಂಬ ಹಂಬಲವಿತ್ತು. ಅನಂತಾಚಾರ್ಯರು ತಮ್ಮ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಮೈಸೂರಿನಲ್ಲಿಯೇ ಪಡೆದರು. ಶ್ರೀಯುತರು 1928ರಲ್ಲಿ ಬಿ.ಎ.ಪದವಿಯನ್ನು, 1930ರಲ್ಲಿ ಪ್ರಾಕ್ತನ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆಯುತ್ತಾರೆ. ಉತ್ತಮ ಕ್ರೀಡಾಪಟುವಾಗಿದ್ದ ಶ್ರೀ ಅನಂತಾಚಾರ್ಯರು ಫುಟ್ಬಾಲ್, ವಾಲಿಬಾಲ್, ಕ್ರಿಕೆಟ್, ಬ್ಯಾಡ್ಮಿಂಟನ್ ಮೊದಲಾದ ಕ್ರೀಡೆಗಳಲ್ಲಿ ನಿಪುಣರಾಗಿದ್ದರು.




ಅರಸೀಕೆರೆಯ ಅಮಲ್ದಾರ್ ಶ್ರೀ. ನರಸಿಂಹರಾವ್ ಮತ್ತು ಶ್ರೀಮತಿ ರುಕ್ಕಿಣಿಯಮ್ಮನವರ ಪುತ್ರಿಯಾದ ಶ್ರೀಮತಿ ನರ್ಮದಾಬಾಯಿ ಅವರನ್ನು

ವಿವಾಹವಾದರು. ಅನಂತಾಚಾರ್ಯರ ಬಾಳಿನುದ್ದಕ್ಕೂ ಅವರೊಟ್ಟಿಗೆ ಹೆಗಲೆಣೆಯಾಗಿ ನಿಂತ ಶ್ರೀಮತಿ ನರ್ಮದಾಬಾಯಿಯವರು ಕಷ್ಟಕಾಲದಲ್ಲಿ ಕತ್ತಿನ ಚಿನ್ನದ ಸರ ಅಡವಿಟ್ಟು ಅಧ್ಯಾಪಕರಿಗೆ, ಕಛೇರಿ ಸಿಬ್ಬಂದಿವರ್ಗದವರಿಗೆ ಸಂಬಳ ನೀಡಲು ಹಣ ಹೊಂದಿಸಿಕೊಟ್ಟ ಮಹಾತಾಯಿ. ಇವರ ವಿವಾಹಾನಂತರ ಅನಂತಾಚಾರ್ ದಂಪತಿಗಳ ಹಾದಿ ಸುಗಮವಾಗಿರಲಿಲ್ಲ. ಬೆಂಗಳೂರಿಗೆ ಬಂದು ನೆಲೆಸಿದ ಶ್ರೀಯುತರು ಬಸವನಗುಡಿ ಬಡಾವಣೆಯಲ್ಲಿ ಈಸ್ಟ್ ಆಂಜನೇಯ ದೇವಾಲಯದ ರಸ್ತೆಯಲ್ಲಿ ಒಂದು ಸಣ್ಣ ಮನೆ ಬಾಡಿಗೆಗೆ ಪಡೆದು, 'ಕಾಯಕವೇ ಕೈಲಾಸ' ಎಂದು ಬಲವಾಗಿ ನಂಬಿ, ಮನೆ ಮುಂದಿನ ಜಾಗದಲ್ಲಿ ತರಕಾರಿ ವ್ಯಾಪಾರ ಆರಂಭಿಸಿದರು. ನಂತರ ಗಾಂಧಿಬಜಾರಿನಲ್ಲಿ ಆಚಾರ್ಯ ಮತ್ತು ಕಂಪನಿ ಎಂಬ ತರಕಾರಿ ಅಂಗಡಿ ಪಾರಂಭಿಸಿ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್, ಕಾಲೇಜಿನ ಕ್ಯಾಂಟಿನ್ಗೆ ಇತರೆ ದೊಡ್ಡ ದೊಡ್ಡ ಅಂಗಡಿಗಳಿಗೆ ತರಕಾರಿ ಸರಬರಾಜು ಮಾಡುತ್ತಿದ್ದರು. ಸ್ವಯಂ ಉದ್ಯೋಗದಿಂದ ತೃಪ್ತ ಜೀವನ ನಡೆಸುತ್ತಿದ್ದು ಮಾತ್ರವಲ್ಲದೆ ಅನಂತಾಚಾರ್ಯರಿಗೆ ಅನೇಕ ವಿದ್ವಾಂಸರು, ಅಧಿಕಾರಿಗಳು, ಅಧ್ಯಾಪಕರು, ಸಮಾಜದ ಗಣ್ಯವ್ಯಕ್ತಿಗಳ ಸಂಪರ್ಕ ದೊರೆಯುವಂತಾಯಿತು.

ಒಮ್ಮೆ ಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ಶ್ರೀ. ಎನ್. ಅನಂತಾಚಾರ್ಯರವರನ್ನು ಕುರಿತು ಆಡಿದ ಕುಹಕದ ನುಡಿಯಿಂದ ಬೇಸರಿಸಿಕೊಳ್ಳದೆ ಅದನ್ನು ಪ್ರೇರಣೆಯಾಗಿ ಪರಿವರ್ತಿಸಿಕೊಂಡರು. ನನ್ನನ್ನು ತಿರಸ್ಕರಿಸಿದ ಶಾಲೆಯ ಮುಖ್ಯೋಪಾಧ್ಯಾಯರಂತೆ ನಾನೂ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಬೇಕುಎಂದು ಶ್ರೀ ಅನಂತಾಚಾರ್ ಅವರು ಪಣ ತೊಟ್ಟರು. ಈ ಗುರಿ ಸಾಧಿಸಲು ಶ್ರೀಯುತರನ್ನು ಉತ್ತೇಜಿಸಿದವರಲ್ಲಿ ಶ್ರೀ ಎನ್.ಎಸ್.ಸುಬ್ಬರಾವ್, ಶ್ರೀ ನವರತ್ನ ರಾಮರಾವ್, ಶ್ರೀ ಕೃಷ್ಣರಾವ್, ಶ್ರೀ ನರಸಿಂಹರಾವ್, ಶ್ರೀ ರಾಮರಾಯರು, ಶ್ರೀ.ಆರ್. ಮಾಧವರಾಯರು ಮೊದಲಾದವರು ಪ್ರಮುಖರು. ಆಡದೆ ಮಾಡುವವನು ರೂಢಿಯೊಳಗುತ್ತಮನು ಎಂಬ ಸರ್ವಜ್ಞನನ ತ್ರಿಪದಿಯಂತೆ ಶ್ರೀ ಅನಂತಾಚಾರ್ಯರು ಪ್ರಾಥಮಿಕ ಶಾಲೆಯನ್ನು ಧೈರ್ಯ ಹಾಗೂ ಇಚ್ಛಾಶಕ್ತಿಯಿಂದ 15.08.1935ರಲ್ಲಿ ಕೇವಲ ಮೂವರು ವಿದ್ಯಾರ್ಥಿಗಳೊಂದಿಗೆ ಪ್ರಾರಂಭಿಸಿಯೇ ಬಿಟ್ಟರು! ಪುಣ್ಯದ ಕಾರ್ಯಕ್ಕೆ ಹಣ ಯಾವುದೋ ಮೂಲದಿಂದ ಒದಗಿ ಬರುವಂತೆ ಅವರ ತಂದೆ ನೀಡಿದ 200 ರೂಪಾಯಿ, ವ್ಯಾಪಾರದಿಂದ ಬಂದ ಲಾಭ, ಕೂಡಿಸಿಟ್ಟ ಹಣ ಇದೇ ಶಾಲೆ ತೆರೆಯಲು ಮೂಲ ಧನವಾಯಿತು.



ಶ್ರೀ ನವರತ್ನ ರಾಮರಾವ್



ಡಾ|| ಡಿ.ವಿ. ಗುಂಡಪ್ಪ

ಶಾಲೆಯ ಕೊಠಡಿ ಉದ್ಘಾಟಿಸಲು ಆತಿಥಿಯಾಗಿ ಬಂದ ಶ್ರೀ. ನವರತ್ನ ರಾಮರಾಯರು "Mr Ananthachar seems to have found a mission in his life" ಎಂದು ಉದ್ಗರಿಸಿದರಂತೆ. ಆದು ನೂರಕ್ಕೆ ನೂರು ಸತ್ಯವಾದ ಮಾತಾಗಿ ಸಾಕಾರಗೊಂಡಿತು. ಶ್ರೀ ಅನಂತಾಚಾರ್ಯರು ಶಾಲೆ ತೆರೆದು ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು ಯಾವುದೇ ಸ್ವಾರ್ಥದಿಂದಲ್ಲ, ಬದಲಿಗೆ ಸೇವಾ ಮನೋಭಾವ, ನಿರಪೇಕ್ಷೀಯಗುಣದಿಂದ ಬಸವಣ್ಣನವರ 'ದಯವೇ ಧರ್ಮದ ಮೂಲವಯ್ಯ,ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬ ವಚನಗಳ ಒಳಾರ್ಥ ಅರಿತ ಅನಂತಾಚಾರ್ಯರು ದಯಾಪರರಾಗಿ ಸಮಾಜದ ಶ್ರಮಿಕ ವರ್ಗದ, ಅನಕ್ಷರಸ್ಥ ಜನರ ಬಾಳಿನಲ್ಲಿ ವಿದ್ಯೆಯ ದೀಪ ಬೆಳಗಿಸುವ ಸಾರ್ಥಕ ಕಾರ್ಯಗೈದರು. ಇದನ್ನು ಹತ್ತಿರದಿಂದ ಕಂಡ ಖ್ಯಾತ ಸಾಹಿತಿಗಳಾದ ಡಾ|| ಡಿ.ವಿ. ಗುಂಡಪ್ಪನವರು "ಆಚಾರ್ಯ ಪಾಠಶಾಲಾ ವಿದ್ಯಾಸಂಸ್ಥೆ ಸಮಾಜಕ್ಕೆ ಸಲ್ಲಿಸುವ ಸೇವೆ ತುಂಬ ಮೌಲಿಕವಾದದ್ದು, ಅಮೋಘವಾದದು, ಸಾಮಾಜಿಕ ಹಿತಚಿಂತನೆಯ ಗುಣಧರ್ಮವುಳ್ಳ ಶ್ರೀ ಅನಂತಾಚಾರ್ಯರು ತಮ್ಮ ಶಕ್ತಿ ಸಾಮರ್ಥ್ಯವನ್ನು ಸಂಸ್ಥೆಯ ಔನ್ನತ್ಯಕ್ಕಾಗಿ ಧಾರೆ ಎರೆದಿದ್ದಾರೆ ಎಂದು ಬಣ್ಣಿಸಿದ್ದಾರೆ.

ಬುದ್ಧಿವಂತರು ಮಾತ್ರ ಶಿಕ್ಷಣ ಪಡೆಯಲು ಯೋಗ್ಯರು. ದಡ್ಡರು, ಶಿಕ್ಷಣ ಪಡೆಯಲು ಅರ್ಹರಲ್ಲ ಎಂಬ ಮನೋಭಾವ ಬೇರೂರಿದ್ದ ಕಾಲದಲ್ಲಿ, ಅನಂತಾಚಾರ್ಯರು ಬಡತನದಲ್ಲಿರುವ ಹೆಚ್ಚೇನು ಬುದ್ಧಿವಂತರಲ್ಲದ ಎಷ್ಟೋ ಮಕ್ಕಳಿಗೆ ದಾಖಲಾತಿ ನೀಡಿ, ಆವರ ವಿದ್ಯಾರ್ಜನೆಯ ಕನಸನ್ನು ನನಸಾಗಿಸಿದ್ದಾರೆ.

ಶಿಕ್ಷಣವೇ ಪ್ರಗತಿಗೆ ಕಾರಣ' ಎಂದರಿತ ಇವರು ಹಣ ಸಂಪಾದನೆಯನ್ನೇ ಧ್ಯೇಯವಾಗಿಸಿಕೊಳ್ಳದೆ, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಎಷ್ಟೋ ಬಡಮಕ್ಕಳ ಪಾಲಿಗೆ ಶಿಕ್ಷಣ ಶಿಲ್ಪಿಯಾಗಿ ಬದುಕು ರೂಪಿಸಿದ್ದಾರೆ. ನಿಸ್ವಾರ್ಥದಿಂದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಇಂತಹ ಮಹತ್ವಾಕಾಂಕ್ಷೆಯನ್ನು, ದೂರದೃಷ್ಟಿಯನ್ನು ಆರಿಸಿಕೊಂಡು ನೀರೆರೆದು ಬೆಳೆಸಿದ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಎನ್.ಆರ್ ಕಾಲೋನಿ ಮತ್ತು ಸೋಮನಹಳ್ಳಿಯಲ್ಲಿ ಒಟ್ಟು 13 ಶಾಲಾ–ಕಾಲೇಜುಗಳು ಸಂಸ್ಥೆಯ ಮಾರ್ಗದರ್ಶನದಲ್ಲಿ ಸಾಧನೆಯ ಹಾದಿಯಲ್ಲಿ ದಾಪುಗಾಲಿರಿಸುತ್ತಿವೆ. ಇಲ್ಲಿ ಶಿಕ್ಷಣ ಪಡೆದ ಕೋಟ್ಯಂತರ ವಿದ್ಯಾರ್ಥಿಗಳು ಇಂದು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಅಪ್ರತಿಮ ಸಾಧಕರಾಗಿ ಹೊರಹೊಮ್ಮಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.




ಜಾತಿ-ಧರ್ಮ, ಮೇಲು-ಕೀಳು, ಉಳ್ಳವರು ಇಲ್ಲದವರು ಎಂಬ ಬೇಧ-ಭಾವ ತೋರದೆ ದಾನಗಳಲ್ಲೆಲ್ಲ ಶ್ರೇಷ್ಠವಾದ ವಿದ್ಯಾದಾನ ಮಾಡಿದ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮೊಳಗಿಸಿದ ಕೀರ್ತಿ ಶ್ರೀ ಅನಂತಾಚಾರ್ಯರಿಗೆ ಸಲ್ಲುತ್ತದೆ. ಪ್ರೊ॥ ಎನ್. ಅನಂತಾಚಾರ್ ಅವರ ಪ್ರಾಮಾಣಿಕ ಪ್ರಯತ್ನ ನಿರಂತರ ಕಾರ್ಯೋನ್ಮುಖತೆ, ಬದ್ಧತೆ, ಪರಿಶ್ರಮದ ಫಲವಾಗಿ ಆರಂಭಗೊಂಡ ಆಚಾರ್ಯ ಪಾಠ ಶಾಲೆ ಶಿಕ್ಷಣ ಸಂಸ್ಥೆ ಇಂದು ಕೆಜಿ ಯಿಂದ ಪಿಜಿ ವರೆಗಿನ ಸುದೀರ್ಘ ಶಿಕ್ಷಣದ ಸೌಕರ್ಯ ನೀಡುತ್ತಾ ಮುಂದಡಿಯಿಡುತ್ತಿದೆ. ಬೆಂಗಳೂರು ನಗರದ ಪ್ರತಿಷ್ಠಿತ ಬಸವನಗುಡಿ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಎ.ಪಿ.ಎಸ್ ಶಿಕ್ಷಣ ಸಂಸ್ಥೆ ನಿರಂತರವಾಗಿ 89 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆಗೈಯುತ್ತಾ ಸಾಗುತ್ತಿದೆ ಎಂದರೆ ಇದು ಸುಲಭದ ಸಾಧನೆಯಲ್ಲ. ಇದರ ಹಿಂದಿನ ಸಂಸ್ಥಾಪಕರ ಧೀ ಶಕ್ತಿ ಅಪಾರವಾದುದು.

ಈಗಿನ ವಿಶ್ವಸ್ಥ ಮಂಡಳಿಯ ಪದಾಧಿಕಾರಿಳಾಗಿ ಶ್ರೀಯುತ ಡಾ॥ ಸಿ.ಎ. ವಿಷ್ಣುಭರತ್ ಅಲಂಪಲ್ಲಿ - ಅಧ್ಯಕ್ಷರಾಗಿ, ಉಪಾಧ್ಯಕ್ಷರುಗಳಾಗಿ ಡಾ॥ ಎಸ್.ಸಿ ಶರ್ಮ ಹಾಗೂ ಶ್ರೀ ವಿಜಯ ಭಾಸ್ಕರ್, ಖಜಾಂಚಿಗಳಾಗಿ ಶ್ರೀ ಅಖಿಲೇಶ್ ಬಾಬು, ಪ್ರಧಾನ ಕಾರ್ಯದರ್ಶಿಗಳಾಗಿ ಪ್ರೊ॥ ಎ. ಪ್ರಕಾಶ್, ಜಂಟಿ ಕಾರ್ಯದರ್ಶಿಗಳಾಗಿ ಶ್ರೀಯುತ ಪಿ. ಕೃಷ್ಣಸ್ವಾಮಿ ಹಾಗೂ ಶ್ರೀ ಎ.ಆರ್. ಮಂಜುನಾಥ, ಆಜೀವ ಸದಸ್ಯ ಹಾಗೂ ಮಾರ್ಗದರ್ಶಕರಾಗಿ ಶ್ರೀ ಸಿಎ ಎ.ಪಿ ಆಚಾರ್ಯ ಅವರು ಅದೇ ದಿಶೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕಡಾಂಬಿ ಸಮೂಹ ಶಿಕ್ಷಣ ಸಂಸ್ಥೆಗಳು

CA-2, 10ನೇ ಮುಖ್ಯರಸ್ತೆ, 2ನೇ ಕ್ರಾಸ್,
ಬಸವೇಶ್ವರನಗರ 3ನೇ ಹಂತ, ಬೆಂಗಳೂರು – 560 079

ಕಳೆದ 3 ದಶಕಗಳಿಂದ ಬೆಂಗಳೂರು ಬಸವೇಶ್ವರನಗರದಲ್ಲಿ ಉತ್ತಮ ಮತ್ತು ಸಾಂಪ್ರದಾಯಿಕ ಮಾನವೀಯ ಮೌಲ್ಯಧಾರಿತ ಶಿಕ್ಷಣ ನೀಡುತ್ತಿರುವ ಕಡಾಂಬಿ ಪ್ರೌಢಶಾಲೆ ಕಲ್ಕುಂಟೆ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿದೆ. ಸಮಾಜದ ಹಿರಿಯರ ಸೇವಾ ಮನೋಭಾವದ ಕನಸು ಚಿಗುರೊಡೆದು ನನಸಾಗಿದೆ. ಇದಕ್ಕೆ ಮುಖ್ಯ ಕಾರಣರಾದವರು ಶ್ರೀ. ಕಡಾಂಬಿ ಶ್ರೀನಿವಾಸಾಚಾರ್ ಅವರು.



ಶ್ರೀ ಎಸ್. ಕಡಾಂಬಿ
ಅಧ್ಯಕ್ಷರು 1926–44

ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರು 1862ನೇ ಏಪ್ರಿಲ್ ತಿಂಗಳಿನಲ್ಲಿ ಚಿಚ್ಚುರುಕನಹಳ್ಳಿ ಶ್ರೀ ವೆಂಕಟಾಚಾರ್ಯ ಕಡಾಂಬಿ ಮತ್ತು ಶ್ರೀಮತಿ. ಲಕ್ಷ್ಮಮ್ಮನವರ ಜ್ಯೇಷ್ಠ ಪುತ್ರರಾಗಿ ಜನಿಸಿದರು. ಅವರ 10ನೇ ವಯಸ್ಸಿನಲ್ಲಿಯೇ ತಮಿಳು ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿತು ಲೋಯರ್


ಸೆಕೆಂಡರಿ ಪರೀಕ್ಷೆಯನ್ನು ಉತ್ತಮ ದರ್ಜೆಯಲ್ಲಿ ಪಡೆದರು. 13ನೇ ವಯಸ್ಸಿನಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಮೊದಲಿಗೆ ತಮ್ಮ ವೃತ್ತಿ ಜೀವನವನ್ನು ಬೆಂಗಳೂರಿನ ಮುನಿಸಿಪಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಪ್ರಾರಂಭಿಸಿ ದಕ್ಷ ಉಪಾಧ್ಯಾಯರೆಂದು ಹೆಸರುವಾಸಿಯಾದರು.

ಅವರ ದಕ್ಷತೆಯನ್ನು ಪ್ರಶಂಸಿಸಿ ಮೈಸೂರು ಸರ್ಕಾರದವರು ಒಂದು ವಿಶೇಷ ವಿದ್ಯಾರ್ಥಿ ವೇತನವನ್ನು ನೀಡಿ ಉಚ್ಚ ಶಿಕ್ಷಣಕ್ಕಾಗಿ ಬೊಂಬಾಯಿಗೆ ಕಳುಹಿಸಿದರು. ಆ ಸಮಯದಲ್ಲಿ ಎಲ್.ಎಲ್.ಬಿ ಪರೀಕ್ಷೆ ಮತ್ತು ಪೂನಾದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲ್.ಸಿ.ಇ. ಪರೀಕ್ಷೆಯನ್ನು ಒಟ್ಟಿಗೆ ಓದಿ ದ್ವಿತೀಯ ರ್‍ಯಾಂಕ್ ಪಡೆದರು. 1889ರಲ್ಲಿ ಬೊಂಬಾಯಿ ಸರ್ಕಾರದಲ್ಲಿ ಇಂಜಿನಿಯರ್ ಸೇವಾವೃತ್ತಿಯನ್ನು ಆರಂಭಿಸಿ ತಮ್ಮ ಅತ್ಯುತ್ತಮ ಸೇವೆಯನ್ನು ಸಲ್ಲಿಸಿ 1917ನೇ ಏಪ್ರಿಲ್ ತಿಂಗಳಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ನಿವೃತ್ತಿ ಪಡೆದರು. 1917ರಲ್ಲಿ ಮೈಸೂರಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರವರಿಗೆ ಮೈಸೂರು ಸಂಸ್ಥಾನದ ಚೀಫ್ ಇಂಜಿನಿಯರ್ ಹುದ್ದೆಯನ್ನು ನೀಡಿದರು. ಅವರು ಮೈಸೂರಿನ ಅಭಿವೃದ್ಧಿಗೆ 6 ವರ್ಷಗಳ ಕಾಲ ದಕ್ಷತೆಯಿಂದ ಶ್ರಮಿಸಿ ನಿವೃತ್ತಿ ಹೊಂದಿದರು.

ಇಂದಿನ ಕೃಷ್ಣರಾಜಸಾಗರ ಕಟ್ಟಡ ನಿರ್ಮಾಣ ಕಾರ್ಯದಲ್ಲಿ, ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಮೈಸೂರು ಸಂಸ್ಥಾನಗಳ ನಡುವೆ ಮಾಡಿಕೊಂಡ ಕಾವೇರಿ ನೀರಿನ ಹಂಚಿಕೆಯ ಬಗೆಗಿನ ಒಪ್ಪಂದದಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್ ಅವರು ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರ ಸೇವೆಯನ್ನು ಪ್ರಶಂಶಿಸಿ, 'ರಾಜ್ಯಸಭಾ ಭೂಷಣ' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದರು. 1924ನೇ ಆಗಸ್ಟ್‌ನಲ್ಲಿ ಇಂದೋರ್ ಸಂಸ್ಥಾನದ ಮಹಾರಾಜರ ಆಹ್ವಾನದ ಮೇರೆಗೆ ಹೋಗಿ 4 ವರ್ಷಗಳ ಕಾಲ ಚೀಫ್ ಇಂಜಿನೀಯರ್ ಆಗಿ ಅಮೋಘ ಸೇವೆಯನ್ನು ಸಲ್ಲಿಸಿದರು. ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದರು. ಪುರಾಣಗಳು, ಉಪನಿಷತ್ತುಗಳು ಮತ್ತು ಮಹಾ ಕಾವ್ಯಗಳನ್ನು ಅಧ್ಯಯನ ಮಾಡಿದ್ದರು. ಜೊತೆಗೆ ಸಂಸ್ಕೃತ ದಿವ್ಯಗ್ರಂಥಗಳ ಪುಸ್ತಕ

ಭಂಡಾರವನ್ನು ಹೊಂದಿದ್ದರು. ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರವರು ಅಖಂಡ ಭಾರತವನ್ನಲ್ಲದೆ ವಿಶ್ವಪರ್ಯಟನವನ್ನು ಮಾಡಿ ಅಪಾರ ಅನುಭವವನ್ನು ಪಡೆದಿದ್ದರು. ನಾನಾ ಧರ್ಮಸಂಸ್ಥೆಗಳಿಗೂ, ದೇವಸ್ಥಾನಗಳಿಗೂ ಸಾರ್ವಜನಿಕ ಸಂಸ್ಥೆಗಳಿಗೂ ಉದಾರವಾಗಿ ಧನಸಹಾಯ ಮಾಡಿದ್ದಾರೆ. ಕಲ್ಕುಂಟೆ ಅಗ್ರಹಾರದಲ್ಲಿ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಧರ್ಮ ಛತ್ರವನ್ನು ಕಟ್ಟಿಸಿರುತ್ತಾರೆ.


ಸದಾಕಾಲ ತನ್ನ ಗ್ರಾಮ ತನ್ನ ಜನಾಂಗ ದೇವತಾಕಾರ್ಯ ಎಂಬ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ತಮ್ಮ ತನು-ಮನ-ಧನವನ್ನು ತಮ್ಮ ಜನಾಂಗದವರ ಸರ್ವತೋಮುಖ ಏಳಿಗೆಗಾಗಿ ಮುಡುಪಾಗಿಟ್ಟರು. ಶ್ರೀಯುತ. ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರು ಸ್ನೇಹಿತರುಗಳಾದ ಬಹದ್ದೂರ್ ಕೆ.ಆರ್. ಶೇಷಾಚಾರ್, ಡಾ.ಕೆ. ಶ್ರೀನಿವಾಸಾಚಾರ್, ಕೆ. ನಾರಾಯಣ ಐಯ್ಯಂಗಾರ್ (Executive Engineer), ಕೆ. ನಾರಾಯಣ ಐಯ್ಯಂಗಾರ್ (Head Master), ಡಾ. ಕೆ. ಕೃಷ್ಣ ಅಯ್ಯಂಗಾರ್, ಅಮಲ್ದಾರ್ ಕೆ. ವೇದಾಂತ ಅಯ್ಯಂಗಾರ್ ಮುಂತಾದವರೊಡನೆ ಕೂಡಿ ಅಧ್ಯಕ್ಷತೆಯ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ತಮ್ಮ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ ನೀಡಲೆಂದೇ 'ಕಲ್ಕುಂಟೆ ಶಿಕ್ಷಣ ಸಭಾ'ವನ್ನು 1926 ರಲ್ಲಿ ಪ್ರಾರಂಭಿಸಿದರು.



ಈ ಸಭೆಯ ಆರ್ಥಿಕ ಸಹಾಯ ಪಡೆದು ವಿದ್ಯಾವಂತರಾದ ಹಲವಾರು ಮಂದಿ ಇಂದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರ ಆಶಯದಿಂದ 1939 ರಲ್ಲಿ ವಿದ್ಯಾರ್ಥಿವೇತನಗಳ ವಿತರಣೆ ಜೊತೆಗೆ ತಮ್ಮದೇ ಆದ ಶಾಲೆಯನ್ನು ಆರಂಭಿಸಲೆಂದೇ ಕಲ್ಕುಂಟೆ ಶಿಕ್ಷಣ ಸಭಾವನ್ನು ಕಲ್ಕುಂಟೆ ಶಿಕ್ಷಣ ಟ್ರಸ್ಟ್ ಆಗಿ ಪರಿವರ್ತಿಸಿ ನೋಂದಣಿ ಮಾಡಿಸಲಾಯಿತು.



ಶ್ರೀ ಎ. ರಾಮಾಚಾರ್



ಶ್ರೀ ಕೆ.ಎನ್. ಶೇಷಾದ್ರಿ

ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ಆರಂಭಿಸಲಾಯಿತು. ಇಲಾಖೆಯ ಮಾನ್ಯತೆ ಪಡೆಯುವಲ್ಲಿ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ. ಸುಂದರ್‌ರಾಜ್ ಅವರ ಶ್ರಮ ಮರೆಯಲಾಗುವುದಿಲ್ಲ. ಶಾಲೆಯ ಸುತ್ತಲಿನ ಮನೆ ಮನೆಗೆ ಹೋಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ವಿನಂತಿಸಿಕೊಳ್ಳಲಾಯಿತು. ವರ್ಷಗಳು ಕಳೆದಂತೆ ಕನ್ನಡ ಮಾಧ್ಯಮಕ್ಕೆ ಪ್ರವೇಶಗಳೇ ಇಲ್ಲದಾದಾಗ ಆಂಗ್ಲ ಮಾಧ್ಯಮ ತರಗತಿಗಳನ್ನು ಮಾತ್ರ ಉಳಿಸಿಕೊಳ್ಳಲಾಯಿತು. ಸರ್ಕಾರಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿದ್ದ ಶ್ರೀ ಎ. ರಾಮಾಚಾರ್ ಅವರ ಪ್ರಯತ್ನದಿಂದ ಈ ಪ್ರೌಢಶಾಲೆ ಪ್ರಾರಂಭವಾದುದು ಮಾತ್ರವಲ್ಲದೆ ಅವರೇ ಪ್ರಥಮ ಮುಖ್ಯೋಪಾಧ್ಯಾಯರಾಗಿ 25 ವರ್ಷ ಸೇವೆ ಸಲ್ಲಿಸಿರುತ್ತಾರೆ.

ಕೇಂದ್ರೀಯ ಪಠ್ಯ ವಿಷಯಗಳ ಬೋಧನಾ ಶಾಲೆಗೆ ವಿದ್ಯಾರ್ಥಿಗಳು ಮತ್ತು ಪೋಷಕರ ಬೇಡಿಕೆ ಬರುತ್ತಿದ್ದುದರಿಂದ ಶ್ರೀ ರಾಮಾಚಾರರು ಕೆ.ಎನ್. ಶೇಷಾದ್ರಿ ಅವರ ಜೊತೆಗೂಡಿ ಸತತ ಪ್ರಯತ್ನ ಪಟ್ಟ ಫಲ

ಐ.ಸಿ.ಎಸ್.ಇ ಕೌನ್ಸಿಲ್‌ನಿಂದ ಶಾಲೆ ಪ್ರಾರಂಭಕ್ಕೆ ಮಾನ್ಯತೆ ದೊರೆಯಿತು. ಹೀಗೆ ಪ್ರಾರಂಭವಾದ ಶಾಲೆಗೆ ಶ್ರೀಯುತ ಕೆ.ಎನ್. ಶೇಷಾದ್ರಿ ಅವರೇ ಪ್ರಾಚಾರ್ಯರಾಗಿ ಶಾಲಾಭಿವೃದ್ಧಿಗೆ ನಾಂದಿ ಹಾಡಿದ್ದಾರೆ. ಸುತ್ತಮುತ್ತಲ ಪರಿಸರದಲ್ಲಿ ಉತ್ತಮ ಶಾಲೆಯಾಗಿ ಮುನ್ನಡೆದು ಪ್ರತಿವರ್ಷ 100% ಫಲಿತಾಂಶವನ್ನು ನೀಡುತ್ತಾ ಬಂದಿದೆ. ದಿ. ಡಾ. ಕೆ ಪ್ರೊ. ರಂಗಾಚಾರ್, ದಿ. ಶ್ರೀ ಕೆ. ನಾರಾಯಣ ಐಯ್ಯಂಗಾರ್, ಕೃಷ್ಣಮೂರ್ತಿ, ದಿ. ಶ್ರೀ ಕೆ.ಎನ್. ಶ್ರೀನಿವಾಸ ಮೂರ್ತಿ, ದಿ. ಶ್ರೀ ಕೆ.ಎಸ್. ಶ್ರೀನಿವಾಸ ಮೂರ್ತಿ, ದಿ. ಶ್ರೀ ಕೆ. ಎನ್. ಶೇಷಾದ್ರಿ, ಶ್ರೀ ಎ.ಆರ್. ರಾಮಾಚಾರ್ ಮುಂತಾದ ಹಿರಿಯರ ಶ್ರಮದಿಂದ ಬೆಳೆದ ಸಂಸ್ಥೆ ಐವತ್ತು ವಸಂತಗಳನ್ನು ಪೂರೈಸಿದುದರ ನೆನಪಿಗಾಗಿ ಸುವರ್ಣ ಮಹೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಿಕೊಂಡಿದೆ. ಸಾಧನೆಗಳ ಮಹಾಪರ್ವವನ್ನು ಬಿಂಬಿಸುವ ಸ್ಮರಣ ಸಂಚಿಕೆಯನ್ನೂ ಹೊರ ತಂದಿದೆ.

ಶಾಲಾ ಹಂತದಲ್ಲಿ ಉತ್ತಮ ಫಲಿತಾಂಶವನ್ನು ನೀಡುತ್ತಾ ಬಂದಿದ್ದ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೇರೆಡೆ ಹೋಗಬೇಕಾಗಿತ್ತು. ಇಲ್ಲಿ ಉತ್ತೀರ್ಣರಾದ ಮಕ್ಕಳು ಇಲ್ಲಿಯೇ ಪದವಿ ಪೂರ್ವ ವಿದ್ಯಾಭ್ಯಾಸ ಮುಂದುವರಿಸಲು ಶ್ರೀಯುತ ಸಿ.ಆರ್. ಶ್ರೀನಿವಾಸನ್ ಅಧ್ಯಕ್ಷರಾಗಿದ್ದಾಗ 2007ರಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲಾಯಿತು. ಇಲಾಖಾ ಮಾನ್ಯತೆ ಪಡೆಯುವಲ್ಲಿ ಡಾ. ಕೆ. ಶೇಷಮೂರ್ತಿ, ಶ್ರೀ ಸಿ.ಕೆ. ಕೇಶವನ್ ಹಾಗೂ ಶ್ರೀಯುತ ಸಿ.ವಿ. ಸುಂದರ್ ರಾಜ್ ಅವರ ಶ್ರಮ ಮರೆಯುವಂತದ್ದಲ್ಲ.


ಶ್ರೀ ಸಿ.ಆರ್.ಶ್ರೀನಿವಾಸ್

ಕೇವಲ 10 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಕಾಲೇಜಿನಲ್ಲಿ ಇಂದು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದಿರುವ ಕಾಲೇಜು ಐದನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ "ಪ್ರಗತಿ ಪಥ" ಐದು ಹೆಜ್ಜೆಗಳು ಎಂಬ ಕಾರ್ಯಕ್ರಮವನ್ನು 07 ಜುಲೈ 2012 ರಂದು ಆಚರಿಸಿಕೊಂಡಿತು. ಕಾರ್ಯಕ್ರಮದ

ಉದ್ಘಾಟನೆಯನ್ನು ನ್ಯಾಯಮೂರ್ತಿಗಳಾದ ಡಾ. ಎಂ. ರಾಮ ಜೋಯಿಸ್ ಅವರು ನೆರವೇರಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯನ್ನು ಕಲ್ಕುಂಟೆ ಶಿಕ್ಷಣ ಸಂಸ್ಥೆ (KET)ಯ ಅಧ್ಯಕ್ಷರಾದ ಶ್ರೀ ಸಿ.ಆರ್. ಶ್ರೀನಿವಾಸನ್ ರವರು ನೆರವೇರಿಸಿದರು.

ಶ್ರೀ ಕಡಾಂಬಿ ಶ್ರೀನಿವಾಸಾಚಾರ್ಯರ ಆದರ್ಶಗಳು, ದಾರ್ಶನಿಕ ಮನೋಭಾವದಿಂದ ಆರಂಭವಾದ ಕಲ್ಕುಂಟೆ ಶಿಕ್ಷಣ ಸಂಸ್ಥೆ ತನ್ನ ಕಾರ್ಯಕ್ಷೇತ್ರವನ್ನು ಮಲ್ಲೇಶ್ವರದ ಶ್ರೀರಾಮಪುರಕ್ಕೂ ವಿಸ್ತರಿಸಿ 'ಶಿಶುಚೈತನ್ಯ' ವನ್ನು ಆರಂಭಿಸಿತು. ಕಡಾಂಬಿ ಶಿಕ್ಷಣ ಸಂಸ್ಥೆಗಳ ಸಮೂಹ ತನ್ನ ರಜತ ಮಹೋತ್ಸವವನ್ನು 2011ರ ಡಿಸೆಂಬರ್ ತಿಂಗಳಿನಲ್ಲಿಅತ್ಯಂತ ವಿಜೃಂಭಣೆಯಿಂದ ಆಚರಿಸಿಕೊಂಡಿತು. ಇದೇ ರೀತಿ ಕಲ್ಕುಂಟೆ ಶಿಕ್ಷಣ ಸಂಸ್ಥೆ ವಜ್ರ ಮಹೋತ್ಸವವನ್ನು 2014ನೇ ಡಿಸೆಂಬರ್ 7 ರಂದು ಆಚರಿಸಿಕೊಂಡಿದೆ.



ಪ್ರಸ್ತುತ ಕಲ್ಕುಂಟೆ ಶಿಕ್ಷಣ ಸಂಸ್ಥೆಆಡಳಿತ ಮಂಡಳಿಯಲ್ಲಿ ಡಾ.ಕೆ. ಶೇಷಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಡಾ. (ಶ್ರೀಮತಿ) ಶ್ರೀ ಶ್ರೀವತ್ಸ ಹಾಗೂ ಶ್ರೀ ಎ.ಆರ್. ಅನಂತನ್ ಉಪಾಧ್ಯಕ್ಷರಾಗಿ, ಶ್ರೀ ಸಿ.ಕೆ. ಕೇಶವನ್ ಕಾರ್ಯದರ್ಶಿಗಳಾಗಿ, ಶ್ರೀ. ಕೃಷ್ಣಪ್ರಸಾದ್ ಕೆ.ಆರ್ ಜಂಟಿ ಕಾರ್ಯದರ್ಶಿಗಳಾಗಿ, ಶ್ರೀ. ಸಿ.ವಿ. ಸುಂದರ್ ರಾಜ್ ಖಜಾಂಚಿಗಳಾಗಿ, ಶ್ರೀಯುತರಾದ ಡಾ. (ಶ್ರೀ) ಶ್ರೀನಿಧಿ.ಎಸ್, ಶ್ರೀ ಕೆ.ಜಿ. ರಂಗನಾಥ್, ಡಾ. ಶ್ರೀ ರಾಮಪ್ರಸಾದ್, ಶ್ರೀ ಸಾಯಿರಾಂ.ಆರ್ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

RASHTREEYA SIKSHANA SAMITHI TRUST ®

RV


INSTITUTIONS

ರಾಷ್ಟ್ರೀಯ ವಿದ್ಯಾಲಯ ಶಿಕ್ಷಣ ಸಂಸ್ಥೆಗಳು

15, ಅಶೋಕ ಪಿಲ್ಲರ್ ರಸ್ತೆ, 2ನೇ ಬ್ಲಾಕ್,

ಜಯನಗರ, ಬೆಂಗಳೂರು – 560011

ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾದ ಹಿಂದಿ ಪ್ರಚಾರ ಕಾರ್ಯವನ್ನು ಬಹು ಯಶಸ್ವಿಯಾಗಿ ನಡೆಸಿ, ರಾಷ್ಟ್ರದಲ್ಲಿಯೇ ಒಂದು ಶಿಕ್ಷಣ ಪ್ರತಿಷ್ಠಿತ ಸಂಸ್ಥೆಯಾದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದವರು ಶ್ರೀ ಶಿವಾನಂದ ಶರ್ಮ ಅವರು. ಆರ್.ವಿ ರಸ್ತೆಯ ಅರಸೋಜಿರಾವ್ ಛತ್ರದಲ್ಲಿ 1940 ರಲ್ಲಿ ಕೇವಲ ಆರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಶಾಲೆ ಬೃಹದಾಕಾರವಾಗಿ ಬೆಳೆದು ನರ್ಸರಿಯಿಂದ ಇಂಜಿನಿಯರಿಂಗ್ ವರೆಗೆ. ಸಾವಿರಾರು ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಶರ್ಮಾಜಿ ಅವರ ಕಾರ್ಯವೈಖರಿ, ದೂರದೃಷ್ಟಿ, ನಿಸ್ವಾರ್ಥ ಸೇವೆ, ಸಾಧನಾ ಛಲದ ಫಲವಾಗಿ ಬೆಳೆದ ರಾಷ್ಟ್ರೀಯ



ಶ್ರೀ ಎಂ.ಸಿ. ಶಿವಾನಂದ ಶರ್ಮ
ಸ್ಥಾಪಕರು

ವಿದ್ಯಾಲಯ ಶಿಕ್ಷಣ ಸಂಸ್ಥೆ ಇಂದು ದೇಶದಲ್ಲಿಯೇ ಒಂದು ಮಾದರಿ ಶಿಕ್ಷಣ ಸಂಸ್ಥೆಯಾಗಿದೆ. ಶ್ರೀಯುತ ಎಂ.ಸಿ. ಶಿವಾನಂದ ಶರ್ಮರು 22.1.1911 ರಂದು ತಿರುಮಕೂಡುಲ ನರಸೀಪುರ ತಾಲ್ಲೂಕಿನ ಮಾಡ್ರಹಳ್ಳಿ ಗ್ರಾಮದಲ್ಲಿ ಜನಿಸಿದರು. ಶ್ರೀ ಕಪ್ಪಣ್ಣ ಮತ್ತು ಕಾಳಮ್ಮ ಎಂಬ ವೀರಶೈವ ದಂಪತಿಗಳ ಎರಡನೇ ಪುತ್ರ. ಇವರ ಜನ್ಮ ನಾಮ ಮಲ್ಲೇದೇವರು. ಗ್ರಾಮಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ತಾಯಿಯವರ ಸಹಾಯದಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಸಿದ್ದಗಂಗಾ ಮಠ ತಲುಪಿದರು. ಮಠದಲ್ಲಿನ ಶಿಸ್ತುಬದ್ಧ ಜೀವನಕ್ಕೆ ಒಗ್ಗಿಕೊಂಡು ದೇಶೀಯ ಶಿಕ್ಷಣ, ಸಂಸ್ಕೃತಿಯ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡರು. ಮಠದ ವ್ಯಾಪ್ತಿಯಲ್ಲಿ ಅಧ್ಯಯನ ಮಾಡಿದ ನಂತರ ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ. ಹೆಚ್ಚಿನ ಅಧ್ಯಯನಕ್ಕಾಗಿ ಬನಾರಸ್ ತಲುಪಿ ಸಂಸ್ಕೃತ ಪಂಡಿತರಾದರು. ಉತ್ತರಭಾರತದ ವಿದ್ಯಾಮಾನಗಳೂ ತಿಳಿಯುವುದರ ಜೊತೆಗೆ ಹಿಂದಿ ಸಾಹಿತ್ಯ ಅಧ್ಯಯನ ಮಾಡಿ "ಸಾಹಿತ್ಯ ವಿಶಾರದ"ರಾದರು.

ಉತ್ತರಭಾರತದಿಂದ ಹಿಂತಿರುಗಿದ ಮೇಲೆ ಸಿದ್ದಗಂಗಾ ಮಠದ ಬಳಿ ಇರುವ ಬೆಟ್ಟದ ಮೇಲಿನ ದೇವಾಲಯದ ಅರ್ಚಕರಾದರು. ಶ್ರೀ ಕಪ್ಪಣ್ಣನವರು ಕುಟುಂಬ ಸಮೇತ ಸಿದ್ದಗಂಗಾ ಕ್ಷೇತ್ರಕ್ಕೆ ಯಾತ್ರೆಗೆಂದು ಬಂದಾಗ ಮಗನನ್ನು ಮನೆಗೆ ಕರೆದು ತಂದರು. ಸನ್ಯಾಸಿಯಾಗುತ್ತೇನೆ ಎಂಬ ಹಠ ಹಿಡಿದಿದ್ದ ಮಗನನ್ನು ಬಲವಂತವಾಗಿ ಮದುವೆಗೆ ಒಪ್ಪಿಸಿ ತಮ್ಮೂರಿನ ಪಕ್ಕದ ಸುಜ್ಜಲೂರು ಗ್ರಾಮದ ಪಾರ್ವತಿ ಎಂಬ ಹದಿಮೂರು ವಯಸ್ಸಿನ ಹೆಣ್ಣುಮಗಳ ಜೊತೆ ಮದುವೆ ಮಾಡಿದರು. ಇದರಿಂದ ಕೋಪಗೊಂಡು ಸ್ವಲ್ಪ ಸಮಯ ಊರಲ್ಲಿದ್ದು ನಂತರ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದರು. ಹಿಂದಿ ಹಾಗೂ ಸಂಸ್ಕೃತದಲ್ಲಿ ತಾವು ಪಡೆದ ಜ್ಞಾನವನ್ನು ಇತರರಲ್ಲಿ ಹಂಚಿಕೊಳ್ಳಲು ತವಕಿಸುತ್ತಿದ್ದರು. ಸದಾಕಾಲ ಶಾಲೆ ಎಂದು ಪರಿತಪಿಸುತ್ತಿದ್ದರು. ತಾವು ಬಯಸಿದಂತೆ ಸಂಸ್ಕೃತ ಪಂಡಿತ ಕೆಲಸ ಸಿಗದಿದ್ದಾಗ, ನಿರಾಶರಾಗದೆ ಮನೆ ಮನೆಗಳಲ್ಲಿ ಸಂಸ್ಕೃತ ಪಾಠವನ್ನು ಹೇಳಿಕೊಡುತ್ತಾ, ಅದರಿಂದ ಬಂದ ಹಣದಲ್ಲಿ ಜೀವನ ಸಾಗಿಸುತ್ತಿದ್ದರು. ದೊಡ್ಡ ಸಂಸ್ಥೆಯನ್ನು ಪ್ರಾರಂಭಿಸಿಬೇಕೆಂಬ ಛಲ ಬರುಬರುತ್ತಾ ಅವರಲ್ಲಿ ಗಟ್ಟಿಯಾಗುತ್ತಿತ್ತು.

1940 ವಿಕ್ರಮನಾಮ ಸಂವತ್ಸರದ ವಿಜಯದಶಮಿಯಂದು ವಿಶ್ವೇಶ್ವರಪುರಂನಲ್ಲಿ ಪ್ರಾರಂಭಿಸಿ ನಂತರ ಅರಸೋಜಿರಾವ್ ಛತ್ರದಲ್ಲಿ ಒಂದು

ಕೋಣೆಯನ್ನು ಬಾಡಿಗೆಗೆ ಪಡೆದು ಆರು ವಿದ್ಯಾರ್ಥಿಗಳಿಗೆ ಸ್ವತಃ ಶರ್ಮರೇ ಶಿಕ್ಷಕರಾದರು. ಪ್ರಭಾವಿ ಜನರ ಬೆಂಬಲ ಇಲ್ಲ, ಕೈಯ್ಯಲ್ಲಿ ಹಣವಿಲ್ಲ, ಆದರೂ ಉತ್ಸಾಹ ದೃಢತೆಗೆ ಎಳ್ಳಷ್ಟೂ ಕೊರತೆ ಇರಲಿಲ್ಲ. ಶರ್ಮರ ಧ್ಯೇಯೋದ್ದೇಶಗಳನ್ನು ಸಮರ್ಪಣಾ ಮನೋಭಾವವನ್ನು, ಕಾರ್ಯವೈಖರಿಯನ್ನು ಮೆಚ್ಚಿಕೊಂಡು ಪ್ರಜಾಮತದ ನಿರಂಜನರು, ವಿಶ್ವ ಕರ್ನಾಟಕದ ತಿರುಮಲೆ ತಾತಾಚಾರ್ಯಶರ್ಮರು ತಮ್ಮ ಪತ್ರಿಕೆಗಳಲ್ಲಿ ಪ್ರೋತ್ಸಾಹದಾಯಕ ಲೇಖನಗಳನ್ನು ಬರೆದು ಹುರಿದುಂಬಿಸಿದರು.

ಶರ್ಮರ ಸಮಾಜಿಕ ಕಳಕಳಿಯನ್ನರಿತಿದ್ಧ ದೀವಾನ್ ಮಿರ್ಜಾ ಇಸ್ಮಾಯಿಲ್ ರವರು ಯಾವುದೇ ಶಿಫಾರಸ್ಸುಗಳಿಲ್ಲದೇ ಲಾಲ್ ಬಾಗ್ ಪಶ್ಚಿಮ ಭಾಗದಲ್ಲಿ ಹಳ್ಳಕೊಳ್ಳದಿಂದ ಆವೃತ್ತವಾಗಿದ್ದ ತ್ರಿಕೋನಾಕೃತಿಯ ನಿವೇಶನವನ್ನು ಅವರ ಮನವಿಯಂತೆ ವಿದ್ಯಾಲಯ ನಿರ್ಮಾಣಕ್ಕಾಗಿ ನೀಡಿದರು. ಇದಕ್ಕೆ ಮಾವಳ್ಳಿ ಜನರ ವಿರೋಧವಿದ್ದರೂ ಅಲ್ಲಿಯ ಮನೆಮನೆಗೆ ಹೋಗಿ ವಿದ್ಯೆಯ ಅಪರಿಮಿತ ಶಕ್ತಿಯ ಬಗ್ಗೆ ಅರಿವು ಮೂಡಿಸಿ ನಿವಾಸಿಗಳೆಲ್ಲರನ್ನೂ ಒಪ್ಪಿಸಿದರಲ್ಲದೇ, ದಾನಿಗಳ ಸಹಾಯ ಪಡೆಯಲು ರಾಜಾ ಸೈಕಲ್ ಮಾರ್ಟ್ ನವರು ನೀಡಿದ ಸೈಕಲ್ ಹತ್ತಿ ನಗರದ ಶ್ರೀಮಂತರು, ಉದಾರಿಗಳ ಮನೆ ಮನೆಗಳ ಬಾಗಿಲನ್ನು ತಟ್ಟಿದರು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಪಾಲ್ಗೊಂಡು ಜೈಲು ಸೇರಿದ್ದಾಗ ಪರಿಚಯವಾಗಿದ್ದ ಶ್ರೀ. ಕೆಂಗಲ್ ಹನುಮಂತಯ್ಯನವರು ಶಾಲೆ ಪ್ರಾರಂಭಿಸಲು ಬೇಕಾದ ಎಲ್ಲಾ ರೀತಿಯ ಅನುಮತಿ ಪಡೆಯಲು ಸಹಾಯ ಮಾಡಿದರು. ಮನೆಮನೆಗೆ ಭೇಟಿ ನೀಡಿ ಪೋಷಕರು ಹತ್ತಿದರಲ್ಲಿರುವ ತಮ್ಮ ಶಾಲೆಗೆ ಮಕ್ಕಳನ್ನು ಕಳುಹಿಸುವಂತೆ ಮನವಿ ಮಾಡಿದರು. ಇವರ ಕಳಕಳಿಯನ್ನು ಅರ್ಥ ಮಾಡಿಕೊಂಡ ಪೋಷಕರ ಸಹಾಯ ಸಹಾನುಭೂತಿ ಶಾಲೆಗೆ ದೊರೆಯಿತು. ಅಂತೂ ಶರ್ಮರ ಅವಿರತ ಶ್ರಮದಿಂದ ಲಾಲ್ ಬಾಗ್ ಪಶ್ಚಿಮ ದ್ವಾರದಲ್ಲಿ ಹಳ್ಳಕೊಳ್ಳದಿಂದ ತುಂಬಿದ್ಧ ತ್ರಿಕೋನಾಕಾರದ ನಿವೇಶನದಲ್ಲಿ ಬೃಹತ್ತಾದ ಕಟ್ಟಡ ನಿರ್ಮಾಣವಾಗಿ ರಾಷ್ಟ್ರೀಯ



ಶ್ರೀ ಕೆ.ಸಿ. ರಾಮಯ್ಯ

ವಿದ್ಯಾಲಯ ರೂಪುಗೊಂಡಿತು. ಹೀಗೆ ನಿರ್ಮಾಣವಾದ ಕಟ್ಟಡದಲ್ಲಿ 1940 ರಲ್ಲಿ ಪ್ರಾಥಮಿಕ, 1941 ಮಾಧ್ಯಮಿಕ ತರಗತಿಗಳು, 1948 ರಲ್ಲಿ ಬಾಲಕರ ಪ್ರೌಢಶಾಲೆ, 1950 ರಲ್ಲಿ ಶಿಶುವಿಹಾರ ತರಗತಿಗಳು ಪ್ರಾರಂಭವಾದವು. ಸಂಸ್ಥೆ ಹೆಮ್ಮರವಾಗಿ ಬೆಳೆಯುತ್ತಿದ್ದಂತೆ ಆಡಳಿತ ಮಂಡಳಿಯ ಸಮಿತಿಯನ್ನರಿತು ಅದನ್ನು ರಚಿಸಲು ಮುಂದಾದರು. ಆರ್.ವಿ ಶಿಕ್ಷಣ ಸಂಸ್ಥೆ ಶಾಶ್ವತವಾಗಿ ಬೆಳೆಸಿಕೊಂಡು ಬರಲು ಒಳ್ಳೆ ನಿಸ್ವಾರ್ಥಿ ವ್ಯಕ್ತಿಗಳಿಗೆ ತರಬೇತಿ ಕೊಟ್ಟರು. ಭದ್ರವಾದ ತಳಹದಿ ಹಾಕಿಕೊಟ್ಟರು. ಹೀಗಾಗಿ ಹಲವಾರು ಗಣ್ಯವ್ಯಕ್ತಿಗಳು ಸೇರಿ ರಾಷ್ಟ್ರೀಯ ಸಮಿತಿ ಅಸ್ತಿತ್ವಕ್ಕೆ ಬಂದು ರಾಷ್ಟ್ರೀಯ ವಿದ್ಯಾಲಯಗಳನ್ನು ನಡೆಸುವ ಜವಾಬ್ದಾರಿ ಹೊತ್ತಿತು. ಶ್ರೀ ಕೆ.ಸಿ. ರಾಮಯ್ಯನವರು ರಾಷ್ಟ್ರಿಯ ಶಿಕ್ಷಣ ಸಮಿತಿಯ ಮೊದಲನೆಯ ಅಧ್ಯಕ್ಷರು.

1947 ರಲ್ಲಿ ಬಸವನಗುಡಿಯ ಲಾಲ್ ಬಾಗ್ ಸಮೀಪದ ರಾಷ್ಟ್ರೀಯ ವಿದ್ಯಾಲಯ ಕಟ್ಟಡ ನಿರ್ಮಾಣ. 1954 ರಲ್ಲಿ ಶಿಕ್ಷಕರನ್ನೇ ತಯಾರು ಮಾಡುವ ಆರ್.ವಿ. ಟೀಚರ್ಸ್ ಟ್ರೈನಿಂಗ್ ಕಾಲೇಜು ಸ್ಥಾಪನೆ ಶರ್ಮಾಜೀಯವರ ಮತ್ತೊಂದು ಸಾಧನೆ. ಈ ಕಾಲೇಜು ನಮ್ಮ ರಾಜ್ಯದಲ್ಲಿಯೇ ವಿಶೇಷ ಸ್ಥಾನ ಪಡೆದಿದೆ. ಇದೇ ಕಟ್ಟಡದಲ್ಲಿ 1962 ರಲ್ಲಿ ಬಾಲಕಿಯರ ಪ್ರೌಢಶಾಲೆ ಪ್ರಾರಂಭಿಸಿದರು. ಶರ್ಮರು ಮಹತ್ವಾಕಾಂಕ್ಷಿಗಳಾಗಿ, ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವ ಇಚ್ಛೆ ಪಡೆದಿದ್ದರು. ಅವರ ಆಕಾಂಕ್ಷೆಯ ಇಂಗಿತವನ್ನು ಅರಿತ ವಿಶ್ವೇಶ್ವರಪುರದ ವೈಶ್ಯ ಮಹಿಳೆಯೊಬ್ಬರು ಉದಾರವಾಗಿ ಒಂದು ಲಕ್ಷ ನೀಡಿ ಒಳ್ಳೆಯದಾಗಲೆಂದು ಹರಸಿದರು.

ತಾಂತ್ರಿಕ ಶಿಕ್ಷಣದ ಮಹತ್ವವನ್ನರಿತು 1963 ರಲ್ಲಿ ಆರ್.ವಿ. ಇಂಜಿನಿಯರಿಂಗ್ ಕಾಲೇಜು ಪ್ರಾರಂಭವಾಯಿತು. ತಾತ್ಕಾಲಿಕವಾಗಿ ಜಯನಗರದ ರಾಷ್ಟ್ರೀಯ ವಿದ್ಯಾಲಯದ ಟೀಚರ್ಸ್ ಕಾಲೇಜು ಆವರಣದಲ್ಲೇ ತರಗತಿಗಳು ನಡೆಯುವಂತಾಯಿತು. ಸ್ವಂತ ಕಟ್ಟಡ ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಕೆಂಗೇರಿ ಬಳಿ 52 ಎಕರೆ ಜಮೀನು ಖರೀದಿಸಿ ವಿಶಾಲ ನಿವೇಶನದಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಸುಸಜ್ಜಿತ ಕ್ಯಾಂಪಸ್ ನಿರ್ಮಾಣಕ್ಕೆ 90 ಲಕ್ಷ ರೂ. ಗಳ ಬೃಹತ್ ಯೋಜನೆ ಕೈಗೊಂಡರು.

ಧರ್ಮಪ್ರಕಾಶ ಶ್ರೀ ಕೆ.ಸಿ.ರಾಮಯ್ಯ, ಶ್ರೀ ಕಸ್ತೂರಿ ರಂಗಶೆಟ್ಟರು, ಶ್ರೀ ಯಾದಾಳು ಗಂಗಾಧರ ಶೆಟ್ಟಿ, ಶ್ರೀ ಕೆ.ಎಂ. ನಂಜಪ್ಪ, ಶ್ರೀ ಎಂ. ಚಾಮರಾಜು




ಶ್ರೀ ಕಸ್ತೂರಿ ರಂಗ ಶೆಟ್ಟರು

ಮೊದಲಾದ ದಾನಿಗಳ ಉದಾರವಾದ ದೇಣಿಗೆಯ ಫಲ ಸುಂದರ ಕ್ಯಾಂಪಸ್ ನಿರ್ಮಾಣಕ್ಕೆ ಭವ್ಯ ಬುನಾದಿ ಹಾಕಿದರು. ವರ್ಕ್ ಶಾಪ್ ಮತ್ತು ಪ್ರಯೋಗಾಲಯಗಳನ್ನು 1966, ಆಗಸ್ಟ್ 28 ರಂದು ಆಗಿನ ರಾಜ್ಯಪಾಲರಾದ ಶ್ರೀ ವಿ. ವಿ. ಗಿರಿಯವರು ಉದ್ಘಾಟಿಸಿದರು.


ಹೆಣ್ಣುಮಕ್ಕಳ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತಿದ್ಧ ಶ್ರೀ ಶರ್ಮ ಅವರು 1971 ರಲ್ಲಿಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜನ್ನು ಜಯನಗರದ ಮೂರನೇ ಬ್ಲಾಕಿನಲ್ಲಿ ಪ್ರಾರಂಭಿಸಿದರು. ಚಿ. ನಾ ಮಂಗಳ ಅವರು ಆ ಸಂಸ್ಥೆಯನ್ನು ಮಾದರಿ ಹೆಣ್ಣುಮಕ್ಕಳ ಕಾಲೇಜಾಗಿ ಬೆಳೆಸಿದ್ದಾರೆ. ಪ್ರೊ॥ ಚಿ. ನಾ ಮಂಗಳ ಅವರ ನೇತೃತ್ವದಲ್ಲಿ ಮಹಿಳಾ ಅಧ್ಯಯನ ಕೋರ್ಸ್ ತೆರೆದುದೇ ಅಲ್ಲದೇ ಶಾಶ್ವತಿ ಎಂಬ ಮಹಿಳಾ ವಸ್ತು ಸಂಗ್ರಹಾಲಯ ಅಸ್ತಿತ್ವಕ್ಕೆ ಬಂದಿದೆ. ಇಷ್ಟೆಲ್ಲಾ ಸಡಗರ, ಸಂಭ್ರಮ, ದಾನಿಗಳ ನೆರವು, ಸಾರ್ವಜನಿಕರ ಪ್ರೋತ್ಸಾಹದಿಂದ ಬೆಂಗಳೂರಿನಲ್ಲಿ ರಾಷ್ಟ್ರೀಯ ವಿದ್ಯಾಲಯವನ್ನು ಬೆಳೆಸುತ್ತಿದ್ದರೂ, ಶರ್ಮರು ತಮ್ಮ ಹುಟ್ಟೂರನ್ನು ಮರೆಯಲಿಲ್ಲ. ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯೋದಯ ಪ್ರೌಢಶಾಲೆ ತೆರೆದರು. ಸೇವೆ ಕಾರ್ಯ ವ್ಯಾಪ್ತಿ ವಿಸ್ತಾರವಾಗಿ ಉಪಾಧ್ಯಾಯರ ವೇತನ, ಶಾಲಾ ಕಾಲೇಜುಗಳ ನಿರ್ವಹಣೆಯ ಜವಾಬ್ದಾರಿ ಹೆಚ್ಚಾಯಿತು. ವೇತನ ಕೊಡಲು ಹಣವಿಲ್ಲದಾಗ ಒಡವೆಗಳನ್ನು ಅಡವಿಟ್ಟು ಬಂದ ಹಣವನ್ನು ವಿನಿಯೋಗಿಸಿದ್ದಾರೆ. ದಾನಿಗಳಿಂದ ಹಣ ಸಂಗ್ರಹಿಸಲು ತಮ್ಮ ಬೈಸಿಕಲ್ ಹತ್ತಿ ಮನೆಮನೆಗೆ ಹೋಗಿ ಸಂಗ್ರಹಿಸುತ್ತಿದ್ದರು. ಮತ್ತೊಮ್ಮೆ ತಮ್ಮ ಮನೆಯನ್ನೂ ಅಡವಿಟ್ಟು ಸಂಬಳ ಕೊಟ್ಟಿದ್ದರಂತೆ. ತಾವು ಉಪವಾಸವಿದ್ದು ಅಧ್ಯಾಪಕರೊಡನೆ ಸಹಕರಿಸಿದ್ಧ ದಿನಗಳೂ ಇದ್ದುವಂತೆ. 1940 ರಲ್ಲಿ ಕೇವಲ ಆರು ವಿದ್ಯಾರ್ಥಿಗಳಿಂದ ಆರಂಭವಾದ ರಾಷ್ಟ್ರೀಯ ವಿದ್ಯಾಲಯ ಸಹಸ್ರಾರು ಮಂದಿಗೆ ವಿದ್ಯಾದಾನ ಮಾಡುತ್ತಾ ಇಪ್ಪತ್ತೈದು ವಸಂತಗಳನ್ನು ಪೂರೈಸಿ ರಜತ ಮಹೋತ್ಸವವನ್ನು ಆಚರಿಸಿಕೊಳ್ಳುವ ಸಮಯ ಬಂದಿದೆ. ಯಾವುದೇ ಏಳು-ಬೀಳುಗಳನ್ನು ಲೆಕ್ಕಿಸದೆ, ಯಾವ ಪ್ರಚಾರಕ್ಕೂ ಕಿವಿಗೊಡದೆ,

ಮೌನಿಯಾಗಿ ಹಿಡಿದ ಛಲವನ್ನು ಸಾಧಿಸಿ ತೋರಿಸಿದ ಶರ್ಮರು ಸಂಸ್ಥೆಯ ಹುಟ್ಟು ಬೆಳವಣಿಗೆಯನ್ನು ಅವಲೋಕನ ಮಾಡುವ ದಿನ ಸನ್ನಿಹಿತವಾಗಿತ್ತು. ಮುಖ್ಯಮಂತ್ರಿಗಳಾಗಿದ್ದ ಶ್ರೀ. ಕೆಂಗಲ್ ಹನುಮಂತಯ್ಯನವರು ಪ್ರಮಾಣವಚನ ಸ್ವೀಕರಿಸಿ ಆಶೀರ್ವಾದ ಪಡೆಯಲೆಂದೇ ರಾಷ್ಟ್ರೀಯ ವಿದ್ಯಾಲಯಕ್ಕೆ ಆಗಮಿಸಿದ್ದರು. ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಬೆಳ್ಳಿಹಬ್ಬದ ಸ್ಮರಣಾರ್ಥ ಟೀಚರ್ಸ್ ಕಾಲೇಜು ಎದುರು ಸಭಾಭವನ ನಿರ್ಮಾಣ ಕಾರ್ಯ ಕೈಗೊಂಡರು. ರಾಷ್ಟ್ರೀಯ ವಿದ್ಯಾಲಯದ ಹುಟ್ಟು ಬೆಳವಣಿಗೆಯ ಹಿಂದಿರುವ ದಿವ್ಯ ಶಕ್ತಿಯೇ ಶ್ರೀ ಶಿವಾನಂದ ಶರ್ಮ ಎಂದು ಶರ್ಮರ ಸಾಧನೆ-ವ್ಯಕ್ತಿತ್ವದ ಬಗ್ಗೆ ಗಣ್ಯರು ಕೊಂಡಾಡಿದ್ದಾರೆ. ಮಠದ ವ್ಯಾಪ್ತಿಯಲ್ಲಿ ಅಧ್ಯಯನ ಮಾಡಿ ಶ್ರೀ ಸ್ವಾಮಿಗಳ ಆಶೀರ್ವಾದದಿಂದ ಪಡೆದ ಶಿಸ್ತು, ಶ್ರದ್ಧೆ, ಸೇವಾ ಮನೋಭಾವಗಳು ಈ ಎಲ್ಲ ಸಾಧನೆಗಳಿಗೆ ಬೆಂಬಲವಾಗಿ ಮುಟ್ಟಿದ್ದನ್ನೆಲ್ಲಾ ಶಿಕ್ಷಣವನ್ನಾಗಿ ಮಾರ್ಪಡಿಸುವ ಮಾಂತ್ರಿಕರಾಗಿದ್ದರು. ಕಾಲು ಶತಮಾನ ಸ್ವಸಾಮರ್ಥ್ಯದಿಂದ ಅವರು ಸಾಧಿಸಿರುವುದನ್ನು ಯಾವ ಮಾನದಂಡದಿಂದಲೂ ಅಳೆಯಲಾಗದು. ಹೀಗೆ ಜ್ಞಾನದೀವಿಗೆ ಹಚ್ಚುವ ಮಹತ್ವ ಕಾರ್ಯದಲ್ಲೆ ಯೋಚನೆ, ನುಡಿ, ಕ್ರಿಯಾಶೀಲತೆ ಬೆಳೆಸಿಕೊಂಡ ಶರ್ಮರು ಯುವ ಪೀಳಿಗೆಯ ಚಿಂತನೆಗೆ ಮಾರ್ಗದರ್ಶಿಯಾಗಿದ್ದಾರೆ. ಶಿಕ್ಷಕರಾಗಿ, ಮಾರ್ಗದರ್ಶಕರಾಗಿ, ತತ್ವಜ್ಞಾನಿಯಾಗಿ ಸಾವಿರಾರು ಮನೆ-ಮನ ಬೆಳಗಿದ ಶರ್ಮರು ಜನವರಿ ಎರಡು 1969 ರಂದು ಇಹಲೋಕ ತ್ಯಜಿಸಿದರು. ಅವರ ಸಮಾಧಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾನಿಕೇತನ ನಿವೇಶನದಲ್ಲಿದೆ.


ಶ್ರೀ ಡಿ.ಎ. ಪಾಂಡು

ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಪುಟ್ಟ ಶಾಲೆಯಾಗಿ ಪ್ರಾರಂಭವಾದ ಸಂಸ್ಥೆ ಬೆಂಗಳೂರು ಮಹಾನಗರದ ಶಿಕ್ಷಣದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಬೆಳೆದಿದೆ. ಶ್ರೀ ಶಿವಾನಂದ ಶರ್ಮರಿಂದ ಕಾರ್ಯದರ್ಶಿಗಳಾಗಿ ಆರಂಭಗೊಂಡ ಶಿಕ್ಷಣ ಯಜ್ಞ ಅವರ ಕನಸನ್ನು ಅತ್ಯಂತ ಸಮರ್ಪಕವಾಗಿ ಸಾಕಾರಗೊಳಿಸಿದವರು

ಶ್ರೀ ಡಿ.ಎ. ಪಾಂಡು ಅವರು. ಮೂವತ್ತು ನಾಲ್ಕು ವರ್ಷಗಳ ಕಾಲ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾಗಿ, ಪ್ರಧಾನ ಸಲಹೆಗಾರರಾಗಿ ಆರ್.ವಿ. ಸಂಸ್ಥೆಗಳ ಬೆಳವಣಿಗೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆ. ಇವರ ಆಡಳಿತಾವಧಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು.




ಡಾ.ಎಂ.ಕೆ. ಪಾಂಡುರಂಗ ಶೆಟ್ಟರು
ಅಧ್ಯಕ್ಷರು

ರಾಷ್ಟ್ರೀಯ ಶಿಕ್ಷಣ ಸಮಿತಿಯಾಗಿ ಆರಂಭವಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಆಗಿ ಪರಿವರ್ತನೆಗೊಂಡು ಎಂಟು ದಶಕಗಳಿಗೂ ಮಿಗಿಲಾಗಿ ಶಿಕ್ಷಣ ಕ್ಷೇತ್ರದಲ್ಲಿ ಸ್ಥಾಪಕರ ಧ್ಯೇಯೋದ್ದೇಶಗಳನ್ನು ಚಾಚೂ ತಪ್ಪದೇ ಮುನ್ನಡೆಸುತ್ತಿದೆ.

ಜಾಗತಿಕ ಬದಲಾವಣೆಯ ಸವಾಲುಗಳನ್ನೆದರಿಸುವ ಶಕ್ತಿಯನ್ನು ಶಿಕ್ಷಣದ ಮೂಲಕ ಯುವ ಜನಾಂಗಕ್ಕೆ ನೀಡುವ ಮಹತ್ತರ ಕಾರ್ಯದಲ್ಲಿ ಶ್ರೀಯುತ ಡಾ.ಎಂ. ಕೆ. ಪಾಂಡುರಂಗ ಶೆಟ್ಟರು ಅಧ್ಯಕ್ಷರಾಗಿ, ಶ್ರೀ. ಎನ್. ಆರ್. ಪಂಡಿತಾರಾಧ್ಯ, ಶ್ರೀ. ಸಿ. ವಿ. ಹಯಗ್ರೀವ್ ಉಪಾಧ್ಯಕ್ಷರಾಗಿ, ಶ್ರೀ ಎ. ವಿ. ಎಸ್ ಮೂರ್ತಿಗಳು ಗೌರವ ಕಾರ್ಯದರ್ಶಿಗಳಾಗಿ, ಜಂಟಿ ಕಾರ್ಯದರ್ಶಿಗಳಾಗಿ ಶ್ರೀ ಡಿ. ಪಿ. ನಾಗರಾಜ್ ಅವರು, ಖಜಾಂಚಿಗಳಾಗಿ ಶ್ರೀ ಸುಬ್ಬರಾಮಶೆಟ್ಟರು ಸಮರ್ಥ ಟ್ರಸ್ಟಿಗಳ ಸಹಯೋಗದಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರಸ್ತುತ ಎಂ.ಪಿ. ಶ್ಯಾಮ್ ರವರ ಅಧ್ಯಕ್ಷತೆಯಲ್ಲಿ ಸಂಸ್ಥೆ ಮುನ್ನಡೆಯುತ್ತಿದೆ.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ನಿರ್ವಹಿಸುತ್ತಿರುವ ಸಂಸ್ಥೆಗಳು



ಬೆಂಗಳೂರು ಪ್ರೌಢಶಾಲೆ

ರಾಷ್ಟ್ರೀಯ ವಿದ್ಯಾಲಯ ರಸ್ತೆ, ವಿಜಯಾ ಕಾಲೇಜು ಹತ್ತಿರ, 2ನೇ ಬ್ಲಾಕ್,
ಬಸವನಗುಡಿ, ಬೆಂಗಳೂರು – 560 004

ದೇಶದ ಇತಿಹಾಸದಲ್ಲಿ 1942 ಒಂದು ಮಹತ್ತರ ವರ್ಷ, ಏಕೆಂದರೆ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಹಂತದ ಪ್ರಾರಂಭಿಕ ವರ್ಷ ಇದು. ಇದರ ಪ್ರತಿಫಲವೇ 1947 ರಂದು ಭಾರತಕ್ಕೆ ಲಭಿಸಿದ



ಶಾಲೆಯ ಚಿತ್ರ



ಶ್ರೀ ಕೆ. ಶ್ರೀನಿವಾಸರಾವ್



ಶ್ರೀ ಕೆ. ಲಕ್ಷ್ಮೀನಾರಾಯಣರಾವ್



ಶ್ರೀ ವಿ.ಟಿ. ಶ್ರೀನಿವಾಸನ್

ಸ್ವಾತಂತ್ರ್ಯ. 1942ನೇ ವರ್ಷ ನಮ್ಮೆಲ್ಲರಿಗೂ ಅಷ್ಟೇ ಮುಖ್ಯವಾದ ವರ್ಷ, ಏಕೆಂದರೆ ಬೆಂಗಳೂರು ಪ್ರೌಢಶಾಲೆ ಪ್ರಾರಂಭವಾದ ವರ್ಷವಿದು. ಅಂದಿನಿಂದ ಇಂದಿನವರೆಗೂ ವರ್ಷದಿಂದ ವರ್ಷಕ್ಕೆ ಶೈಕ್ಷಣಿಕ ಪ್ರಗತಿಯನ್ನು ಹೊಂದಿ, ಇಂದು ಬೆಂಗಳೂರು ನಗರದ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿ ಜನಪ್ರಿಯವಾಗಿದೆ. ಶಾಲೆ ಅರ್ಧ ಶತಮಾನದ ಸಾರ್ಥಕ ಶೈಕ್ಷಣಿಕ ಸೇವೆಯನ್ನು 1992 ನೇ ವರ್ಷಕ್ಕೆ ಪೂರೈಸಿ, ಪ್ರಸ್ತುತ ಎಂಟು ದಶಕಗಳ ಹೊಸ್ತಿಲಲ್ಲಿ ನಿಂತಿರುವ ಈ ಸಂಸ್ಥೆಯ

ಇತಿಹಾಸದ ಪುಟಗಳನ್ನು ತಿರುವಿದಾಗ, ಒಂದು ಸಾರ್ಥಕತೆ, ಕೃತಜ್ಞತೆಯ ಭಾವನೆ ಮೂಡುತ್ತದೆ.

ಯಾವುದೇ ದೇಶ ದಾರ್ಶನಿಕರ ಮನಸ್ಸಿನಲ್ಲಿ ಹುಟ್ಟುವಂತೆ, ಬೆಂಗಳೂರು ಪ್ರೌಢಶಾಲೆಯೂ ಸಹ ಮೂರು ಮಂದಿ ದಾರ್ಶನಿಕರ ಮನಗಳಲ್ಲಿ ಜನ್ಮ ತಾಳಿತು. ಆ ಮಹಾನುಭಾವರೆಂದರೆ, ಸರ್ವ ಶ್ರೀ ಕೆ. ಶ್ರೀನಿವಾಸರಾವ್, ಶ್ರೀ ವಿ.ಟಿ. ಶ್ರೀನಿವಾಸನ್, ಮತ್ತು ಶ್ರೀ ಕೆ. ಲಕ್ಷ್ಮೀನಾರಾಯಣರಾವ್. ಈ ಮೂರು ಮಂದಿ, ಒಂದು ನೂತನ ಪ್ರೌಢಶಾಲೆಯನ್ನು ಪ್ರಾರಂಭಿಸುವ ಯೋಜನೆ ಹಾಕಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿದ್ದ ಪಾಲ್ ಚಿನ್ನಪ್ಪ ಪ್ರೌಢಶಾಲೆಯಿಂದ ಹೊರಬಂದರು. ಇದಕ್ಕಾಗಿ ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ ಇವರು ರಾವ್ ಬಹದ್ದೂರ್ ಪ್ರೊ. ಬಿ. ವೆಂಕಟೇಶಾಚಾರ್ ಮತ್ತು ಶ್ರೀ ಎಂ.ಎಸ್. ಲಿಂಗೇಗೌಡ ಅವರನ್ನು ಸಂಪರ್ಕಿಸಿದರು. ಇವರೀರ್ವರ ಆಶೀರ್ವಾದಗಳೊಂದಿಗೆ ಬೆಂಗಳೂರು ಪ್ರೌಢಶಾಲೆ 1942 ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಪ್ರೊ. ಬಿ. ವೆಂಕಟೇಶಾಚಾರ್ ಅಧಿಕಾರ ವಹಿಸಿಕೊಂಡರು.



ರಾವ್ ಬಹದ್ದೂರ್
ಪ್ರೊ. ಬಿ. ವೆಂಕಟೇಶಾಚಾರ್
ಸಂಸ್ಥಾಪಕ ಅಧ್ಯಕ್ಷರು

ಶಾಲೆಯ ಪ್ರಥಮ ಮುಖ್ಯೋಪಾಧ್ಯಾಯರಾಗಿ ಸೆಂಟ್ರಲ್ ಕಾಲೇಜಿನ ನಿವೃತ್ತ ಪ್ರಾಚಾರ್ಯರಾಗಿದ್ದ ಪ್ರೊ. ಸಿ. ಆರ್. ನಾರಾಯಣರಾವ್ ಅವರು ಚುಕ್ಕಾಣಿ ಹಿಡಿದರು. ಶಾಲೆಗೆ ಉತ್ತಮ ಅಡಿಪಾಯ ಹಾಕಿ ಮಾರ್ಗದರ್ಶನ ನೀಡಿದರು. ಅತಿ ಶೀಘ್ರದಲ್ಲಿಯೇ ಈ ಸಂಸ್ಥೆ ಉತ್ತಮ ವಿದ್ಯಾದಾನ ಮಾಡುವ ಶಿಸ್ತಿನ ಸಂಸ್ಥೆ ಎಂದು ಜನಪ್ರಿಯತೆ ಗಳಿಸಿತು. ಇದಕ್ಕೆ ಪ್ರಮುಖ ಕಾರಣಕರ್ತರೆಂದರೆ, ಆಡಳಿತ ಮಂಡಳಿಯ ಈ ಮುಂದಿನ ಬೆಂಗಳೂರಿನ ಗೌರವಾನ್ವಿತ ವಿದ್ಯಾಪಕ್ಷಪಾತಿಗಳಾದ ಪ್ರಜೆಗಳು – ಪ್ರೊ. ಸಿ.

ಆರ್. ನಾರಾಯಣರಾವ್, ರಾಜಸೇವಾಸಕ್ತ ಬಿ. ವೆಂಕೋಜಿರಾವ್, ಮೇಯರ್ ವೈ.ವಿ.ಕೆ. ಮೂರ್ತಿ, ಶ್ರೀ ಟಿ.ಎಸ್. ರಾಮಣ್ಣ, ಶ್ರೀ ಓ.ಎಸ್.ಎನ್. ಶರೀಫ್, ಶ್ರೀ ಕೆ.ಎನ್. ಗುರುಸ್ವಾಮಿ, ಶ್ರೀ ಎಚ್. ನಂಜುಂಡಯ್ಯ, ಶ್ರೀ ಶಾಂಪೂರ್ ಪಾಪಣ್ಣ, ಧರ್ಮಪ್ರಕಾಶ ಶ್ರೀ ಎಸ್.ವಿ. ಶ್ರೀನಿವಾಸ ಸೆಟ್ಟಿ, ಕೋಟಾ ಶ್ರೀ ಕಾಮಾಕ್ಷಯ್ಯ ಶೆಟ್ಟಿ, ಶ್ರೀ ಸಿಂಗ ಅಯ್ಯಂಗಾರ್, ಶ್ರೀ ಎಚ್. ರಾಮಸ್ವಾಮಿ ಮುಂತಾದವರು. ಇಂತಹ ಮಹನೀಯರ ಮಾರ್ಗದರ್ಶನದಲ್ಲಿ ಶಾಲೆಯು ನಗರದ ಶೈಕ್ಷಣಿಕ ಭೂಪಟದಲ್ಲಿ ಅಗ್ರಸ್ಥಾನ ಪಡೆಯಿತು.

ಯಾವುದೇ ಶೈಕ್ಷಣಿಕ ಸಂಸ್ಥೆ ಬದ್ಧತೆ ಹೊಂದಿದ ಉಪಾಧ್ಯಾಯ ವರ್ಗವಿಲ್ಲದೆ ಅಭಿವೃದ್ಧಿ ಹೊಂದುವುದಿಲ್ಲ. ಇಂದು ಉತ್ತಮ ಶ್ರೇಣಿಯ ಸ್ಥಾನದಲ್ಲಿ ಈ ಶಾಲೆ ನಿಂತಿದೆ ಎಂದರೆ ಅದಕ್ಕೆ ಈ ಮುಂದಿನ ನಿಸ್ವಾರ್ಥ ಕರ್ತವ್ಯ ನಿಷ್ಠ, ಉತ್ಸಾಹಿ ನುರಿತ ಬೋಧಕ ಸಿಬ್ಬಂದಿ ಕಾರಣ. ಸರ್ವಶ್ರೀ ಸಿ. ಎಸ್. ಗೋಪಾಲರಾವ್, ಶ್ರೀ ಸಿ. ಅನಂತಾಚಾರ್, ಶ್ರೀ ಜಿ.ಆರ್. ಎಸ್. ರಾಘವಾಚಾರ್, ಶ್ರೀ ಸಿ. ಗುಂಡೂರಾವ್, ಶ್ರೀ ಎಚ್.ಎಸ್. ರಾಘವಾಚಾರ್, ಶ್ರೀ ಕಶ್ಯಪ್, ಶ್ರೀ ಎಂ.ಆರ್. ನಾಗರಾಜರಾವ್, ಶ್ರೀ ಸಿ.ವಿ. ಶ್ರೀನಿವಾಸಮೂರ್ತಿ, ಡಾ. ಬಿ.ಸಿ. ರಾಮಚಂದ್ರಶರ್ಮ, ಶ್ರೀ ಬಿ.ಎಸ್. ಪದ್ಮನಾಭ, ಶ್ರೀ ಎಲ್. ಪಾರ್ಥಸಾರಥಿ, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಜಿ.ವಿ. ಅನಂತ ಅಯ್ಯರ್, ಶ್ರೀ ಕೆ.ಎಸ್. ನಾರಾಯಣ, ಶ್ರೀ ಶ್ರೀನಿವಾಸಶಾಸ್ತ್ರೀ, ಶ್ರೀ ರಾಮೇಶ್ವರ ಅವಧಾನಿ ಹಾಗೂ ಶ್ರೀ ಬಿಂದು ಮಾಧವಾಚಾರ್ ಮೊದಲಾದವರು.

ಮೇಲಿನವರಲ್ಲಿ ಹಲವಾರು ಮಂದಿ ಮುಂದಿನ ದಿನಗಳಲ್ಲಿ ಶ್ರೇಷ್ಠ ಶಿಕ್ಷಣವೇತ್ತರಾಗಿ ನಗರದ ಪ್ರತಿಷ್ಠಿತ ವಿವಿಧ ಶಿಕ್ಷಣಸಂಸ್ಥೆಗಳಲ್ಲಿ ಪ್ರಮುಖ ಸ್ಥಾನಮಾನಗಳನ್ನು ಅಲಂಕರಿಸಿದ್ದರು. ನಂತರದ ದಿನಗಳಲ್ಲಿ ಸಂಸ್ಥೆಯ ಬೋಧಕ ವರ್ಗಕ್ಕೆ ಸೇರ್ಪಡೆಗೊಂಡ ಶಿಕ್ಷಕರು ಇದೇ ಮೇಲ್ಪಂಕ್ತಿಯನ್ನನುಸರಿಸಿ ಬದ್ಧತೆ ಹಾಗೂ ಉತ್ಸಾಹಗಳಿಂದ ವಿದ್ಯಾರ್ಥಿ ವೃಂದವನ್ನು ಮುನ್ನಡೆಸಿದ್ದಾರೆ. ಇಂತಹ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ನೂರಾರು ವಿದ್ಯಾರ್ಥಿಗಳು ಸಮಾಜದ ವಿವಿಧ ರಂಗಗಳಲ್ಲಿ ಅತ್ಯುತ್ತಮ ಸೇವೆ ಮಾಡಿ ಉನ್ನತ ಸ್ಥಾನಗಳನ್ನು ಅಲಂಕರಿಸಿ ಅತ್ಯುತ್ತಮ ಸೇವೆ ಮಾಡಿದ್ದಾರೆ. ಕೈಗಾರಿಕೋದ್ಯಮಿಗಳಾಗಿ, ನ್ಯಾಯವೇತ್ತರಾಗಿ, ರಾಜ್ಯಮಟ್ಟದ ಆಡಳಿತಗಾರರಾಗಿ,

ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್ ಅಧಿಕಾರಿಗಳಾಗಿ, ವಿಜ್ಞಾನಿಗಳಾಗಿ, ತಾಂತ್ರಿಕ ತಜ್ಞರಾಗಿ, ಕಲಾವಿದರಾಗಿ, ಸಾಹಿತ್ಯರಂಗ ಮತ್ತು ಕ್ರೀಡಾ ಕ್ಷೇತ್ರದಲ್ಲಿ ದೇಶದೆಲ್ಲೆಡೆ ಮಾತ್ರವಲ್ಲದೆ ವಿದೇಶಗಳಲ್ಲಿಯೂ ನೆಲೆಸಿರುವ ಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿಗಳಿದ್ದಾರೆ. ಇವರ ಪಟ್ಟಿ ಇಲ್ಲಿ ನೀಡುವುದು ಕಷ್ಟಸಾಧ್ಯವಾದರೂ, ಅವರಲ್ಲಿ ಕೆಲವರನ್ನಾದರೂ ವಿಶೇಷವಾಗಿ ನೆನೆಯಲೇಬೇಕು. ಅವರೆಂದರೆ, ನಾಡಿನ ಶ್ರೇಷ್ಠ ನ್ಯಾಯಮೂರ್ತಿ ನಾಗಮೋಹನದಾಸ, ನಿವೃತ್ತ ಐಎಎಸ್ ಅಧಿಕಾರಿ ಬಿಎಚ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ವಿಶ್ವನಾಥ್, ಖ್ಯಾತ ಕ್ರಿಕೆಟ್ ಪಟುಗಳಾದ ಪ್ರಸನ್ನ, ಬ್ರಿಜೇಶ್ ಪಟೇಲ್, ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಪುಟ್ಟಣ್ಣ, ಖ್ಯಾತ ನಟ ರಿಯಲ್ ಸ್ಟಾರ್ ಉಪೇಂದ್ರ, ಲಹರಿ ರಿಕಾರ್ಡಿಂಗ್ ಸಂಸ್ಥೆಯ ವೇಲು, ಸಂಘಟನಾಕಾರ, ಮಾತಿನಮನೆಯ ಮಾಲೀಕ ರಾಸು ವೆಂಕಟೇಶ್ ಹೀಗೆ ನೆನಪಿಸಿಕೊಳ್ಳುತ್ತಾ ಹೋದರೆ ಲೆಕ್ಕವೇ ಇಲ್ಲ. ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಶ್ರೇಷ್ಠ ಮಟ್ಟದಲ್ಲಿ ಸಾಧನೆಗೈದು ಅತ್ಯುನ್ನತ ಸ್ಥಾನಗಳನ್ನು ಹೊಂದಿರುವವರು ಇನ್ನೂ ಅನೇಕರಿದ್ದಾರೆ. ಈ ಎಲ್ಲಾ ನೆಚ್ಚಿನ ವಿದ್ಯಾರ್ಥಿವೃಂದವನ್ನು ಸಂಸ್ಥೆ ಪ್ರೀತಿ ಮತ್ತು ಹೆಮ್ಮೆಯಿಂದ ನೆನೆಯುತ್ತದೆ.

ವಿದ್ಯಾ ಅಮೃತಮಶ್ನುತೇ – ಎಂಬ ಧ್ಯೇಯ ವಾಕ್ಯ ಹೊಂದಿರುವ ಈ ಶಾಲಾ ಲಾಂಛನ ವಿದ್ಯಾ ಕ್ಷೇತ್ರದಲ್ಲಿ ಅತ್ಯುನ್ನತ ಸ್ಥಾನ ಗಳಿಸುವ ಏಕೈಕ ಗುರಿ ಹೊಂದಿದೆ. ಗುರಿ ಸಾಧನೆಗಾಗಿ ಮತ್ತು ರಾಷ್ಟ್ರ ಮಟ್ಟದ ಶಿಕ್ಷಣ ನೀಡುವ ಸಲುವಾಗಿ, ಶಿಕ್ಷಣ ಮತ್ತು ತರಬೇತಿಗಳನ್ನು ತಜ್ಞರ ಮಾರ್ಗದರ್ಶನದಲ್ಲಿ ಯೋಜಿಸಲಾಗಿದೆ. ಇವನ್ನು ಶೈಕ್ಷಣಿಕ ವರ್ಷದ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಅಳವಡಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಸಂಸ್ಥೆಯ ಆಡಳಿತ ವಹಿಸಿಕೊಂಡ ಜನಪ್ರಿಯ ಶಿಕ್ಷಕರೂ, ದಿಟ್ಟ ಮುಖ್ಯೋಪಾಧ್ಯಾಯರೂ ಆದ ಸರ್ವಶ್ರೀ ಕೆ. ಶ್ರೀನಿವಾಸರಾವ್, ಶ್ರೀ ಕೆ. ಲಕ್ಷ್ಮಿನಾರಾಯಣರಾವ್, ಶ್ರೀ ಎನ್. ರಾಮಕೃಷ್ಣ ಮುಂತಾದವರು ತಮ್ಮ ದೂರದರ್ಶಿತ್ವದಿಂದ ಇವನ್ನು ಸಮರ್ಥವಾಗಿ ಅಳವಡಿಸಿ, ಶಾಲೆಯ ಶೈಕ್ಷಣಿಕ ಉನ್ನತಿಗೆ ಶ್ರಮಿಸಿದರು.

ವಿಶ್ವೇಶ್ವರಪುರಂ ಕಲೆ ಮತ್ತು ವಾಣಿಜ್ಯ ಕಟ್ಟಡದಲ್ಲಿ ಪ್ರಾರಂಭವಾಗಿ ನಂತರ ನಾಲ್ಕು ದಶಕಗಳ ಕಾಲ ಬುಲ್‌ಟೆಂಪಲ್ ರಸ್ತೆಯ ಕಟ್ಟಡದಲ್ಲಿ ಶೃಂಗೇರಿ ಶ್ರೀಮಠದ ಗುರುಗಳ ಕೃಪಾಶೀರ್ವಾದಗಳೊಂದಿಗೆ ನಡೆದ ಈ ಸಂಸ್ಥೆ ಈಗ ಆರ್.ವಿ

ರಸ್ತೆಯ ವಿಜಯ ಕಾಲೇಜಿನ ಆವರಣಕ್ಕೆ ಸ್ಥಳಾಂತರಗೊಂಡಿದ್ದು, ಮಧ್ಯದಲ್ಲಿ ಜಯನಗರದಲ್ಲಿ ಬೆಂಗಳೂರು ಪ್ರೌಢಶಾಲೆಯ ಶಾಖೆ ಪ್ರಾರಂಭವಾಗಿದೆ. ಪ್ರಸ್ತುತ ಈ ಎರಡೂ ಶಾಖಾ ಶಾಲೆಗಳು ತಮ್ಮ ಶೈಕ್ಷಣಿಕ ಸೇವೆಯನ್ನು ಹಿಂದಿನ ಸಾಮರ್ಥ್ಯ, ಜನಪ್ರಿಯತೆಗಳೊಂದಿಗೆ ನಡೆಯುತ್ತಿವೆ. ಬೆಂಗಳೂರು ಪ್ರೌಢಶಾಲೆ ರಜತ ಮಹೋತ್ಸವ, ಅಮೃತ ಮಹೋತ್ಸವವನ್ನು ಆಚರಿಸಿಕೊಂಡು ಶತಮಾನೋತ್ಸವವನ್ನು ಆಚರಿಸಿಕೊಳ್ಳುವ ಕಡೆ ಮುನ್ನಡೆಯುತ್ತಿದೆ. ಇಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಇಂದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಶ್ರೀಯುತ ರಾಸು ವೆಂಕಟೇಶ್ ಅವರು: "ಬೆಂಗಳೂರು ಹೈಸ್ಕೂಲ್ ನಮ್ಮ ಬದುಕಿನ ಒಂದು ಸುಂದರ ಅಧ್ಯಾಯ ಅಲ್ಲಿನ ಪುಟಪುಟವೂ ಅವಿಸ್ಮರಣೀಯ. ಅಜಾರಾಮರ ಬಹುಶಃ ರಾಜ್ಯದ, ದೇಶದ ಯಾವುದೇ ಶಾಲೆಯಲ್ಲಿರದ ಆನೇಕ ವಿಸ್ಮಯಗಳು ಇಲ್ಲಿದ್ದವು" ಎಂದು ಅಭಿಮಾನದಿಂದ ಮಾತನಾಡಿದ್ದಾರೆ.

ಪ್ರಸ್ತುತ ಈ ಬಿಎಚ್‌ಎಸ್ ಸಂಸ್ಥೆಯ ಆಡಳಿತ ಮಂಡಳಿಯ ಅಡಿಯಲ್ಲಿ ಬಸವನಗುಡಿಯ ಆರ್.ವಿ ರಸ್ತೆಯ ಕ್ಯಾಂಪಸ್‌ನಲ್ಲಿ ಬೆಂಗಳೂರು ಹೈಸ್ಕೂಲ್, ಬಿಎಚ್‌ಎಸ್ ಪೂರ್ಣಪ್ರಜ್ಞ ವಿದ್ಯಾನಿಕೇತನ ಶಾಲೆ, ಬಸವನಗುಡಿ ವಿಜಯ ಕಾಲೇಜು, ವಿಜಯ ಬೈಫರ್ಕೇಟೆಡ್ ಪಿ.ಯು ಕಾಲೇಜು, ವಿಜಯ ಸಂಜೆ ಕಾಲೇಜು, ಬಿಎಚ್‌ಎಸ್ ಬೆಂಗಳೂರು ಇನ್ಸ್ಟಿಟ್ಯೂಟ್ ಲೀಗಲ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದರೆ, ಜಯನಗರ 4ನೇ ಬ್ಲಾಕ್‌ನಲ್ಲಿ ಬೆಂಗಳೂರು ಪ್ರೌಢಶಾಲೆ, ವಿಜಯ ಕಾಲೇಜು, ವಿಜಯ ಟೀಚರ್ಸ್ ಕಾಲೇಜು, ವಿಜಯ ಪದವಿ ಪೂರ್ವ ಕಾಲೇಜು, ವಿಜಯ ಸಂಜೆ ಪದವಿ ಪೂರ್ವ ಕಾಲೇಜು ಕಾರ್ಯನಿರ್ವಹಿಸುತ್ತಿವೆ. ಗ್ರಾಮಾಂತರ ಪ್ರದೇಶದಲ್ಲಿಯ ವಿದ್ಯಾರ್ಥಿಗಳಿಗೂ ಒಳ್ಳೆಯ ಶಿಕ್ಷಣ ದೊರೆಯಬೇಕೆಂಬ ಧ್ಯೇಯದೊಂದಿಗೆ ಮೈಸೂರು ಜಿಲ್ಲೆಯ ಟಿ. ನರಸೀಪುರದಲ್ಲಿ ಪಿ.ಆರ್.ಎಂ. ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಎಚ್‌ಎಸ್ ಕೈಗಾರಿಕಾ ತರಬೇತಿ ಕೇಂದ್ರ, ಪಿ.ಆರ್.ಎಂ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಈ ಮೇಲಿನ ಎಲ್ಲಾ ವಿದ್ಯಾಸಂಸ್ಥೆಗಳಿಗೂ ಮಾತೃ ಸಂಸ್ಥೆ ಬೆಂಗಳೂರು ಪ್ರೌಢಶಾಲೆ.

ಮೇಲ್ಕಂಡ ಎಲ್ಲಾ ವಿದ್ಯಾ ಸಂಸ್ಥೆಗಳನ್ನು ಅತ್ಯಂತ ಸಮರ್ಥವಾಗಿ ನಡೆಸಿಕೊಂಡು ಬರುತ್ತಿರುವ ಬಿಎಚ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳ ವಿವರ ಹೀಗಿದೆ.

ಶ್ರೀ. ಜಿ.ವಿ. ವಿಶ್ವನಾಥ್ – ಅಧ್ಯಕ್ಷರು, ಶ್ರೀ. ಎನ್.ಬಿ. ಭಟ್ – ಕಾರ್ಯದರ್ಶಿ, ಡಾ. ಎ.ಕೆ. ಅತ್ರೆ – ಖಜಾಂಚಿ, ಡಾ. ಕೆ. ಸಮೀರ ಸಿಂಹ – ಜಂಟಿ ಕಾರ್ಯದರ್ಶಿ, ಡಾ. ಟಿ.ವಿ. ರಾಜು – ಸದಸ್ಯರು, ಡಾ. ಟಿ.ಎ. ಬಾಲಕೃಷ್ಣ – ಸದಸ್ಯರು, ಶ್ರೀ ಟಿ.ಎಸ್. ಶ್ರೀಧರ್ – ಸದಸ್ಯರು, ಶ್ರೀ ಪ್ರದೀಪ್ ಗ್ರಾಮ – ಸದಸ್ಯರು

ಎಂ.ಇ.ಎಸ್ ಕಿಶೋರ ಕೇಂದ್ರ

"ಬ್ರಾಹ್ಮಿ", 10 ನೇ ಮುಖ್ಯ ರಸ್ತೆ, 15 ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003

ಅದ್ವಿತೀಯ ಸಾಧಕರಾದ ಪ್ರೊ|| ಎಂ.ಪಿ.ಎಲ್ ಶಾಸ್ತ್ರಿಯವರ ಉನ್ನತ ವಿಚಾರ ಹಾಗು ಚಿಂತನೆಗಳಿಂದ ಮೈಸೂರು ಶಿಕ್ಷಣ ಸಂಸ್ಥೆಗಳ (ಎಂ.ಇ.ಎಸ್) ಕಟ್ಟಡಗಳನ್ನು ನಿರ್ಮಿಸಿದರು. ಪ್ರೊ|| ಎಂ.ಪಿ.ಎಲ್, ಶಾಸ್ತ್ರಿಯವರು ಸಂಸ್ಕೃತದ ನಿಸ್ಸೀಮ ಪಂಡಿತರು ಹಾಗು ಮಹಾಶಿಕ್ಷಣ ತಜ್ಞರಾಗಿದ್ದರು. ಇವರು ಸಂಸ್ಥಾಪಕ ಕಾರ್ಯದರ್ಶಿಯಾಗಿ ಮೈಸೂರು, ಶಿಕ್ಷಣ ಸಂಸ್ಥೆಗಳಲ್ಲಿ, ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಅನಂತರ ಶಿಕ್ಷಣ ನಿರ್ದೇಶಕ ಹಾಗು ಅಧ್ಯಕ್ಷ ಪದವಿಯನ್ನು ಅಲಂಕರಿಸಿ ಸಮಗ್ರ ದೇಶದ ಇತಿಹಾಸದಲ್ಲೇ ನೂತನ ಅಧ್ಯಾಯವನ್ನು ಸೃಷ್ಟಿ ಮಾಡಿದರು.



ಪ್ರೊ|| ಎಂ.ಪಿ.ಎಲ್ ಶಾಸ್ತ್ರಿ

ಎಂ.ಪಿ.ಎಲ್ ಶಾಸ್ತ್ರಿಗಳು ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಮುತ್ತೂರು ಗ್ರಾಮದಲ್ಲಿ 1912 ರ ಮೇ 12 ರಂದು

ಜನಿಸಿದರು. ಇವರ ತಂದೆ ಆಸ್ಥಾನ ಮಹಾ ವಿದ್ವಾಂಸರಾಗಿದ್ದ ಪುರುಷೋತ್ತಮ ಶಾಸ್ತ್ರಿಗಳು. ತಾಯಿ ಅನ್ನಪೂರ್ಣಮ್ಮನವರು. ವಿದ್ವಾನ್ ನರಹರಿ ಶಾಸ್ತ್ರಿಗಳು ಸ್ಥಾಪಿಸಿದ ಸಂಸ್ಕೃತ ಗುರುಕುಲದಲ್ಲಿ ಬಾಲ್ಯದ ವಿದ್ಯಾಭ್ಯಾಸ. 125 ವರ್ಷಗಳ ಹಿಂದೆಯೇ ಸ್ಥಾಪಿತವಾಗಿದ್ದ ಈ ಪ್ರಾಚೀನ ಪ್ರಖ್ಯಾತ ಸಂಸ್ಕೃತ ಪಾಠ ಶಾಲೆಯಲ್ಲಿ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಗಳು ನಡೆದವು. ಆಗಿನ ಕಾಲದ ಕನ್ನಡ ಲೋಯರ್ ಸೆಕೆಂಡರಿ, ಇಂಗ್ಲಿಷ್ ಲೋಯರ್ ಸೆಕೆಂಡರಿ, ಸಂಸ್ಕೃತ ಲೋಯರ್ ಸೆಕೆಂಡರಿ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿ ಬೆಂಗಳೂರಿನ ಸರ್ಕಾರಿ ಇಂಟರ್ ಮೀಡಿಯೇಟ್ ಕಾಲೇಜು ಸೇರಿದರು. ಅಲ್ಲಿಂದ ಪದವಿ ವ್ಯಾಸಂಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ. ನಂತರ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದರು. ಮಹಾರಾಜ ಕಾಲೇಜಿನ ಪ್ರಾಚಾರ್ಯ ರಾಲೋ ಅವರು ಮುಂಬೈಯ ಕಲಾಶಾಲೆಗೆ ಸಂಸ್ಕೃತ ಅಧ್ಯಾಪಕರಾಗಿ ಹೋಗುವ ಅವಕಾಶ ದೊರಕಿಸಿಕೊಟ್ಟರು. ಆದರೆ ತಂದೆಯವರ ಇಚ್ಚೆಯಂತೆ ಆ ಹುದ್ದೆಯನ್ನು ನಿರಾಕರಿಸಿದರು. ಬನುಮಯ್ಯ ಹೈಸ್ಕೂಲಿನಲ್ಲಿ ಹಾಗೂ ಮಹಾರಾಜ ಕಾಲೇಜುಗಳಲ್ಲಿ ಸ್ವಲ್ಪ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1940 ರ ಸುಮಾರಿಗೆ ಶಾಸ್ತ್ರಿಗಳು ಮೈಸೂರಿನಿಂದ ಬೆಂಗಳೂರಿಗೆ ಬಂದು ಸಂಸಾರ ಪ್ರಾರಂಭಿಸಿದರು. ಇವರ ಜೀವನದ ಸುಖದುಃಖಗಳಲ್ಲಿ ಪತ್ನಿಯಾಗಿ ಶ್ರೀಮತಿ. ರಾಜಲಕ್ಷ್ಮಮ್ಮನವರು ಸಹಭಾಗಿಯಾಗಿದ್ದರು.

ನಮ್ಮ ಸಂಸ್ಕೃತಿಯ ಬುನಾದಿಯ ಮೇಲೆ ಆದರ್ಶ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಬೇಕೆನ್ನುವ ಆಕಾಂಕ್ಷೆಯಿಂದ ದಿವಂಗತ. ದೇವುಡು ನರಸಿಂಹ ಶಾಸ್ತ್ರಿಗಳ ಜೊತೆಗೂಡಿ ಎಂ.ಪಿ.ಎಲ್. ಶಾಸ್ತ್ರಿಗಳು ಗಾಂಧಿನಗರ ಹೈಸ್ಕೂಲನ್ನು 1942 ರಲ್ಲಿ ಪ್ರಾರಂಭಿಸಿದರು. ಆಗ ಪ್ರೊ ನಾಡಿಗೆ ಕೃಷ್ಣಮೂರ್ತಿ, ಎಂ.ಶಂಕರ್, ಪ್ರೊ। ಗೋಪಾಲಕೃಷ್ಣ ಅಡಿಗ, ಪ್ರೊ। ಶ್ರೀನಿವಾಸ ರಾವ್ ಕೊರಟಿ, ಎಂ.ಪಿ.ಲಕ್ಷ್ಮಿನಾರಾಯಣ್ ಮುಂತಾದವರೆಲ್ಲಾ ಈ ಹೈಸ್ಕೂಲಿನಲ್ಲಿ ಆಧ್ಯಾಪಕರಾಗಿದ್ದರು. ಪ್ರಪ್ರಥಮ ಬಾರಿಗೆ ಶಿಸ್ತು, ಸಂಸ್ಕೃತಿ ಹಾಗೂ ಉತ್ತಮ ಶಿಕ್ಷಣದ ಮೂಲಭೂತ ತತ್ವಗಳನ್ನು ಕಾರ್ಯಗತಗೊಳಿಸುವ ಸದವಕಾಶ ಗಾಂಧಿನಗರ ಹೈಸ್ಕೂಲಿನ ಮೂಲಕ ಶಾಸ್ತ್ರಿಯವರಿಗೆ ದೊರಕಿತು. ಇದರೊಡನೆ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಉಪಾಹಾರ ಕಾರ್ಯಕ್ರಮವನ್ನು ಯಶಸ್ವಿಯಾಗಿ ವ್ಯವಸ್ಥೆ ಮಾಡಿದರು. 1942

ರಲ್ಲಿ ದೇಶದಾದ್ಯಂತ ಕ್ವಿಟ್ ಇಂಡಿಯಾ ಚಳುವಳಿ. ಅದರ ಬಿಸಿ ಈ ಶಾಲೆಗೂ ತಟ್ಟಿತು. ಶಾಸ್ತ್ರಿಯವರೇ ನೇತಾರರಾಗಿ ನಿಂತು ನೂರಾರು ಜನ ವಿದ್ಯಾರ್ಥಿಗಳನ್ನು ತಮ್ಮ ಸ್ಫೂರ್ತಿದಾಯಕವಾದ ಭಾಷಣಗಳಿಂದ ಪ್ರಚೋದಿಸಿ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ನಾಡಿನಾದ್ಯಂತ ವಾರ್ತಾ ಪತ್ರಿಕೆಗಳನ್ನು ಪ್ರತಿಬಂಧಿಸಿದ್ದಾಗ ಗಾಂಧಿನಗರ ಹೈಸ್ಕೂಲಿನ ಕೊಠಡಿಗಳಲ್ಲಿ ಅಂದಂದಿನ ಚಳುಚಳಿಯ ತಾಜಾ ಸುದ್ದಿಗಳನ್ನು ಸೈಕ್ಲೋಸ್ಟೈಲ್ ಮಾಡಿ ಕರಪತ್ರಗಳನ್ನು ಹಂಚಲಾಗುತ್ತಿತ್ತು.

1944 ಶಾಸ್ತ್ರಿಯವರ ಬದುಕಿನಲ್ಲಿ ಮಹತ್ವದ ಬದಲಾವಣೆಯನ್ನು ತಂದ ವರ್ಷವಾಯಿತು. ವಿಶ್ವವಿದ್ಯಾನಿಲಯದ ಬದುಕಿನ ಬಾಗಿಲೊಳಗೆ ಹೆಜ್ಜೆಯಿಟ್ಟ ವರ್ಷ. ಬಂದದ್ದನ್ನು ಸ್ವೀಕರಿಸುವ, ಬಾರದಿದ್ದುದಕ್ಕಾಗಿ ಆತುರ ಪಡದ ಶಾಸ್ತ್ರಿಯವರನ್ನು ಮೈಸೂರು ವಿಶ್ವವಿದ್ಯಾನಿಲಯವು ಸೆನೆಟ್ ಸದಸ್ಯರನ್ನಾಗಿ ಆಯ್ಕೆ ಮಾಡಿ ಗೌರವಿಸಿತು. ಶಿಕ್ಷಣ ಕ್ಷೇತ್ರದ ಆಳ ಅಗಲಗಳನ್ನೆಲ್ಲಾ ಸ್ಪಷ್ಟವಾಗಿ ಅರ್ಥ ಮಾಡಿಕೊಂಡ ಶಾಸ್ತ್ರಿಯವರು ಉಳಿದವರು ಹತ್ತು ಮಾತುಗಳಲ್ಲಿ ಹೇಳುವುದನ್ನು ಒಂದೇ ಮಾತಿನಲ್ಲಿ ಸಮರ್ಥವಾಗಿ ಹೇಳಿ ಸಾರ್ಥಕ ಸೆನೆಟ್ ಸದಸ್ಯರೆಂದು ಹೆಸರು ಪಡೆದರು. ಯಾವ ಸಮಸ್ಯೆಯನ್ನು ಕುರಿತಾದರೂ ಪ್ರೌಢವಾಗಿ, ಪರಿಣಾಮಕಾರಿಯಾಗಿ ಬಗೆಹರಿಸುತ್ತಿದ್ದ ಶಾಸ್ತ್ರಿಯವರು 1946 ರಲ್ಲಿ ರಾಧಾಕೃಷ್ಣನ್ ಸಮಿತಿಯ ಮುಂದೆ ಸೆನೆಟ್ ಸದಸ್ಯರಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದರು. ರೆಡ್ಡಿ ಆಯೋಗದ ಬಗ್ಗೆಯೂ ತಮ್ಮ ಪಾಂಡಿತ್ಯಪೂರ್ಣ ವಿಚಾರಗಳನ್ನು ಪ್ರಕಟಿಸಿದರು. ಕೊಠಾರಿ ಆಯೋಗ ನೇಮಕವಾದಾಗ ಶಾಸ್ತ್ರಿಯವರು ವಿಶ್ವವಿದ್ವಾನಿಲಯದ ಪ್ರತಿನಿಧಿಯಾಗಿ ಕಲ್ಕತ್ತ ಹಾಗೂ ಜಯಪುರಗಳಿಗೆ ಹೋಗಿ ಉಪಯುಕ್ತವಾದ ಸಲಹೆಗಳನ್ನು ನೀಡಿದರು. ಲಕ್ಷ್ಮಣಸ್ವಾಮಿ ಮೊದಲಿಯಾರ್ ಆಯೋಗ, ರಾಜ್ಯ ಪುನರ್ವಿಂಗಡಣಾ ಆಯೋಗ, ಭಾಷಾ ಆಯೋಗ ಮುಂತಾದವುಗಳ ಕೆಲಸದಲ್ಲಿ ತಮ್ಮ ಮಹತ್ವಪೂರ್ಣವಾದ ವಿಚಾರಗಳನ್ನು ಮುಂದಿಟ್ಟು ಸಮಸ್ಯೆಗಳಿಗೆ ಮೂರ್ತಸ್ವರೂಪದ ಪರಿಹಾರಗಳನ್ನು ಸೂಚಿಸಿದರು.

1945 ರಲ್ಲಿ ಶಾಸ್ತ್ರಿಯವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಹಾಗು ಯೂನಿವರ್ಸಿಟಿ ಕೌನ್ಸಿಲ್ ಸದಸ್ಯತ್ವದ ಗೌರವ ದೊರಕಿತು. ಆ ಕಾಲದಲ್ಲಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಶಾಸ್ತ್ರಿಗಳು


ವಿಶ್ವವಿದ್ಯಾನಿಲಯದ ಸ್ವಾಯತ್ತತೆಗಾಗಿ ಅರ್ಥಪೂರ್ಣ ಹೋರಾಟ ನಡೆಸಿದರು. 1946 ರಲ್ಲಿ ಹಳೆಯ ಮೈಸೂರಿನ ನ್ಯಾಯವಿಧಾಯಕ ಸಭೆಯ ಸದಸ್ಯತ್ವದ ಗೌರವ ಮೊದಲ ಬಾರಿಗೆ ಪ್ರೊ. ಎಂ.ಪಿ.ಎಲ್. ಶಾಸ್ತ್ರಿಯವರ ಪಾಲಿಗೆ ಬಂದಿತು. 1947 ರ ನಂತರ ನಮ್ಮ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾದ ಮೇಲೆ 1959 ರಿಂದ 1968 ರವರೆಗೆ ಸುದೀರ್ಘಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸಕ್ರಿಯವಾಗಿ ಕೆಲಸ ಮಾಡಿದರು. ಆ ಸಂದರ್ಭದಲ್ಲಿಯೇ ವಿಧಾನ ಮಂಡಲದ ಪಬ್ಲಿಕ್ ಅಕೌಂಟ್ಸ್ ಸಮಿತಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಣೆ ಮಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಅವಿರತವಾಗಿ ಪರಿಶ್ರಮ ಮಾಡಿದ್ಧ ಶಾಸ್ತ್ರಿಯವರನ್ನು ಶಿಕ್ಷಕರ ಪ್ರತಿನಿಧಿಯಾಗಿ ವಿಧಾನ ಪರಿಷತ್ತಿನ ರಾಜಕೀಯ ಪಕ್ಷದ ಸದಸ್ಯರನ್ನಾಗಿ ನಾಮಕರಣ ಮಾಡಬೇಕೆಂಬ ಸಲಹೆ ಬಂದಾಗ ಶಾಸ್ತ್ರಿಗಳು ಶಿಕ್ಷಕರ ಕ್ಷೇತ್ರವನ್ನು ರಾಜಕಾರಣದಿಂದ ಮುಕ್ತವಾಗಿಡಬೇಕೆಂದು ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ನೇರವಾಗಿ ಹೇಳಿದರು. ಅಷ್ಟೇ ಅಲ್ಲದೇ ತಾವು ಶಿಕ್ಷಕ ಕ್ಷೇತ್ರದಿಂದ ಸ್ಪರ್ಧಿಸಿ ಪ್ರಚಂಡ ಬಹುಮತದಿಂದ ಆಯ್ಕೆಯಾಗಿ ವಿಧಾನ ಪರಿಷತ್ತಿನ ಸದಸ್ಯರಾಗಿ ಬಂದರು. ಸತತವಾಗಿ ಮೂರು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿ, ವಿಧಾನ ಪರಿಷತ್ತಿನ ಇತಿಹಾಸದಲ್ಲಿ ದಾಖಲೆ ಸೃಷ್ಟಿಸಿದರು.

1945 ರಿಂದ 1947 ರವರೆಗೆ ಸಂಸ್ಕೃತಾಭ್ಯಾಸ ಪರೀಕ್ಷಾ ಮಂಡಳಿಯ ಸದಸ್ಯರಾಗಿದ್ದ ಶಾಸ್ತ್ರಿಗಳು, ಅನೇಕ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಸಮಿತಿಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ರಾಜ್ಯದ ಪ್ರಪ್ರಥಮ ಪ್ರಿ ಯೂನಿವರ್ಸಿಟಿ ಬೋರ್ಡ್, ಸೆಕೆಂಡರಿ ಎಜುಕೇಶನ್ ಬೋರ್ಡ್, ಯೂನಿವರ್ಸಿಟಿ ಶಿಕ್ಷಣಾಭಿವೃದ್ದಿ ಸಮಿತಿ, ಮೆಡಿಕಲ್ ಕಾಲೇಜು ಸಮಿತಿ,, ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯ ಸಂಸ್ಕೃತಿ, ಪಾಳೀ ಹಾಗೂ ಪ್ರಾಕೃತ ಭಾಷಾ ವಿಭಾಗದ ಅಧ್ಯಯನ ಸಮಿತಿ ಮುಂತಾದವುಗಳಲ್ಲಿ ಸದಸ್ಯರಾಗಿದ್ದುದು ಮಾತ್ರವಲ್ಲದೇ ರಾಷ್ಟ್ರದ ಅನೇಕ ವಿಶ್ವವಿದ್ಯಾನಿಲಯಗಳ ಸಂಸ್ಕೃತ ವಿಭಾಗದ ಸ್ನಾತಕೋತ್ತರ ಪದವಿಯ ಪರೀಕ್ಷಕರಾಗಿದ್ದರು.


ಹಲವಾರು ಸಂಘ ಸಂಸ್ಥೆಗಳಿಗೆ ಪ್ರೇರಕ ಶಕ್ತಿಯಾಗಿ ಸ್ಫೂರ್ತಿಯ ಚಿಲುಮೆಯಾಗಿದ್ದ ಶಾಸ್ತ್ರಿಯವರಿಗೆ ಉನ್ನತ ಗುಣಮಟ್ಟದ ಉಚ್ಚಶಿಕ್ಷಣ ನೀಡಬಲ್ಲ ಕಾಲೇಜೊಂದನ್ನು ಸ್ಥಾಪಿಸುವ ಬಯಕೆ ಬಹಳವಾಗಿತ್ತು. ಆಗ ಮಲ್ಲೇಶ್ವರಂ

ಬಡಾವಣೆಯಿಂದ ಮಧ್ಯಮ ವರ್ಗದ ಬಹುಜನ ಹೆಣ್ಣುಮಕ್ಕಳು ಸಾಕಷ್ಟು ದೂರವಿರುವ ಮಹಾರಾಣಿ ಕಾಲೇಜಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದರು. ಇವರಿಗಾಗಿಯೇ ಮಲ್ಲೇಶ್ವರದಲ್ಲಿ ಕಾಲೇಜೊಂದನ್ನು ಪ್ರಾರಂಭಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಶಾಸ್ತ್ರಿಗಳು 1955 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಕಾಲೇಜಿನ ಸ್ಥಾಪನೆಯ ಅವಶ್ಯಕತೆಯನ್ನು ಮನಗಾಣಿಸಿದ್ದರು.


ಇದೇ ವೇಳೆಗೆ ಬೆಂಗಾಲ್ ಲ್ಯಾಂಪ್ಸ್ ಸಂಸ್ಥೆಯ ನೇತಾರರಾಗಿದ್ದ ಖ್ಯಾತ ಕೈಗಾರಿಕೋದ್ಯಮಿ ಜಿ.ಎ. ಆಚಾರ್ಯರು ಹಾಗೂ ಭಾರತೀಯ ಕ್ರಿಕೆಟ್ ಕ್ಷೇತ್ರದ



ಶ್ರೀ. ಜಿ.ಎ. ಆಚಾರ್ಯ



ಶ್ರೀ ಎಂ. ಚಿನ್ನಸ್ವಾಮಿ



ಶ್ರೀ ಬಿ.ಆರ್. ಸುಬ್ಬರಾವ್

ದೊಡ್ಡ ಹೆಸರಾದ, ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ ಚಿನ್ನಸ್ವಾಮಿ ಹಾಗೂ ನಾಡಿನ ವಾಣಿಜ್ಯ ಶಿಕ್ಷಣದಲ್ಲಿ ಉನ್ನತ ಹೆಸರಾಗಿದ್ದ ಶ್ರೀ ಬಿ.ಆರ್. ಸುಬ್ಬರಾವ್ ಅವರುಗಳು ಶಾಸ್ತ್ರಿಯವರೊಡನೆ ಒತ್ತಾಸೆಯಾಗಿ ನಿಂತು ಮೈಸೂರು ಶಿಕ್ಷಣ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ, ಅದರ ಆಶ್ರಯದಲ್ಲಿ ಕಾಲೇಜನ್ನು ಪ್ರಾರಂಭಿಸಿಯೇ ಬಿಟ್ಟರು.


ಕಾಲೇಜು ಪ್ರಾರಂಭವಾದ ಘಳಿಗೆಯಿಂದಲೇ ಅದರ ಸಮಗ್ರ ಜವಾಬ್ದಾರಿ ಶಾಸ್ತ್ರಿಯವರದಾಯಿತು. 1956 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆಯನ್ನು ಪಡೆದ ಈ ಕಾಲೇಜು ಮಲ್ಲೇಶ್ವರದ ಹದಿನೈದನೆಯ ಕ್ರಾಸಿನಲ್ಲಿ ಪುಟ್ಟ ಕುಟೀರವಾಗಿದ್ದ ಆನಂದಾಶ್ರಮ ಎಂಬ ಸ್ಥಳದಲ್ಲಿ ಪ್ರಾರಂಭವಾಯಿತು. ಆನಂದಾಶ್ರಮದಲ್ಲಿ ಅಲ್ಲಲ್ಲಿ ಹರಡಿದ್ದ ಮಾವಿನ ಮರಗಳು, ಒಂದೆರಡು ತೆಂಗಿನ ಮರಗಳು, ನಿಜಕ್ಕೂ ಶಾಂತಿನಿಕೇತನದಂತಹ ತಂಪು ನೆರಳು. ವಿದ್ಯಾರ್ಥಿಗಳಿಗೆ ಗುರುಕುಲ ವಾಸದ ಅನುಭವ. ಗುರು ಶಿಷ್ಯರ ನಡುವಿನ ಮಧುರ ಬಾಂಧವ್ಯದ ಆ ಪರಿಸರ ಉತ್ತಮ ಭವಿತವ್ಯಕ್ಕೆ ನಾಂದಿ ಹಾಡಿದಂತಿತ್ತು. ಅಮೃತಘಳಿಗೆಯಲ್ಲಿ ಪ್ರಾರಂಭವಾದ ಈ ಕಾಲೇಜು ಕ್ರಿಯಾಸಿದ್ಧಿಯ ಪ್ರಮುಖ ನೆಲೆಯಾಗಿ ಪಲ್ಲವಿಸತೊಡಗಿತು.

1956 ರಲ್ಲಿ ಕೇವಲ ಕಲೆ ಮತ್ತು ವಾಣಿಜ್ಯ ವಿಭಾಗದಿಂದ ಕೂಡಿದ್ದ ಈ ಕಾಲೇಜು, 1958 ರ ತನಕ ಟಿ.ಸಿ.ಹೆಚ್ ತರಗತಿಗಳನ್ನು ನಡೆಸಿ, 1958ರಲ್ಲಿ ಪ್ರತ್ಯೇಕವಾಗಿ ಎಂ.ಇ.ಎಸ್ ಟೀಚರ್ಸ್ ಕಾಲೇಜನ್ನು ಪ್ರಾರಂಭಿಸಿತು. 1962 ರಲ್ಲಿ ವಿಜ್ಞಾನ ವಿಭಾಗವನ್ನು ಕಾಲೇಜಿನಲ್ಲಿ ಪ್ರಾರಂಭಿಸಲಾಯಿತು. 1969 ರಲ್ಲಿ ಸಂಜೆ ಕಾಲೇಜನ್ನು, 1970–71 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ನಿಲಯದ ಅನುಮತಿಯೊಂದಿಗೆ ಸಂಸ್ಕೃತ, ಇತಿಹಾಸ ವಿಭಾಗಗಳಲ್ಲಿ ಎಂ.ಎ. ತರಗತಿಗಳನ್ನು ಪ್ರಾರಂಭಿಸಲಾಯಿತು. 1977 ರಲ್ಲಿ ಕೇಂದ್ರ ಸರ್ಕಾರದ ವೃತ್ತಿಪರ ಕೋರ್ಸ್ ಶಿಕ್ಷಣ ಯೋಜನೆಯಂತೆ ವೃತ್ತಿಪರ ಶಿಕ್ಷಣದ ಡಿಪ್ಲೊಮಾ ತರಗತಿಗಳನ್ನು ಪ್ರಾರಂಭಿಸಲಾಯಿತು. ಹಾಗೆಯೇ ಸಂಜೆ ವೇಳೆಯಲ್ಲಿ ಸ್ನಾತಕೋತ್ತರ ಆಡಳಿತ ನಿರ್ವಹಣಾ ಡಿಪ್ಲೊಮಾ ಮತ್ತು ಇಂಡಾಲಜಿ ಡಿಪ್ಲೊಮಾ ವಿಭಾಗಗಳನ್ನು ಪ್ರಾರಂಭಿಸಲಾಯಿತು.

ಎಂ.ಇ.ಎಸ್. ಕಾಲೇಜಿನ ಬೆಳವಣಿಗೆಯ ಪ್ರಭಾವದ ಪ್ರಖರತೆ ಎಷ್ಟಿತ್ತೆಂದರೆ ಶಾಸ್ತ್ರಿಯವರು ಯೋಜನೆ ಹಾಕಿದೊಡನೆಯೇ ಎಂ.ಇ.ಎಸ್ ಕಿಶೋರ್



ಶ್ರೀಮತಿ ವಸುಮತಿ ಕೃಷ್ಣಸ್ವಾಮಿ



ಶ್ರೀಮತಿ ಇಂದುಮತಿ

ಕೇಂದ್ರದ ಭವ್ಯ ಕಟ್ಟಡವೂ ತಲೆ ಎತ್ತಿ ನಿಂತಿತು. ನರ್ಸರಿ ಪೂರ್ವ ಶಿಕ್ಷಣ 1979 ನವೆಂಬರ್‌ನಲ್ಲಿ ಪ್ರಾರಂಭವಾಯಿತು.

ಶ್ರೀಮತಿ ವಸುಮತಿ ಕೃಷ್ಣಸ್ವಾಮಿ ಮುಖ್ಯೋಪಾಧ್ಯಾಯಿನಿಯಾಗಿ ಸಂಸ್ಥೆಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಎರಡು ಮೂರು ವರ್ಷಗಳ ಬಳಿಕ ಅಭಿಮಾನಿಗಳ ಒತ್ತಡ ಹಾಗೂ ಬೇಡಿಕೆಯನ್ನು ನೋಡಿದ ದೂರದರ್ಶಕರಾದ ಎಂ.ಪಿ.ಎಲ್ ಶಾಸ್ತ್ರಿಯವರು, ಶ್ರೀಮತಿ ಇಂದುಮತಿಯವರ ಸಹಾಯದಿಂದ ಪ್ರಾಥಮಿಕ ಶಾಲಾ ವಿಭಾಗವನ್ನು ಆರಂಭಿಸಿದರು. ಇದು ಭಗೀರಥ ಪ್ರಯತ್ನವಾಗಿತ್ತು. ಏಕೆಂದರೆ ಅಂಗ್ಲ ಮಾಧ್ಯಮ ಶಾಲೆಯನ್ನು ಆರಂಭಿಸಲು ಸರ್ಕಾರವು ಅನುಮತಿಯನ್ನು ನೀಡುತ್ತಿರಲಿಲ್ಲ. ಆದರೆ ತಮ್ಮ ಸತತ ಪ್ರಯತ್ನದಿಂದ ಅಂಗ್ಲ ಮಾಧ್ಯಮ ಶಿಶುವಿಹಾರವನ್ನು ಸ್ಥಾಪಿಸಿದರು. ಪ್ರಾಥಮಿಕ ಶಾಲೆಯ ಪ್ರಾರಂಭ ದಿನಗಳು ಗುರುಕುಲದ ನೆನಪುಗಳನ್ನು ತಂದುಕೊಡುತ್ತವೆ. ಮರದ ಬುಡದಲ್ಲಿ ಪಾಠಗಳು, ಕೂಡಲು ಯೋಗ್ಯವಾದ ಕುರ್ಚಿಗಳು ಇಲ್ಲದಿರುವಿಕೆ, ಇವೆಲ್ಲವೂ ಈಗ ಅವಿಸ್ಮರಣೀಯ. ಆರಂಭಿಕ ದಿನಗಳಲ್ಲಿ ಕೇವಲ ಸುಧಾಖಂಡ ಹಾಗೂ ಶ್ಯಾಮಫಲಕಗಳನ್ನು ಬಳಸುತ್ತಿದ್ದವರು. ಅನಂತರದಲ್ಲಿ ಚಿತ್ರಪುಸ್ತಕ ಹಾಗೂ ವರ್ಣಬಳಪದ ಬಳಕೆಗೆ ಪರಿವರ್ತಿತರಾದರು. ಮೊಟ್ಟಮೊದಲಿಗೆ ಕಲಿಕೆ ಯನ್ನು ಶಿಶು ಕೇವಲ ಮೂರೂವರೆ ವರ್ಷಕ್ಕೆ ಆರಂಭಿಸುತ್ತಿತ್ತು. ಮೊದಲಿಗೆ ಒಂದು ದೊಡ್ಡದಾದ ಕ್ರೀಡಾಂಗಣದಲ್ಲಿ ಶಾಲಾ ಭವನದ ನಿರ್ಮಾಣವಾಯಿತು.



ಶ್ರೀಮತಿ ವಿಮಲಾ ರಂಗಾಚಾರ್

ಪ್ರಾರಂಭಿಕ ದಿನಗಳಲ್ಲಿ ಎಂ.ಇ.ಎಸ್ ಕಿಶೋರ ಕೇಂದ್ರದಲ್ಲಿ ಕೇವಲ 14 ವಿದ್ಯಾರ್ಥಿಗಳು ಮಾತ್ರ ಇದ್ದರು. ಇಂದು 1400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆ ಮತ್ತು ಎಂ.ಇ.ಎಸ್ ಜೂನಿಯರ್ ಕಾಲೇಜುಗಳು ಅತಿ ಕ್ಷಿಪ್ರ ಕಾಲದಲ್ಲಿಯೇ ತಲೆ ಎತ್ತಿ ನಿಂತವು. ಅದೇ ಕಟ್ಟಡದಲ್ಲಿ ಅತ್ಯಂತ ಸುಸಜ್ಜಿತವಾದ ಎಂ.ಇ.ಎಸ್ ಕಾಲೇಜಿನ ಕಂಪ್ಯೂಟರ್ ಲ್ಯಾಬೊರೇಟರಿಯೂ ಸಿದ್ಧವಾಯಿತು. ಆವರಣ ಅತ್ಯಂತ ಭವ್ಯ ಹಾಗೂ ವಿಶಾಲವಾದುದರಿಂದ ನಾಟ್ಯ, ನಾಟಕ, ಸಂಗೀತಗಳಿಗೆ ಅನುಕೂಲವಾಗುವಂತಹ ಒಂದು ರಂಗವೇದಿಕೆಯೂ ನಿರ್ಮಾಣವಾಯಿತು. ಸುವ್ಯವಸ್ಥೆಯಿಂದ ಒಡಗೂಡಿದ ಒಂದು ದೊಡ್ಡ ಸಭಾಂಗಣವೂ ಸಿದ್ಧವಾಯಿತು. ಸಭಾಂಗಣ ಹಾಗೂ ರಂಗವೇದಿಕೆಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತಹ ಎಂ.ಇ.ಎಸ್ ಶಿಕ್ಷಣ ಸಂಸ್ಥೆಗಳ ಕಲಾ ವಿಭಾಗವಾಗಿ ಎಂ.ಇ.ಎಸ್ ಕಲಾವೇದಿಕೆ ಹೆಮ್ಮೆಯಿಂದ ತಲೆ ಎತ್ತಿ ನಿಂತಿತು. ಎಂ.ಇ.ಎಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರೂ ಹಾಗೂ ನಾಡಿನ ಕಲಾಸಂಸ್ಕೃತಿಯ ಹಿರಿಯ ಹೆಸರಾಗಿರುವ ಶ್ರೀಮತಿ. ವಿಮಲಾ ರಂಗಾಚಾರ್ಯರ ನೇತೃತ್ವದಲ್ಲಿ ಎಂ.ಇ.ಎಸ್ ಕಲಾವೇದಿಕೆ ಎರಡೇ ವರ್ಷದಲ್ಲಿ ರಾಷ್ಟ್ರೀಯ ಮಹತ್ವದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೀಡಿತು. ಎಂ.ಇ.ಎಸ್ ಸಂಸ್ಥೆಗಳು ಬಿ.ಎಡ್ ಕಾಲೇಜು ಹಾಗೂ ಗಣಿತಶಾಸ್ತ್ರದಲ್ಲಿ ಎಂ.ಎಸ್ಸಿ ತರಗತಿಗಳೂ ಈ ಕಟ್ಟಡದಲ್ಲಿ ನಡೆಯ ತೊಡಗಿದವು. ಎಂ.ಪಿ.ಎಲ್ ಶಾಸ್ತ್ರಿಯವರ ದೂರ ದೃಷ್ಟಿಯ ಬೃಹತ್ ಫಲವೆನ್ನುವಂತೆ ಬಹಳ ವರ್ಷಗಳ ಹಿಂದೆಯೇ ರಾಜಾಜಿನಗರದ ಮಧ್ಯಭಾಗದಲ್ಲಿ ಪಡೆದ ದೊಡ್ಡ ನಿವೇಶನವೊಂದರಲ್ಲಿ ಶಿಕ್ಷಣ ಕಾಲೇಜು ಮತ್ತು ಮ್ಯಾನೇಜ್ಮೆಂಟ್ ಇನ್ಸ್ಟಿಟ್ಯೂಟ್ ಗಳಿಗಾಗಿ ಕಟ್ಟಡವು ಎದ್ದು ನಿಂತಿತು.

ಜನಪ್ರಿಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು "ಎಂ.ಪಿ.ಎಲ್ ಶಾಸ್ತ್ರಿ ಎಂದರೆ ಮೈಸೂರಿನ ಪವರ್ ಅಂಡ್ ಲೈಟ್" ಎಂದು ಸಹಸ್ರಾರು ಜನ ಸಭಿಕರೆದುರು ಘೋಷಿಸಿ ಅಭಿನಂದಿಸಿದರು. ಶಾಸ್ತ್ರಿಯವರಿಗೆ

ಬಾಲ್ಯದಲ್ಲಿಯೇ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಿಂದ 'ಬಾಲ ಸರಸ್ವತಿ' ಎಂಬ ಅನುಗ್ರಹಪೂರ್ವಕ ನಾಮಧೇಯವೂ ಆಗಿದ್ಧಿತು. ಅಖಿಲ ಭಾರತ ಪಂಡಿತ ಮಹಾ ಸಮ್ಮೇಳನವು 1948 ರಲ್ಲಿ ಶಾಸ್ತ್ರಿಯವರಿಗೆ "ವಿದ್ಯಾ ಭೂಷಣ" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅಯೋಧ್ಯೆಯ ಸಂಸ್ಕೃತ ಕಾರ್ಯಾಲಯವು 1964ರಲ್ಲಿ ಶಾಸ್ತ್ರರತ್ನ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1968 ರ ನವರಾತ್ರಿಯ ವಿಶೇಷ ಸಂದರ್ಭದಲ್ಲಿ ಶೃಂಗೇರಿ ಜಗದ್ಗುರುಗಳು"ವಿದ್ಯಾಸಾಗರ" ಎಂಬ ಪ್ರಶಸ್ತಿ ನೀಡಿ ಅನುಗ್ರಹಿಸಿದರು. ಶಾಸ್ತ್ರಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರವು 1985 ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಅವರಿಗೆ ನೀಡಿ ಗೌರವಿಸಿತು.

ಶ್ರೀ ಎಂ.ಪಿ.ಎಲ್ ಶಾಸ್ತ್ರಿಗಳ ನಂತರ ಸಂಸ್ಥೆಯ ಜವಾಬ್ದಾರಿಯನ್ನ ಐ.ಎ.ಎಸ್ ಅಧಿಕಾರಿಯಾಗಿ ನಾನಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ಧ ಶ್ರೀ ಕೆ.ಪಿ ಸುರೇಂದ್ರನಾಥ್ ಅವರು ವಹಿಸಿಕೊಂಡಿದ್ದರು. ಅವರ ಪರಿಶ್ರಮದಿಂದ ವಿದ್ಯಾರಣ್ಯಪುರದಲ್ಲಿ ಎಂ.ಇ.ಎಸ್ ಕೆ.ಕೆ ಪಬ್ಲಿಕ್ ಸ್ಕೂಲ್ ಮತ್ತು ಎಂ.ಇ.ಎಸ್ ಬಿ.ಆರ್.ಎಸ್ ಪಿಯು ಕಾಲೇಜುಗಳ ಸ್ಥಾಪನೆಯಾಯಿತು. ಪ್ರಸ್ತುತ ಆಡಳಿತ ಮಂಡಳಿಯಲ್ಲಿ ಶ್ರೀ ಎಸ್. ಎಸ್. ರಾಮದಾಸ್ ಅಧ್ಯಕ್ಷರಾಗಿ, ಪ್ರೊ॥ ಬಿ.ಆರ್ ಶೇಷಾದ್ರಿ ಅಯ್ಯಂಗಾರ್ ಉಪಾಧ್ಯಕ್ಷರಾಗಿ, ಶ್ರೀ ದಿಲೀಪ ಮಾವಿನಕುರ್ವೆ ಕಾರ್ಯದರ್ಶಿಗಳಾಗಿ, ಶ್ರೀ



ದೇವೇಂದ್ರ ನಾಯಕ್ ಖಜಾಂಚಿಗಳಾಗಿ, ಶ್ರೀಮತಿ. ವಿಮಲಾ ರಂಗಾಚಾರ್, ಶ್ರೀ ಎಂ.ಎಲ್ ಶ್ರೀನಾಥ್, ಡಾ. ಬಾಬು ಪದ್ಮನಾಭನ್, ಶ್ರೀ ಸುಖೇನ್ ಪದ್ಮನಾಭ, ಶ್ರೀ ಶಾಂತರಾಜು ಬಿ.ಎಸ್, ಶ್ರೀ ಚಕ್ರವರ್ತಿ ಮೋಹನ್ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಇವರೊಡನೆ ಗೋಪಾಲ ಕೃಷ್ಣ ಜೋಶಿ, ಶ್ರೀಮತಿ. ಮಧು ನಾಗರಾಜ್, ಶ್ರೀ ಕೆ ಎಸ್ ನರಹರಿ, ಡಾ.ಎಚ್ ಎಸ್ ಗಣೇಶ್ ಭಟ್, ಡಾ.ಎಸ್.ಸಿ ಶರ್ಮಾ ಹಾಗೂ ಪ್ರೊ॥ ವಿ ನಾಗರಾಜ ಸದಸ್ಯರಾಗಿ ಎಂ.ಇ.ಎಸ್ ಸಂಸ್ಥೆಗಳ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ.

ಹಿಮಾಂಶು ಜ್ಯೋತಿ ಕಲಾಪೀಠ

74, ಹಿಮಾಂಶು ಶಾಸ್ತ್ರಿ ರಸ್ತೆ, 4ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560 055

ಎಂ. ಎಲ್. ಶ್ರೀನಿವಾಸ ಶಾಸ್ತ್ರಿಗಳು ಮತ್ತು ಶ್ರೀಮತಿ ಸುಂದರಮ್ಮನವರಿಂದ 1942 ರಲ್ಲಿ ತಮ್ಮ ಪ್ರೀತಿಯ ಮಗುವಾದ ಹಿಮಾಂಶುವಿನ ಹೆಸರಿನಲ್ಲಿ ಸ್ಥಾಪಿತವಾಗಿರುವುದೇ ಹಿಮಾಂಶು ಜ್ಯೋತಿ ಕಲಾ ಪೀಠ – ಶಿಶುವಿಹಾರದಿಂದ ಪ್ರಾರಂಭವಾದ ಶಿಕ್ಷಣಸಂಸ್ಥೆ, ಇಂದು ಕಾಲೇಜಿನವರೆಗೆ ಬೆಳೆದು ಉನ್ನತ ಶಿಕ್ಷಣ ನೀಡುವಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಲ್ಲಿ ಒಂದಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.



ಸಂಸ್ಥೆಯ ಸಂಸ್ಥಾಪಕರಾದ ಶ್ರೀಯುತ ಶ್ರೀನಿವಾಸ ಶಾಸ್ತ್ರಿಗಳು ಸಾಹಿತ್ಯ, ಸಂಗೀತ, ನಾಟಕ ಶಿಕ್ಷಣ ರಾಜನೀತಿ, ವ್ಯಾಪಾರ ಮುಂತಾದ ಹಲವು ಹವ್ಯಾಸಗಳನ್ನು ಬೆಳಸಿಕೊಂಡಿದ್ಧರೂ ನಾಟಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ,

ಶಾಸ್ತ್ರಿಗಳು ಚಿಕ್ಕಂದಿನಿಂದಲೂ ನಾಟಕ ಪ್ರೇಮಿ, ವಿಶೇಷವಾಗಿ ಪೌರಾಣಿಕ ಹಾಗೂ ಚಾರಿತ್ರಿಕ ನಾಟಕಗಳಲ್ಲಿ ಶಾಸ್ತ್ರಿಗಳಿಗೆ ಶಾಲೆಯ ಕಲಿಕೆಗಿಂತ ಹೆಚ್ಚು ಪ್ರೀತಿ. ಇವರ ವಿದ್ಯಾಭ್ಯಾಸ ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ನಡೆಯಿತು. ಸರ್ವಶ್ರೀ ವಿ.ಟಿ. ಶ್ರೀನಿವಾಸನ್, ದೇವುಡು ನರಸಿಂಹಶಾಸ್ತ್ರಿ ಡಿ.ವಿ.ಜಿ., ಟಿ.ಪಿ. ಕೈಲಾಸಂ, ಡಾ ಬಿ. ವೆಂಕಟಸುಬ್ಬರಾವ್, ಮಾಜಿ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿ, ಕೆ. ಹನುಮಂತಯ್ಯ, ಎಸ್.ನಿಜಲಿಂಗಪ್ಪ ಮುಂತಾದ ಅನೇಕ ಪ್ರತಿಷ್ಠಿತ ಮಹನೀಯರು ಶಾಸ್ತ್ರಿಗಳ ನಿಕಟವರ್ತಿಗಳಾಗಿದ್ದರು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಶಾಸ್ತ್ರಿಗಳ ದೃಷ್ಟಿ ಸಾಹಿತ್ಯದ ಕಡೆಗೆ ಹೊರಳಿತು. 1958ರಲ್ಲಿ ಸಂಟ್ರಲ್ ಕಾಲೇಜಿನ ಶತಾಬ್ದಿ ಉತ್ಸವದಲ್ಲಿ ಅಗ್ರಸ್ಥಾನ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರಾದ ಮೇಲೆ ಶಾಸ್ತ್ರಿಗಳು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ನ್ಯಾಯಶಾಸ್ತ್ರವನ್ನು ಅಭ್ಯಸಿಸಿ ಪದವೀಧರರಾದರು. ಮದರಾಸಿನಲ್ಲಿದ್ದಾಗ Servants of India Society ಯ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳ ಸಂಪರ್ಕವಾಯಿತು. ನಂತರ ಬೆಂಗಳೂರಿಗೆ ಬಂದು, ತಂದೆಯವರಿಂದ ಪಡೆದಿದ್ದ ಮಲ್ಲೇಶ್ವರ ವಿಸ್ತೃತ ನಿವೇಶನದಲ್ಲಿ ಒಂದು ಪುಟ್ಟ ಮನೆ ಮಾಡಿ ಧರ್ಮಪತ್ನಿ ಸುಂದರಮ್ಮನವರೊಡನೆ ಗೃಹ ಜೀವನವನ್ನು ಪ್ರಾರಂಭಿಸಿದರು.



ಹಿಮಾಂಶು

ಡಿಸೆಂಬರ್ 31,1933 ಶ್ರೀಮುಖನಾಮ ಸಂವತ್ಸರ, ಪುಷ್ಯ ಶುದ್ಧ ಹುಣ್ಣಿಮೆ ರಾತ್ರಿ ಶಾಸ್ತ್ರಿ ದಂಪತಿಗಳಿಗೆ ಒಂದು ಗಂಡು ಮಗು ಹುಟ್ಟಿತು. ಆ ಮಗುವೇ ಹಿಮಾಂಶು. ಅದೇ ಸಮಯದಲ್ಲಿ ಶಾಸ್ತ್ರಿಗಳು – ಹಿಮಾಂಶು ಅಂಡ್ ಕಂಪನಿ ಎಂಬ ರೇಡಿಯೋ ಹಾಗೂ ವಿದ್ಯುತ್ ಸಲಕರಣೆಗಳ ಅಂಗಡಿಯನ್ನು ಅಂದಿನ ಸೌತ್ ಪೆರೇಡ್‌ನಲ್ಲಿ ತೆರೆದರು. ಸುಮಾರು ಮೂವತ್ತು ವರ್ಷಗಳ ಕಾಲ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿತ್ತು. ಮೂರು ವರ್ಷ ತುಂಬದ ಮಗು ಹಿಮಾಂಶು ಯಕೃತ್ತಿನ (Liver Cirrhosis) ರೋಗಕ್ಕೆ ತುತ್ತಾಗಿ 1936 ರಲ್ಲಿ ಹಠಾತ್ತನೆ ತೀರಿಕೊಂಡಿತು. ಶಾಸ್ತ್ರಿ

ದಂಪತಿಗಳಿಗೆ ಸಿಡಿಲೆರಗಿದಂತಾಯ್ತು. ಈ ಸಮಯದಲ್ಲಿ ಸರಸ್ವತಮ್ಮನವರು ಶಾಸ್ತ್ರಿ ದಂಪತಿಗಳಿಗೆ ಸಾಂತ್ವನ ನೀಡುತ್ತಾ ಈ ದುಃಖವನ್ನು ಮರೆಯಲು ಮಕ್ಕಳ ಸೇವೆ ಒಂದು ಉತ್ತಮ ಮಾರ್ಗವೆಂದು ಮಕ್ಕಳ ಬೆಳವಣಿಗೆಗಾಗಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಪ್ರೇರೇಪಿಸಿದರು. ಶಾಸ್ತ್ರಿ ದಂಪತಿಗಳು ಹಿಂತಿರುಗಿ ನೋಡದೆ ಕಾರ್ಯೋನ್ಮುಖರಾಗಿ 1942 ರಲ್ಲಿ ಶಿಶುವಿಹಾರವನ್ನು ಪ್ರಾರಂಭಿಸಿದರು. ಈ ವೇಳೆಯೇ ಮಗಳು ಚಿತ್ರಾಳ ಜನನವಾಯಿತು.

ಮೈಸೂರು ಸಂಸ್ಥಾನದಲ್ಲಿ ಶಿಶುವಿಹಾರ ಆಗತಾನೆ ಪ್ರಾರಂಭವಾಗುತ್ತಿದ್ದ ಕಾಲ. ಪ್ರಾಯಶಃ ಹಿಮಾಂಶು ಶಿಶುವಿಹಾರವೇ ಬೆಂಗಳೂರಿನ ಮೊದಲ ಶಿಶುವಿಹಾರ ಇರಬಹುದು. ಶಾಸ್ತ್ರಿ ದಂಪತಿಗಳು ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಎಮ್. ಎಸ್. ಚೆನ್ನಕೇಶವಯ್ಯ, ಹೆಚ್, ಯೋಗನರಸಿಂಹಂ ಮತ್ತಿತರ ಶಿಶು ಶಿಕ್ಷಣ ತಜ್ಞರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದ ಮನ್ಯಶಾಸ್ತ್ರ ಪ್ರಾಧ್ಯಾಪಕರಾದ ಗೋಪಾಲಕೃಷ್ಣ ಸ್ವಾಮಿಯವರ ಸಲಹೆಯಿಂದ ಹಿಮಾಂಶು ಶಿಶುವಿಹಾರ ಬೆಳವಣಿಗೆಗೆ ಸಹಾಯ ಪಡೆದರು. ಶಾಸ್ತ್ರಿ ದಂಪತಿಗಳ ಮಗಳು ಚಿತ್ರಾಗೆ ನಾಲ್ಕು, ವರ್ಷ ತುಂಬುವ ವೇಳೆಗೆ ಪೂರ್ವ ಪ್ರಾಥಮಿಕ ಶಾಲೆಗಳಿರಲಿಲ್ಲ. ಅವಳ ಸಲುವಾಗಿ ಉತ್ತಮ ಶಾಲಾವಾತಾವರಣವನ್ನು ನಿರ್ಮಿಸಲು 1942 ರಲ್ಲಿ ಹಿಮಾಂಶು ಶಿಶುವಿಹಾರ ಮಲ್ಲೇಶ್ವರಂ ನಾಲ್ಕನೆಯ ಮುಖ್ಯರಸ್ತೆಯಲ್ಲಿ ಶಾಸ್ತ್ರಿಗಳ ನಿವೇಶನದಲ್ಲೇ ವಿದ್ಯುಕ್ತವಾಗಿ ಪ್ರಾರಂಭವಾಯಿತು. ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರಾದ ಬಿ. ಸಂಜೀವರಾವ್ ಅವರನ್ನು ಒಳಗೊಂಡ ಒಂದು ಸಂದರ್ಶಕ ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಮದರಾಸಿನ ಪ್ರಸಿದ್ದ ಶಿಶುವಿಹಾರ Children Garden School ಸ್ಥಾಪಕರಾದ ಡಾ॥ ಶರ್ಮ ಮತ್ತು ಶ್ರೀಮತಿ ಶರ್ಮ ಅವರಿಂದಲೂ ಅಮೂಲ್ಯ ಸಲಹೆಗಳನ್ನು ಪಡೆದರು.

ಕುಮಾರಿ ಚಿತ್ರಾ ಶಾಲೆಯ ಪ್ರಥಮ ವಿದ್ಯಾರ್ಥಿನಿಯಾಗಿ 5–6 ಮಕ್ಕಳಿಂದ ಪ್ರಾರಂಭವಾದ ಶಾಲೆ ದಿನದಿನಕ್ಕೂ, ಬೆಳೆಯುತ್ತಾ ಬಂದಿತು. ಹಿಮಾಂಶು ಶಿಶುವಿಹಾರವು 1954 ರಲ್ಲಿ ಹಿಮಾಂಶು ಜ್ಯೋತಿ ಕಲಾ ಪೀಠ ಎಂದು ಕರೆಯಲ್ಪಟ್ಟಿತು. ಮಾಂಟೆಸರಿ ಶಿಕ್ಷಣ ಪದ್ಧತಿಯನ್ನು ಅಳವಡಿಸಲಾಯಿತು. ಪ್ರತಿದಿನವೂ ಶಾಸ್ತ್ರಿ ದಂಪತಿಗಳು, ಶಿಕ್ಷಕರು, ಮಕ್ಕಳು ಮತ್ತು ಪೋಷಕರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಶಿಕ್ಷಕರನ್ನು ಗೌರವದಿಂದ ಕಾಣುತ್ತಿದ್ದರು. ಶಾಲೆಗಾಗಿ ಪುಟ್ಟ ರಂಗಮಂದಿರವನ್ನು ನಿರ್ಮಿಸಿ ಮಕ್ಕಳ ಅಭಿನಯಕಲೆ,

ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. 1965 ರಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ಅಂದಿನ ಕಾಲಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಇದು ಒಂದು ವಿಶಿಷ್ಟ ಕೊಡುಗೆಯಾಯಿತು. 1972 ರಲ್ಲಿ ಶಿಶುವಿಹಾರದ ಶಿಕ್ಷಕಿಯರ ತರಬೇತಿ ಕೇಂದ್ರವು ಪ್ರಾರಂಭವಾಯಿತು. ಇಂದಿಗೆ 1800 ಕ್ಕೂ ಮೀರಿ ಪ್ರತಿಭಾನ್ವಿತ ಶಿಶುವಿಹಾರ ಶಿಕ್ಷಕಿಯರು ಈ ಸಂಸ್ಥೆಯಿಂದ ತರಬೇತಿ ಹೊಂದಿ ದೇಶವಿದೇಶಗಳಲ್ಲಿ ಶಿಕ್ಷಣ ವೃತ್ತಿಯಲ್ಲಿ ನಿರತರಾಗಿರುತ್ತಾರೆ. 1996 ರಲ್ಲಿ ಹಿಮಾಂಶು ಶಿಶು ಶಿಕ್ಷಣ ತರಬೇತಿ ಕೇಂದ್ರವು ರಜತ ಮಹೋತ್ಸವವನ್ನು ಆಚರಿಸಿತು. ಅಂದು ಡಾ॥ ಮರಿಯ ಮಾಂಟೆಸ್ಸೊರಿ ಅವರ ಪುತ್ರ ಮಾರಿಯೊ ಮಾಂಟೆಸ್ಸೊರಿ ಶಾಲೆಗೆ ಭೇಟಿ ನೀಡಿ ಸಂತೋಷವನ್ನು ವ್ಯಕ್ತಪಡಿಸಿದರು. ಈ ಎಲ್ಲ ಕೀರ್ತಿ ಹಿಮಾಂಶುಗೆ ಸೇರಬೇಕಾದದ್ದು.

ಮದರಾಸಿನಲ್ಲಿ ತರಬೇತಿ ಪಡೆದಿದ್ದ ಶ್ರೀಮಲು, ಡಾ॥ ಮರಿಯ ಮಾಂಟೆಸ್ಸೊರಿಯವರ ಶಿಷ್ಯರಾಗಿದ್ದ ಎಸ್. ಆರ್. ಸ್ವಾಮಿ ಇವರ ಸೇವಾನುಭವ ಹಿಮಾಂಶು ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕರೆದೊಯ್ಯುವಂತಾಯಿತು. ಈಗ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಮಾಂಟೆಸ್ಸೊರಿ ಕಿಂಡರ್ ಗಾರ್ಡನ್ ಎರಡೂ ಪದ್ಧತಿಗಳಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಲಾಗುತ್ತದೆ. ಪ್ರಾಯಶ: ಈ ಎರಡೂ ಪದ್ಧತಿಗಳನ್ನು ಅಳವಡಿಸಿರುವುದು ಹಿಮಾಂಶು ಶಿಕ್ಷಣ ಸಂಸ್ಥೆಯಲ್ಲೇ. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಶಿಕ್ಷಣ ಇಲಾಖೆಯ ಸಂಶೋಧನ ವಿಭಾಗದಲ್ಲಿ ರಂಗಕಲೆಯ ಮೂಲಕ ಶಿಕ್ಷಣ" ಎಂಬ ಕಲ್ಪನೆ ರೂಪಗೊಳ್ಳುತ್ತಿದೆ. ಶಿಕ್ಷಣ ಮಾಧ್ಯಮದಲ್ಲಿ ಈ ಹೊಸಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಸಿದ್ಧತೆ ನಡೆಯುತ್ತಿದೆ. ಆದರೆ ಈ ಮುಂಗಾಣ್ಕೆ 70 ವರ್ಷಗಳ ಹಿಂದೆಯೇ ಶ್ರೀನಿವಾಸ ಶಾಸ್ತ್ರಿಗಳ ಮನಸ್ಸಿನಲ್ಲಿ ಇತ್ತೆಂಬುದು ವಿಶೇಷವೇ ಸರಿ.

ವರ್ಷಗಳು ಕಳೆದಂತೆ, ಶಾಸ್ತ್ರಿಗಳ ಒಲವು ಆಧ್ಯಾತ್ಮಿಕ ಚಿಂತನೆಗಳ ಕಡೆ ಹೊರಳಿದರೂ ಅವರ ಜೀವನ ಶ್ರದ್ಧೆ ಕಾರ್ಯತತ್ಪರತೆ ಸ್ವಲ್ಪವೂ ಕುಗ್ಗಲಿಲ್ಲ. ಅನಾರೋಗ್ಯದ ಸಲುವಾಗಿ ಓಡಾಟ ಕಡಿಮೆಯಾಯಿತಾದರೂ ಅಂತಃ ಶಕ್ತಿ ವಿಷಯ ಗ್ರಹಿಕೆಯ ಕುತೂಹಲ, ಸಾಮಾಜಿಕ ಸಂಪರ್ಕ ಸದ್ಭಾವನೆಗಳನ್ನು ಕೊನೆಯವರೆಗೂ ಉಳಿಸಿಕೊಂಡು ಬಂದರು. ಶಾಸ್ತ್ರಿಗಳ ಆರೋಗಸ್ಥಿತಿ ಕೆಡುತ್ತಾ ಬಂತು ಆಗಸ್ಟ್ 4,1984 ರಂದು ಇಹಲೋಕ ತ್ಯಜಿಸಿದರು.



ಶಾಸ್ತ್ರಿಗಳ ಮರಣದ ನಂತರ ಸಂಸ್ಥೆಯ ಆಡಳಿತ ಜವಾಬ್ದಾರಿಯನ್ನು ಮಗಳಾದ ಶ್ರೀಮತಿ ಚಿತ್ರಾ, ಅಳಿಯ ಬಿ.ವಿ. ಅಶ್ವತ್ಥ ನಾರಾಯಣರಾವ್ ಅವರು ವಹಿಸಿಕೊಂಡರು. ಶ್ರೀಮತಿ ಚಿತ್ರಾ ಎ. ರಾವ್ ಅವರು ಉನ್ನತ ಶಿಕ್ಷಣ ಪಡೆದು ಹೊರದೇಶಗಳಲ್ಲೆಲ್ಲಾ ತಿರುಗಾಡಿ ಶಿಶುಶಿಕ್ಷಣ, ಕುಶಲಕಲೆ ಶಾಸ್ತ್ರೀಯ ನೃತ್ಯ, ಮುಂತಾದ ಅನೇಕ ಕ್ಷೇತ್ರಗಳಲ್ಲಿ ನುರಿತವರಾಗಿದ್ದಾರೆ. ಇವರಿಗೆ ಸಹಾಯ ಮಾಡುತ್ತಾ ಶ್ರೀ ಬಿ.ವಿ. ಅಶ್ವತ್ಥ ನಾರಾಯಣ ರಾವ್, ಹಿಮಾಂಶು ಜ್ಯೋತಿ ಕಲಾ ಪೀಠದ ಸೂತ್ರಗಳನ್ನು ಹಿಡಿದು ಅದರ ಮುನ್ನಡೆಯ ಸಾಧನೆಯಲ್ಲಿ ತಮ್ಮ ಜೀವಿತವನ್ನು ಅರ್ಪಿಸಿಕೊಂಡರು. ಶ್ರೀನಿವಾಸ ಶಾಸ್ತ್ರಿ ಹಾಗೂ ಸುಂದರಮ್ಮನವರ ಆದರ್ಶಧ್ಯೇಯಗಳು ಅವರಿಗೆ ದಾರಿದೀಪವಾದವು. 1982ರಲ್ಲಿ ಪ್ರೌಢಶಾಲೆ ಹಾಗೂ 2005ರಲ್ಲಿ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಯಿತು.


2007ರಲ್ಲಿ ಹಿಮಾಂಶು ಜ್ಯೋತಿ ಕಲಾ ಪೀಠವು ತನ್ನ ವಜ್ರಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿಕೊಂಡಿತು. ಶಾಸ್ತ್ರಿಗಳ ಮೊಮ್ಮಕ್ಕಳು, ರಾವ್ ದಂಪತಿಗಳ ಮಕ್ಕಳು ವೀಣಾ ಮತ್ತು ಜಯಂತ್ ಅವರೂ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಅಮೇರಿಕಾ ದೇಶದಲ್ಲಿದ್ದರೂ ಹಿಮಾಂಶು ಸಂಸ್ಥೆಗೆ ಅತಿ ಹತ್ತಿರದಲ್ಲಿದ್ದಾರೆ. 2017ರಲ್ಲಿ ಈ ಸಂಸ್ಥೆಯು ಅಮೃತ ಮಹೋತ್ಸವವನ್ನು ಆಚರಿಸಿಕೊಂಡಿತು. ಪ್ರಸ್ತುತ ಡಾ. ರಾವ್ ಅವರ ಸಹೋದರ ಶ್ರೀ ಬಿ.ಬಿ. ವಿಜಯಕುಮಾರ್ ಅವರು ಈ ಸಂಸ್ಥೆಯ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಯಲ್ಲಿರುವ ಶಿಕ್ಷಕರು ಹೆಚ್ಚು ಅನುಭವವಿರುವವರಾಗಿದ್ದು, ಒಂದೇ ಕುಟುಂಬದಂತೆ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಸಹಕರಿಸುತ್ತಿದ್ದಾರೆ. ಸಮಾಜದ ಹಿತವೇ ಸಂಸ್ಥೆಯ ಗುರಿಯಾಗಿದ್ದು, ಉತ್ತಮ ನಾಗರಿಕರನ್ನಾಗಿ ಮಾಡುವಲ್ಲಿ ಸಮಾಜಕ್ಕೆ ಮಾದರಿಯಾದ ಉತ್ತಮ ಗುಣಮಟ್ಟದ ಸಂಸ್ಥೆಯಾಗಿದೆ ಎಂಬುದು ಅತಿಶಯೋಕ್ತಿಯಲ್ಲ.



ಪ್ರಸ್ತುತ ಹಿಮಾಂಶು ವಿದ್ಯಾಸಂಸ್ಥೆಯ ಟ್ರಸ್ಟನ್ನು ನಡೆಸುತ್ತಿರುವವರು: ಶ್ರೀಮತಿ ಚಿತ್ರಾ ಎ ರಾವ್, ಶ್ರೀ ಬಿ.ವಿ.ಎ ರಾವ್, ಪ್ರೊ. ಕೆ. ಆರ್. ಎಸ್. ಮೂರ್ತಿ, ಡಾ. ವಿ.ಪಿ.ರಾವ್, ಡಾ. ಇ. ಎಸ್. ದ್ವಾರಕಾದಾಸ್, ಡಾ. ಜೈ ರಾವ್, ಶ್ರೀಮತಿ ವೀಣಾ ರಾವ್ ಸುಕುಮಾರ, ಶ್ರೀ ಬಿ. ವಿ. ವಿಜಯ ಕುಮಾರ್, ಶ್ರೀ ಅಶೋಕ ಗೋಪಿನಾಥ.

ಶ್ರೀ ಸರಸ್ವತಿ ವಿದ್ಯಾ ಮಂದಿರ

ನಂ.9, ವಾಣಿವಿಲಾಸ್ ರಸ್ತೆ, ವಿಶ್ವೇಶ್ವರಪುರಂ, ಬಸವನಗುಡಿ,
ಬೆಂಗಳೂರು–560004



ಜಿ. ಶ್ರೀನಿವಾಸ ಶರ್ಮ
ಸ್ಥಾಪಕರು

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣೀ
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥

ನನ್ನಿಂದ ಸಾಧ್ಯವೇ?
ಎಂಬ ಪ್ರಶ್ನೆಯನ್ನು ನನ್ನಿಂದ ಸಾಧ್ಯ
ಎಂದು ಬದಲಾಯಿಸುವುದು
ಯಶಸ್ಸಿನ ಮೊದಲ ಹೆಜ್ಜೆ

73 ವರ್ಷಗಳ ಹಿಂದೆ ಸುಮಾರು 25 ವರ್ಷದ ವಯಸ್ಸಿನ ಉತ್ಸಾಹಿ ತರುಣ ತನ್ನ ಆದರ್ಶಗಳಿಗೆ ಸೂಕ್ತ ರೂಪು ರೇಷೆ ಕೊಡಬೇಕೆಂದು ಕನಸು ಕಾಣುತ್ತಿರುವಾಗ, ಆ ಕನಸು ನನಸಾದದ್ದು ಒಂದು ಪುಟ್ಟ ಶಾಲೆ ಸ್ಥಾಪನೆಯಾದಾಗ. ಆ ಉತ್ತಮ ಯೋಚನೆಯನ್ನು ಅತ್ಯುತ್ತಮ

ಯೋಜನೆಯಾಗಿ ಪರಿವರ್ತಿಸಿದ ಉತ್ಸಾಹಿ ತರುಣ ನಮ್ಮ ಜಿ.ಎಸ್. ಶರ್ಮಾಜಿ ರವರು. ವಿದ್ಯೆಗೆ ಅಧಿಪತಿಯಾದ ಆ ವಾಗ್ದೇವಿಯ ಹೆಸರನ್ನೇ ಮನದಲ್ಲಿ ನೆನೆದು 'ಶ್ರೀ ಸರಸ್ವತಿ ವಿದ್ಯಾ ಮಂದಿರ' ಎಂಬ ಹೆಸರಿನೊಂದಿಗೆ 9 ಮಕ್ಕಳಿಂದ ಭಾರತದ ಸಂಸ್ಕೃತಿಯನ್ನೊಳಗೊಂಡ ಶಾಲೆಯನ್ನು ತೆರೆದರು. ಇಂದು ಈ ಶಿಕ್ಷಣ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುತ್ತಿರುವುದನ್ನು ಕಾಣಬಹುದು. ಬಾಪುವಿನ ಜನ್ಮದಿನದಂದು ಉದಿಸಿದ ಶಾಲೆಯಿದು. ಪುಟ್ಟ ಹೆಜ್ಜೆಗಳ ವಾಮನ ಆಕಾಶದೆತ್ತರಕ್ಕೆ ತ್ರಿವಿಕ್ರಮನಾದಂತೆ ಹಂತ ಹಂತವಾಗಿ ದಿಕ್ಕುಗಳಿಗೆ ಜ್ಞಾನಜ್ಯೋತಿಯನ್ನು ಪಸರಿಸುತ ಬೆಳೆದ ವೀರ ಗಾಥೆಯಿದು, ಯಶೋಗಾಥೆಯಿದು. 70 ರ ದಶಕವನ್ನು ದಾಟಿ ನದಿಯ ನೀರು ಸರಾಗವಾಗಿ ಹರಿದು ಸಮುದ್ರ ಸೇರುವಂತೆ ಸಮಾಜಕ್ಕೆ ಭಾರತಿಯ ಸಂಸ್ಕೃತಿ, ಮೌಲ್ಯಗಳನ್ನು ವಿದ್ಯೆಯ ಜೊತೆಯಲ್ಲಿ ಸೇರಿಸಿ ನೀಡುತ್ತಿರುವ ಸನಾತನ ಸಂಸ್ಥೆ ಈ ನಮ್ಮ ಶ್ರೀ ಸರಸ್ವತಿ ವಿದ್ಯಾ ಮಂದಿರ. ನೀವು ಒಂದು ವರ್ಷಕ್ಕೆ ಯೋಜಿಸುವುದಿದ್ಧರೆ ಧಾನ್ಯಗಳನ್ನು ಬಿತ್ತಿರಿ. ಆದರೆ ಒಂದು ದಶಕಕ್ಕೆ ಯೋಜಿಸುವುದಿದ್ಧರೆ ಮರಗಳನ್ನು ನೆಡಿರಿ. ಆದರೆ ಒಂದು ಶತಮಾನಕ್ಕೆ ಯೋಜಿಸುವುದಾದಲ್ಲಿ ಮಕ್ಕಳಿಗೆ ವಿದ್ಯೆಯನ್ನು ನೀಡಿರಿ ಎಂಬುದು ಚೀನಾದ ಒಂದು ಪುರಾತನ ಗಾದೆಯಾಗಿದೆ. ಮಾನವ ಶಿಕ್ಷಣ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಬಲವಾದ ಶಕ್ತಿ ಎಂಬುದನ್ನು ಈ ಗಾದೆ ಮನವರಿಕೆ ಮಾಡಿಕೊಡುತ್ತದೆ. ಇದನ್ನರಿತ ಶ್ರೀ ಜಿ.ಎಸ್.ಶರ್ಮರವರು ಕ್ರಿ.ಶ. 1950 ರ ಅಕ್ಟೋಬರ್ ಎರಡರಂದು ಈ ಶಾಲೆಯನ್ನು ಪ್ರಾರಂಭಿಸಿದರು.

ಒಂದು ದೀಪದಿಂದ ಹೇಗೆ ಸಾವಿರಾರು ದೀಪಗಳನ್ನು ಹೊತ್ತಿಸಿ, ಬೆಳಕನ್ನು ಬೀರಬಹುದೋ ಹಾಗೆಯೇ ಪ್ರಾರಂಭದಲ್ಲಿ 9 ಮಕ್ಕಳಿಂದ ಪ್ರಾರಂಭವಾದ ಶಾಲೆ ವರ್ಷದಿಂದ ವರ್ಷಕ್ಕೆ ಮಕ್ಕಳನ್ನು ಹೆಚ್ಚಿಸಿಕೊಳ್ಳುತ್ತಾ ಇಂದು 5 ಶಾಖೆಗಳನ್ನು ಆಲದ ಮರದಂತೆ ಪಸರಿಸಿ ದಿಕ್ಕು ದಿಕ್ಕಿಗೂ ವಿದ್ಯೆಯ ಮಹತ್ವ ಏನೆಂಬುದನ್ನು ತಿಳಿಸಲು ಪ್ರಯತ್ನಿಸುತ್ತಿದೆ. ಮೊದಲು ಸರ್ಕಾರಿ ಶಾಲೆಯಲ್ಲಿ ಶಿಕ್ಷರಾಗಿದ್ದ ಶ್ರೀ ಶರ್ಮರವರು ತಮ್ಮ ನೌಕರಿಯನ್ನು ತ್ಯಜಿಸಿ, ಈ ಶಿಕ್ಷಣ ಸಂಸ್ಥೆಯನ್ನು ತಮ್ಮ ಶ್ರಮದಿಂದಲೇ ಹುಟ್ಟು ಹಾಕಿದರು. ಪ್ರಾರಂಭದಲ್ಲಿ ಈ ಸಂಸ್ಥೆಯಲ್ಲಿ ಶರ್ಮಾರೊಂದಿಗೆ ಅವರ ತಂದೆಯವರಾದ ಶ್ರೀ ಗಂಗಾಧರ ಶಾಸ್ತ್ರಿಗಳು ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು. ಅಂದಿನಿಂದ ಇಂದಿನವರೆಗೂ ಈ ಶಾಲೆ ಲಕ್ಷಾಂತರ ಮಕ್ಕಳಿಗೆ ವಿದ್ಯೆಯ ಅಮೃತವನ್ನು ನೀಡುತ್ತಾ ಬಂದಿದೆ.

ಭಾರತ ಮಾನವ ಕುಲದ ತೊಟ್ಟಿಲು, ಮನುಷ್ಯ ಭಾಷೆಯ ಮಾತೃಭೂಮಿ, ಇತಿಹಾಸದ ಜನ್ಮಸ್ಥಳ ಎಂದು ಖ್ಯಾತ ಅಮೇರಿಕನ್ ಲೇಖಕ ಮಾರ್ಕ್ ಟ್ವೈನ್ ಹೇಳಿದ್ದಾರೆ. ಇಂತಹ ಶ್ರೀಮಂತವಾದ ಉತ್ಕೃಷ್ಟವಾದ ಸಂಸ್ಕೃತಿಯ ಮೌಲ್ಯಗಳನ್ನು ಮಕ್ಕಳಿಗೆ ಮನ ಮುಟ್ಟುವಂತೆ ತಿಳಿಸಲು ಈ ಶಿಕ್ಷಣ ಸಂಸ್ಥೆ ಶ್ರಮಿಸುತ್ತಿದೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ।
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ – ಮಂಕುತಿಮ್ಮ

ಎನ್ನುವಂತೆ ಭಾರತದ ರಸಗಟ್ಟಿಗಳ ಭದ್ರಬುನಾದಿಯ ಮೇಲೆ ಆಧುನಿಕ ಶಿಕ್ಷಣ ತತ್ವಗಳನ್ನು ಇಂದಿನ ಜಗತ್ತಿಗೆ ಸರಿಸಮಾನವಾಗಿ ನಡೆಯಲು ಮಕ್ಕಳಿಗೆ ಬೇಕಾದ ಸಂಗೀತ, ನೃತ್ಯ, ಯೋಗ, ಕರಾಟೆ, ಕಂಪ್ಯೂಟರ್ ಶಿಕ್ಷಣ ಹಾಗೂ ಮಾಹಿತಿ ವಿಜ್ಞಾನದ ಬಗ್ಗೆಯೂ ಮಕ್ಕಳಲ್ಲಿ ಅರಿವನ್ನು ಮೂಡಿಸಿ ಅವರಲ್ಲಿ ಪೂರ್ಣಕುಂಭದಂತೆ ಜ್ಞಾನವನ್ನು ತುಂಬಿ, ಸಜ್ಜನಶೀಲರನ್ನಾಗಿ ನಾಡಿಗೆ ಉತ್ತಮ ಪ್ರಜೆಗಳನ್ನಾಗಿ ನೀಡಲು ಅವಿರತ ಶ್ರಮವನ್ನು ಪಡುತ್ತಿರುವ ಆಡಳಿತ ಮಂಡಳಿ ಶಿಕ್ಷಕ ವರ್ಗ ಹಾಗೂ ಬೋಧಕೇತರ ವರ್ಗಕ್ಕೆ ನನ್ನ ನಮನಗಳು. ಹೀಗೆ ಸುವರ್ಣ ಮಹೋತ್ಸವದ ಸುವರ್ಣಗೆರೆಯನ್ನು ದಾಟಿ, ವಜ್ರ ಮಹೋತ್ಸವದ ದೇದಿಪ್ಯಮಾನವಾದ ವಜ್ರದ ಬೆಳಕಿನಲ್ಲಿ ದಾಪುಗಾಲನ್ನು ಹಾಕುತ್ತಿರುವ ಈ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸಿ, ರಾಜ್ಯದಲ್ಲೇ ಉತ್ತಮ ಶಾಲೆಯಾಗಿ ಹೊರ ಹೊಮ್ಮತ್ತಿದೆ

ಪ್ರಸ್ತುತ ಶ್ರೀ ಸರಸ್ವತಿ ವಿದ್ಯಾ ಮಂದಿರ ಸಮೂಹ ಸಂಸ್ಥೆಗಳು ಕೆಳಕಂಡ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ:

1. ಶ್ರೀ ಸರಸ್ವತಿ ವಿದ್ಯಾ ಮಂದಿರ
   ನಂ. 9, ವಾಣಿವಿಲಾಸ್ ರಸ್ತೆ, ವಿ.ವಿ. ಪುರಂ, ಬೆಂಗಳೂರು–560004
2. ಶ್ರೀ ಸರಸ್ವತಿ ವಿದ್ಯಾ ಮಂದಿರ
   ವಿ.ವಿ. ಪುರಂ, ಶ್ರದ್ಧಾನಂದ ಭವನ, ಬೆಂಗಳೂರು
3. ಶ್ರೀ ಸರಸ್ವತಿ ವಿದ್ಯಾ ಮಂದಿರ,
   ಮಾಧವನ್ ಪಾರ್ಕ್ 1ನೇ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು



4. ಶ್ರೀ ಸರಸ್ವತಿ ವಿದ್ಯಾ ಮಂದಿರ, ಬಿಎಸ್‌ಕೆ 3ನೇ ಹಂತ, ಬೆಂಗಳೂರು

5. ಶ್ರೀ ಸರಸ್ವತಿ ವಿದ್ಯಾ ಮಂದಿರ, ಗವಿಪುರ ಬಡಾವಣೆ

6. ಶ್ರೀ ಸರಸ್ವತಿ ವಿದ್ಯಾ ಮಂದಿರ,
ಪಾರ್ಶ್ವಗಾನಹಳ್ಳಿ, ಮುದುವತಿ ಅಂಚೆ,
ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ

ವಿದ್ಯಾನಾಮರಸ್ಯ ರೂಪಮಾಧಿಕಮ್
ಪ್ರಚ್ಛನ್ನ ಗುಪ್ತಂ ಧನಮ್।

ವಿದ್ಯಾ ಭೋಗಕರೀ ಯಶಸ್ಸುಖಕರೀ
ವಿದ್ಯಾ ಗುರೂಣಾಂ ಗುರುಃ॥

ವಿದ್ಯಾಬಂಧುಜನೋ ವಿದೇಶಗಮನೇ
ವಿದ್ಯಾ ಪರಾ ದೇವತಾ।

ವಿದ್ಯಾ ರಾಜಸು ಪೂಜಿತಾ ನಹಿ ಧನಮ್
ವಿದ್ಯಾವಿಹೀನಃ ಪಶುಃ॥

ಮಹಿಳಾ ಮಂಡಲಿ

46, ಸನ್ನಿಧಿ ಅಡ್ಡರಸ್ತೆ, ಎನ್ ಆರ್ ಕಾಲೋನಿ, ಬಸವನಗುಡಿ,
ಬೆಂಗಳೂರು – 560 004

ನರಸಿಂಹರಾಜಾ ಕಾಲೋನಿಯ ಮೂರನೇ ಅಡ್ಡರಸ್ತೆಯಲ್ಲಿನ ಸುಸಜ್ಜಿತವಾದ ಕಟ್ಟಡದಲ್ಲಿ ಮಧ್ಯಮ ವರ್ಗ ಹಾಗೂ ಅರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಸಂಸ್ಥೆಯೇ ಮಹಿಳಾ ಮಂಡಳಿ. 1950 ರಲ್ಲಿ, ಕೆಲವೇ ಕೆಲವು ಗೃಹಿಣಿಯರಿಂದ ಪ್ರಾರಂಭಗೊಂಡು ಇಂದು ಬೃಹತ್ ಸಂಸ್ಥೆಯಾಗಿ ಬೆಳೆದಿದೆ.


ರಘುಪತಿ ರಾಘವ ರಾಜಾರಾಂ! ಪತಿತಪಾವನ ಸೀತಾರಾಂ! ನರಸಿಂಹರಾಜ ಕಾಲೋನಿಯ 9ನೇ ಕ್ರಾಸಿನ ಖಾಲಿ ನಿವೇಶನದಲ್ಲಿ ಮಕ್ಕಳೂ ಹೆಂಗಸರು ಗಾಂಧೀಜಿಯವರ ನೆನಪಾಗಿ ನಡೆಸಿದ ಪ್ರಾರ್ಥನಾ ಸೇವೆಯೇ ಮಹಿಳಾ ಮಂಡಳಿಯ ಸ್ಥಾಪನೆಗೆ ಮೂಲವಾಗಿ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಪ್ರತಿ ಶುಕ್ರವಾರದ ಭಜನೆ ಜೊತೆ ಶ್ರೀರಾಮ ಮಂದಿರದ ಅಧ್ಯಕ್ಷರಾಗಿದ್ದ ಶ್ರೀಮಾನ್ ವೆಂಕಟರಾಮಯ್ಯನವರು ಹಿತನುಡಿಗಳನ್ನು ಹೇಳುತ್ತಿದ್ದರು. ಈ ಸಭೆಯನ್ನು ಮಹಿಳಾ ಸಂಸ್ಥೆಯನ್ನಾಗಿ ಪರಿವರ್ತಿಸಿ ಎಂಬ ಆಚಾರ್ಯ ಪಾಠ ಶಾಲಾ ಶ್ರೀಮಾನ್. ಅನಂತಾಚಾರ್ಯರ ಸಲಹೆ ಮುಂದೆ ನಿಜವಾಗಿ ಪರಿಣಮಿಸಿತು. ಅನಂತಾಚಾರ್ಯರ ಪತ್ನಿ ಶ್ರೀಮತಿ ಸಾವಿತ್ರಮ್ಮ ಸಂಸ್ಥೆಯ ಸದಸ್ಯರಾದ ಮೇಲೆ ಕಾರ್ಯಕ್ರಮ ಶನಿವಾರಕ್ಕೂ



ಶ್ರೀಮತಿ. ಎಂ.ಆರ್. ಲಕ್ಷಮ್ಮ
ಸಂಸ್ಥಾಪಕ ಅಧ್ಯಕ್ಷರು



ಶ್ರೀಮತಿ ಸರೋಜಮ್ಮ
ಅನಂತರಾಮಯ್ಯ
ಸಂಸ್ಥಾಪಕ ಕಾರ್ಯದರ್ಶಿ



ಶ್ರೀಮತಿ ರುಕ್ಮಿಣಿಯಮ್ಮ
ನರಸಿಂಹಯ್ಯ

ವಿಸ್ತಾರವಾಯಿತು. ಹಿಂದಿ ತರಗತಿಗಳು, ಗಮಕ ತರಗತಿಗಳು, ಕಾವ್ಯವಾಚನ, ಹರಿಕಥೆ, ಉಪನ್ಯಾಸಗಳು ಆಯಾ ಕ್ಷೇತ್ರದ ಗಣ್ಯವ್ಯಕ್ತಿಗಳಿಂದ ನಡೆಯತೊಡಗಿದವು. ವಾಜಪೇಯಂ ಸಂಸಾರದವರ ನೆರವು ಮಂಡಳಿಗೆ ಅನುಪಮವಾದುದು.

ಮಹಿಳಾ ಮಂಡಲಿ ಎಂಬ ನಾಮಕರಣದೊಂದಿಗೆ ಶ್ರೀಮತಿ. ಎಂ.ಆರ್. ಲಕ್ಷಮ್ಮನವರ ಮಾರ್ಗದರ್ಶನದಲ್ಲಿ ಎಂಟು ಜನ ಸದಸ್ಯರ ಸಮಿತಿ ಪ್ರಾರಂಭವಾಗಿ ಶ್ರೀಮತಿ. ಸರೋಜಮ್ಮ ಅನಂತರಾಮಯ್ಯ ಮೊದಲನೆಯ ಕಾರ್ಯದರ್ಶಿಯಾದರು. ಪ್ರೊ। ।ಕೆ.ಅನಂತರಾಮಯ್ಯ, ಎಸ್.ವಿ. ರಂಗಣ್ಣ ಪ್ರೊ॥ಆರ್.ಎಲ್. ನರಸಿಂಹಯ್ಯ, ಪ್ರೊ॥ಎಲ್. ಗುಂಡಪ್ಪ, ಶ್ರೀ ಸಿದ್ದವನಹಳ್ಳಿ ಕೃಷ್ಣ ಶರ್ಮ ಮೊದಲಾದವರು ಸರಳ ಕನ್ನಡದಲ್ಲಿ ಪ್ರವಚನಗಳನ್ನು ಮಾಡುತ್ತಿದ್ದರು. ಕಾಲೋನಿಯಲ್ಲಿ ವೈದ್ಯಕೀಯ ಸೌಲಭ್ಯ ಇಲ್ಲದಿದ್ದುದರಿಂದ ಜೈ ಹಿಂದ್ ಕ್ಲಿನಿಕ್ ನ ಡಾ॥ ಶಾರದಾದೇವಿಯವರು ಸಹಾಯ ಮಾಡುತ್ತಿದ್ದರು. ಮೊದಲನೆಯ ವಾರ್ಷಿಕೋತ್ಸವ ಎಂ.ಆರ್. ಲಕ್ಷಮ್ಮನವರ ಅಧ್ಯಕ್ಷತೆಯಲ್ಲಿ,ಎರಡನೆಯ ವಾರ್ಷಿಕೋತ್ಸವ ಶ್ರೀಮತಿ. ಆರ್. ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ನಡೆದವು. ಮೂರನೆಯ ವರ್ಷದಲ್ಲಿ ಶ್ರೀಮತಿ. ರತ್ನಾಬಾಯಿಕೃಷ್ಣಮೂರ್ತಿಯವರು ಅಧ್ಯಕ್ಷರಾಗಿ ಬೇರೊಂದು ಸಮಿತಿ ರಚಿತವಾಯಿತು. ಆಗ ಪ್ರತಿ ತಿಂಗಳು ಸದಸ್ಯರು 4 ಆಣೆಗಳ ಚಂದಾ ನೀಡುವ ಪರಂಪರೆ ಆರಂಭವಾಯಿತು.

ಮುಂದೆ ಕಾರ್ಪೊರೇಟರ್ ಆಗಿದ್ದ ಶ್ರೀಮತಿ. ರುಕ್ಮಿಣಮ್ಮನವರು ಅಧ್ಯಕ್ಷರಾಗಿದ್ದಾಗ ಶ್ರೀ ಎಸ್.ವಿ.ಕಲ್ಯಾಣಿ ಅವರ ಉತ್ತೇಜನದಿಂದ ಶಿಶುವಿಹಾರ ಪ್ರಾರಂಭವಾಗಿ ರಾಮಮಂದಿರದಲ್ಲಿ ನಡೆಯತೊಡಗಿತು. ಆ ವರ್ಷದ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ವಹಿಸಿದ್ದರು. ಮನೆಮನೆಗೆ ಹೋಗಿ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡಿದರು. ಶಿಶುವಿಹಾರದ ಜೊತೆ ಶ್ರೀಮತಿ. ರುಕ್ಮಿಣಮ್ಮ ಗುಂಡೂರಾವ್ ಕೊಡಿಸಿದ ಹೊಲಿಗೆಯಂತ್ರದಿಂದ ಶ್ರೀಮತಿ ಬಿ.ವಿ. ಲಲಿತಮ್ಮನವರ ಮನೆಯಲ್ಲಿ ಹೊಲಿಗೆ ತರಗತಿ ಪ್ರಾರಂಭವಾಯಿತು. ಸರಕಾರದಿಂದ 12 ಹೊಲಿಗೆ ಯಂತ್ರಗಳೂ ದೊರೆತವು.

ಮಹಿಳಾಮಂಡಲಿಗೆ ಸ್ವಂತ ನಿವೇಶನ ನೀಡುವಂತೆ ಮೇಯರ್ ಲಕ್ಕಪ್ಪನವರ ಮುಖಾಂತರ ಕಾರ್ಪೊರೇಟರ್ ಅನಂತರಾಮಯ್ಯ, ರುಕ್ಮಿಣಮ್ಮ, ನರಸಿಂಹಯ್ಯ ಹಾಗೂ ಟಿ.ಆರ್. ಶಾಮಣ್ಣನವರ ಶ್ರೀಮತಿ ಸಹಾಯ, ಸಹಕಾರ ನೆರವಿನಿಂದ ಮಂಡಲಿಗೆ ನಿವೇಶನ ದೊರೆಯುವಂತಾಯಿತು. ನಿವೇಶನ ದೊರೆಯುತ್ತಿದ್ದಂತೆ, ಹಲವಾರು ಮಹನೀಯರ ಧನಸಹಾಯದಿಂದ ಈಗಿರುವ ಕಟ್ಟಡದ ಮುಂಭಾಗ ಕಟ್ಟಲ್ಪಟ್ಟಿತು. ಶಿಶುವಿಹಾರದ ತರಗತಿಗಳನ್ನು ಕ್ರಮೇಣ ಏಳನೆಯ ತರಗತಿಗಳವರೆಗೆ

ಕನ್ನಡ ಮಾಧ್ಯಮದಲ್ಲಿ ವಿಸ್ತಾರವಾಗಿ ಸರ್ಕಾರದ ಮಾನ್ಯತೆ ದೊರೆಯುತ್ತಿದ್ದಂತೆ ಮಾಂಟೆಸ್ಸರಿ ಶಾಲೆ ಪ್ರಾರಂಭಿಸಲಾಯಿತು. ಶ್ರೀಮತಿ. ಸರಸ್ವತಮ್ಮ ರಾಮಮೂರ್ತಿ, ಶ್ರೀಮತಿ. ಸ್ವರ್ಣಾಂಬಾಳ್, ಶ್ರೀಮತಿ. ಪದ್ಮಾಮೂರ್ತಿ ಕ್ರಮವಾಗಿ ಅಧ್ಯಕ್ಷರಾಗಿ ಮಂಡಳಿಯ ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ. ಶ್ರೀಮಾನ್.ಎ ಕೃಷ್ಣಮೂರ್ತಿಗಳ ಮೇಲ್ವಿಚಾರಣೆಯಲ್ಲಿ ಹಿಂಭಾಗದ ಕಟ್ಟಡದ ಭಾಗ ಕಟ್ಟಲ್ಪಟ್ಟಿತು. 1972–73 ನೇ ಸಾಲಿನಿಂದ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆ ಪ್ರಾರಂಭಿಸಲಾಯಿತು.

ಮಹಿಳಾ ಮಂಡಲಿಯ ರಜತ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ 1977 ರ ನವೆಂಬರ್ 26–27 ರಂದು ಆಚರಿಸಲಾಯಿತು. ಸ್ವಾಮಿ ಚಿನ್ಮಯಾನಂದರಿಂದ ಉದ್ಘಾಟನೆಯಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ಉಪನಿರ್ದೇಶಕರಾಗಿದ್ದ ಶ್ರೀಮಾನ್ ಶ್ರೀಧರ ಶೆಟ್ಟರು ಮುಖ್ಯ ಅತಿಥಿಗಳಾಗಿ ಶ್ರೀಮತಿ. ಶಾರದಾಂಬಾ ಅಧ್ಯಕ್ಷತೆ ವಹಿಸಿದ್ದರು. ಎರಡನೆಯ ದಿನ ನಗರ ಪಾಲಿಕೆ ಆಡಳಿತಾಧಿಕಾರಿಗಳಾಗಿದ್ದ ಶ್ರೀಮಾನ್.ಎನ್. ಲಕ್ಷ್ಮಣರಾಯರು ಕಾರ್ಯಕ್ರಮ ನಡೆಸಿಕೊಟ್ಟರು. ವಿಜ್ಞಾನ ವಸ್ತುಪ್ರದರ್ಶನ ಏರ್ಪಾಟಾಗಿದ್ದು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

1996 ರಿಂದ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಇಲಾಖಾ ಮಂಜೂರಾತಿಯೊಂದಿಗೆ ತೆರೆಯಲಾಯಿತು. ಅಲ್ಲದೆ ಇವಕ್ಕೆಲ್ಲಾ ಶಾಶ್ವತವಾದ ಅನುಮೋದನೆಯಾಗಿದೆ. ಶಾಲೆಯಲ್ಲಿ ನುರಿತ ಉತ್ತಮ ಶಿಕ್ಷಣ ಪಡೆದ, ತರಬೇತಿಯೊಂದಿಗೆ ಸೇವಾ ಮನೋಭಾವದ ಶಿಕ್ಷಕರು ಒಂದು ಸಾವಿರದ ಎರಡು ನೂರಕ್ಕೂ ಹೆಚ್ಚಿನ ವಿದ್ಯಾಸಕ್ತ ಮಕ್ಕಳಿಗೆ ಬೋಧಿಸುತ್ತಿದ್ದಾರೆ. ಶಿಕ್ಷಣ ಎಂದರೆ ಸರ್ವತೋಮುಖ ಪ್ರಗತಿ ಎಂಬುದನ್ನರಿತ ಮಹಿಳಾ ಮಂಡಲಿ ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡುತ್ತಿದೆ. ಸಂಗೀತ, ನೃತ್ಯ, ಹೊಲಿಗೆ, ಕಸೂತಿ, ಯೋಗ, ಕರಾಟೆ, ಟೈಕ್ವಾಂಡೋ, ಟೇಬಲ್ ಟೆನ್ನಿಸ್‌ಗಳಲ್ಲೂ ತರಬೇತಿ ನೀಡುವ ಏರ್ಪಾಟು ಮಾಡಿದೆ. ಅಲ್ಲದೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲೆಂದೇ ಪ್ರೋತ್ಸಾಹಿಸಲು ಪ್ರತಿ ವರ್ಷ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. 2002 ರಲ್ಲಿ ವಿಜೃಂಭಣೆಯಿಂದ ಆಚರಿಸಿದ ಸುವರ್ಣ ಮಹೋತ್ಸವವನ್ನು ಚಿನ್ಮಯಾ ಮಿಷನ್ನಿನ ಸ್ವಾಮಿ ಬ್ರಹ್ಮಾನಂದಜೀ ಅವರು ಉದ್ಘಾಟಿಸಿದರು. ಶ್ರೀಮತಿ ಲಕ್ಷ್ಮೀ ಚಂದ್ರಶೇಖರ್, ಶ್ರೀಮಾನ್ ಶರ್ಮಾ, ಪ್ರೊ|ಜಿ. ವೆಂಕಟಸುಬ್ಬಯ್ಯ, ಶ್ರೀಮತಿ ಎಲ್.ಜಿ. ಸುಮಿತ್ರಾ



ಮುಖ್ಯ ಅತಿಥಿಗಳಾಗಿದ್ದು ಅಧ್ಯಕ್ಷತೆ ತೇಜಸ್ವಿನಿ ಅನಂತಕುಮಾರ್ ವಹಿಸಿದ್ದರು. ಅದೇ ರೀತಿ 2012 ಜನವರಿ 6 ಮತ್ತು 7 ರಂದು "ವಜ್ರ ಮಹೋತ್ಸವ" ವನ್ನು ಡಾ॥ ಕಮಲಾ ಹಂಪನಾ ಅವರ ಅಧ್ಯಕ್ಷತೆಯಲ್ಲಿ ನಡೆಸಿ "ವಜ್ರದುಂದುಬಿ" ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಶ್ರೀಮಾನ್ ಮಹೇಶ್ ಜೋಶಿ, ರವಿಸುಬ್ರಹ್ಮಣ್ಯ, ಪ್ರಹ್ಲಾದ್ ಆಚಾರ್ಯ, ಯೋಗರಾಜ್ ಭಟ್, ಸತ್ಯನಾರಾಯಣ ಮೊದಲಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಹೀಗೆ ಬಡಾವಣೆಯ ಮಾತೆಯರ ನೇತೃತ್ವದಲ್ಲಿ ಸಮಾಜ ಸೇವೆ ಮಾಡಬೇಕೆಂಬ ಹಂಬಲದಿಂದ ಜನ್ಮ ತಾಳಿದುದೇ 'ಮಹಿಳಾ ಮಂಡಳಿ'. ದಾನಿಗಳ ಸಹಾಯದಿಂದ ವಿದ್ಯಾ ಸಂಸ್ಥೆಯನ್ನು ನಡೆಸಿಕೊಂಡು, ಸ್ವಂತ ಸುಸಜ್ಜಿತವಾದ ಕಟ್ಟಡದಲ್ಲಿ ಮಧ್ಯಮ ವರ್ಗ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದಿದೆ. ಪ್ರಸ್ತುತ ಸುಶೀಲಮ್ಮ ಎಸ್.ರಾವ್ ಅವರ ಅಧ್ಯಕ್ಷತೆಯಲ್ಲಿ ಶ್ರೀಮತಿಯರಾದ ನಾಗರತ್ನ ಸುರೇಶ್, ಶಾಂತಾ.ಆರ್. ರಾವ್, ಪದ್ಮಿನಿ.ಕೆ.ವಿ, ಎಸ್.ಕೆ.ಪದ್ಮ, ಬಿ.ಎಸ್.ಜಯಮ್ಮ, ಲಲಿತಾ ಶಾಸ್ತ್ರಿ, ರಂಗ ನಾಯಕಿ, ಶಕುಂತಲಾ ನಾಗರಾಜ್, ಗೌರೀದಾಮ್ಲೆ, ನಾಗಲಕ್ಷ್ಮಿ.ವಿ, ನಾಗುಶಂಕರ್ ಕಾರ್ಯಕಾರಿ ಮಂಡಲಿಯಲ್ಲಿದ್ದಾರೆ.

ಮಲ್ಲೇಶ್ವರಂ ಶಿಶುವಿಹಾರ

39, 4ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಶಿಶು ವಿಹಾರ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560 003

ಮಲ್ಲೇಶ್ವರಂ ಬಡಾವಣೆಯ ನಾಲ್ಕನೇ ಅಡ್ಡರಸ್ತೆಯಲ್ಲಿರುವ ಸುಪ್ರಸಿದ್ಧ ಶಾಲೆಯೇ ಮಲ್ಲೇಶ್ವರಂ ಶಿಶು ವಿಹಾರ. ಶಾಲೆಯ ಹೆಸರಿನಿಂದಲೇ ಅಡ್ಡರಸ್ತೆಯನ್ನು ಮಲ್ಲೇಶ್ವರಂ ಶಿಶು ವಿಹಾರ ರಸ್ತೆ ಎಂದು ಕರೆಯುತ್ತಾರೆ. 1951 ರಲ್ಲಿಈ ಶಾಲೆಯನ್ನು ಸ್ಥಾಪಿಸಿದವರು ಶ್ರೀಮತಿ. ಬಿ.ಕೆ. ತಿರುಮಲಮ್ಮ. ಶ್ರೀಮತಿ. ತಿರುಮಲಮ್ಮನವರು ಹುಟ್ಟಿದ್ದು 22ನೇ ನವೆಂಬರ್ 1922 ಮೈಸೂರಿನಲ್ಲಿ. ಇವರ ತಂದೆ ಶ್ರೀ ಬಿ.ಕೆ. ಕೃಷ್ಣಸ್ವಾಮಿ ಅಯ್ಯಂಗಾರ್. ಅವರು ಬೆಂಗಳೂರಿನ ಸರ್ ಎಂ.ವಿ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರು. ತಾಯಿ ಶ್ರೀಮತಿ ಲಕ್ಷ್ಮಮ್ಮ, ಮಹಾ ದೈವ ಭಕ್ತೆ. ರಾಮಾಯಣ, ಮಹಾಭಾರತ, ವೇದ ಉಪನಿಷತ್ತುಗಳಲ್ಲಿ ಪರಿಣತರಾಗಿ ಮಕ್ಕಳಿಗೆ ಉತ್ತಮ ಸಂಸ್ಕೃತಿಯ ಅಡಿಪಾಯ ಕಲ್ಪಿಸಿದರು.



ಶ್ರೀಮತಿ ತಿರುಮಲಮ್ಮ
ಸ್ಥಾಪಕರು

ತಂದೆಯವರು ಹುಲಿಕೆರೆ ಸುರಂಗ ಯೋಜನೆ ನಿರ್ಮಾಣ ಕಾರ್ಯಕ್ಕೆ ವರ್ಗಾವಣೆಯಾದಾಗ ಕುಟುಂಬ ಅಲ್ಲಿಗೆ ಹೋಗಬೇಕಾಯಿತು. ನಾಲ್ಕನೆಯ ತರಗತಿಯವರೆಗಿನ ವಿದ್ಯಾಭ್ಯಾಸ ಹುಲಿಕೆರೆಯಲ್ಲೇ ನಡೆಯಿತು. ಹಿರಿಯ ಪ್ರಾಥಮಿಕ ಶಾಲೆ ಆಲೂರಿನಲ್ಲಿಲ್ಲದ ಕಾರಣ ತಿರುಮಲಮ್ಮನವರ ವಿದ್ಯಾಭ್ಯಾಸ ಮನೆಯಲ್ಲಿಯೇ ನಡೆಯುತ್ತಿತ್ತು. ಹೀಗೆಯೇ ಒಂಭತ್ತನೆಯ ತರಗತಿಯರೆಗಿನ ಪಠ್ಯಗಳನ್ನು ಮನೆಯಲ್ಲಿಯೇ ಓದಿ ಮುಗಿಸಿದರು.

ನಂತರದಲ್ಲಿ ಕುಟುಂಬ ಬೆಂಗಳೂರಿಗೆ ಸ್ಥಳಾಂತರವಾಯಿತು. ಆಗ ಬೆಂಗಳೂರಿನ ಕಮಲಾಬಾಯಿ ಪ್ರೌಢ ಶಾಲೆಗೆ ಹತ್ತನೆಯ ತರಗತಿಗೆ ಪ್ರವೇಶ ಪಡೆದರು. ಹತ್ತನೆಯ ತರಗತಿ ಮುಗಿಯುತ್ತಿದ್ದಂತೆ ಕಂಕಣ ಭಾಗ್ಯ ಕೂಡಿ ಬಂದಿತು. ವಕೀಲರಾಗಿದ್ದ ಶ್ರೀಯುತ ಕೇಶವ ಅವರೊಡನೆ ವಿವಾಹವಾಯಿತು. ವಿದ್ಯಾಭ್ಯಾಸ ಅಲ್ಲಿಗೇ ನಿಂತಿತು. ಮದುವೆಯಾದ ಕೆಲವೇ ವರ್ಷಗಳಲ್ಲಿ ಒಂದು ಮಗುವಿಗೆ ಜನ್ಮ ನೀಡಿದರು. ಆದರೆ ಆ ಮಗು ಕೆಲವೇ ತಿಂಗಳಲ್ಲಿ ಅನಾರೋಗ್ಯದಿಂದ ಬಳಲಿ ಅಸುನೀಗಿತು. ಜೊತೆಗೆ ಯಜಮಾನರಾದ ಶ್ರೀ ಕೇಶವ ಅವರು ಆರೋಗ್ಯ ಕ್ಷೀಣಿಸುತ್ತಾ ಬಂದು ಅವರೂ ಪ್ರಾಣ ತ್ಯಜಿಸಿದರು. ಒಂದರ ಮೇಲೊಂದರಂತೆ ಒಂದು ಆವರಿಸಿದ ಆಘಾತಗಳಿಂದ ತಿರುಮಲಮ್ಮನವರು ನಶಿಸಿಹೋದರು. ಸುಖಸಂಸಾರದ ಕನಸನ್ನು ಹೊತ್ತು ದಾಂಪತ್ಯ ಜೀವನ ಪ್ರವೇಶಿಸಿದ ಕೆಲವೇ ವರ್ಷಗಳಲ್ಲಿ ಬರಸಿಡಿಲು ಎರಗಿದಂತಾದರು.

ಆದರೂ ಮುಂದಿನ ಜೀವನ ನಡೆಸುವುದು ಅನಿವಾರ್ಯ. ಪೋಷಕರ ಬೆಂಬಲದಿಂದ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಬೆಂಗಳೂರಿನ ಮಹಾರಾಣಿಯವರ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್‌ಗೆ ಪ್ರವೇಶ ಪಡೆದರು. ನಂತರ ಅದೇ ಕಾಲೇಜಿನಲ್ಲಿ ವಿಜ್ಞಾನ ವಿಷಯಗಳಲ್ಲಿ ಅಭ್ಯಾಸ ಮಾಡಿ ಬಿ.ಎಸ್ಸಿ ಪದವಿಯನ್ನೂ ಪಡೆದರು.

ಪದವೀಧರರಾದ ನಂತರ ಶಿಕ್ಷಕ ವೃತ್ತಿಯಲ್ಲಿ ತುಂಬಾ ಆಸಕ್ತರಾಗಿದ್ದುದರಿಂದ ಮಲ್ಲೇಶ್ವರದ ಹಿಮಾಂಶು ಶಿಶುವಿಹಾರದಲ್ಲಿ ಶಿಕ್ಷಕಿಯಾಗಿ ಶಿಕ್ಷಣ ಕ್ಷೇತ್ರ ಪ್ರವೇಶಿಸಿದರು. ಮಕ್ಕಳ ಜೊತೆ ಮಕ್ಕಳಾಗಿ ಬೆರೆತು, ಅವರ ಚಟುವಟಿಕೆಗಳನ್ನು ಗಮನಿಸುತ್ತಾ ಕಾಲ ಕಳೆಯುವುದನ್ನುಇಷ್ಟಪಡುತ್ತಿದ್ದರು. ಗಂಡು, ಹೆಣ್ಣು ಮಕ್ಕಳ ನಡೆ, ನುಡಿ, ಒಡನಾಟ, ಸಂಭ್ರಮಗಳನ್ನು ಗಮನಿಸಿ, ಅವರಲ್ಲಿ ಕಂಡು

ಬರುವ ವ್ಯತ್ಯಾಸಗಳನ್ನು ಎಲ್ಲರೊಡನೆ ವಿಸ್ಮಯವಾಗಿ ಹಂಚಿಕೊಳ್ಳುತ್ತಿದ್ದರು. ಮಕ್ಕಳೊಡನೆ ಬೆರೆತು ಮಕ್ಕಳಾಗಿ ತಮ್ಮ ವೈಯುಕ್ತಿಕ ಬದುಕಿನಲ್ಲುಂಟಾದ ಆಘಾತಗಳಿಂದ ದೂರವಾದರು. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಬೆಳೆಯುತ್ತಾ ತನ್ನದೇ ಆದ ಶಾಲೆಯೊಂದನ್ನು ಸ್ಥಾಪಿಸುವ ಕನಸು ಕಾಣತೊಡಗಿದರು. ಇದು ಸಫಲವಾಗುವಂತೆ ತಂದೆ ಕೃಷ್ಣಸ್ವಾಮಿ ಅಯ್ಯಂಗಾರ್ ಸಂಪೂರ್ಣ ಸಹಕಾರ ನೀಡಿದರು. ಮಲ್ಲೇಶ್ವರದಲ್ಲಿನ ತಮ್ಮ ಮನೆಯನ್ನು ಬಾಡಿಗೆಗೆ ನೀಡಿದ್ದು, ಆ ಬಾಡಿಗೆ ಮನೆಯನ್ನು ಖಾಲಿ ಮಾಡಿಸಿ ಶಾಲೆ ಸ್ಥಾಪನೆಗೆ ಸ್ಥಳಾವಕಾಶ ಮಾಡಿಕೊಟ್ಟರು. ಸ್ವಾಭಿಮಾನಿಯಾದ ತಿರುಮಲಮ್ಮ ತಂದೆಯವರ ಸಹಾಯ ಪಡೆದರೂ ಆ ಮನೆಗೆ ಬಾಡಿಗೆ ಪಡೆಯಲೇಬೇಕೆಂಬ ಷರತ್ತನ್ನು ವಿಧಿಸಿದರು.

ಮಲ್ಲೇಶ್ವರದ ಐದನೇ ಅಡ್ಡರಸ್ತೆಯಲ್ಲಿ ಮಲ್ಲೇಶ್ವರಂ ಶಿಶುವಿಹಾರ 1951 ರಲ್ಲಿ ಪುಟ್ಟಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರಂಭವಾಯಿತು. ತಿರುಮಲಮ್ಮನವರ ಮಹಾದಾಸೆ ಪೂರೈಸಿ ಚಿಗುರೊಡೆಯಿತು. ಎಲ್ಲಾ ವರ್ಗದ ಮಕ್ಕಳನ್ನು ಸಮಾನರಾಗಿ ಪರಿಗಣಿಸಿ ಉತ್ತಮವಾದ ಮೌಲ್ಯಾಧಾರಿತ ಶಿಕ್ಷಣದ ಜೊತೆ ಸನಾತನ ಸಂಸ್ಕೃತಿಯ ಲಕ್ಷಣಗಳನ್ನು ಮಕ್ಕಳಿಗೆ ಯಾವುದೇ ತೊಡಕುಗಳಿಲ್ಲದೆ ಮೈಗೂಡಿಸಿಕೊಳ್ಳುವ ವಾತಾವರಣ ನಿರ್ಮಿಸಿದರು. ಯಾವುದೇ ರೀತಿಯ ವಂತಿಗೆಯನ್ನು ಸ್ವೀಕರಿಸದೆ ಅಲ್ಪಪ್ರಮಾಣದ ಶುಲ್ಕದೊಂದಿಗೆ ದಾಖಲಾತಿ ಮಾಡಿಕೊಳ್ಳುತ್ತಿದ್ದರು.

ತಮ್ಮ ಶಾಲೆ ಸುತ್ತಮುತ್ತಲೂ ನಿರ್ಮಾಣ ಹಂತದಲ್ಲಿರುವ ಮನೆಗಳ ಕಾರ್ಮಿಕ ಮಕ್ಕಳನ್ನು ಸಂದರ್ಶಿಸಿ ಶಾಲೆಗೆ ಮಕ್ಕಳನ್ನು ದಾಖಲಿಸುವಂತೆ ಪ್ರೇರೇಪಿಸಿದರು. ಹೀಗೆ ಬಂದು ದಾಖಲಾದ ಎಷ್ಟೋ ಮಂದಿ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಪೂರೈಸಿ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಮಲ್ಲೇಶ್ವರಂ ಶಿಶುವಿಹಾರ ಆರಂಭವಾದ ಕೆಲವೇ ವರ್ಷಗಳಲ್ಲಿ ಶಕ್ತಿಯುತವಾಗಿ ಬೆಳೆದು, ಪ್ರಗತಿಯ ಕೀರ್ತಿಶಿಖರದ ಖ್ಯಾತಿ ಬಾಯಿಂದ ಬಾಯಿಗೆ ಎಲ್ಲೆಡೆ ಹರಡಿದುದು ಮಾತ್ರವಲ್ಲದೆ ಶಾಲೆ ಇರುವ ರಸ್ತೆಗೇ ತನ್ನ ಹೆಸರನ್ನು ಸೇರಿಸಿ ಮಲ್ಲೇಶ್ವರಂ ಶಿಶುವಿಹಾರ ರಸ್ತೆಯನ್ನಾಗಿ ಮಾಡಿರುವುದು ಅದ್ವಿತೀಯ ಸಾಧನೆಯೇ ಸರಿ.

ತಾವೇ ಹುಟ್ಟುಹಾಕಿದ ಶಾಲೆ ಬೆಳೆಯುತ್ತಿದ್ದರೂ ತಮ್ಮಲ್ಲಿದ್ಧ ಜ್ಞಾನಾರ್ಜನೆಯ ತೃಷೆ ಕಡಿಮೆಯಾಗಲಿಲ್ಲ. ಆದ್ದರಿಂದಲೇ ಆಗ ತಾನೇ ಪ್ರಾರಂಭವಾದ ಎಂ.ಇ.ಎಸ್. ಶಿಕ್ಷಕರ ಕಾಲೇಜಿನಲ್ಲಿ ಬಿ.ಇಡಿ ತರಗತಿಗೆ ಪ್ರಪ್ರಥಮ ವಿದ್ಯಾರ್ಥಿನಿಯಾಗಿ ದಾಖಲಾಗಿ

ವಿಧ್ಯಾಭ್ಯಾಸ ಮುಂದುವರೆಸಿದರು. ನಂತರ ಮಾಂಟೆಸರಿ ಶಿಕ್ಷಣ ವಿಧಾನ ತರಬೇತಿ ಪಡೆಯಲು ರಷ್ಯಾಕ್ಕೆ ಹೋಗಿ ಬಂದರು. ಅಲ್ಲಿಂದ ಹಿಂತಿರುಗಿ ಮಾಂಟೆಸರಿ ಶಿಕ್ಷಣ ವಿಧಾನಗಳನ್ನು ತಮ್ಮ ಶಾಲೆಗಳಲ್ಲಿ ಅಳವಡಿಸಿದರು. ಇದರಿಂದ ಮಲ್ಲೇಶ್ವರಂ ಶಿಶುವಿಹಾರ ಇತರೆ ಶಾಲೆಗಳಿಗಿಂತ ಭಿನ್ನವಾಗಿ ಕಾಣತೊಡಗಿತು. ಬೆಂಗಳೂರು ಮಹಾನಗರದಲ್ಲಿಯೇ ಮಾಂಟೆಸರಿ ಶಿಕ್ಷಣ ಪದ್ಧತಿಯ ಮೊದಲ ಶಾಲೆ ಎಂಬ ಕೀರ್ತಿ ಮಲ್ಲೇಶ್ವರಂ ಶಿಶುವಿಹಾರಕ್ಕೆ ಪ್ರಾಪ್ತವಾಯಿತು. ಶಾಲಾ ಶಿಕ್ಷಕಿಯರಿಗೆ ಮಾಂಟೆಸರಿ ಶಿಕ್ಷಣ ಪದ್ಧತಿಯನ್ನು ಅವರೇ ನೀಡುತ್ತಿದ್ದರು. ಕಡಿಮೆ ವೆಚ್ಚದ ಅಥವಾ ಯಾವುದೇ ವೆಚ್ಚವಿಲ್ಲದ ಆಕರ್ಷಕವಾದ ಶೈಕ್ಷಣಿಕ ಮಾದರಿಗಳನ್ನು ತಯಾರಿಸುವ ಮತ್ತು ಪರಿಣಾಮಕಾರಿಯಾಗಿ ಬಳಸುವ ಸಲಹೆಗಳನ್ನು, ತರಬೇತಿಯನ್ನು ತಮ್ಮ ಶಾಲಾ ಶಿಕ್ಷಕರಿಗೆ ಮಾತ್ರವಲ್ಲದೆ ಬೇರೆ ಶಾಲೆಗಳು ಮತ್ತು ಸರ್ಕಾರಿ ಶಾಲೆಗಳ ಶಿಕ್ಷಕರಿಗೂ ತರಬೇತಿ ನೀಡುತ್ತಿದ್ದರು. ಎನ್.ಸಿ.ಇ.ಆರ್.ಟಿ.ಸಿ ಮತ್ತು ಡಿ.ಎಸ್.ಇ.ಆರ್.ಟಿ.ಸಿ ಶಿಕ್ಷಕರ ತರಬೇತಿ ಕಾರ್ಯಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ಸಾವಿರಾರು ಶಿಕ್ಷಕರಿಗೆ ಮಾರ್ಗದರ್ಶನ ನೀಡಿದ್ದಾರೆ. ಪಠ್ಯ ಹಾಗೂ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಸುಲಭವಾಗಿ ಕನ್ನಡ ಕಲಿಯುವ, ಒತ್ತಕ್ಷರವಿಲ್ಲದೇ ಕಲಿಯುವ ಕಂದಾ ಅಕ್ಷರ ಕಲಿ, ನಮ್ಮ ಮನೆ, ಕಂದಾ ಓದುವೆಯಾ ಭಾಗ-1, ಭಾಗ-2 ಪುಸ್ತಕಗಳನ್ನು ರಚಿಸಿದ್ದಾರೆ. ಜನಸಾಮಾನ್ಯರು ಮತ್ತು ಗ್ರಾಮೀಣ ಶಾಲೆಗಳಿಗೆ ಇವು ತಲುಪಬೇಕೆಂಬ ಉದ್ದೇಶದಿಂದ ನವಕರ್ನಾಟಕ ಪಬ್ಲಿಕೇಶನ್ಸ್ ಅವರು ಪ್ರಕಟಸಿದ್ದಾರೆ. ಇವರ ಶಿಶು ಗೀತೆಗಳ 'ಸಂಗ್ರಹ ಬಂಗಾರಿ' ಸಿ.ಡಿ ರೂಪದಲ್ಲಿ ಹೊರಬಂದಿದೆ. ಇತ್ತೀಚೆಗೆ ಪ್ರಕಟವಾದ ಶಿಶುಗೀತೆಗಳ ಪುಸ್ತಕಗಳೇ 'ಬಣ್ಣದ ಚಿತ್ರ' ಮತ್ತು ಬಾ ಅಳಿಲೆ ಬಾ' ಇಲ್ಲಿನ ಗೀತೆಗಳು ಶಿಶುವಿಹಾರದ ಮಕ್ಕಳಿಗಾಗಿಯೇ ರಚಿತವಾದವು.

ಶ್ರೀಮತಿ ತಿರುಮಲಮ್ಮನವರು ಒಳ್ಳೆಯ ಆಪ್ತಸಲಹೆಗಾರರು. ಕೋಪ, ಅಸಮಾಧಾನಗಳಿಗೆ ಅವರಲ್ಲಿ ಜಾಗವಿರಲಿಲ್ಲ. ವಿದ್ಯಾರ್ಥಿಗಳೇನಾದರೂ ತಪ್ಪು ಮಾಡಿದರೆ ತಮ್ಮ ಕೋಣೆಗೆ ಅವರನ್ನು ಕರೆಸಿ ಕೆಲಕಾಲ ನಿಲ್ಲಿಸಿಕೊಂಡು, ತಪ್ಪಿನ ಅರಿವು ಉಂಟು ಮಾಡುತ್ತಿದ್ದರು. ನಂತರ ತಿಳಿಹೇಳಿ ಕಳುಹಿಸುತ್ತಿದ್ದರು. ಪೋಷಕರು ತಮ್ಮ ಮಕ್ಕಳ ಬಗ್ಗೆ ಶಾಲೆಯ ಬಗ್ಗೆ ಹೇಳಲು ಬಂದಾಗ ಕಿವಿಕೊಟ್ಟು ಅವರ ಮಾತನ್ನು ಕೇಳಿ ನಂತರ ಸಮಾಧಾನ ಮಾಡುತ್ತಾ ಮಕ್ಕಳು ಸರಿಯಾದ

ಮಾರ್ಗದಲ್ಲಿ ನಡೆಯುವಂತೆ ಪ್ರೋತ್ಸಾಹಿಸಬೇಕೆಂದು ತಾಳ್ಮೆಗೆಡದೆ ನೀಡುತ್ತಿದ್ದ ಮಾರ್ಗದರ್ಶನ ಅನುಕರಣಾತೀತವಾದುದು.

ಎಲ್ಲಾ ಮಕ್ಕಳಿಗೂ ಶಿಕ್ಷಣ ನೀಡಬೇಕೆಂಬ ಗುರಿ ಅವರದ್ದಾಗಿತ್ತು ಹೀಗಾಗಿ ಮಾನಸಿಕ ಅಸ್ವಸ್ಥ ಮತ್ತು ಅಂಗವಿಕಲ ಮಕ್ಕಳಿಗಾಗಿಯೇ ಪ್ರತ್ಯೇಕ "ಬಾಲಮನೋವಿಕಾಸ ಕೇಂದ್ರ" ಶಾಲೆಯನ್ನು ಸ್ಥಾಪಿಸಿದರು. ಆರಂಭದಲ್ಲಿ ಮಲ್ಲೇಶ್ವರಂ ಶಿಶುವಿಹಾರ ಜಾಗದಲ್ಲೆ ನಡೆಯುತ್ತಿದ್ದ ಈ ಶಾಲೆ ಈಗ ವೆಸ್ಟ್‌ಪಾರ್ಕ್ ರಸ್ತೆಯಲ್ಲಿದೆ. ತಿರುಮಲಮ್ಮನವರಿಗೆ ಸಂಗೀತ, ಚಿತ್ರಕಲೆಯಲ್ಲಿ ತುಂಬಾ ಆಸಕ್ತಿ. ಹಲವಾರು ಪೈಂಟಿಂಗ್ ಗಳನ್ನು ಮಾಡಿದ್ದಾರೆ. ಕೇಳುಗರಿಗೆ ಇಂಪಾಗಿರುವಂತೆ ವಯಲಿನ್ ನುಡಿಸುತ್ತಿದ್ದರು. ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ವಿಶೇಷ ಸನ್ನಿವೇಶ ಉಂಟು ಮಾಡುವಂತೆ ಆಚರಿಸುತ್ತಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಶ್ರೀಮತಿ. ತಿರುಮಲಮ್ಮನವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ 'ರಾಜ್ಯ ಶಿಕ್ಷಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಅಲ್ಲದೇ ಹಲವಾರು ಸಂಘ ಸಂಸ್ಥೆಗಳ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಬಹುಮುಖ ಪ್ರತಿಭೆಯಾದ ಶ್ರೀಮತಿ. ತಿರುಮಲಮ್ಮನವರ ದೇಹಸ್ಥಿತಿ ಕ್ಷೀಣವಾಗುತ್ತಿದ್ದರೂ ಕೊನೆಯವರೆಗೂ ಶಾಲೆಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. 2001 ಸೆಪ್ಟೆಂಬರ್ ಎರಡನೇ ದಿನ ತಾನು ಪ್ರೀತಿಯಿಂದ ಕಟ್ಟಿದ ಶಾಲೆ, ಶಿಷ್ಯ ವೃಂದ ಬಂಧು ಮಿತ್ರರನ್ನಗಲಿ ಇಹಲೋಕದ ಯಾತ್ರೆ ಮುಗಿಸಿದರು.

ಇಂದು ನಮ್ಮೊಡನೆ ಶ್ರೀಮತಿ. ತಿರುಮಲಮ್ಮನವರು ಇಲ್ಲದಿದ್ಧರೂ ಅವರ ಪ್ರೀತಿಯ ಕಾಣಿಕೆಯಾಗಿ ಮಲ್ಲೇಶ್ವರಂ ಶಿಶುವಿಹಾರ ನಮ್ಮ ಕಣ್ಣ ಮುಂದೆ ನಿಂತಿದೆ. ತಿರುಮಲಮ್ಮನವರ ಸಹೋದರರಾದ ಶ್ರೀಯುತ ಪ್ರಸಾದ್ ರವರು ಅಧ್ಯಕ್ಷರಾಗಿ ಶಾಲೆಯ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಶ್ರೀಮತಿ ಲಕ್ಷ್ಮಿ ಶ್ರೀಧರನ್ ಕಾರ್ಯದರ್ಶಿಗಳಾಗಿ ಅವರ ಸಹಾಯಕ್ಕಿದ್ದರು. 2003 ರಲ್ಲಿ ಅತ್ಯಂತ ವಿಜೃಂಭಣೆಯಿಂದ ಮಲ್ಲೇಶ್ವರಂ ಶಿಶುವಿಹಾರ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿ ಕೊಂಡಿದೆ. ಶಾಲೆಯ ಕಾರ್ಯದರ್ಶಿ ಹಾಗೂ ಶಾಲೆಯ ಪ್ರಥಮ ವಿದ್ಯಾರ್ಥಿನಿಯಾಗಿದ್ದ ಶ್ರೀಮತಿ. ಲಕ್ಷ್ಮಿ ಶ್ರೀಧರನ್ ಅವರಿಗೆ 'ಆಧ್ಯಲಕ್ಷ್ಮಿ' ಎಂಬ ನಾಮಧೇಯದೊಂದಿಗೆ ಸತ್ಕರಿಸಿದ್ದಾರೆ. 2022 ರಲ್ಲಿ

ಶ್ರೀಮತಿ ತಿರುಮಲಮ್ಮನವರ ಜನ್ಮಶತಾಬ್ಧಿಯನ್ನು ಶಾಲೆಯ ಆಡಳಿತ ಮಂಡಳಿ, ಹಿರಿಯ ಹಾಗೂ ಕಿರಿಯ ವಿದ್ಯಾರ್ಥಿಗಳು ಸೇರಿ ಆಚರಿಸಿದ್ದಾರೆ. ಶಾಲಾಭಿವೃದ್ಧಿಗೆ ಶ್ರೀಮತಿ ತಿರುಮಲಮ್ಮನವರು ಸಲ್ಲಿಸಿದ ಸೇವೆಯನ್ನು ಸ್ಮರಿಸುತ್ತಾ ನಮನಗಳನ್ನು ಅರ್ಪಿಸಿದ್ದಾರೆ.



ಪ್ರಸ್ತುತ ಶಾಲಾ ಆಡಳಿತ ಮಂಡಳಿ ಶ್ರೀಯುತ ಬಿ.ಎಸ್. ಶ್ರೀಧರ್ ಅವರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಶಾಲೆಯಲ್ಲಿ ವಂತಿಗೆ ಇಲ್ಲ, ಕಡಿಮೆ ಶುಲ್ಕ, ಹೀಗಾಗಿ ಬಡ ಕುಟುಂಬ ವರ್ಗದ ಮಕ್ಕಳ ಶಾಲೆಯಾಗಿಯೇ ಮುಂದುವರೆಯುತ್ತಿದೆ. ಮನೆಯಲ್ಲಿ ಈ ಮಕ್ಕಳಿಗೆ ಹೆಚ್ಚು ಸಹಾಯ ಇಲ್ಲದಿರುವುದರಿಂದ ಶಾಲಾ ಶಿಕ್ಷಕರೇ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದಾರೆ. ಆಟೋಟಗಳಲ್ಲಿ ಶೈಕ್ಷಣಿಕ ಪ್ರಗತಿಯಲ್ಲಿ ಉತ್ತಮ ಸಾಧನೆಯತ್ತ ಸಾಗುತ್ತಿದ್ದಾರೆ ಎಂಬುದು ಹೆಮ್ಮೆಯ ವಿಷಯ.

ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆ

18/2, 10ನೇ ಅಡ್ಡ ರಸ್ತೆ, ರೆಡ್ ಫೀಲ್ಡ್ ಹತ್ತಿರ,
ಹೊಂಬೇಗೌಡ ನಗರ, ವಿಲ್ಸನ್ ಗಾರ್ಡನ್, ಬೆಂಗಳೂರು - 560 027



ಹೆಚ್. ಹೊಂಬೇಗೌಡರು
ಸ್ಥಾಪಕರು

ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಾದ ವಿಲ್ಸನ್ ಗಾರ್ಡನ್ ನಲ್ಲಿ ಪುಟ್ಟಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲೆಗಳಿರಲಿಲ್ಲ. ಮಕ್ಕಳು ದೂರದ ಶಾಲೆಗಳಿಗೆ ಹೋಗಬೇಕಾಗಿತ್ತು. 1950 ನೇ ಇಸವಿಯ ಆಸುಪಾಸಿನ ಸಂದರ್ಭದಲ್ಲಿ ಮಕ್ಕಳು ಮತ್ತು ಪೋಷಕರು ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಿದ್ದರು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀಮಾನ್ ಹೆಚ್. ಹೊಂಬೇಗೌಡರು, ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಕರ್ನಾಟಕ ಕಂಡ ವಿಶೇಷ ವ್ಯಕ್ತಿಗಳ ವರ್ಣಮಯ ಸಾಲಿನಲ್ಲಿ ಎದ್ದು ಕಾಣುವ ಒಂದು ನಕ್ಷತ್ರದಂತೆ ಹೊಳೆದು ಜನಾನುರಾಗಿಗಳಾಗಿ ನಿಷ್ಠುರ ನ್ಯಾಯಾಧೀಶರಾಗಿ ಜನಮನದಲ್ಲಿ ಅಚ್ಚಳಿಯದೆ

ಉಳಿದಿರುವ ಮುಖ್ಯ ನ್ಯಾಯಮೂರ್ತಿ ಶ್ರೀ ಹೆಚ್. ಹೊಂಬೇಗೌಡರು 1.7.1910 ರಂದು ಮಂಡ್ಯ ಜಿಲ್ಲೆಯ ಬನ್ನೂರು ಸಮೀಪದ ಮಾರಗೌಡನಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ತಾಯಿಗಳು ಶ್ರೀಯುತ.ದೊಡ್ಡಹೊಂಬೇಗೌಡ ಮತ್ತು ಶ್ರೀಮತಿ. ಲಿಂಗಮ್ಮ. ಹುಟ್ಟೂರಿನಲ್ಲಿ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿ ಮುಂದಿನ ಓದಿಗಾಗಿ ಬೆಂಗಳೂರು ನಗರಕ್ಕೆ ಬಂದು ಒಕ್ಕಲಿಗರ ಸಂಘದ ಆಶ್ರಯ ಪಡೆದರು. ಇಂಟರ್ ಮೀಡಿಯೇಟ್ ಕಾಲೇಜು ಅನಂತರ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಬಿ.ಎಸ್ಸಿ ಪದವಿ ಪಡೆದರು. ಕಾನೂನು ಪದವಿ ಪೂನಾದಲ್ಲಿ ಅಭ್ಯಾಸ ಮಾಡಿ ಪಡೆದರು. 1933 ರಲ್ಲಿ ಮೈಸೂರು ಹೈಕೋರ್ಟಿಗೆ ಅಡ್ವೋಕೇಟ್ ಆಗಿ ನೊಂದಾಯಿತರಾಗಿ ಕಾನೂನು ಪ್ರಾಕ್ಟೀಸಿಗೆ ತೊಡಗಿದರು. ಪ್ರಸಿದ್ಧ ವಕೀಲರಾಗಿದ್ದ ಶ್ರೀ ಎಚ್.ಸಿ. ದಾಸಪ್ಪನವರ ಬಳಿ ಜೂನಿಯರ್ ಆಗಿ ಕಾರ್ಯ ನಿರ್ವಹಿಸುತ್ತಾ ಕಾನೂನಿನ ಗರಡಿಯಲ್ಲಿ ಪಳಗಿ ಸ್ವಂತ ಪ್ರಾಕ್ಟೀಸನ್ನು ಪ್ರಾರಂಭಿಸಿದರು.

ವಕೀಲರಾಗಿ ಪ್ರಖ್ಯಾತವಾಗುತ್ತಿದ್ದಂತೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ, ಮೈಸೂರು ರೆಪ್ರಸೆನ್ಟೇಟಿವ್ ಅಸೆಂಬ್ಲಿಗೆ ಚುನಾಯಿತರಾದರು. ಎಸ್.ವಿ ವೆಂಕಟರಾಮಯ್ಯನವರ ಮಗಳಾದ ಶ್ರೀಮತಿ. ಸಾವಿತ್ರಮ್ಮ ಅವರನ್ನು ಬಾಳಸಂಗಾತಿಯಾಗಿ ಪಡೆದರು. 1947 ರಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನರ್ ಆಗಿ ನೇಮಕವಾದರು. 1952 ರಲ್ಲಿ ಡಿಸ್ಟ್ರಿಕ್ಟ್ಸ್ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ 1963 ರಲ್ಲಿ ಮುಖ್ಯ ನ್ಯಾಯಾಧೀಶರಾದರು. ವೃತ್ತಿಜೀವನದ ನಡುವೆಯೇ ಕಲೆ, ಸಂಗೀತ, ಶಿಕ್ಷಣ ರಂಗಕ್ಕೂ ಸೀಮಿತ ಸಮಯ ನೀಡುತ್ತಿದ್ದರು.

ಶ್ರೀ ಹೆಚ್. ಹೊಂಬೇಗೌಡರು ಒಂದು ಸುಂದರ ಸಂಜೆ ಶುಭ ಸಮಯದಲ್ಲಿ ಸಮಾನ ಮನಸ್ಕರಾದ ಹಿರಿಯ ನಾಗರಿಕರೊಂದಿಗೆ ಚರ್ಚಿಸಿದರ ಫಲವೇ 1951 ರಲ್ಲಿ ಪ್ರಾರಂಭವಾದ ಶಿಶುವಿಹಾರ ಶಾಲೆ ಶ್ರೀ "ಮಾರುತಿ ವಿದ್ಯಾಲಯ". ಈ ಶಾಲೆಯನ್ನು ನಡೆಸುವ ಜವಾಬ್ದಾರಿಯನ್ನು ಆಗಿನ ನಿವೃತ್ತ ವಿದ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಎಂ. ಎಸ್. ರಾಜಗೋಪಾಲರಾಯರ ತಂಗಿ ಶ್ರೀಮತಿ ಗೋಪೀಬಾಯಿಯವರಿಗೆ ವಹಿಸಲಾಯಿತು. ವರ್ಷ ಕಳೆದಂತೆ ಶಾಲೆ ಬೆಳೆಯುತ್ತಾ ಅದನ್ನು ಸುಸ್ಥಿತಿಯಲ್ಲಿ ನಡೆಸಲು ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ ಸ್ಥಾಪಿಸಿ ಶ್ರೀಮಾನ್ ಹೊಂಬೇಗೌಡರನ್ನು ಗೌರವ ಅಧ್ಯಕ್ಷರನ್ನಾಗಿ ಮತ್ತು

ಶ್ರೀಮಾನ್ ಸ್ವಾಮಿನಾಥಯ್ಯನವರನ್ನು ಗೌರವ ಕಾರ್ಯದರ್ಶಿಯಾಗಿ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.' ಎಳಗರಂ ಎತ್ತಾಗದೆ, ಮಿಡಿ ಪಣ್ಣಾಗದೆ' ಎಂಬ ಸೋಮೇಶ್ವರ ಶತಕದ ಸಾಲುಗಳಂತೆ ನರ್ಸರಿಯಿಂದ ಪ್ರಾಥಮಿಕ ಶಾಲೆಗೆ ದಾಖಲಾದ ಮಕ್ಕಳಿಗೆ ವರ್ಷಗಳು ಕಳೆದಂತೆ ಪ್ರೌಢಶಾಲೆಯ ವಿದ್ಯಾಭ್ಯಾಸದ ಅನುಕೂಲಕ್ಕೆ ಸರ್ವರ ಸಹಕಾರದಿಂದ 1957 ರ ಜೂನ್ 1 ರಂದು 9 ವಿದ್ಯಾರ್ಥಿಗಳ ದಾಖಲಾತಿಯಿಂದ ಪ್ರೌಢಶಾಲೆ ಪ್ರಾರಂಭವಾಯಿತು. 1960 ರಲ್ಲಿ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ನೀಡಿದ್ದರು ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ತರಗತಿಗಳನ್ನು ನಡೆಸಲು ಸ್ಥಳ ಅಭಾವವುಂಟಾಯಿತು. ಇದನ್ನು ಮನಗಂಡ ಶ್ರೀಮಾನ್ ಹೊಂಬೇಗೌಡರು ಟ್ರಸ್ಟ್ ಬೋರ್ಡ್ ನ ಮುಖಾಂತರ ಒಂದು ನಿವೇಶವನ್ನು ಬಡಾವಣೆಯ ಹತ್ತನೇ ಅಡ್ಡರಸ್ತೆಯಲ್ಲಿ ಪಡೆದುಕೊಳ್ಳುವಂತಾಯಿತು. ಅದೇ ನಿವೇಶನದಲ್ಲಿ ಶ್ರೀ ಹೊಂಬೇಗೌಡರು ಸತತ ಪ್ರಯತ್ನದಿಂದ ಶಾಲಾ ಕಟ್ಟಡವನ್ನು ನಿರ್ಮಿಸಲಾಯಿತು. ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಬಾಲಕ ಬಾಲಕಿಯರನ್ನು ಬೇರ್ಪಡಿಸಿ, ವಿಲ್ಸನ್ ಗಾರ್ಡನ್ ಬಾಲಕರ ಪ್ರೌಢಶಾಲೆ ಮತ್ತು ವಿಲ್ಸನ್ ಗಾರ್ಡನ್ ಬಾಲಕಿಯರ ಪ್ರೌಢಶಾಲೆ ಎಂದು ಎರಡು ಪ್ರತ್ಯೇಕ ಸ್ಥಳಗಳಲ್ಲಿ ಎರಡು ಶಾಲೆ ಮಾಡಲಾಯಿತು. 1969 ರಲ್ಲಿ ಸುಮಾರು 1500 ವಿದ್ಯಾರ್ಥಿಗಳ ದಾಖಲಾತಿ ನಡೆಯಿತು.

'ತೇನ ವಿನಾ ತೃಣಮಪಿ ನ ಚಲತಿ' ಎಂಬಂತೆ ನಿಸರ್ಗದ ನಿಯಮವನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ ಎನ್ನುವಂತೆ ಕೆಲಸಗಳ ಒತ್ತಡದಿಂದ ಶ್ರೀ ಹೊಂಬೇಗೌಡರ ಆರೋಗ್ಯ ಸ್ವಲ್ಪ ಮಟ್ಟಿಗೆ ಕುಸಿಯಿತು. 1969 ರಲ್ಲಿ ಅವರು ಕಾಲನ ಕರೆಗೆ ಓಗೊಡಬೇಕಾಯಿತು. ಅವರು ದೈವಾಧೀನರಾದುದು ಅವರ ಕುಟುಂಬಕ್ಕೆ ವಿದ್ಯಾಸಂಸ್ಥೆಗೆ, ಬಡಾವಣೆಯ ಜನತೆಗೆ ಹಾಗೂ ಇಡೀ ಸಮಾಜಕ್ಕೆ ತುಂಬಲಾಗದ ನಷ್ಟವಾಯಿತು. ಕೆಲವು ದಿನಗಳ ನಂತರ ಸದಸ್ಯರ ಮಹಾಸಭೆಯನ್ನು ಕರೆದು ಎಲ್ಲರೂ ಸೇರಿ ಅದೇ ಬಡಾವಣೆ ನಿವಾಸಿಗಳಾದ ನಿವೃತ್ತ ಐ.ಜಿ.ಪಿ. ಶ್ರೀಮಾನ್ ಜಿ.ಎಸ್ ನಾಗರಾಜ್ ರಾವ್ ಅವರನ್ನು ಸಂಸ್ಥೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಶ್ರೀಮಾನ್ ವಿ.ವಿ ಲಕ್ಷಣರೆಡ್ಡಿ, ಶ್ರೀ ಸಿದ್ದೇಗೌಡ, ಶ್ರೀ ಕೆ.ಎನ್.ಸುಬ್ಬಾರೆಡ್ಡಿ ಮುಂತಾದವರು ಸಮಿತಿಯ ಸದಸ್ಯರಾದರು. ನಂತರದಲ್ಲಿ ಸದಸ್ಯರಾದ ಶ್ರೀ ಕೆ.ವಿ ರೆಡ್ಡಿ, ಶ್ರೀ ಜಗದೀಶ್ ರೆಡ್ಡಿ, ಶ್ರೀ ಕೃಷ್ಣರೆಡ್ಡಿ

ಮತ್ತು ಶ್ರೀನಿವಾಸರೆಡ್ಡಿಯವರು ಕಾರ್ಯಕಾರಿ ಸಮಿತಿಯಲ್ಲಿ ಸೇರಿ ದಕ್ಷ ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ಜಿ. ಕೃಷ್ಣಪ್ಪನವರು ಪ್ರೌಢಶಾಲೆ ಕಾರ್ಯದರ್ಶಿಗಳಾದ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಯನ್ನು ಶ್ರೀ ಮಾರುತಿ ವಿದ್ಯಾಲಯವೆಂದೂ, ಬಾಲಕರ ಪ್ರೌಢಶಾಲೆಯನ್ನು ಶ್ರೀ ಹೊಂಬೇಗೌಡ ಬಾಲಕರ ಪ್ರೌಢಶಾಲೆ ಎಂದು ಬಾಲಕಿಯರ ಪ್ರೌಢಶಾಲೆಯನ್ನು ಶ್ರೀಮತಿ ಗಂಗಮ್ಮ ಹೊಂಬೇಗೌಡ ಬಾಲಕಿಯರ ಪ್ರೌಢಶಾಲೆ ಎಂದೂ ನಾಮಕರಣಗೊಂಡು ದಾಪುಗಾಲಿಟ್ಟು ಅಭಿವೃದ್ಧಿ ಪಥದಲ್ಲಿ ಸಾಗುತ್ತಿವೆ. ಸದರಿ ಸಂಸ್ಥೆಯ ವಿದ್ಯಾರ್ಥಿಗಳು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅಲ್ಲದೆ ದೆಹಲಿಯ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆಂಬುದು ಹೆಮ್ಮೆಯ ವಿಚಾರವಾಗಿದೆ.

ಸಾರ್ವಜನಿಕರ ಬೇಡಿಕೆ, ಹಂಬಲ, ಒತ್ತಡ ಜಾಸ್ತಿಯಾಗಿ 1993–94ನೇ ಸಾಲಿನಲ್ಲಿ ಶ್ರೀಮತಿ ಗಂಗಮ್ಮ ಹೊಂಬೇಗೌಡ ಬಾಲಕಿಯರ ಪ್ರೌಢಶಾಲೆಯಲ್ಲಿ ಕಲಾ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ‘ಬಾಲಕಿಯರ ಸಂಯುಕ್ತ ಪದವಿ ಪೂರ್ವ ಕಾಲೇಜು 43 ವಿದ್ಯಾರ್ಥಿನಿಯರ ದಾಖಲಾತಿಯೊಂದಿಗೆ ಪ್ರಾರಂಭವಾಗಿ ಮತ್ತೊಂದು ಮೈಲಿಗಲ್ಲನ್ನು ಸ್ಥಾಪಿಸಿತು. ಕ್ರಮೇಣ 2001–02ನೇ ಶೈಕ್ಷಣಿಕ



ವರ್ಷದಲ್ಲಿ ವಿಜ್ಞಾನ ವಿಭಾಗವೂ ಪದವಿ ಪೂರ್ವ ಕಾಲೇಜಿನಲ್ಲಿ ಹೆಜ್ಜೆ ಇಡಲಾರಂಭಿಸಿತು. 2012 ರಲ್ಲಿ ಸರ್ಕಾರದ ಅನುದಾನಕ್ಕೆ ಒಳಪಟ್ಟಿರುವುದು ಸಂಸ್ಥೆಯ ಕೀರಿಟದ ಮತ್ತೊಂದು ಹೊಳಪಿನ ಗರಿಯಾಗಿದೆ. 2010–11ನೇ ಶೈಕ್ಷಣಿಕ ವರ್ಷದಲ್ಲಿ ಶ್ರೀಮತಿ ಗಂಗಮ್ಮ ಹೊಂಬೇಗೌಡ ಪ್ರಥಮ ದರ್ಜೆ ಕಾಲೇಜು ಯಥಾಪ್ರಕಾರ ಸಾರ್ವಜನಿಕರ, ವಿದ್ಯಾರ್ಥಿಗಳ ಒತ್ತಾಸೆ ಸಹಕಾರದೊಂದಿಗೆ ಸ್ಥಾಪಿತವಾಯಿತು. ಆಡಳಿತ ಮಂಡಳಿಯ ಸರ್ವ ಸಹಕಾರದೊಂದಿಗೆ ದಿನ ನಿತ್ಯ ಪ್ರಾರ್ಥನೆಯೊಂದಿಗೆ ತರಗತಿಗಳು ನಡೆಯುತ್ತಿದ್ದು. ವಾರ್ಷಿಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶ ಪಡೆಯುತ್ತಿದ್ದಾರೆ.

ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆಯ ಪ್ರಸ್ತುತ ಆಡಳಿತ ಸಮಿತಿ ಸದಸ್ಯರು: ಡಾ॥ ಹೆಚ್.ಶರತ್ ಚಂದ್ರ–ಅಧ್ಯಕ್ಷರು, ಶ್ರೀ. ಕೆ.ಎನ್. ಸುಬ್ಬಾ ರೆಡ್ಡಿ–ಉಪಾಧ್ಯಕ್ಷರು, ಶ್ರೀ. ಜಗದೀಶ್ ರೆಡ್ಡಿ–ಗೌರವ. ಕಾರ್ಯದರ್ಶಿ, ಡಾ॥ಸಿ. ಅಶ್ವಥ್–ಗೌರವ. ಖಜಾಂಚಿ, ಶ್ರೀ. ಕೆ.ಎಂ. ಕೃಷ್ಣಾ ರೆಡ್ಡಿ–ಆಂತರಿಕ ಲೆಕ್ಕ ಪರಿಶೋಧಕರು, ಡಾ॥ ಎಲ್. ಶ್ರೀನಿವಾಸ್ ರೆಡ್ಡಿ, ಶ್ರೀ. ಪಿ. ಮೋಹನ್ ಪ್ರಸಾದ್, ಶ್ರೀ. ಎಂ. ಸಿ. ನರೇಂದ್ರ, ಶ್ರೀ. ಸುಂದರ್ ರಾಜ್ ಅರಸ್, ಶ್ರೀ. ವಿ. ಮಂಜುನಾಥ್, ಶ್ರೀಮತಿ. ಸೌಮ್ಯಾ ರೆಡ್ಡಿ, ಶ್ರೀವಿ. ಮುನಿರಾಜು – ಈ ಎಲ್ಲಾ ಸದಸ್ಯರ ಜೊತೆ ಸಂಸ್ಥೆಯ ಸರ್ವತೋಮುಖ ಪ್ರಗತಿಗೆ ಶ್ರಮಿಸುತ್ತಿದೆ.

ವಿಮೆನ್ಸ್ ಪೀಸ್ ಲೀಗ್ ಶಾಲೆ

36, ಶಂಕರ ಮಠ ರಸ್ತೆ, ಬಸವನಗುಡಿ,
ಬೆಂಗಳೂರು – 560 004

ವಿಮೆನ್ಸ್ ಪೀಸ್ ಲೀಗ್ ಶಾಲೆಯು ಶಂಕರಪುರ ಬಡಾವಣೆಯಲ್ಲಿನ ಅತಿ ಹಳೆಯ ಶಾಲೆ. 1953ರಲ್ಲಿ ಶ್ರೀಮತಿ. ರಾಜಂ ಸರಸ್ವತಿ ಅವರಿಂದ ಪ್ರಾರಂಭವಾದ ಒಂದು ಅಪರೂಪ ಸಂಸ್ಥೆ. ಮಹಿಳಾ ಸೇವಾ ಸಮಾಜದಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿದ್ದ ಶ್ರೀಮತಿ ರಾಜಂ ಸರಸ್ವತಿ ಅವರು ಮಕ್ಕಳ ವಿದ್ಯಾಭ್ಯಾಸದೊಂದಿಗೆ ಅವರಿಗೆ ಜೀವನ ಮೌಲ್ಯಗಳನ್ನು ಕಲಿಸುವ ಉದಾತ್ತ ಧ್ಯೇಯದಿಂದ ಈ ಶಾಲೆಯನ್ನು ಪ್ರಾರಂಭಿಸಿದರು. ತಾವು ಮಾತ್ರ ವಿದ್ಯೆ ಕಲಿತರೆ ಸಾಲದು ತಮ್ಮ ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳೂ ವಿದ್ಯಾವಂತರಾಗಬೇಕೆಂಬುದೇ ಅವರ ಆಲೋಚನೆ. ಸುಮಾರು ಎಪ್ಪತ್ತು ವರ್ಷಗಳಾಗಿರುವ ಈ ಶಾಲೆಯಲ್ಲಿ ಓದಿದ ಸಾವಿರಾರು ಹೆಣ್ಣು ಮಕ್ಕಳು ಉನ್ನತ ವಿದ್ಯಾಭ್ಯಾಸವನ್ನು ಮಾಡಿ ದೊಡ್ಡ ದೊಡ್ಡ ಹುದ್ಧೆಗಳನ್ನು ಹೊಂದಿ ಸಮಾಜದಲ್ಲಿ ಉತ್ತಮ



ಶ್ರೀಮತಿ. ರಾಜಂ ಸರಸ್ವತಿ
ಸಂಸ್ಥಾಪಕರು

ಸ್ಥಾನ ಮಾನ ಪಡೆದಿದ್ದಾರೆ. ಶಂಕರಪುರ ಬಡಾವಣೆಯಲ್ಲಿ ವುಡ್ ಬೈನ್ಸ್ ಎಂಬ ಬಾಡಿಗೆ ಮನೆಯಲ್ಲಿ ವಿಮೆನ್ಸ್ ಪೀಸ್ ಲೀಗ್ ಶಾಲೆ 1952 ರಲ್ಲಿ ಕೇವಲ 15 ವಿದ್ಯಾರ್ಥಿಗಳಿಂದ ಪ್ರಾರಂಭವಾದುದು. ಮನೆ ಮನೆಗೆ ಹೋಗಿ ಮಕ್ಕಳನ್ನು ತಮ್ಮ ಶಾಲೆಗೆ ಸೇರಿಸಬೇಕೆಂದು ಪೋಷಕರನ್ನು ಪ್ರೇರೇಪಿಸಿದುದರ ಫಲ ಕೆಲವೇ ವರ್ಷಗಳಲ್ಲಿ ದಾಖಲಾತಿ ಹೆಚ್ಚುತ್ತಾ ಹೋಯಿತು. 1956 ರ ಹೊತ್ತಿಗೆ ಪ್ರೌಢಶಾಲೆಯು ಪ್ರಾರಂಭವಾಯಿತು. ಅನಂತರ ಸ್ವಲ್ಪ ಸಮಯ ವಾಣಿವಿಲಾಸ ರಸ್ತೆಯಲ್ಲಿರುವ ಕರಣಿಕರ ಪಾಠ ಶಾಲೆಯ ಆವರಣದಲ್ಲಿ ತರಗತಿಗಳು ನಡೆಯುತ್ತಿದ್ದವು. ಸ್ಥಳಾಭಾವದಿಂದ ಬೆಳಗ್ಗೆ ಕೆಲವು ತರಗತಿಗಳನ್ನು ಮಧ್ಯಾಹ್ನ ಕೆಲವು ತರಗತಿಗಳನ್ನು ನಡೆಸುತ್ತಿದ್ದರು. 1986 ರಲ್ಲಿ ಶಾಲೆ ಈಗಿರುವ ಜಾಗಕ್ಕೆ ಸ್ಥಳಾಂತರಗೊಂಡಿತು. ಈ ಶಾಲೆಯ ಆಡಳಿತ ಮಂಡಳಿಯನ್ನು ಆರಂಭದಿಂದಲೂ ಮಹಿಳೆಯರೇ ಜವಾಬ್ದಾರಿ ವಹಿಸಿ ನಡೆಸಿಕೊಂಡು ಬರುತ್ತಿದ್ದಾರೆ ಎಂಬುದು ಹೆಮ್ಮೆಯ ಸಂಗತಿ. ಮೊದಲ ಆಡಳಿತ ಮಂಡಳಿಯಲ್ಲಿ ಶ್ರೀಮತಿ ರಾಜಂ ಸರಸ್ವತಿ, ಶ್ರೀಮತಿ ಪದ್ಮ ಶ್ರೀನಿವಾಸನ್, ಶ್ರೀಮತಿ ಶಕುಂತಲಾ ರಾಮರಾವ್, ಶ್ರೀಮತಿ ಶಾರದಾ ಸೀತಾರಾಮ್, ಶ್ರೀಮತಿ ಖಲೀಲ್, ಶ್ರೀಮತಿ ಕಮಲಮ್ಮ ಮೆಹ್ರಾ, ಶ್ರೀಮತಿ ಆರ್. ಲಕ್ಷ್ಮೀದೇವಿ ಇವರೆಲ್ಲಾ ಸ್ಥಾಪಕ ಸದಸ್ಯರು. ಅಧ್ಯಕ್ಷರಾಗಿದ್ದ ಶ್ರೀಮತಿ ಪದ್ಮ ಶ್ರೀನಿವಾಸನ್ ಅವರು ಹಲವಾರು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಹಿಳಾ ಸಬಲೀಕರಣಕ್ಕಾಗಿ ಶ್ರಮ ವಹಿಸುತ್ತಿದ್ದರು. ಶಾಲೆಯ ಆರ್ಥಿಕ ಪರಿಸ್ಥಿತಿ ಏರುಪೇರಾದರೂ ಪದ್ಮ ಶ್ರೀನಿವಾಸನ್ ಅವರು ಹಲವಾರು ಗಣ್ಯರ ಅಭಿಪ್ರಾಯ ಹಾಗೂ ಸಹಾಯವನ್ನು ಪಡೆದು ಈಗಿರುವ ಶಾಲಾ ಜಾಗವನ್ನು ಖರೀದಿ ಮಾಡಿಸಿಕೊಂಡರು. ಇದರ ಸಲುವಾಗಿಯೇ 'ಜಂಟಲ್ ಮ್ಯಾನ್ ಕಮಿಟಿ' ಎಂಬ ಪುರುಷರ ಕಮಿಟಿಯನ್ನು ರಚಿಸಿದರು. ಹೀಗಾಗಿ ಶಾಲೆಯನ್ನು ಕೊಂಡುಕೊಳ್ಳುವುದಕ್ಕೆ ಮೂರುವರೆ ಲಕ್ಷ. ರೂ. ಕೆನರಾ ಬ್ಯಾಂಕಿನಿಂದ ಸಾಲ ಪಡೆಯಲು ಸಾಧ್ಯವಾಯಿತು.

ಸದಸ್ಯರಾಗಿದ್ದ ಶ್ರೀಮತಿ ಸಾವಿತ್ರಮ್ಮನವರ ಪತಿ ಶ್ರೀ ನೀಲಕಂಠರಾಯರು ಕೆನರಾ ಬ್ಯಾಂಕಿಗೆ ಶೂರಿಟಿ ಹಾಕಿದರು. ಪದ್ಮ ಶ್ರೀನಿವಾಸನ್ ಅವರ ಧೈರ್ಯ ಮತ್ತು ಉತ್ಸಾಹ ಶಾಲೆಯ ಹೊಸ ಕಟ್ಟಡ ನಿರ್ಮಾಣಕ್ಕೆ ಕಾರಣವಾದವು. ಹೊಸ ಕಟ್ಟಡ ಬಂದಮೇಲೂ ಶಾಲೆಗೆ ಬರುತ್ತಿದ್ದ ಮಕ್ಕಳಿಂದ ಹೆಚ್ಚಾಗಿ ಶುಲ್ಕವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆಧ್ಯಾಪಕರ ಸಹಕಾರ, ಆಡಳಿತ ಮಂಡಳಿ ಶ್ರಮದಿಂದ ಶಾಲೆ ನಡೆಯುತ್ತಿತ್ತು.

ಶ್ರೀಮತಿ ಪದ್ಮ ಶ್ರೀನಿವಾಸನ್ ನಂತರ ಡಾ. ಆರ್ ಲಕ್ಷ್ಮೀದೇವಿಯವರು ಅಧ್ಯಕ್ಷರಾದರು. ಸಂಸ್ಥೆಯ ಸದಸ್ಯ ಸಂಖ್ಯೆಯನ್ನು ಹೆಚ್ಚಿಸಿದರು. ದಾನಿಗಳ ಸಹಾಯದಿಂದ ಶಾಲಾ ಕಟ್ಟಡವನ್ನು ವಿಸ್ತರಿಸಿದರು. ಶಾಲೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತಾ ಹಲವಾರು ಸಂಘ ಸಂಸ್ಥೆಗಳ ಪ್ರಶಸ್ತಿಗಳಿಗೆ ಭಾಜನವಾಯಿತು.

ಶಾಲೆಯ ಪುರೋಭಿವೃದ್ಧಿಗಾಗಿ ಶ್ರಮಿಸಿದವರಲ್ಲಿ ಮುಖ್ಯೋಪಾಧ್ಯಾಯಿನಿ ಶ್ರೀಮತಿ. ಗಿರಿಜಾ ಅವರ ಪಾತ್ರ ಗಮನಾರ್ಹವಾದುದು. ಕಡುಬಡತನದಿಂದ ಬಂದ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಶಾಲೆಯ ಸಮಯದ ನಂತರ ಉಚಿತ ಪಾಠ ಹೇಳಿಕೊಡುತ್ತಿದ್ದರು. ಅವರ ಮುಂದಾಳತ್ವದಲ್ಲಿ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಜಿಲ್ಲಾಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿಯೂ ಪ್ರಥಮ ಬಹುಮಾನವನ್ನು ವಿದ್ಯಾರ್ಥಿಗಳು ಪಡೆದರು. ಶ್ರೀಮತಿ ಗಿರಿಜಾ ಅವರ ಶೈಕ್ಷಣಿಕ ಕ್ಷೇತ್ರದಲ್ಲಿನ ಸೇವೆಯನ್ನು ಪರಿಗಣಿಸಿ ಹಲವಾರು ಪುರಸ್ಕಾರಗಳು ಲಭಿಸಿವೆ. ಉತ್ತಮ ಶಿಕ್ಷಕ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಈ ಪ್ರಶಸ್ತಿಯನ್ನು ಶ್ರೀಮತಿ ಗಿರಿಜಾ ಅವರು ಅಂದಿನ ರಾಷ್ಟ್ರಪತಿಗಳಾದ ಶ್ರೀ. ಗ್ಯಾನಿ ಜೈಲ್ ಸಿಂಗ್ ಅವರಿಂದ ಪಡೆದರು.

ಶಾಲಾ ಮಕ್ಕಳ ಕಲೆ, ಸಾಹಿತ್ಯ ಪೋಷಣೆಗಾಗಿ ನೈದಿಲೆ ಎಂಬ ಶಾಲೆ ಪತ್ರಿಕೆ ಶ್ರೀಮತಿ. ಶಾರದಾ ಶಾಮಣ್ಣ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ. ಇದರಲ್ಲಿ ಮಕ್ಕಳ ಲೇಖನಗಳು, ಮಕ್ಕಳು ಬರೆದಿರುವಂತಹ ಚಿತ್ರಗಳು ಅಲ್ಲದೆ ಮಕ್ಕಳು ತಮ್ಮ ಗುರುಗಳು ಹಾಗೂ ಸಹಪಾಠಿಗಳೊಡನೆ ಇರುವ ಚಿತ್ರಗಳನ್ನು ಹಾಕಲಾಗುತ್ತದೆ. ಹಾಗಾಗಿ ಮಕ್ಕಳು ತಮ್ಮ ಬಾಲ್ಯದ ಸವಿನೆನಪಿಗಾಗಿ ನೈದಿಲೆ ಪತ್ರಿಕೆಯನ್ನು ಜೋಪಾನವಾಗಿ ಇರಿಸಿಕೊಳ್ಳುತ್ತಾರೆ.ಡಾ. ಆರ್. ಲಕ್ಷ್ಮೀದೇವಿಯವರ ನಂತರ ಖಜಾಂಚಿಯಾಗಿದ್ದ ಶ್ರೀಮತಿ. ವಿಶಾಲಾಕ್ಷಿ ಶಾಮರಾವ್ ಅವರು ಅಧ್ಯಕ್ಷರಾದರು.

ಕೆಲವರಿಗೆ ಒಬ್ಬರೇ ಪೋಷಕರಿರುತ್ತಾರೆ ಆದರೆ ಅಂತ ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಹಕ್ಕಿದೆ ಅವರಿಗೂ ಯಾವುದೇ ಒಂದು ಪ್ರತಿಭೆ ಇದ್ದೇ ಇದೆ ಎಂದು ಆಡಳಿತ ಮಂಡಳಿ ದೃಢವಾಗಿ ನಂಬಿದೆ. ಮಕ್ಕಳು ವಾರ್ಷಿಕ ಶುಲ್ಕ ಪೂರ್ತಿಯಾಗಿ ಕಟ್ಟಲಾಗದಿದ್ದರೂ ಅವರನ್ನು ವಿದ್ಯಾಭ್ಯಾಸ ವಂಚಿತರನ್ನಾಗಿ ಮಾಡುವುದಿಲ್ಲ ಅಲ್ಲದೆ ಬಹಳ ಮಕ್ಕಳಿಗೆ ಮುಂದೆ ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಸಾಧ್ಯವಾಗದೆ ಹೋಗಬಹುದು. ಈ ಮುಂದಾಲೋಚನೆಯಿಂದ ಮಕ್ಕಳ ಸುಭದ್ರವಾದ

ಭವಿಷ್ಯವನ್ನು ರೂಪಿಸಲು ಆಡಳಿತ ಮಂಡಳಿ ಈಗ ಸ್ಕಿಲ್ ಡೆವಲಪ್‌ಮೆಂಟ್ ಕೋರ್ಸ್ ಗಳನ್ನು ಪ್ರಾರಂಭಿಸಿದೆ. ಉಚಿತವಾದ ಈ ತರಬೇತಿಗಾಗಿ ಆಡಳಿತ ಮಂಡಳಿ ಸದಸ್ಯರು ತಮ್ಮ ಕೈಲಾದ ತನು ಮನ ಧನದ ಸಹಾಯವನ್ನು ನೀಡುತ್ತಿದ್ದಾರೆ ಅಲ್ಲದೆ ಹಲವಾರು ದಾನಿಗಳು ಈ ವಿಶೇಷ ತರಬೇತಿಗೆ ಉತ್ತೇಜನ ನೀಡುತ್ತಾ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಸುಮಾರು 120 ಮಕ್ಕಳು ಟೈಲರಿಂಗ್, ಬ್ಯೂಟಿಷಿಯನ್ ಕೋರ್ಸ್, ಮೆಹಂದಿ, ಕಂಪ್ಯೂಟರ್ ಕೋರ್ಸ್, ಕರಾಟೆ ಇತ್ಯಾದಿಗಳಲ್ಲಿ ಭಾಗವಹಿಸಿ ಯಶಸ್ವಿಯಾಗಿ ಕಲಿಯುತ್ತಿದ್ದಾರೆ.

ಆಡಳಿತ ಮಂಡಳಿಯ ಸದಸ್ಯರೆಲ್ಲಾ ವಿದ್ಯಾಭ್ಯಾಸಕ್ಕೆ ಆದ್ಯತೆ ಕೊಟ್ಟು ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ್ದಾರೆ. ಇವರೆಲ್ಲಾ ಶಿಕ್ಷಣ ತಜ್ಞರು, ಡಾಕ್ಟರ್‌ಗಳು, ಲಾಯರ್ ಗಳು, ಇಂಜಿನಿಯರ್‌ಗಳು, ಅಧ್ಯಾಪಕರು, ಆರ್ಥಿಕ ತಜ್ಞರು ಹೀಗೆ ಅನುಭವ ಪಡೆದವರು. ಇವರಲ್ಲಿ ಪ್ರಮುಖರೆಂದರೆ: ಶ್ರೀಮತಿ. ಸಾವಿತ್ರಮ್ಮ ನೀಲಕಂಠರಾವ್, ಶ್ರೀಮತಿ. ಶೀಲಾ ರಾವ್,ಶ್ರೀಮತಿ ಪ್ರೇಮ ಸೋಮ ಸುಂದರಂ, ಶ್ರೀಮತಿ. ಟಿ.ಎ. ಶ್ರೀಮತಿ, ಶ್ರೀಮತಿ. ಲಲಿತ ಸುದರ್ಶನ್ ಮೊದಲಾದವರು.

ಪ್ರಸ್ತುತ ಶ್ರೀಮತಿ. ಭೂಷಣಿ ಕುಮಾರ್ ಅವರು ಕಾರ್ಯದರ್ಶಿಗಳಾಗಿ, ಡಾ. ರುಕ್ಕಿಣಿ ರಘುರಾಮ್ ಖಜಾಂಚಿಗಳಾಗಿ, ಶ್ರೀಮತಿ. ವಿಶಾಲಾಕ್ಷಿಯವರು ಸದಸ್ಯರಾಗಿ, ಶ್ರೀಮತಿ. ರಾಜಂ ಸರಸ್ವತಿ ಆದಿಯಾಗಿ ಯಾವ ಉನ್ನತವಾದ ಧ್ಯೇಯೋದ್ದೇಶಗಳಿಂದ ಶಾಲೆಯನ್ನು ಪ್ರಾರಂಭಿಸಿದರೂ ಅದೇ ಆಶಯವನ್ನು ಈಗಲೂ ಮುಂದುವರಿಸಲು ಶ್ರಮಿಸುತ್ತಾ ಬಂದು 1986 ರಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿತು. ನಂತರ 2014 ರಲ್ಲಿ ವಿಜೃಂಭಣೆಯಿಂದ ವಜ್ರ ಮಹೋತ್ಸವವನ್ನು ಹೆಚ್.ಎನ್. ಕಲಾ ಕ್ಷೇತ್ರದಲ್ಲಿ ಆಚರಿಸಿಕೊಂಡಾಗ ಕರ್ನಾಟಕದ ರಾಜ್ಯಪಾಲರಾಗಿದ್ದ ಶ್ರೀ. ಹಂಸರಾಜ್ ಭರದ್ವಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ವಿದ್ಯಾ ಕ್ಷೇತ್ರದಲ್ಲಿ ನಾವು ಮಾಡಿರುವ ಉತ್ತಮವಾದ ಕಾರ್ಯ ಚಟುವಟಿಕೆಯನ್ನು ಗುರುತಿಸಿ ಅನೇಕ ಸಂಸ್ಥೆಗಳು ಸನ್ಮಾನ ಪುರಸ್ಕಾರಗಳು ನೀಡಿವೆ. ಉತ್ತಮ ಆಡಳಿತ ಮಂಡಳಿ ಪುರಸ್ಕಾರ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಶಿಕ್ಷಕರ ಸಂಘದಿಂದ 2005 ರಲ್ಲಿ ನೀಡಲಾಯಿತು. ನ್ಯಾಷನಲ್ ಸುವರ್ಣ ವಿದ್ಯಾಶ್ರೀ ರತ್ನ ಅವಾರ್ಡ್ 2012ರಲ್ಲಿ ನೀಡಲಾಯಿತು. ಜಗದ್ಗುರು ಶ್ರೀ ಶ್ರೀ




ಭಾರತಿ ತೀರ್ಥ ಅವಾರ್ಡ್ 2022 ರಲ್ಲಿ ಮಂಡಳಿಗೆ ನೀಡಲಾಯಿತು. ಮನುಷ್ಯ ಪ್ರಯತ್ನ ಯೋಜನೆಗಳು ಒಂದು ಕಡೆ ಆದರೆ ಅದು ಫಲಪ್ರದವಾಗುವುದು ಮಾತ್ರ ದೈವ ಸಂಕಲ್ಪವಿದ್ದಾಗ ಶಾಲಾ ಆಡಳಿತ ಮಂಡಳಿ ಶೃಂಗೇರಿಯ ಶಾರದ ಚಂದ್ರಮೌಳೇಶ್ವರರ ಕೃಪೆ ಶ್ರೀ ಗುರುಗಳ ಅನುಗ್ರಹದಿಂದ ನಮ್ಮ ಈ ಕೆಲಸಗಳೆಲ್ಲ ನಡೆಯುತ್ತಿದೆ ಎಂದು ದೃಢವಾಗಿ ನಂಬಿದೆ. ಆದ್ದರಿಂದಲೇ ಕಷ್ಟದ ಪರಿಸ್ಥಿತಿಯಲ್ಲೂ ಒಂದು ಆಶಾಕಿರಣ ಗೋಚರಿಸುತ್ತದೆ ಎಂಬ ಸಕಾರಾತ್ಮಕ ಭಾವನೆಯಿಂದ ಶಾಲೆಯನ್ನು ನಡೆಸುತ್ತಾ 70ನೇ ವರ್ಷದ ಸಂಭ್ರಮಾಚರಣೆಯನ್ನು ಶಾಲಾ ಆವರಣದಲ್ಲಿ ತಾರೀಖು 04.02.2024 ರಂದು ಆಚರಿಸಿಕೊಂಡಿದ್ದೇವೆ.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು

1ನೇ ಮುಖ್ಯರಸ್ತೆ, 38ನೇ ಅಡ್ಡರಸ್ತೆ,
ಜಯನಗರ 8ನೇ ಬ್ಲಾಕ್, ಬೆಂಗಳೂರು – 560 070

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಮಾನವ ಕಲ್ಯಾಣಕ್ಕೆ ಹೊಸ ದಾರಿ ತೋರಿವೆ. ಭಾರತಮಾತೆಯ ಪುಣ್ಯಗರ್ಭದಲ್ಲಿ ಅನೇಕ ಸಂತ ಶ್ರೇಷ್ಠರು ಜನಿಸಿ ಲೋಕೋಪಕಾರ ಮಾಡಿ ನಭೋಮಂಡಲದ ಉಜ್ವಲ ತಾರೆಗಳಾಗಿ ಜನಮಾನಸದಲ್ಲಿ ಶಾಶ್ವತವಾಗಿ ಮಿನುಗುತ್ತಿದ್ದಾರೆ. ಕನ್ನಡ ತಾಯಿ ಭುವನೇಶ್ವರಿಯ ನೆಲದಲ್ಲಿ ಪುಣ್ಯಾತ್ಮರು ಮಾನವ ಕಲ್ಯಾಣದ ಬೀಜವ ಬಿತ್ತಿ ನೆಲ ಪಾವನಗೊಳಿಸಿದ್ದಾರೆ.



ಬಸವಾದಿ ಶರಣರ ಸಾಮಾಜಿಕ, ಧಾರ್ಮಿಕ, ಕ್ರಾಂತಿ – ಚಳುವಳಿಗೂ ಮೊದಲೇ ಕಂಚಿಯನ್ನಾಳುತ್ತಿದ್ದ ರಾಜರಾಜ ಚೋಳನಿಗೂ ತಲಕಾಡನ್ನಾಳುತ್ತಿದ್ದ ಗಂಗರಾಜ ರಾಚಮಲ್ಲನಿಗೂ ಅಗಾಧ ದ್ವೇಷವಿತ್ತು. ರಾಜರಾಜ ಚೋಳನ ಮಗ ರಾಜೇಂದ್ರಚೋಳನ ನಾಯಕತ್ವದಲ್ಲಿ ಕಪಿಲಾ ನದಿಯ ದಂಡೆಗೆ ಚೋಳರ

ಮಹಾಸೈನ್ಯ ರಾಚಮಲ್ಲನ ಮೇಲೆ ದಾಳಿ ಮಾಡಲು ಬಂದಾಗ ಈರ್ವರ ನಡುವೆ ದ್ವೇಷಾಗ್ನಿ ಪರಕಾಷ್ಠೆಯಲ್ಲಿದ್ದ ಸಂದರ್ಭದಲ್ಲಿ ಜಗದ್ಗುರು ಶಿವರಾತ್ರಿ ಭಗವತ್ಪಾದರು ಶಾಂತಿ ಮಂತ್ರ ಬೋಧಿಸಿ ಇಬ್ಬರು ಹೋರಾಟ ಬಿಟ್ಟು ಮನುಕುಲದ ಏಳಿಗೆಗಾಗಿ ಶಾಂತಿ ದೀಕ್ಷೆ ತೊಡಲು ಆಗ್ರಹಿಸಿದರು. ಇದು ಚೋಳ ರಾಜನಿಗೆ ಮತ್ತು ರಾಚಮಲ್ಲನೊಡನೆ ಸ್ನೇಹ-ಸೌಹಾರ್ದ ಬೆಳೆಯಲು ಕಾರಣವಾಯಿತು. ಚೋಳ ಚಕ್ರೇಶ್ವರನ ಅನನ್ಯ ಭಕ್ತಿ ಮತ್ತು ಪ್ರಾರ್ಥನೆ ಮನ್ನಿಸಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸಾವಿರ ವರ್ಷಗಳ ಹಿಂದೆಯೇ ಸುತ್ತೂರು ಜಗದ್ಗುರು ವೀರ ಸಿಂಹಾಸನ ಪೀಠವನ್ನು ಸ್ಥಾಪಿಸಿದರು. ಇಂತಹ ಬಹು ದಿವ್ಯ ಪರಂಪರೆಯಲ್ಲಿ ಬಂದಂತಹ ಪೂಜ್ಯ ಜಗದ್ಗುರುಗಳು ವಿಶ್ವ ಕಲ್ಯಾಣಕ್ಕಾಗಿ ಮಹೋನ್ನತ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. 23ನೇ ಶಿವರಾತ್ರೀಶ್ವರರಾಗಿ ಪೀಠ ಅಲಂಕರಿಸಿದ ಪರಮಪೂಜ್ಯ ರಾಜೇಂದ್ರ ಮಹಾಸ್ವಾಮಿಗಳು ಮಾನವ ಕಲ್ಯಾಣದ ಹೊಸ ಭಾಷ್ಯ ಬರೆದರು. ಇಂದು ಶ್ರೀರಾಜೇಂದ್ರ ಗುರುವಿನ ಪ್ರಾತಃ ಸ್ಮರಣೀಯರಾದ ಶ್ರೀ ಗುರುಗಳು ಈ ಭುವನದ ಭಾಗ್ಯವನ್ನು ವಿಸ್ತರಿಸಿದ ಮಹಾ ಮಹಿಮರು.

ಕೋಟ್ಯಾಂತರ ಜನರ ಬದುಕಿನ ಆಶಾಕಿರಣವಾಗಿ ಶ್ರೀ ಗುರುಗಳು ಪವಾಡವೆಂಬಂತೆ ಅನೇಕ ಜ್ಞಾನಾನ್ನ ದಾಸೋಹ ಸಂಸ್ಥೆಗಳನ್ನು ನಿರ್ಮಿಸಿದರು. 1924ರಲ್ಲಿ ಮೈಸೂರಿನಲ್ಲಿ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಿ ಬಡ ವಿದ್ಯಾರ್ಥಿಗಳ ಅನ್ನದ ಹಸಿವು ನೀಗಿಸಿ ಜ್ಞಾನದ ಬೆಳಕನ್ನು ನೀಡಲು ನಾಂದಿ ಹಾಡಿದರು. ಇಂದು ಇಂತಹ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿ ನಿಲಯಗಳು ನಾಡಿನಾದ್ಯಂತ ಹರಡಿ ಅಸಂಖ್ಯಾತ ವಿದ್ಯಾರ್ಥಿಗಳ ಮನೆಮನದ ಬೆಳಕಾಗಿವೆ.

1954 ರಲ್ಲಿ ಪರಮಪೂಜ್ಯ ಶ್ರೀಗುರು ರಾಜೇಂದ್ರರು ಮೈಸೂರಿನಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವನ್ನು ವಿದ್ಯುಕ್ತವಾಗಿ ಸ್ಥಾಪಿಸಿದರು. ಮಹಾವಿದ್ಯಾಪೀಠದ ಆಶ್ರಯದಲ್ಲಿ ಬರುವ ವಿದ್ಯಾರ್ಥಿ ಶಿಶುವಿಹಾರ ಪ್ರವೇಶಿಸಿ ಉನ್ನತ ಪದವಿಯ (ಕೆಜಿ ಟು ಪಿಜಿ) ಜೊತೆಗೆ ಶಿಕ್ಷಕನೋ, ವೈದ್ಯನೋ, ಅಭಿಯಂತರನೋ, ಆಡಳಿತಗಾರನೋ ಕೌಶಲ್ಯಾಧಿಪತಿಯೋ ಆಗಿ, ಹೊರಹೊಮ್ಮುವಷ್ಟು ಸಮೃದ್ಧ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ಲಕ್ಷಾಂತರ ವಿದ್ಯಾರ್ಥಿಗಳು ಸಾವಿರಾರು ಉದ್ಯೋಗಿಗಳ ಮತ್ತು ಅವರ ಕುಟುಂಬದ ಅನ್ನ,

ಅಂಬಲಿ, ಆರೋಗ್ಯ ಹಾಗೂ ಅರಿವಿನ ಮಹಾಮನೆಯಾಗಿದೆ ಮಹಾವಿದ್ಯಾಪೀಠ. ಜೆಎಸ್ಎಸ್ ಮಹಾವಿದ್ಯಾಪೀಠದ ಅದ್ವಿತೀಯತೆ ಅಡಗಿರುವುದು ಶ್ರೀಗುರು ರಾಜೇಂದ್ರರು ಮತ್ತು ಪ್ರಸ್ತುತ ಜಗದ್ಗುರುಗಳಾದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಡಿಯಲ್ಲಿ ಅದು ತೆರೆದಿರುವ ವೈವಿಧ್ಯಮಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಎನ್ನುವುದೇ ಹೆಮ್ಮೆಯ ವಿಷಯವಾಗಿದೆ.

ರಾಜೇಂದ್ರ ಮಹಾಸ್ವಾಮಿಗಳು ಅಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಆರೋಗ್ಯ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಸಂಸ್ಥೆಯಲ್ಲಿ ಕಾಯಕ ಮಾಡುವ ಪ್ರತಿ ಉದ್ಯೋಗಿಗೂ ಸಕಲ ನೆರವುಗಳನ್ನು ಒದಗಿಸಿದರು. ವಿದ್ಯಾರ್ಥಿ ಉದ್ಯೋಗಿಗಳಿಗೆ ಯಾವುದೇ ಜಾತಿ, ಮತ, ಧರ್ಮಗಳ ಬೇಧವಿಲ್ಲದಂತೆ ಎಲ್ಲರನ್ನೂ ಸಮಾನವಾಗಿ ಕಂಡರು. ಗುರುವಿನ ತಾಯಿ ಹೃದಯ ಹೇಗಿತ್ತೆಂದರೆ 'ಓದಿದರೆ ಸುತ್ತೂರು ಸಂಸ್ಥೆಗಳಲ್ಲಿಯೆ ಓದಬೇಕೆಂಬ' ಗಾದೆ ಮಾತೆ ಹುಟ್ಟಿಕೊಂಡಿತು.

ರಾಜೇಂದ್ರ ಮಹಾಸ್ವಾಮಿಗಳು ನಿಜವಾದ ಭಕ್ತಿ ಪ್ರೀತಿಗಳಿಗೆ ಬಹು ಬೇಗ ಒಲಿಯುತ್ತಿದ್ದರು ಭಕ್ತರ ಮನೆಗೆ ಆಹ್ವಾನವಿಲ್ಲದೆ ಹೋಗಿ ಯೋಗಕ್ಷೇಮ ವಿಚಾರಿಸಿ ಆಶೀರ್ವದಿಸಿ ಬರುತ್ತಿದ್ದರು. ಚಿನ್ನದ ಕರಂಡಿಕೆ, ಪಟ್ಟದ ಚಿನ್ನದ ಉಂಗುರಗಳನ್ನು ಗಿರವಿಯಿಟ್ಟು ವಿದ್ಯಾರ್ಥಿಗಳ ಹಸಿವಿಂಗಿಸಿದರು.

ತ್ರಿವಿಧ ದಾಸೋಹಿಗಳಾದ ಸುತ್ತೂರು ಶ್ರೀಮಠದ 23ನೆಯ ಜಗದ್ಗುರುಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ರಾಜೇಂದ್ರಸ್ವಾಮಿಗಳವರು ಮಾನವ ಕಲ್ಯಾಣಕ್ಕಾಗಿ ಅನೇಕ ಸಂಸ್ಥೆಗಳನ್ನು ಭಾರತದ ಉದ್ದಗಲಕ್ಕೂ ಸ್ಥಾಪಿಸಿದರು. ತಾಯ್ಕರಳಿನ ರಾಜೇಂದ್ರ ಮಹಾಸ್ವಾಮಿಗಳು ಜೆಎಸ್ಎಸ್ ಮಹಾವಿದ್ಯಾಪೀಠದ ಆಡಳಿತಾತ್ಮಕ ವಿಚಾರವಾಗಿ ಆಗ್ಗಾಗ್ಗೆ ಬೆಂಗಳೂರಿಗೆ ಆಗಮಿಸುತ್ತಿದ್ದರು. ಆಗ ಶ್ರೀ ರಾಜೇಂದ್ರಶ್ರೀಗಳು ಬನಶಂಕರಿ ಆಶ್ರಮದಲ್ಲಿ ತಂಗುತ್ತಿದ್ದರು. ಕನಕಪುರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಿಂದ ಶಿಕ್ಷಣ ಪಡೆಯಲು ಹೆಣಗಾಡುತ್ತಿದ್ದ ಬಡ ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ಗಮನಿಸಿದ ಶ್ರೀಗಳು ಈ ವಿದ್ಯಾರ್ಥಿಗಳಿಗಾಗಿ ಏನಾದರೂ ಮಾಡಬೇಕೆಂದು ತೀರ್ಮಾನಿಸಿ 1962 ರಲ್ಲಿ ಶ್ರೀ ಬನಶಂಕರಮ್ಮನವರ ದೇವಾಲಯದ ಜಗುಲಿಯ ಮೇಲೆ ಕೇವಲ 30


ವಿದ್ಯಾರ್ಥಿಗಳಿಗಾಗಿ ಶಾಲೆಯೊಂದನ್ನು ಸ್ಥಾಪಿಸಿದರು. ಇದು ಉದ್ಯೋಗ ಮತ್ತು ವಿವಿಧ ಕಾರಣಗಳಿಗಾಗಿ ವಲಸೆ ಬಂದ ಬಡ ಜನರ ಮಕ್ಕಳ ಶೈಕ್ಷಣಿಕ ಉದ್ಧಾರಕ್ಕೆ ಅನುಕೂಲವಾಯಿತು. 1976 ರಲ್ಲಿ ಜಯನಗರದ 8 ನೇ ಬಡಾವಣೆಯ ಬಾಡಿಗೆ ಮನೆಯೊಂದಕ್ಕೆ ಶಾಲೆಯನ್ನು ಸ್ಥಳಾಂತರಿಸಿದರು. ನಂತರ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ದಿನಾಂಕ: 02.07.1983 ರಲ್ಲಿ ಪ್ರೌಢಶಾಲೆಯೊಂದಿಗೆ ಜೆಎಸ್‌ಎಸ್ ಸಂಯುಕ್ತ ಕಿರಿಯ ಕಾಲೇಜು ಎಂಬ ಹೆಸರಿನಲ್ಲಿ ಆರಂಭವಾಯಿತು. 1983 ರಲ್ಲಿ ವಾಣಿಜ್ಯ ಮತ್ತು (GECA) ವಿಜ್ಞಾನ (PCMB) ವಿಷಯಗಳ ಸಂಯೋಜನೆಗಳ ತರಗತಿಗಳಿಗೆ ಪ್ರವೇಶಾವಕಾಶ ದೊರಕಿಸಲಾಯಿತು. ನಂತರದ ದಿನಗಳಲ್ಲಿ ಹೊಸ ವಿಷಯಗಳು ಸೇರ್ಪಡೆಗೊಂಡು 1998 ರಲ್ಲಿ ಕಲಾ ವಿಭಾಗ ಸ್ಥಾಪನೆಯಾಗಿ ಕಾಲೇಜು ಸವಿಸ್ತಾರವಾಗಿ ಬೆಳೆಯಲು ಕಾರಣವಾಯಿತು. ದಿನಾಂಕ: 01.04.1997 ರಲ್ಲಿ ಪದವಿ ಪೂರ್ವ ಕಾಲೇಜು ಅನುದಾನಕ್ಕೆ ಒಳಪಟ್ಟಿತು. 2003 ರಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕವನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಸಮಾಜಮುಖಿ ಜೀವನ ಕೌಶಲಗಳನ್ನು ಬೆಳಸಲಾಗುತ್ತಿದೆ.

ಮುಂದೆ ರಾಜೇಂದ್ರ ಶ್ರೀಗಳವರ ಮಹಾ ಪ್ರಯತ್ನದ ಫಲವಾಗಿ ಎರಡೂವರೆ ಎಕರೆ ವಿಸ್ತೀರ್ಣದಲ್ಲಿ ಶ್ರೀ ಶಿವರಾತ್ರೀಶ್ವರ ಆಡಿಟೋರಿಯಂ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜೆಎಸ್‌ಎಸ್ ಅಭಿವೃದ್ಧಿ ಸಂಸ್ಥೆ, ಭಾರತ ವಿಕಾಸ ಕೇಂದ್ರ, ಎಲ್.ಕೆ.ಜಿ ಯಿಂದ IAS, ಮಧ್ಯಮ ವರ್ಗದವರು ಐ.ಎ.ಎಸ್, ಕೆ.ಎ.ಎಸ್ ಅಧಿಕಾರಿಗಳಾಗಲು ಜಸ್ಟೀಸ್' ಎಂಬ ಮಹಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ತರಬೇತಿ ಪಡೆದು ನೂರಾರು ಜನ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಆಡಳಿತದಲ್ಲಿ ಮಹತ್ವದ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಕಲಚೇತನ ಮಕ್ಕಳ ಶೈಕ್ಷಣಿಕ ಉದ್ಧಾರಕ್ಕಾಗಿ ಸಹನಾ ಶಾಲೆಯನ್ನು ಸಹ ಬಹಳ ದೂರದೃಷ್ಟಿಯಿಂದ ಸ್ಥಾಪಿಸಿರುವ ಹಿನ್ನಲೆಯನ್ನು ಗಮನವಿಟ್ಟು ನೋಡಿದರೆ ಶಿವರಾತ್ರೀಶ್ವರರ ಆಶೀರ್ವಾದದ ಫಲದಿಂದ ಶ್ರೀ ರಾಜೇಂದ್ರಶ್ರೀಗಳು ಜನಕಲ್ಯಾಣದ ಶೈಕ್ಷಣಿಕ ಮಾದರಿ ಇಡೀ ಜಗತ್ತಿಗೆ ಮಾದರಿ ಎನಿಸುವುದರಲ್ಲಿ ಸಂಶಯವಿಲ್ಲ.

ನಮ್ಮ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳಿಗೂ ಸವಾಲಾದ ಕೆಲಸಗಳನ್ನು ಯಾವುದೇ ಗೊಂದಲಕ್ಕೂ ಅವಕಾಶವಿಲ್ಲದಂತೆ ಯಾವ

ಸಮುದಾಯಕ್ಕೂ ನೋವಾಗದಂತೆ ಪ್ರಗತಿಪರ ಕೆಲಸಗಳನ್ನು ಮಾಡುತ್ತಾ, ಸರ್ವಜನ ಹಿತ ಬಯಸುತ್ತಾ ದೇಶ ನಿರ್ಮಾಣ ಕಾರ್ಯದಲ್ಲಿ ಶ್ರೀ ಮಠದ ಸಾಧನೆ ಅನನ್ಯ. ಪ್ರಸ್ತುತ ಜಗದ್ಗುರುಗಳಾದ ಪರಮ ಪೂಜ್ಯ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳು ಶ್ರೀ ಗುರು ರಾಜೇಂದ್ರರ ಆಶಯದಂತೆ ಸಂಸ್ಥೆಯ ಕಾರ್ಯವನ್ನು ವಿದೇಶಗಳಲ್ಲೂ ವಿಸ್ತರಿಸಲು ಕಾರಣರಾಗಿದ್ದಾರೆ. ಇದು ನಿಜವಾಗಿಯೂ ಈ ನಾಡಿನ ಹೆಮ್ಮೆಯ ವಿಷಯವಾಗಿದೆ. ಕಾಲೇಜಿನ ಬೆಳವಣಿಗೆಗೆ ಶಿಕ್ಷಣ ತಜ್ಞರಾದ ಡಾ. ರೋಹಿತ್ಕರ್, ನಾಡೋಜ ದೊರೆಸ್ವಾಮಿ ಅಯ್ಯಂಗಾರ್‌ರವರು, ಡಾ. ಯು. ಆರ್. ಅನಂತಮೂರ್ತಿ, ಡಾ. ಜಿ.ಎಸ್. ಶಿವರುದ್ರಪ್ಪ ನಾಡೋಜ ಗೊ.ರು. ಚನ್ನಬಸಪ್ಪ, ನಾಡೋಜ ಕೋ. ಚನ್ನಬಸಪ್ಪ, ಸಾಹಿತಿ ಜರಗನಹಳ್ಳಿ ಶಿವಶಂಕರ್, ಅಲ್ಲದೆ ಅಸಂಖ್ಯಾತ ಹಿರಿಯ ವಿದ್ಯಾರ್ಥಿಗಳು ಅನೇಕ ರೀತಿಯಲ್ಲಿ ಸಹಕರಿಸಿದ್ದಾರೆ.

ಕಾಲೇಜು ಸ್ಥಾಪನೆಯಾಗಿ ನಾಲ್ಕು ದಶಕಗಳು ಸಂದಿರುವುದು ಬಹಳ ಹೆಮ್ಮೆಯ ಸಂಗತಿಯಾಗಿದೆ. ಈ ನಾಲ್ಕು ದಶಕಗಳಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ಸಮಾಜದ ವಿವಿಧ ರಂಗಗಳಿಗೆ ಕೊಡುಗೆಯಾಗಿ ನೀಡಿದೆ.



ಇದು ಸದೃಢ ಸಮಾಜದ ನಿರ್ಮಾಣಕ್ಕೆ ಬಹಳ ಉಪಯೋಗಕಾರಿಯಾಗಿದೆ. ರಾಜ್ಯರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಿ ಗುರುತಿಸಿಕೊಂಡಿರುವುದಷ್ಟೆಯಲ್ಲದೆ ಸಂಸ್ಥೆಗೆ ಹೊನ್ನಗರಿಯಾಗಿದ್ದಾರೆ.


ಇಂದು ಬೆಂಗಳೂರಿನಲ್ಲಿರುವ ಜೆ.ಎಸ್.ಎಸ್ ಸಂಸ್ಥೆಗಳು:

ಜೆಎಸ್ಎಸ್ ಸಹನ ಶಾಲೆ–ಜಯನಗರ, ಜೆಎಸ್ಎಸ್ ನರ್ಸರಿ ಶಾಲೆಗಳು–ಜಯನಗರ, ಕೋಣನಕುಂಟೆ, ಮೈಲಸಂದ್ರ, ಚಾಮರಾಜಪೇಟೆ, ಜೆಎಸ್ಎಸ್ ಪ್ರಾಥಮಿಕ ಶಾಲೆಗಳು–ಜಯನಗರ, ಕೋಣನಕುಂಟೆ, ಮೈಲಸಂದ್ರ, ಚಾಮರಾಜಪೇಟೆ, ಜೆಎಸ್ಎಸ್ ಪ್ರೌಢಶಾಲೆಗಳು ಜಯನಗರ ಕೋಣನಕುಂಟೆ ಮತ್ತು ಮೈಲಸಂದ್ರ, ಜೆಎಸ್ಎಸ್ ಪಬ್ಲಿಕ್ ಶಾಲೆಗಳು–ಪದ್ಮನಾಭನಗರ, HSR ಮತ್ತು HBR ಲೇಔಟ್, ಜೆಎಸ್ಎಸ್ ಪದವಿ ಪೂರ್ವ ಕಾಲೇಜು–ಜಯನಗರ, ಜೆಎಸ್ಎಸ್ ಜನಶಿಕ್ಷಣ–ಕೌಶಲ್ಯಾಧಾರಿತ ತರಬೇತಿ ಸಂಸ್ಥೆ, ಜಯನಗರ, ಜೆಎಸ್ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ (IAS KAS) ಜಯನಗರ, ಜೆಎಸ್ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್–ಶ್ರೀನಿವಾಸಪುರ ಕೆಂಗೇರಿ ಸಮೀಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು–ಜಯನಗರ, ಕದಳಿ ಮಹಿಳಾ ವೇದಿಕೆ–ಜಯನಗರ, ಜೆಎಸ್ಎಸ್ ಹಿರಿಯರಮನೆ–ರಾಮೋಹಳ್ಳಿ ದೊಡ್ಡ ಆಲದ ಮರದ ಹತ್ತಿರ.

ವಿಜಯ ವಿದ್ಯಾ ಸಂಸ್ಥೆ

ನಂ.32, 15ನೇ ಅಡ್ಡರಸ್ತೆ, ಸೌತ್ ಎಂಡ್ ಸರ್ಕಲ್, 3ನೇ ಬ್ಲಾಕ್,
ಜಯನಗರ, ಬೆಂಗಳೂರು – 560 011

ಬೆಂಗಳೂರು ದಕ್ಷಿಣ ಜಿಲ್ಲೆಯ ಸೌತ್ ಎಂಡ್ ವೃತ್ತದ ಪಟ್ಟಾಲಮ್ಮ ದೇವಸ್ಥಾನದ ಬೀದಿಯಲ್ಲಿರುವ ಬದರಿಕಾಶ್ರಮದ (ಈಗ ಬದಲಾಗಿದೆ) ಆವರಣದಲ್ಲಿ ಚಿಕ್ಕ ಬಾಡಿಗೆ ಮನೆಯಲ್ಲಿ ಜನವರಿ 30, 1956ರಂದು ಎಸ್.ಎಸ್.ಎಲ್.ಸಿ ಕೋಚಿಂಗ್ ಹೋಮ್ ಎಂಬ ನಾಮಫಲಕದೊಂದಿಗೆ ಒಬ್ಬ ವಿದ್ಯಾರ್ಥಿಗೆ ಪಾಠ ಹೇಳಿಕೊಡುವ ಮುಖೇನ ಈ ವಿದ್ಯಾಸಂಸ್ಥೆಯು ಆರಂಭವಾಯಿತು. ಈ ನಾಮಫಲಕ ಬರೆಯಲೂ ಹಣದ ಅಭಾವವಿದ್ದದರಿಂದ ಹನ್ನೆರಡು ಆಣೆಯನ್ನು ಎರವಲು ಪಡೆದು ಅದನ್ನು ಬರೆಯಿಸಿದವರು ಶ್ರೀ ಕೆ. ಎಸ್. ಚಂದ್ರಶೇಖರಯ್ಯ, ಇವರೇ ವಿಜಯ ವಿದ್ಯಾ ಸಂಸ್ಥೆಯ ಸ್ಥಾಪಕರು.



ಕೆ. ಎಸ್. ಚಂದ್ರಶೇಖರಯ್ಯ
ಸಂಸ್ಥಾಪಕ ಅಧ್ಯಕ್ಷರು

ಶ್ರೀ ಕೆ.ಎಸ್. ಚಂದ್ರಶೇಖರಯ್ಯ ನವರು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ



ಶಾಲಾ ಅಂದಿನ ಮತ್ತು ಇಂದಿನ ಚಿತ್ರ



ಕೆರಗೋಡಿ ಗ್ರಾಮದವರು. ಶ್ರೀಯುತ ಕೆ.ಎಸ್. ಶಂಕರಲಿಂಗಯ್ಯ ಮತ್ತು ಶ್ರೀಮತಿ. ನಿಂಗಮ್ಮ ದಂಪತಿಗಳ ಸುಪುತ್ರ. ಇವರ ಜನನ ಆಗಸ್ಟ್ 5,1927. ಜೀವನೋಪಾಯಕ್ಕಾಗಿ ಬಿ. ಎಸ್ಸಿ, ಬಿ. ಎಡ್ ಪದವೀಧರರಾದ ಚಂದ್ರಶೇಖರಯ್ಯನವರು ಬೆಂಗಳೂರು

ನಗರಕ್ಕೆ ಬಂದು ಮನೆಯವರ ಜವಾಬ್ದಾರಿಯನ್ನು ನಿಭಾಯಿಸುವ ಸಲುವಾಗಿ ಕೋಚಿಂಗ್ ಹೋಮ್ ನ್ನು ಆರಂಭಿಸಿದರು.

ಮನೆಯ ಮಾಲೀಕರಾದ ದಿವಂಗತೆ ಶ್ರೀಮತಿ ಡಿ.ಸುಬ್ಬಮ್ಮನವರು ಔದಾರ್ಯದಿಂದ ಮನೆಯ ಮುಂದಿನ ವಿಶಾಲ ಜಾಗವನ್ನು ಅಲ್ಪ ಬಾಡಿಗೆಗೆ ಪಡೆದು, ಅಲ್ಲಿ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಲು ಸಹಾಯ ಮಾಡಿದರು. ಆ ಸ್ಥಳದಲ್ಲಿ ಶಾಲೆ ಇದ್ದುದು ಕೆಲವೇ ಕೆಲವು ವರ್ಷಗಳಾದರೂ ಪ್ರಾರಂಭದ ದಿವಸಗಳಲ್ಲಿ ಆ ಜಾಗ ದೊರಕಿದ್ದು ಸ್ಮರಿಸಿಕೊಳ್ಳಬೇಕಾದ ಸಂಗತಿ. ಆ ಒಂದೇ ಕೊಠಡಿಯಲ್ಲಿ ಸರದಿಯ ಮೇಲೆ ಎಲ್ಲಾ ತರಗತಿಗಳ ಪಾಠಗಳೂ ಒಬ್ಬ ಅಧ್ಯಾಪಕನಿಂದಲೇ ನಡೆಯುತ್ತಿತ್ತು.

ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆದಂತೆ ಕೋಚಿಂಗ್ ಹೋಮ್ ನ್ನೇ ಶಾಲೆಯಾಗಿ ಪರಿವರ್ತಿಸಿದರು. ಕ್ರಮೇಣ ಕನ್ನಡ ಶಿಶುವಿಹಾರ, ಮಾಧ್ಯಮಿಕ ಶಾಲೆ, ಪ್ರಾಥಮಿಕ ಶಾಲೆಗಳು ಪ್ರಾರಂಭವಾದವು. ಎಲ್ಲಾ ತರಗತಿಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 50–60. ಅವರಿಗೆ ಪಾಠ ಮಾಡುತ್ತಿದ್ದವರು ವಯೋವೃದ್ಧರಾದ ನಾಲ್ಕೈದು ಮಂದಿ ಅಧ್ಯಾಪಕರು. ಶಾಲಾ ಶೈಕ್ಷಣಿಕ ಚಟುವಟಿಕೆ ವಿಸ್ತಾರವಾಯಿತು. ಆದರೆ ಕೊಠಡಿಗಳು ಮತ್ತು ಪೀಠೋಪಕರಣಗಳ ಕೊರತೆ. ಮನೆಯವರ ಅಭಿಮಾನ, ಅನುಮತಿಯಿಂದ ಅಂಗಳದಲ್ಲಿದ್ದ ವಿಶಾಲವಾದ ಜಾಗದಲ್ಲಿ ಜೋಪಡಿಗಳನ್ನು ನಿರ್ಮಿಸಿ, ಮನೆಯ ಮುಂದೆ ಇದ್ದ ಹಲಸಿನ ಮರ ಮತ್ತು ತೆಂಗಿನ ಮರಗಳ ನೆರಳಿನಲ್ಲಿ ತರಗತಿಗಳು ಆರಂಭವಾದವು. ಕಪ್ಪು ಬಣ್ಣದ ಸುರಳಿಯೇ ಕಪ್ಪು ಹಲಗೆಯಾಯಿತು. ಈಚಲು ಚಾಪೆಯೇ ವಿದ್ಯಾರ್ಥಿಗಳಿಗೆ ಪೀಠೋಪಕರಣವಾಯಿತು. ಆದರೆ ಜೋಪಡಿ ಮತ್ತು ಈಚಲು ಚಾಪೆ ಮಕ್ಕಳ ಚಟುವಟಿಕೆಗಳನ್ನೂ, ಕಲಿಕೆಯ ಉತ್ಸಾಹವನ್ನೂ, ಕಲಿಸುವವರ ಶ್ರದ್ಧೆಯನ್ನೂ ಕುಗ್ಗಿಸಲಿಲ್ಲ, ಬದಲಿಗೆ ಹಿಗ್ಗಿಸುತ್ತಾ ಹೋಯಿತು. ಈ ವ್ಯವಸ್ಥೆ ಆಗಾಗ್ಗೆ ಬದಲಾವಣೆ ಮಾಡಿದಾಗ ಹಣದ ಕೊರತೆಯನ್ನು ಎದುರಿಸಬೇಕಾಗುತ್ತಿತ್ತು. ಈ ಶಾಲೆಗೆ ತಡಿಕೆಯ ಶಾಲೆ' ಎಂದು ನಾಮಕರಣವಾಯಿತು. ನಿವೃತ್ತರೂ, ವಯೋವೃದ್ಧರೂ ಆದ ಅಧ್ಯಾಪಕ ವೃಂದದ ಉತ್ತಮ ಪಾಠ ಪ್ರವಚನಗಳಿಂದ ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ ಬೆಳೆದು ಪೋಷಕರ ಮೆಚ್ಚುಗೆ ಪಡೆಯಿತು. ಜೊತೆಗೆ ಚಟುವಟಿಕೆ–ಆಧಾರಿತ ಶಿಕ್ಷಣಕೇಂದ್ರವಾಗಿ, ಶಿಕ್ಷಣದ ಗುಣಮಟ್ಟ ಉತ್ತಮಗೊಂಡಾಗ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆಯಲಾರಂಭಿಸಿತು.

ಮುಂದಿನ ಸಮಸ್ಯೆ ಎಂದರೆ ಹೆಚ್ಚು ಕೊಠಡಿಗಳನ್ನು ಹೊಂದುವುದು. ಅತಿ ಸಮೀಪದಲ್ಲೇ ದಿ॥ಕೃಷ್ಣಮೂರ್ತಿರಾಯರ ಮತ್ತೊಂದು ಮನೆಯನ್ನು ಬಾಡಿಗೆಗೆ ಪಡೆದು ನಂತರ ಈಗಿರುವ ಸ್ಥಳವನ್ನು ಪಡೆಯುವ ಪ್ರಯತ್ನ ಮಾಡಲಾಯಿತು. ಈ ಸ್ಥಳದ ಪಕ್ಕದಲ್ಲೇ ಇದ್ದ ದಿ॥ ಬಿ.ಜಿ.ನಾರಾಯಣರವರ ಮನೆಯನ್ನು ಬಾಡಿಗೆಗೆ ಪಡೆದರು. ಹಿಂಭಾಗದಲ್ಲಿ ಅವರ ವಾಸ; ಮುಂಭಾಗದಲ್ಲಿ ಶಾಲೆ ಹೀಗೂ ಕೆಲವು ಕಾಲ ನಡೆಯಿತು. ಅಂದಿನ ಸಿಐಟಿಬಿ ಯವರು ಅಭಿಮಾನಪೂರ್ವಕವಾಗಿ ಈ ಜಾಗವನ್ನು ನೀಡಿದ್ದರಿಂದ ಇದೇ ವೇಳೆಗೆ 1959ರಲ್ಲಿ ಪ್ರೌಢಶಾಲೆ ಪ್ರಾರಂಭವಾಗಿ, ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಬೆಳೆಯಿತು. ದೊರಕಿದ ಈ ಸ್ಥಳವು ಹಳ್ಳದಲ್ಲಿದ್ದುದರಿಂದ ಈ ಶಾಲೆಗೆ ಹಳ್ಳದ ಶಾಲೆಯೆಂದು ಹೆಸರಾಯಿತು.

ಈ ವೇಳೆಗೆ ಶಾಲೆ ಒಂದು ಸಂಸ್ಥೆಯಾಗಿ ಬೆಳೆದಾಗ ತಜ್ಞರನ್ನೊಳಗೊಂಡ ಆಡಳಿತ ಮಂಡಳಿ ರಚಿತವಾಗಿ ಅದರ ಮಾರ್ಗದರ್ಶನದಲ್ಲಿ ಸಂಸ್ಥೆಯು ಮತ್ತಷ್ಟು ವಿಸ್ತಾರಗೊಂಡಿತು, ಸೂಕ್ತ ವಿದ್ಯಾರ್ಹತೆ ಮತ್ತು ತರಬೇತಿ ಪಡೆದ ಅಧ್ಯಾಪಕರನ್ನು ನೇಮಕ ಮಾಡಿದರು. ಸರ್ಕಾರದ ಅನುದಾನ ಹೊಸದಾಗಿ ನೇಮಕಗೊಂಡ ಅಧ್ಯಾಪಕರಿಗೆ ವೇತನ ನೀಡುವುದಕ್ಕೆ ಸಹಾಯವಾಯಿತು. ಇದರಿಂದ ಸಂಸ್ಥೆಗೆ ಆರ್ಥಿಕ ಬೆಂಬಲ ದೊರೆಯಿತು. ಸರ್ಕಾರ ನಿಗದಿಪಡಿಸಿದ ಶುಲ್ಕವನ್ನ ಬಿಟ್ಟು ಯಾವುದೇ ರೀತಿಯ ವಂತಿಗೆ ಪಡೆಯದೆ ಲಭ್ಯವಿರುವ ಮೂಲಗಳಿಂದ ದೊರೆಯುವ ಹಣದಿಂದಲೇ ಸಂಸ್ಥೆಯ ಬೆಳವಣಿಗೆಯನ್ನು ಮಾಡತೊಡಗಿದರು. ಜೋಪಡಿಗಳಲ್ಲಿ, ತಗಡಿನ ಮೇಲ್ಛಾವಣಿ ಕೊಠಡಿಗಳಲ್ಲಿ ಅಂದು ಆರಂಭವಾದ ವಿದ್ಯಾ ಸಂಸ್ಥೆ 4–5 ದಶಕಗಳಲ್ಲಿ ಬೃಹದಾಕಾರವಾಗಿ ಬೆಳೆದು ಸುಂದರ ಸುಸಜ್ಜಿತವಾದ ಕಟ್ಟಡದಲ್ಲಿ ಇಂದು ಕಾರ್ಯ ನಿರ್ವಹಿಸುತ್ತಿದೆ. ಕಲ್ಪನಾತೀತವಾದ ಈ ಬೆಳವಣಿಗೆಯಲ್ಲಿ ಸ್ಥಾಪಕರ ಅಹರ್ನಿಶಿ ದುಡಿಮೆ, ತಪಸ್ಸು, ಸಾಧನೆ ಮೆಚ್ಚುವಂಥದ್ದೇ ಸರಿ. ಒಬ್ಬ ಸಾಮಾನ್ಯ ವ್ಯಕ್ತಿಯು ಯಾವುದೇ ಆರ್ಥಿಕ ಬೆಂಬಲವಿಲ್ಲದೆ ನಿರಾಧಾರನಾಗಿದ್ದರೂ ದೀರ್ಘ ದರ್ಶಿತ್ವ, ಶ್ರದ್ಧೆ, ಉತ್ಸಾಹಗಳಿಂದ ಗುರಿಸಾಧನೆಯತ್ತ ಶ್ರಮಿಸಿದರೆ ಎಂತಹ ಕಾರ್ಯವನ್ನೂ ಸಾಧಿಸಬಹುದೆಂಬುದಕ್ಕೆ ನಿದರ್ಶನವಾಗಿದ್ದಾರೆ ಶ್ರೀಯುತ ಕೆ.ಎಸ್.ಚಂದ್ರಶೇಖರಯ್ಯನವರು.

ಈ ಐವತ್ತು ವರ್ಷಗಳಿಂದ ಶಿಶುವಿಹಾರದಿಂದ ಹಿಡಿದು ಹಿರಿಯ ಪ್ರಾಥಮಿಕ ಶಾಲೆಯ ಏಳನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲೇ ಬೋಧನೆ

ನಡೆಯುತ್ತಿದೆ. ಪ್ರೌಢಶಾಲೆಯಲ್ಲೂ ಅತ್ಯುತ್ತಮ ಗ್ರಂಥಾಲಯ ಪ್ರಯೋಗಶಾಲೆಯ ಜೊತೆಗೆ ಕಳೆದ ಇಪ್ಪತ್ತೈದು ವರ್ಷಗಳಿಂದ ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ತರಬೇತಿ ಸಮರ್ಥವಾಗಿ ಸಾರ್ಥಕವಾಗಿ ನಡೆಯುತ್ತಿದೆ. ವಿದ್ಯಾರ್ಥಿಗಳಿಗೆ ಬೆರಳಚ್ಚು ಕಲಿಕೆ, ರಟ್ಟು ಕಟ್ಟುವುದು, ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಕಡ್ಡಾಯ. ಆಯಾ ಕ್ಷೇತ್ರಗಳಲ್ಲಿ ಪರಿಣತರಾದ ಅಧ್ಯಾಪಕರು ತರಬೇತಿ ನೀಡುವುದು. ಎಸ್.ಎಸ್.ಎಲ್.ಸಿ ರ್‍ಯಾಂಕ್‌ಗಳ ಪಟ್ಟಿಯಲ್ಲಿ ಈ ಶಾಲೆ ವಿದ್ಯಾರ್ಥಿಗಳೇ ಹೆಚ್ಚು ಮಂದಿ ಇರುತ್ತಿದ್ದುದರಿಂದ 'ರ್‍ಯಾಂಕ್ ಶಾಲೆ' ಎಂಬ ಹೆಸರನ್ನೂ ಗಳಿಸಿತು.

ತಡಿಕೆ ಶಾಲೆಯಿಂದ ಹಳ್ಳದ ಶಾಲೆಯಾಗಿ ಅನಂತರ ರ್‍ಯಾಂಕ್ ಶಾಲೆಯಾಗಿ ಬಡ್ತಿ ಪಡೆದು", ಶಿಶುವಿಹಾರದಿಂದ, ಪ್ರೌಢ, ಪದವಿ ಪೂರ್ವ, ಪದವಿ ಕಾಲೇಜುಗಳವರೆಗೆ ಸುಮಾರು 3500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುತ್ತಿದ್ದಾರೆ. ಜೊತೆಗೆ 120 ಕ್ಕೂ ಹೆಚ್ಚು ಮಂದಿ ಅಧ್ಯಾಪಕರು ಹಾಗೂ ಸಿಬ್ಬಂದಿಗಳ ಜೀವನಕ್ಕೆ ದಾರಿಯಾಗಿದೆ.

ಕಾಸಿದ್ರೆ ಕೈಲಾಸ ಎಂಬ ಕಾಲದಲ್ಲಿಯೂ ಕಾಯಕವೇ ಕೈಲಾಸ ಎಂಬ ಮನೋಭಾವದಿಂದ ದುಡಿದಲ್ಲಿ ಕಾಸಿಲ್ಲದೆಯೇ, ಕೈಲಾಸದ ಮೆಟ್ಟಿಲು ಹೇಗೆ ಏರಬಹುದೆಂಬುದನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೀ ಕೆ.ಎಸ್. ಚಂದ್ರಶೇಖರಯ್ಯನವರು ದುಡಿದು ತೋರಿಸಿದ್ದಾರೆ. ಶ್ರೀಯುತರ ನಿಸ್ವಾರ್ಥ ಸೇವೆಗಾಗಿ ಅವರ ಹೆಸರು ಹಲವಾರು ರಾಷ್ಟ್ರೀಯ, ಅಂತರಾಷ್ಟ್ರೀಯ ಪ್ರಕಟಣೆಗಳಲ್ಲಿ ಉಲ್ಲೇಖವಾಗಿದೆ, ಅಲ್ಲದೇ ಹಲವಾರು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳಿಗೂ ಭಾಜನರಾಗಿದ್ದಾರೆ.

- ಇಂಟರ್ ನ್ಯಾಷನಲ್ ಬಯೋಗ್ರಾಫಿಕಲ್ ಸಂಸ್ಥೆಯ ಗೌರವ ಸದಸ್ಯತ್ವ
- 1972 ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ
- 1977 ರಲ್ಲಿ ಭಾರತ ಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ
- ರೋಟರಿ ಕ್ಲಬ್, ಲಯನ್ಸ್ ಕ್ಲಬ್ ಮೊದಲಾದ ಪ್ರತಿಷ್ಠಿತ ಸಂಘ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳು
- International Biographical Research Foundation ಅವರಿಂದ 2002 ರಲ್ಲಿ ವಿಜಯಶ್ರೀ ಪ್ರಶಸ್ತಿ
- ಮದ್ರಾಸು ವಿಶ್ವವಿದ್ಯಾಲಯದ ಫೆಲೋಶಿಪ್



ಶ್ರೀಯುತ ಚಂದ್ರಶೇಖರಯ್ಯ ನವರಿಂದ ಪ್ರಾರಂಭವಾದ ಸಂಸ್ಥೆ ಬೃಹದಾಕಾರವಾಗಿ ಬೆಳೆದು ಇಂದು 75 ವಸಂತಗಳನ್ನು ಕಂಡಿದೆ. ಸ್ಥಾಪಕರ ಆಶಯಗಳಂತೆ ಅವರ ಮಾರ್ಗದರ್ಶನದಲ್ಲಿಯೇ ಈಗಿನ ಮ್ಯಾನೇಜಿಂಗ್ ಟ್ರಸ್ಟಿಯಲ್ಲಿ ಶ್ರೀಯುತ ಸಿ ಕೆ ರಘುನಂದನ್-ಅಧ್ಯಕ್ಷರು ಹಾಗೂ ಸಿ.ಇ.ಓ ಆಗಿ, ಶ್ರೀಮತಿ ಕೆ.ಸಿ ಶಾಂತಾ, ಶ್ರೀಮತಿ ಎ.ಸ್ಮಿತಾ, ಶ್ರೀ ಜೆ.ಆರ್ ಸೀತಾರಾಮ ಶಾಸ್ತ್ರಿ, ಡಾ.ಎಸ್.ಎನ್. ಓಂಕಾರ್ ಹಾಗೂ ಶ್ರೀ ಸತೀಶ್ ಚಂದ್ರ ದೊರೆಸ್ವಾಮಿಗಳು ಟ್ರಸ್ಟಿಗಳಾಗಿ ಕೆಳಕಂಡ ಸಂಸ್ಥೆಗಳನ್ನು ಮುನ್ನಡೆಸುತ್ತಿದ್ದಾರೆ.

- ವಿಜಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ (ಕನ್ನಡ ಮಾಧ್ಯಮ-1956 ರಿಂದ)
- ವಿಜಯ ಕನ್ನಡ ನರ್ಸರಿ ಶಾಲೆ (ಕನ್ನಡ ಮಾಧ್ಯಮ-1956 ರಿಂದ)
- ವಿಜಯ ಪ್ರೌಢಶಾಲೆ
- ವಿ.ಇ.ಐ.ಟಿ ಪದವಿ ಕಾಲೇಜು
- ವಿಜಯ ಸಂಯುಕ್ತ ಪದವಿ ಪೂರ್ವ ಕಾಲೇಜು

ಕಮ್ಯುನಿಟಿ ಸೆಂಟರ್ ವಿದ್ಯಾ ಸಂಸ್ಥೆಗಳು

2/1, 9ನೇ ಅಡ್ಡ ರಸ್ತೆ, 9ನೇ ಮುಖ್ಯರಸ್ತೆ,
2ನೇ ಬ್ಲಾಕ್, ಬೆಂಗಳೂರು–560011

ಏಷ್ಯ ಖಂಡದಲ್ಲಿಯೇ ಅತ್ಯಂತ ಉತ್ತಮ ಯೋಜನೆ ಮತ್ತು ಅತೀ ಹೆಚ್ಚು ಮನೆಗಳುಳ್ಳ ಬಡಾವಣೆ ಎಂಬ ಖ್ಯಾತಿಯನ್ನು ಹೊಂದಿರುವ, ಬೆಂಗಳೂರು ನಗರದ ಹೃದಯ ಭಾಗವಾದ ಜಯನಗರದಲ್ಲಿ ನಮ್ಮ ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳು ಜನಮನ್ನಣೆಗೆ ಪಾತ್ರವಾಗಿರುವುದು ಹೆಮ್ಮೆಯ ವಿಚಾರ. ಹಚ್ಚ ಹಸುರಿನ ಪ್ರಾಕೃತಿಕ ಸೊಬಗಿನ ವಾತಾವರಣ, ಸುಸಜ್ಜಿತವಾದ ಮತ್ತು ಸುಂದರವಾದ ಕಟ್ಟಡ ಮತ್ತು ವಿಶೇಷ ಸವಲತ್ತುಗಳನ್ನು ಒಳಗೊಂಡು ಸಂಸ್ಥೆಯು ಪ್ರಗತಿಯತ್ತ ಸಾಗುತ್ತಿದೆ.



ಶ್ರೀ. ಕೆ.ಎಂ. ನಾಗರಾಜು
ಪ್ರಸ್ತುತ ಅಧ್ಯಕ್ಷರು

ಸ್ವಾತಂತ್ರೋತ್ತರ ಭಾರತದ ಆಶಯಗಳಲ್ಲೊಂದಾದ ಶಿಕ್ಷಣದ ಅಗತ್ಯಗಳನ್ನು ಅರ್ಥೈಸಿಕೊಂಡು, 1956ರಲ್ಲಿ ಕಮ್ಯುನಿಟಿ ಸೆಂಟರ್ ಸಂಸ್ಥೆಯ ಬೀಜಾಂಕುರವಾಯಿತು. ಕಮ್ಯುನಿಟಿ ಸೆಂಟರ್ ನರ್ಸರಿ ಆಂಗ್ಲ ಶಾಲೆ,

ಕಮ್ಯುನಿಟಿ ಸೆಂಟರ್ ಹಿರಿಯ ಆಂಗ್ಲ ಪ್ರಾಥಮಿಕ ಶಾಲೆ, ಕಮ್ಯುನಿಟಿ ಸೆಂಟರ್ ಪ್ರೌಢ ಶಾಲೆಗಳು ಸರ್ಕಾರಿ ಅನುದಾನವನ್ನು ಪಡೆದು ಜಯನಗರದ ಒಂದನೇ ಬಡಾವಣೆಯಲ್ಲಿ 'ಸರ್ವರಿಗೂ ಸಮಾನ ಶಿಕ್ಷಣ' ಎನ್ನುವ ತತ್ವದೊಡನೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಾ, ಅವರ ಭವಿಷ್ಯ ಉಜ್ವಲವಾಗಲೆಂದು ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಾ ಬಂದಿದೆ. ಕಡಿಮೆ ಶಿಕ್ಷಣ ಶುಲ್ಕವನ್ನು ಸ್ವೀಕರಿಸುವುದರ ಮೂಲಕ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಾ ಕಳೆದ ಆರು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ನಗರದಾದ್ಯಂತ ಜನಪ್ರಿಯತೆಯನ್ನು ಪಡೆದುಕೊಂಡಿದೆ.

ಸಮಾಜ ಸೇವೆ ಮತ್ತು ಪರಸ್ಪರ ಸಹಕಾರ ಎಂಬ ಉತ್ಸಾಹದೊಡನೆ 1956ರಲ್ಲಿ ಮೈಸೂರು ಸ್ಟೇಟ್ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ಅಡಿಯಲ್ಲಿ ನೋಂದಣಿಯಾಗಿರುವ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ವಿಶ್ರಾಂತ ಐಸಿಎಸ್ ಅಧಿಕಾರಿ, ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜಕಾರ್ಯಪ್ರಸಕ್ತ ಶ್ರೀ ಬಿ.ಎಸ್. ರಾಘವೇಂದ್ರರಾವ್ ಅವರು ಮತ್ತು ಶಿಕ್ಷಣ ತಜ್ಞರಾದ ಶ್ರೀ ಕೆ.ವಿ. ಅಶ್ವಥನಾರಾಯಣ ಅವರು ಸಂಸ್ಥಾಪಕ ಕಾರ್ಯದರ್ಶಿಗಳಾಗಿ, ಸ್ಥಳೀಯ ನಿವಾಸಿಗಳಾದ ಶ್ರೀ ಎನ್. ಟಿ. ರಾಜು, ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶ್ರೀ ಕೆ.ವಿ. ವಸಂತ್ ಮತ್ತು ಅನೇಕರ ಸಹಕಾರದೊಡನೆ ಸಂಸ್ಥೆ ಆರಂಭವಾಯಿತು.

ಸಂಸ್ಥೆಯ ಪ್ರಥಮ ಅಧ್ಯಕ್ಷರಾದ ಶ್ರೀ ಬಿ.ಎಸ್. ರಾಘವೇಂದ್ರರಾವ್ ಅವರು ದೈವಾಧೀನರಾದ ಮೇಲೆ ಶ್ರೀ. ಎನ್.ಟಿ. ರಾಜು ಅವರನ್ನು ಅಧ್ಯಕ್ಷರಾಗಿ 1958 ರಲ್ಲಿ ನೇಮಿಸಲಾಯಿತು. ನಂತರ 1986 ರಲ್ಲಿ ಗುಡಿಬಂಡೆ ಶ್ರೀ. ಎಸ್. ರಾಮಾರಾವ್ ಅವರು ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದರು.

1993 ರಿಂದ ಶ್ರೀ ಕೆ.ಎಂ. ನಾಗರಾಜ್ ಅವರು ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಅಂತೆಯೇ ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಕೆ.ವಿ. ಅಶ್ವಥನಾರಾಯಣ ಅವರ ಅವಧಿ ಮುಗಿದ ಮೇಲೆ 1967 ರಲ್ಲಿ ಶ್ರೀ. ಕೆ.ವಿ. ವಸಂತ್ ಅವರನ್ನು ಕಾರ್ಯದರ್ಶಿಗಳಾಗಿ ನೇಮಿಸಲಾಯಿತು. ಆನಂತರ 1986 ರಿಂದ ಹೆಚ್.ಕೆ ಕುಮಾರಸ್ವಾಮಿ ಅವರು ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಿದರು. ನಂತರ 2001 ರಿಂದ ಶ್ರೀ. ಚಿಕ್ಕಯ್ಯ ಅವರು ಕಾರ್ಯದರ್ಶಿಗಳಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ವಿಶೇಷವಾದ ಸಾಧನೆಗಳನ್ನು ಮಾಡಿ ತಮ್ಮ ಹೆಜ್ಜೆ ಗುರುತನ್ನು ಮೂಡಿಸುತ್ತಿರುವ ಶ್ರೀ ಕೆ.ಎಂ. ನಾಗರಾಜ್ ಅವರು ಮತ್ತು ಕಾರ್ಯದರ್ಶಿಗಳಾದ ಶ್ರೀ ಚಿಕ್ಕಯ್ಯ ಅವರು 2007ರಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತೆ, ಇತಿಹಾಸ ಪುಟಗಳಲ್ಲಿ ದಾಖಲಾಗುವಂತೆ ಭವ್ಯವಾದ, ವಿನೂತನವಾದ, ಸುಂದರವಾದ, ಆಕರ್ಷಣೆಯುಳ್ಳ, ಸಂಸ್ಥೆಯ ಕಟ್ಟಡವೊಂದು ನಿರ್ಮಾಣವಾಗಿ ಕಮ್ಯುನಿಟಿ ಸೆಂಟರ್ ಪದವಿ ಪೂರ್ವ ವಾಣಿಜ್ಯ ಕಾಲೇಜು, ಕಮ್ಯುನಿಟಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್ನಲ್ಲಿ 'ಬೆಂಗಳೂರು ವಿಶ್ವವಿದ್ಯಾಲಯ' ದ ಮಾನ್ಯತೆಯನ್ನು ಪಡೆದು ಬಿ.ಕಾಂ, ಬಿ.ಬಿ.ಎ, ಮತ್ತು ಬಿ.ಸಿ.ಎ, ಪದವಿಗಳನ್ನು ನೀಡುತ್ತಿದೆ. ಕಮ್ಯುನಿಟಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಸ್ನಾತಕೋತ್ತರ ಕೇಂದ್ರವು 'ಏ ಐ ಸಿ ಟಿ ಇ' ಮಾನ್ಯತೆಯೊಡನೆ ಎಂ.ಬಿ.ಎ ಸ್ನಾತಕೋತ್ತರ ಪದವಿಯನ್ನು ನೀಡುವುದರ ಮೂಲಕ ನಾಡಿನಾದ್ಯಂತ ಸಾವಿರಾರು ವಿದ್ಯಾರ್ಥಿಗಳ ಜ್ಞಾನ ದಾಹವನ್ನು ನೀಗಿಸುತ್ತಿದೆ.

ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಕೆ.ಎಂ. ನಾಗರಾಜ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ಚಿಕ್ಕಯ್ಯ ಅವರು ಸಂಸ್ಥೆಯ ಚುಕ್ಕಾಣಿ ಹಿಡಿದ ಮೇಲೆ ಇಲ್ಲಿನ ಜನಗಳ ಅಂತರಾಳವನ್ನು ಅರ್ಥಮಾಡಿಕೊಂಡು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ವಿಶೇಷವಾದ ಯೋಜನೆಗಳನ್ನು ರೂಪಿಸಿದರು. ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಿ ಶಾಲಾ ಶುಲ್ಕದಲ್ಲಿ ರಿಯಾಯಿತಿ ನೀಡುವುದಷ್ಟೇ ಅಲ್ಲದೆ ಅರ್ಹರಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತಿದೆ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ, ಗುರುತರವಾದ ಸೇವೆ ಸಲ್ಲಿಸಿ ನಗರದಾದ್ಯಂತ ಜನಪ್ರಿಯತೆಯನ್ನು ಪಡೆದು ಜನಮನದಲ್ಲಿ ಉಳಿದಿದೆ. ಈ ನಿಟ್ಟಿನಲ್ಲಿ ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳು ಸ್ಥಳೀಯ ನಿವಾಸಿಗರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಆದ್ಯತೆ ನೀಡಿ ವಿದ್ಯಾರ್ಥಿಗಳು ಕನಿಷ್ಠ ಉತ್ತೀರ್ಣಾಂಕಗಳನ್ನು ಪಡೆದಿದ್ದರೂ ಸಹ, ಅವರಿಗೆ ಪ್ರವೇಶ ನೀಡಿ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶವನ್ನು ಕಲ್ಪಿಸಿ ಅವರ ಅಂತರಂಗದಲ್ಲಿ ಸುಪ್ತವಾಗಿ ಅಡಗಿದ್ದ ಪ್ರತಿಭೆಯನ್ನು ಹೊರತರುವಲ್ಲಿ ಯಶಸ್ವಿಯಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ನಡೆಸುತ್ತಿರುವ ಪದವಿ ಪರೀಕ್ಷೆಗಳಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಅತ್ಯುನ್ನತ ಅಂಕಗಳನ್ನು ಪಡೆಯುತ್ತಿರುವುದು



ಹೆಮ್ಮೆಯ ವಿಷಯವಾಗಿದೆ. ಸಂಸ್ಥೆಯು ನಡೆಸುತ್ತಿರುವ ನಿರ್ವಹಣಾ ಶಾಸ್ತ್ರದ ಸ್ನಾತಕೋತ್ತರ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಶೇಕಡಾ 100ರಷ್ಟು ಫಲಿತಾಂಶ ಪಡೆದ ಸಂದರ್ಭದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ ಇತ್ತೀಚಿಗೆ ಆಯೋಜಿಸಿದ ಅಂತರಾಷ್ಟ್ರೀಯ ಸಮಾವೇಶದಲ್ಲಿ ನಮ್ಮ ಸಂಸ್ಥೆಗೆ ಬೆಸ್ಟ್ ಎಜುಕೇಷನಲ್ ಎಕ್ಸಲೆನ್ಸ್ ಎಂಬ ಗೌರವವನ್ನು ನೀಡಿ, ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಕೆ.ಎಂ. ನಾಗರಾಜ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ಚಿಕ್ಕಯ್ಯ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಸನ್ಮಾನಿಸಿ ಗೌರವಿಸಿದ್ದಾರೆ. ಈ ಎಲ್ಲಾ ಸಾರ್ಥಕ ಸೇವೆಯನ್ನು ಸಲ್ಲಿಸುತ್ತಿರುವ ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆ 60 ವರ್ಷಗಳನ್ನು ಪೂರೈಸಿರುವ ಶುಭ ಸಂದರ್ಭದಲ್ಲಿ 27 ಮತ್ತು 28ನೇ ಡಿಸೆಂಬರ್ 2019ರಲ್ಲಿ ವಜ್ರ ಮಹೋತ್ಸವ ಸಮಾರಂಭವನ್ನು ಆಚರಿಸಿಕೊಂಡಿರುವುದು ಸಂತಸದ ವಿಚಾರ.

ರಾಣಿ ಸರಳಾದೇವಿ ವಿದ್ಯಾಸಂಸ್ಥೆ

281, 7ನೇ ಅಡ್ಡ ರಸ್ತೆ, 1ನೇ ಬ್ಲಾಕ್, ಜಯನಗರ ಪೂರ್ವ
ಬೆಂಗಳೂರು– 560011

1952 ರಲ್ಲಿ, ಅಂದಿನ ಬ್ಯಾಂಕಿನ ಜನರಲ್ ಮ್ಯಾನೇಆರ್ ಆಗಿದ್ದ ಶ್ರೀ. ಬಿ ವಿ ನಾರಾಯಣ ರೆಡ್ಡಿ ಬ್ಯಾಂಕಿನ ನೌಕರರ ಕಲ್ಯಾಣ ಅಭಿವೃದ್ಧಿಗಾಗಿ ಮೈಸೂರ್ ಬ್ಯಾಂಕ್ ನೌಕರರ ವಸತಿ ಸಂಘ ಸ್ಥಾಪಿಸಿ ಮೈಸೂರ್ ಬ್ಯಾಂಕ್ ಕಾಲೋನಿಯನ್ನು ಜಯನಗರದ ಮೊದಲನೆಯ ಬ್ಲಾಕಿನಲ್ಲಿ ಅಭಿವೃದ್ಧಿಪಡಿಸಿದರು. ನೌಕರರ ಹಾಗೂ ಅವರ ಕುಟುಂಬದವರ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಾಗಿ ಅವರ ಮಕ್ಕಳ ವಿದ್ಯಾಭ್ಯಾಸ ಪೂರೈಸಲೆಂದೇ ದಿ ಮೈಸೂರ್ ಬ್ಯಾಂಕ್ ಎಂಪ್ಲಾಯೀಸ್ ಎಜುಕೇಷನ್ ಸೊಸೈಟಿ(ರಿ.)ಯನ್ನು 1956 ಮೇ ತಿಂಗಳ 21 ರಂದು ಪ್ರಾರಂಭಿಸಿದರು. ಶಿಕ್ಷಣ ಸಂಸ್ಥೆಯ ಸ್ಥಾಪನೆಗಾಗಿ ಅಗತ್ಯವಾಗಿ ಇರುವ ಸ್ಥಳವನ್ನು ಮಂಜೂರು ಮಾಡಿಸಿಕೊಂಡು 1956 ರಲ್ಲಿಯೇ ವಿವಿಧ ಮಾರ್ಗಗಳಿಂದ ಆರ್ಥಿಕ ಸಹಾಯ



ಶ್ರೀ. ಬಿ ವಿ ನಾರಾಯಣ ರೆಡ್ಡಿ
ಸ್ಥಾಪಕರು

ಪಡೆದುಕೊಂಡು ಶಿಕ್ಷಣ ಸಂಸ್ಥೆಯನ್ನು (ದಿ ಮೈಸೂರ್ ಬ್ಯಾಂಕ್ ಎಂಪ್ಲಾಯೀಸ್ ಎಜುಕೇಷನ್ ಸೊಸೈಟಿ) ಪ್ರಾರಂಭಿಸಲು ಮುಂದೆ ಬಂದಾಗ ಈ ಮಹತ್ಕಾರ್ಯಕ್ಕೆ ಅಂದಿನ ಆಂಧ್ರಪ್ರದೇಶದ ವನಪರ್ತಿಯ ರಾಜವಂಶಸ್ಥ ಕುಟುಂಬದ ಶ್ರೀಮತಿ. ರಾಣಿ ಸರಳಾದೇವಿಯವರು 30,000 ರೂ. ಗಳನ್ನು ಶೈಕ್ಷಣಿಕ ಸಂಸ್ಥೆಯ ಸ್ಥಾಪನೆಗಾಗಿ ನೀಡಿ ಸಹಾಯ ಮಾಡಿದರು. ಆದುದರಿಂದ ಈ ಸಂಸ್ಥೆಯನ್ನು ರಾಣಿ ಸರಳಾ ದೇವಿ ಶಿಕ್ಷಣ ಸಂಸ್ಥೆ ಎಂದು ನಾಮಕರಣ ಮಾಡಲಾಯಿತು.

ಬೆಂಗಳೂರು ಜಯನಗರ ಬಡಾವಣೆಯು ಇನ್ನು ಪ್ರಾರಂಭಿಕ ಹಂತದಲ್ಲಿ ಯಾವುದೇ ವಿದ್ಯಾ ಸಂಸ್ಥೆಗಳಿಲ್ಲದ ಕಾರಣದಿಂದ ಬಡಾವಣೆಯಲ್ಲಿದ್ದ ಮೈಸೂರು ಬ್ಯಾಂಕ್ ಬಡಾವಣಿಯ ಮಕ್ಕಳಿಗೆ ಮತ್ತು ಸಮೀಪದಲ್ಲಿದ್ದ ಭೈರಸಂದ್ರ, ಕನಕನಪಾಳ್ಯ, ಸಿದ್ದಾಪುರ ಹಳ್ಳಿಗಳಿದ್ದ ಮಕ್ಕಳಿಗೆ ಅನುಕೂಲ ಕಲ್ಪಿಸುವ ಮಹೋದ್ದೇಶದಿಂದ 'ದಿ ಮೈಸೂರ್ ಬ್ಯಾಂಕ್ ಎಂಪ್ಲಾಯೀಸ್ ಎಜುಕೇಶನ್ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಮೊದಲನೆಯದಾಗಿ ಸಮೀಪದಲ್ಲಿ ಬಾಡಿಗೆ ಕಟ್ಟಡದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಯಿತು. ನಂತರದಲ್ಲಿ ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರ್ ಆಗಿದ್ದ ದಾರ್ಶನಿಕ ಶ್ರೀ ಬಿ.ವಿ. ನಾರಾಯಣ ರೆಡ್ಡಿಯವರು ದೂರದೃಷ್ಟಿಯಿಂದ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಅರ್ಜಿ ಸಲ್ಲಿಸಿ, ಅಂದಿನ ಸರ್ಕಾರದ ಮುಖಂಡರಿಂದ ಜಯನಗರ 1ನೇ ಬಡಾವಣೆಯಲ್ಲಿ ಸುಮಾರು 2.25 ಎಕರೆ ಪ್ರದೇಶವನ್ನು 'ದಿ ಮೈಸೂರು ಬ್ಯಾಂಕ್ ಎಂಪ್ಲಾಯೀಸ್ ಎಜುಕೇಶನ್ ಸೊಸೈಟಿ' ಹೆಸರಿಗೆ ಹಂಚಿಕೆಯಾಗಿ, ನೊಂದಾಯಿಸಿಕೊಳ್ಳಲಾಯಿತು. ನಂತರದ ದಿನಗಳಲ್ಲಿ 1956 ನೇ ಇಸವಿಯಲ್ಲಿ ಈ ನಿವೇಶನದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಿ, ಪ್ರಾಥಮಿಕ ಶಾಲೆಯ ಜೊತೆಗೆ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು.

ಅಂದು ಶಾಲಾ ಸ್ಥಾಪನೆಗೆ ನೆರವಾದವರು: ಶ್ರೀ ಕೆ. ಸೋಮಶೇಖರಪ್ಪ– ಮುಖ್ಯ ಕ್ಯಾಷಿಯರ್, ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್, ಶ್ರೀ ವಿ. ಆರ್. ಸಾರಂಗಪಾಣಿ – ಮುಖ್ಯ ಲೆಕ್ಕಾಧಿಕಾರಿ, ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್, ಶ್ರೀ ಪಿ.ಎನ್.ಸುಬ್ರಹ್ಮಣ್ಯ ಅಯ್ಯರ್– ಅಧಿಕಾರಿ, ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್, ಶ್ರೀ ಬಿ.ಕೆ. ಶ್ಯಾಮ್ ಸಿಂಗ್ – ಅಧಿಕಾರಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಶ್ರೀ ಆರ್.ಕೃಷ್ಣಸ್ವಾಮಿ – ಅಧಿಕಾರಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಶ್ರೀಮತಿ ಪಿ. ಲಕ್ಷ್ಮಿ ಸುಬ್ರಹ್ಮಣ್ಯಂ.



ಶ್ರೀಮತಿ ರಾಣಿ ಸರಳಾದೇವಿ

ಶ್ರೀಮತಿ ರಾಣಿ ಜೆ. ಸರಳಾದೇವಿ, ಆಂಧ್ರಪ್ರದೇಶದ, ಈಗಿನ ತೆಲಂಗಾಣದ ವನಪರ್ತಿಯ ರಾಜವಂಶಸ್ಥ ಕುಟುಂಬಸ್ಥರು. ಇವರು ಪ್ರಧಾನ ಪೋಷಕಿ ಹಾಗೂ ದಾನಿಗಳು. ಶಾಲಾ ಕಟ್ಟಡ ನಿರ್ಮಾಣಕ್ಕಾಗಿ 30,000/- ರೂ. ಗಳನ್ನು ದೇಣಿಗೆಯಾಗಿ ನೀಡಿರುತ್ತಾರೆ. ದಿ ಮೈಸೂರ್ ಬ್ಯಾಂಕ್ ಎಂಪ್ಲಾಯೀಸ್ ಎಜುಕೇಷನ್ ಸೊಸೈಟಿ(ರಿ.)ಯ ಮೊದಲ ಅಧ್ಯಕ್ಷರಾಗಿ 1956 – 1961 ರವರೆಗೂ ಮಾರ್ಗದರ್ಶಕರಾಗಿದ್ದಾರೆ.



ಶ್ರೀ. ಎ. ಕೃಷ್ಣಮೂರ್ತಿ

ಶ್ರೀ ಎ. ಕೃಷ್ಣಮೂರ್ತಿ ಅವರು ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿದ್ದವರು. ಇವರು 1956 ರಲ್ಲಿ 'ದಿ ಮೈಸೂರ್ ಬ್ಯಾಂಕ್ ಎಂಪ್ಲಾಯೀಸ್ ಎಜುಕೇಷನ್ ಸೊಸೈಟಿ (ರಿ)' ಯನ್ನು ಪ್ರಾರಂಭ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಾಗೂ ಇವರು ಈ ಸೊಸೈಟಿಯ ದ್ವಿತೀಯ ಅಧ್ಯಕ್ಷರಾಗಿದ್ದರು (1961– 1972). ಮೂರು ದಶಕಗಳ ಕಾಲ ಈ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ (1972–2002). ಇವರ ಅಧಿಕಾರಾವಧಿಯಲ್ಲಿ ಸಂಸ್ಥೆಯಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ವಿಭಾಗಗಳು ಪ್ರಾರಂಭಗೊಂಡವು.

ಪ್ರಸ್ತುತ ರಾಣಿ ಸರಳಾದೇವಿ ವಿದ್ಯಾ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ವಿದ್ಯಾ ಸಂಸ್ಥೆಗಳು

- ನರ್ಸರಿ ಶಾಲೆ
- ಪ್ರಾಥಮಿಕ ಶಾಲೆ ಪ್ರೌಢಶಾಲೆ
- ಪದವಿಪೂರ್ವ ಕಾಲೇಜು
- ಪದವಿ ಕಾಲೇಜುಗಳು




ಪ್ರಸ್ತುತ ಆಡಳಿತ ಮಂಡಲಿ

ಶ್ರೀ ಬಿ. ಕೋದಂಡರಾಮ, ಗೌ॥ ಅಧ್ಯಕ್ಷರು, ಶ್ರೀ ವೈ. ಎನ್. ರಮೇಶ, ಗೌ॥ ಉಪಾಧ್ಯಕ್ಷರು, ಶ್ರೀ ಪಿ. ಎಸ್. ವಿಶ್ವನಾಥ್, ಗೌ॥ ಕಾರ್ಯದರ್ಶಿಗಳು, ಶ್ರೀ ಎನ್. ಎಸ್. ಪ್ರಕಾಶ್, ಗೌ॥ ಸಹಾಯಕ ಕಾರ್ಯದರ್ಶಿಗಳು, ಶ್ರೀ ಎಸ್. ವೆಂಕಟೇಶನ್, ಗೌ॥ ಖಜಾಂಚಿಗಳು, ಶ್ರೀ ಪಿ. ಎಸ್. ವೆಂಕಟೇಶಮೂರ್ತಿ, ಗೌ॥ ಆಂತರಿಕ ಲೆಕ್ಕ ಪರಿಶೋಧಕರು, ಡಾ॥ ಕೆ. ಲಕ್ಷ್ಮೀಶ, ಶ್ರೀ ಆರ್. ರಂಗರಾಜ್, ಶ್ರೀ ಎಸ್.ವಿ. ರಾಘವೇಂದ್ರ ರಾವ್, ಶ್ರೀ ಎಸ್. ರಾಮಸುಬ್ರಮಣಿಯನ್, ಶ್ರೀ ಪಿ.ವಿ. ರವಿಶಂಕರ್, ಶ್ರೀ ಜಾಕಿರ್ ಹುಸೇನ್ ಮಕ್ಕಿ, ಶ್ರೀ ಎಂ. ಎನ್. ರಂಗಸ್ವಾಮಿ, ಶ್ರೀ ಕೆ. ಆರ್. ಕೀರ್ತಿ ಇವರು ಗೌರವ ಸದಸ್ಯರಾಗಿದ್ದಾರೆ.

ಭಾರತೀಯ ಸಂಸ್ಕೃತಿ ವಿದ್ಯಾಪೀಠ

4ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018



ಡಾ|| ನಾಗೇಶ್ ಹತ್ವಾರ್
ಸಂಸ್ಥಾಪಕರು

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ

ಜೀವನದಲ್ಲಿ ಸಾಧನೆ ಮಾಡಲು ಜೀವನೋತ್ಸಾಹ ಇರಬೇಕು. ಪ್ರತಿಯೊಬ್ಬರಲ್ಲಿಯೂ ಯಾವುದಾದರೂ ಒಂದು ಪ್ರತಿಭೆಯನ್ನು ಭಗವಂತ ಕರುಣಿಸಿರುತ್ತಾನೆ. ಆ ಪ್ರತಿಭೆಯನ್ನು ಸದುಪಯೋಗಪಡಿಸಿಕೊಳ್ಳುವ ಕಲೆ ಸತತ ಪರಿಶ್ರಮದಿಂದ ಮಾತ್ರ ಸಾಧ್ಯ. ಅನೇಕ ಸಾಧಕರು ತಮ್ಮ ಅವಿರತ ಪರಿಶ್ರಮ, ಶ್ರದ್ಧೆ, ಆತ್ಮವಿಶ್ವಾಸ ಮತ್ತು ನಿಸ್ವಾರ್ಥಗಳಿಂದ ಕೈ ಹಿಡಿದ ಕಾರ್ಯಗಳಲ್ಲಿ ಯಶಸ್ವಿಗಳಾಗಿ ಇತರರಿಗೂ ಮಾರ್ಗದರ್ಶಕರಾಗುತ್ತಾರೆ. ಕಾಯೇನವಾಚಾ ತಾವು ಸಮಾಜಕ್ಕೆ ಒಂದು ಆಸ್ತಿಯಾಗಿ, ಸಮಾಜದಿಂದ ಗುರುತಿಸಲ್ಪಟ್ಟು ಗೌರವಾದರಗಳಿಗೆ

ಪಾತ್ರರಾಗುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯು ಸಮಾಜದಿಂದ ನಾನು ಏನು ಪಡೆದೆ ಎನ್ನುವುದಕ್ಕಿಂತ ಸಮಾಜಕ್ಕೆ ನಾನು ಏನು ಕೊಟ್ಟೆ ಎಂಬ ಹಂಬಲ ಇದ್ದಾಗ ಮಾತ್ರ ಹಾದಿ ಸರಿಯಾಗಿರುತ್ತದೆ.

ಸರಿದಾರಿಯಲ್ಲಿ ಶ್ರಮಿಸಿದ ವ್ಯಕ್ತಿ ಮಾತ್ರ ನಿರ್ದಿಷ್ಟ ಗುರಿ ತಲುಪುತ್ತಾನೆ, ಗುರುವಾಗುತ್ತಾನೆ. ಇಂತಹ ಭಾಗ್ಯ ಪಡೆಯಲು ಕೇವಲ ಕೆಲವರು ಮಾತ್ರ ಪ್ರಯತ್ನಿಸಿ ಸಮಾಜದಲ್ಲಿ ಅಮರರಾಗುತ್ತಾರೆ. ಶಿಕ್ಷಣದಿಂದಲೇ ಸಮಾಜದ ಪ್ರಗತಿ ಎಂದು ನಂಬಿದ, ಅನುಷ್ಠಾನಕ್ಕೆ ತಂದ ಡಾ॥ ನಾಗೇಶ ಹತ್ವಾರ್ ಅವರು ಭಾರತೀಯ ಸಂಸ್ಕೃತಿ ವಿದ್ಯಾಪೀಠ ಸ್ಥಾಪಿಸಿ, ಪೋಷಿಸಿ ಪ್ರಗತಿ ಪಥದಲ್ಲಿ ನಡೆಸಿ, ಸಮಾಜಕ್ಕೆ ಒಂದು ಕೊಡುಗೆಯನ್ನು ಕೊಟ್ಟು ಅಮರರಾಗಿದ್ದಾರೆ. ಇಂದು ಈ ಸಂಸ್ಥೆ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾಗಿದ್ದು, ಬೆಂಗಳೂರಿನ ಚಾಮರಾಜಪೇಟೆ, ವಿಜಯನಗರ, ಮಾಳಗಾಳ ಹಾಗೂ ರಾಮನಗರ ಶಾಖೆಗಳಲ್ಲಿ ಏಕ ರೂಪದ ಶಿಕ್ಷಣ ವ್ಯವಸ್ಥೆಯೊಂದಿಗೆ ಮಧ್ಯಮ ವರ್ಗದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತ ಮುನ್ನಡೆಯುತ್ತಿದೆ. ಜಾಗತೀಕರಣದ ಇಂದಿನ ಪರಿಸ್ಥಿಯಲ್ಲಿ ತನ್ನ ಧ್ಯೇಯ ಉದ್ದೇಶಗಳನ್ನು ಮುಂದುವರಿಸಿಕೊಂಡು ಹೋಗಲು ಭದ್ರ ಬುನಾದಿ ಹಾರುವ ಮೂಲಕ ಕನ್ನಡ ನಾಡು ನುಡಿಗೆ ಹೆಮ್ಮೆಯನ್ನು ತಂದುಕೊಟ್ಟು, “ಶಿಕ್ಷಣದಿಂದಲೇ ಸಮಾಜದ ಪ್ರಗತಿ ಎಂದು ಘೋಷಿಸಿದ ಶಕ್ತಿ ಭಾರತೀಯ ಸಂಸ್ಕೃತಿ ವಿದ್ಯಾಪೀಠದ ಸಂಸ್ಥಾಪಕರಾದ ಡಾ॥ ಕೆ.ನಾಗೇಶ್ ಹತ್ವಾರ್ ರವರದ್ದು.

ದಕ್ಷಿಣ ಕನ್ನಡದ ಸಮುದ್ರ ತೀರದಲ್ಲಿರುವ ಒಂದು ಪುಟ್ಟ ಗ್ರಾಮ ಕೊರವಡಿ. ಮಾಧ್ವ ಸಮುದಾಯದ ಒಂದು ಪರಂಪರೆಯ ಮೂಲ ಜನರ ಸ್ಥಳವಾದ ಕೋಟೇಶ್ವರದ ಒಂದು ಗ್ರಾಮ. ಇಲ್ಲಿಯ ಶಾಲೆ ಮಾಸ್ತರಾಗಿದ್ದ ಶ್ರೀನಿವಾಸ ಹತ್ವಾರ್ ಮತ್ತು ಸತ್ಯವತಿಯವರ ಪುತ್ರನಾಗಿ 9.2.1927 ರಂದು ಶ್ರೀಯುತ ನಾಗೇಶ ಹತ್ವಾರರ ಜನನ. ಕೊರವಡಿ, ತೆಕ್ಕಟ್ಟೆ, ಕೋಟೇಶ್ವರಗಳ ಶಾಲೆಗಳಲ್ಲಿ ಪ್ರಾಥಮಿಕ ಹಂತದ ವಿಧ್ಯಾಭ್ಯಾಸ ಮುಗಿಸಿ ಕುಂದಾಪುರದಲ್ಲಿ ರೋಮನ್ ಕ್ಯಾಥೋಲಿಕ್ ಪ್ರೌಢಶಾಲೆಗೆ ಸೇರಿದರು. ಪ್ರತಿದಿನ ಮೂರು ಮೈಲಿ ನಡೆದು ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಅಪಾರವಾಗಿ ಪ್ರೀತಿಸುತ್ತಿದ್ದ ತಾಯಿಯವರ ಅಕಾಲಿಕ ಮರಣ ಇವರ ವಿದ್ಯಾಭ್ಯಾಸಕ್ಕೆ ಅಡಚಣೆಯುಂಟಾಯಿತು. ಜೀವನದಲ್ಲಿ

ಜಿಗುಪ್ಸೆ, ಅರ್ಥವಾಗದ ಸಮಸ್ಯೆಗಳನ್ನೆದುರಿಸುವುದು ಹೇಗೆ ಎಂಬ ಭಯದ ತೊಳಲಾಟ, ತಂದೆಯವರಿಗೆ ತಿಳಿಸದೆ ಊರುಬಿಟ್ಟು ಮೈಸೂರಿಗೆ ಹೋದರು. ತಮ್ಮ ಬಂಧುಗಳು ನಡೆಸುತ್ತಿದ್ದ ಹೋಟೆಲಿನಲ್ಲಿ ಬಿಲ್ಲು ಬರೆಯುವ ಕೆಲಸಕ್ಕೆ ಸೇರಿದರು. ಅಲ್ಲಿಂದ ಹೈದರಾಬಾದ್‌ಗೆ ಪ್ರಯಾಣ. ಇಲ್ಲಿಯೂ ದಿನಪೂರ್ತಿ ಹೋಟೆಲ್‌ನಲ್ಲಿ ಕೆಲಸ. ಅದೂ ತನ್ನ ಸ್ವಂತ ಭಾವನ ಹೋಟೆಲ್. ಆ ಅರಿವೇ ಇಲ್ಲದೇ ದುಡಿಯುತ್ತಾ ರಾತ್ರಿ ವೇಳೆ ಓದುತ್ತಾ ಮೆಟ್ರಿಕ್ಯುಲೇಷನ್ ಮುಗಿಸಿದರು. 1945 ರಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಹತ್ವಾರರು ಮಹಾತ್ಮಾ ಗಾಂಧೀಜಿರವರಿಗೆ ಬಹಳ ಹತ್ತಿರವಾದರು. ಆ ಸಮಯವು ಅವರ ಜೀವನದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಪರ್ವಕಾಲ. ಒಮ್ಮೆ ಗಾಂಧೀಜಿಯವರು ಹತ್ವಾರ್‌ರನ್ನು ಕುರಿತು ಹತ್ವಾರ್ ಎಂದರೆ ಏನು? ಎಂದು ಕೇಳಿದರಂತೆ. ಅದು ತಮ್ಮ ಮನೆತನದ ಹೆಸರು ಎಂದಾಗ 'ತುಮ್ ಹತ್ವಾರ್ ನಹಿ ಹತಿಯಾರ್ ಬನೋ, ಸಮಾಜ್ ಕೆ ಬುರಾಯಿಯೋಂಕೋ ಮಿಠಾನೆ ಕಾ ಹತಿಯಾರ್ ಬನೋ' ಎಂದರಂತೆ. ಹತ್ವಾರರಿಗೆ ರೋಮಾಂಚನವಾಗಿ ತಮ್ಮ ಗುರಿಯನ್ನು ಆಗ ಸ್ಪಷ್ಟಪಡಿಸಿಕೊಂಡರಂತೆ ಹಾಗೂ ದೇಶಕ್ಕಾಗಿ ಏನಾದರೂ ಸೇವೆ ಮಾಡಲೇಬೇಕೆಂದು ದೃಢ ನಿಶ್ಚಯ ಮಾಡಿಕೊಂಡರಂತೆ. 1948 ರಲ್ಲಿ ರಾಷ್ಟ್ರ ಭಾಷಾ ವಿಶಾರದ ಪದವಿಯನ್ನು ಪಡೆದುಕೊಂಡು ಹಿಂದಿ ಪ್ರಚಾರ ಸಭೆಯ ಪ್ರಚಾರಕರಾಗಿ ಮುಂದುವರೆದರು. ಜೊತೆಗೆ ಶ್ರೀಮತಿ. ಪುಟ್ಟಮ್ಮನವರನ್ನು ಸಹಧರ್ಮಿಣಿಯಾಗಿ ಸ್ವೀಕರಿಸಿದರು.

ಹೊಸ ದಂಪತಿಗಳ ಸಂಸಾರ ಮದರಾಸಿನಲ್ಲಿ ಪ್ರಾರಂಭವಾದಾಗ ಶ್ರೀಯುತ ನಾಗೇಶ್ ಹತ್ವಾರರು ಎಗ್ಮೋರ್ ಹೈಸ್ಕೂಲಿನಲ್ಲಿ ಹಿಂದಿ ಉಪಾಧ್ಯಾಯರಾಗಿದ್ದರು.



ದಿನಪೂರ್ತಿ ಶಾಲೆಯ ಕೆಲಸ ನಂತರ ಸಂಜೆ ಮನೆ ಪಾಠಗಳು ರಾತ್ರಿ ಹಿಂದಿ ಪ್ರವೀಣ್ ಪರೀಕ್ಷಾ ತಯಾರಿ ಇದು ಅವರ ದಿನಚರಿ. ಶಿಕ್ಷಕರಾಗಿದ್ದು ಹಲವಾರು ಗೆಳೆಯರ ಮಾರ್ಗದರ್ಶನದ ಫಲ ರಾಷ್ಟ್ರಭಾಷಾ ಪ್ರವೀಣ,

ಸಾಹಿತ್ಯರತ್ನ ಉಪಾದಿಯನ್ನು ಪಡೆದು ಹಿಂದಿ ಉಪಾಧ್ಯಾಯ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಜೊತೆಗೆ ಸಂಸ್ಕೃತ ಹಾಗೂ ಉರ್ದು ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದರು. ಆದರ್ಶ ಹಿಂದಿ ಪ್ರೇಮ ಮಂಡಳಿಯನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಹಿಂದಿ ಕಲಿಸಿದರು. ಮದರಾಸಿನ ದೋಬಿಪೇಟೆಯಲ್ಲಿ ಒಂದು ಲೇಬರ್ ಯೂನಿಯನ್ ಸ್ಥಾಪಿಸಿ ರಾತ್ರಿವೇಳೆ ಕಾರ್ಮಿಕರಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಬೋಧಿಸಿದರು. ಮದರಾಸಿನ ತಮ್ಮ ಕಾರ್ಯಕ್ಷೇತ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಿ, ಚಾಮರಾಜಪೇಟೆಯ ಮಾಡಲ್ ಸ್ಕೂಲ್ ನಲ್ಲಿ ಹಿಂದಿ ತರಗತಿಗಳನ್ನು ಪ್ರಾರಂಭಿಸಿದರು. ಪಕ್ಕದ ರಸ್ತೆಯ ಒಂದು ಮನೆ ಬಾಡಿಗೆ ಪಡೆದು ಅಲ್ಲಿ ವಾಸಿಸ ತೊಡಗಿದರು. ಆ ಮಾರ್ಗಾನುಸಂಧಾನದಲ್ಲಿ ಶ್ರೀಯುತರ ಸಹ ಧರ್ಮಿಣಿ ಶ್ರೀಮತಿ ಪುಟ್ಟಮ್ಮ ಹತ್ವಾರರ ಪಾತ್ರ ಅತ್ಯಂತ ಶ್ಲಾಘನೀಯವಾದದು.

ಮನೆಯಲ್ಲಿಯೇ ವಿದ್ಯಾ ಟುಟೋರಿಯಲ್ ಕಾಲೇಜ್ ಪ್ರಾರಂಭ ಮಾಡಿ SSLC ಹಾಗೂ PUC ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನರುತ್ಸಾಹ ತುಂಬಿ ಪರೀಕ್ಷೆಗೆ ಕಟ್ಟಿಸಿ ಕಡ್ಡಾಯವಾಗಿ ಉತ್ತೀರ್ಣರಾಗಲು ಪ್ರಯತ್ನಿಸುತ್ತಿದ್ದರು. ಟುಟೋರಿಯಲ್ ಕಾಲೇಜಿನ ಯಶಸ್ಸಿನಿಂದ ಪ್ರೇರಿತರಾಗಿ ಒಂದು ಶಾಲೆಯನ್ನು ಪ್ರಾರಂಭಿಸಿಬೇಕೆಂಬ ಅಭಿಲಾಷೆಯಿಂದ ಶ್ರೀಯುತ ಸಿದ್ಧನಾಥ ಪಂಥ್, ಪಾರ್ಥನಾಥ ಪಂಡಿತ್, ಮುಖ್ಯಪ್ರಾಣ ರಾವ್ ಮುಂತಾದ ಹಿರಿಯರ ಜೊತೆ ಸತತವಾಗಿ ಚರ್ಚೆ ಮಾಡಿ ಕಾಶಿ ವಿದ್ಯಾಪೀಠದ ಪ್ರೇರಣೆಯಿಂದ 1957 ರಲ್ಲಿ ಭಾರತೀಯ ಸಂಸ್ಕೃತಿ ವಿದ್ಯಾಪೀಠವನ್ನು ಸ್ಥಾಪಿಸಿದರು. ಹಿಂದಿ ತರಗತಿಗಳಿಂದ ಪ್ರಾರಂಭವಾದ ಶಾಲೆ, ಮನೆಯಲ್ಲಿಯೇ ಮೊದಲು ಶಿಶುವಿಹಾರದಿಂದ ಪ್ರಾರಂಭವಾಗಿ ಪದವಿಯವರೆಗೆ ವಿದ್ಯಾಭ್ಯಾಸದ ಅನುಕೂಲತೆಗಳನ್ನು ಮಾಡಿಕೊಟ್ಟು, ಭಾರತೀಯ ಸಂಸ್ಕೃತಿಯ ಜೀವಾಳವಾದ ಸಂಸ್ಕೃತ ಭಾಷೆಯ ಅಭಿವೃದ್ಧಿಗಾಗಿ ಸಂಸ್ಕೃತ ಪಾಠಶಾಲೆಗಳನ್ನು ಹಾಗೂ ರಾಷ್ಟ್ರಪ್ರೇಮಿಯಾಗಿ ರಾಷ್ಟ್ರ ಭಾಷಾಭಿವೃದ್ಧಿಗಾಗಿ ಉಚಿತ ಹಿಂದಿ ತರಗತಿಗಳನ್ನು ಎಲ್ಲಾ ಶಾಖೆಗಳಲ್ಲೂ ಪ್ರಾರಂಭಿಸಿದ ಕೀರ್ತಿ ನಾಗೇಶ್ ಹತ್ವಾರರದು.

ವಿದ್ಯಾಪೀಠ ಜನಪ್ರಿಯ ಸಂಸ್ಥೆಯಾಗಿ ಬೆಳೆಯಲು ಅನೇಕ ಹಿತೈಷಿಗಳು ಸಹಕಾರ ನೀಡಿದ್ದಾರೆ. ಭಾರತ ರತ್ನ ಡಾ॥ ಎಸ್. ರಾಧಾಕೃಷ್ಣನ್ ರವರು

ಕೆಲಕಾಲ ಸಂಸ್ಥೆಯ ಪೋಷಕರಾಗಿದ್ದರು, ಸಂಸ್ಥೆಯನ್ನು ತಮ್ಮದೆಂದೇ ಭಾವಿಸಿ ಪ್ರತಿಸ್ಪಂಧಿಸುತ್ತ ಅದರೊಂದಿಗೆ ಬೆಳೆದ ಜಿ. ನಾರಾಯಣ್ ರವರು, ಶ್ರೀ ವಿ.ಎಸ್. ಕೃಷ್ಣಯ್ಯರ್ ರವರು ಆಡಳಿತ ನಿರ್ವಹಣೆಯಲ್ಲಿ ಕೈ ಜೋಡಿಸಿದ ಗಣ್ಯರಾದ ಸೀತಾ ಶರಣ ಶರ್ಮ, ನಾನಾ ಲಾಲ್ ಭಟ್, ಭೀಮ ಭಟ್, ಕಟೀಲ್ ಗಣಪತಿ ಶರ್ಮ, ಎಸ್.ಕೆ ರಾಮಚಂದ್ರ ರಾವ್, ಲಕ್ಷ್ಮೀ ನಾರಾಯಣ್ ರಾವ್ ಮೊದಲಾದವರು ಸಂಸ್ಥೆಯ ಪ್ರಗತಿಗೆ ಕಾರಣರಾದವರು. ಹತ್ವಾರವರ ನಿಷ್ಠೆ, ಪ್ರಾಮಾಣಿಕತೆ ಹಾಗೂ ಸಂಸ್ಥೆಯ ಪ್ರಗತಿಗಾಗಿ ಅವರಲ್ಲಿರುವ ತುಡಿತದಿಂದ ಪ್ರಭಾವಿತರಾಗಿ ಅಂದಿನ ಶಿಕ್ಷಣ ಮಂತ್ರಿಗಳು, ನಂತರ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಆರ್. ಕಂಠಿ ಯವರು ಹತ್ವಾರವರಿಗೆ ಸರ್ಕಾರದಿಂದ ಎಲ್ಲಾ ಸಹಕಾರಗಳನ್ನು ಒದಗಿಸಿದ್ದರು. ಶ್ರೀಯುತರ ಕಾರ್ಯ ಕ್ಷೇತ್ರ ಬಹು ವಿಸ್ತಾರವಾದುದು. "ವಿದ್ಯಾ" ಎಂಬ ಕನ್ನಡ ಮಾಸ ಪತ್ರಿಕೆಯ ಸಂಪಾದಕರಾಗಿ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತರುವಲ್ಲಿ ಯಶ್ವಸಿಯಾಗಿದ್ದು ಹೆಮ್ಮೆಯ ಸಂಗತಿ. ಹಾಗೆಯೇ ಸುಮ ಎಂಬ ದ್ವಿಭಾಷಾ [ಹಿಂದಿ ಮತ್ತು ಆಂಗ್ಲ] ಮಾಸ ಪತ್ರಿಕೆಯ ಸಂಪಾದಕರೂ ಆಗಿ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ಸನ್ಮಾನಿತರಾಗಿದ್ದಾರೆ. ಹಾಗೆಯೇ ಪ್ರದರ್ಶನ ಕಲೆಗಳ ವೇದಿಕೆಯಾದ ವಿದ್ಯಾ ಇನ್ಸ್ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ನಿರ್ದೇಶಕರಾಗಿ ಯುವ ಪ್ರತಿಭೆಗಳ ಸಾಂಸ್ಕೃತಿಕ ಅಸಕ್ತಿಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದ್ದರು.

ಜಬಲ್ ಪುರ ವಿಶ್ವ ವಿದ್ಯಾಲಯದಿಂದ M.A ಪದವಿ ಸಾಹಿತ್ಯ ರತ್ನ, ರಾಷ್ಟ್ರಭಾಷಾ ಪ್ರವೀಣ್, ಸಂಸ್ಕೃತ ಭಾಷಾ ವಿಶಾರದ ಮುಂತಾದ ವಿದ್ಯಾರ್ಹತೆಗಳನ್ನು ಪಡೆದು ಬೆಂಗಳೂರು ವಿಶ್ವ ವಿದ್ಯಾಲಯದಿಂದ, ಮಧ್ಯ ಕಾಲೀನ ಕೃಷ್ಣ ಭಕ್ತಿ ಮೇ ಮಧ್ವ ಸಂಪ್ರದಾಯ ಕಾ ಪ್ರಭಾವ್ ಎಂಬ ಹಿಂದಿಯ ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ.

65ರ ಹೊಸ್ತಿಲಲ್ಲಿ ಇರುವ ಸಂಸ್ಥೆಯ ಸಂಸ್ಕೃತಿ ಹಾಗೂ ಜ್ಞಾನದ ಸೌರಭ ತನ್ನ ವಿಶಿಷ್ಟ ಕಾರ್ಯಕ್ರಮಗಳಿಂದ ಭಾರತದ ಭಾವೀ ಪ್ರಜೆಗಳನ್ನು ನಿರ್ಮಿಸುವಲ್ಲಿ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಇಂಬು ನೀಡುತ್ತಿದೆ. ಇಂದು ಭಾರತೀಯ ಸಂಸ್ಕೃತಿ ವಿದ್ಯಾಪೀಠ ಗ್ರಾಮಾಂತರ ಪ್ರದೇಶಕ್ಕೂ ವಿಸ್ತಾರಗೊಂಡಿದ್ದು ಸುಮಾರು 25 ಶೈಕ್ಷಣಿಕ ವಿಭಾಗಗಳನ್ನು ಹೊಂದಿ ಸಾವಿರಾರು ಮಧ್ಯಮ ವರ್ಗದ ಮಕ್ಕಳಿಗೆ

ಗುಣಮಟ್ಟದ ವಿದ್ಯಾಭ್ಯಾಸವನ್ನು ಕೊಡುತ್ತ ನೂರಾರು ಸಿಬ್ಬಂದಿ ವರ್ಗದವರಿಗೆ ಆಶ್ರಯವನ್ನು ನೀಡಿದೆ. "ತಮಸೋಮ ಜ್ಯೋತಿರ್ಗಮಯ" ಎಂಬ ನುಡಿಯನ್ನು ಭಾರತೀಯ ಸಂಸ್ಕೃತಿ ವಿದ್ಯಾಪೀಠ ತನ್ನ ಲಾಂಛನದಲ್ಲಿ ಹೊಂದಿದ್ದು ನಿಜಕ್ಕೂ ಸಂಸ್ಥೆಯ ಒಳಗೆ ಕಾಲಿಟ್ಟ ಪ್ರತಿಯೊಬ್ಬರಿಗೂ ಹೊಸ ಬೆಳಕನ್ನು, ಹೊಸ ಭಾವನೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ನಿಸ್ವಾರ್ಥ ಸೇವೆಯನ್ನು ಹತ್ವಾರರು ಸಲ್ಲಿಸಿದ್ದರು. ಇವುಗಳಿಂದಲೇ ಬೆಂಗಳೂರು ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಮಾರ್ಗದರ್ಶಕರಾಗಿ, ಮದರಾಸಿನ ದಕ್ಷಿಣ ಭಾರತ, ಹಿಂದಿ ಪ್ರಚಾರ ಸಭೆಯ ಚೇರ್ಮನ್ ಆಗಿ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ಸೆನೇಟ್‌ನ ಸದಸ್ಯರಾಗಿ, ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾಗಿ, ಕರ್ನಾಟಕ ಸರ್ಕಾರ ಸಂಯೋಜಿಸಿದ ಹಿಂದಿ ಬೋರ್ಡ್ ಆಫ್ ಸ್ಟಡೀಸ್ ಮತ್ತು ಪರೀಕ್ಷಾ ವಿಭಾಗದ ಸದಸ್ಯರೂ ಆಗಿದ್ದರು. ಅನೇಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಕಾರ್ಯಕಾರಿ ಸದಸ್ಯರಾಗಿದ್ದರಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರೂ ಆಗಿದ್ದರು. ಹಾಗೆಯೇ ಕರ್ನಾಟಕ ಮಕ್ಕಳ ಕಲ್ಯಾಣ ವಿಭಾಗದ ಅಧ್ಯಕ್ಷರಾಗಿಯೂ, ವಾದಿರಾಜ ಸೇವಾ ಸಮಿತಿಯ ಖಜಾಂಚಿಗಳಾಗಿಯೂ ವಿಜಯನಗರದ ವಿಪ್ರ ವೃಂದದ ಅಧ್ಯಕ್ಷರಾಗಿಯೂ ಬೆಂಗಳೂರು ವಿಭಾಗದ ಅಖಿಲ ಕರ್ನಾಟಕದ ಬ್ರಾಹ್ಮಣ ಮಹಾ ಸಭಾದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಹತ್ವಾರರ ಸೇವಾ ಮನೋಭಾವ, ಸಜ್ಜನಿಕೆ ಹಾಗೂ ಪಾಂಡಿತ್ಯಗಳನ್ನು ಕಂಡು ಪ್ರಶಸ್ತಿಗಳೇ ಅವರನ್ನು ಅರಸಿಕೊಂಡು ಬಂದಿವೆ. ಕರ್ನಾಟಕ ಸರ್ಕಾರವು ಶ್ರೀಯುತರ ಸೇವಾ ಧರ್ಮವನ್ನು ಮೆಚ್ಚಿಕೊಂಡು ಕರ್ನಾಟಕ ರಾಜ್ಯ ಪ್ರಶಸ್ತಿ, "ಆರ್ಯಭಟ" ಪ್ರಶಸ್ತಿ, ತಿರುಪತಿಯ ವಾರ್ತಾ ಕೇಂದ್ರವು ವಿದ್ಯಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆ ಮುಂತಾದ ಅನೇಕ ಸಂಘ, ಸಂಸ್ಥೆಗಳು ಅವರ ಕಾರ್ಯಗಳನ್ನು ಮೆಚ್ಚಿಕೊಂಡು ಸನ್ಮಾನಿಸಿದ ಸಂದರ್ಭಗಳು ಎಣಿಕೆಗೆ ನಿಲುಕಲಾರದಷ್ಟಾಗಿದ್ದರೂ ಶ್ರೀಯುತರ ವಿನಮ್ರ ವಿನಯವಂತಿಕೆ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು. ಅತ್ಯಂತ ಉತ್ಸುಕತೆಯಿಂದ ಶಿಕ್ಷಣ ಸಂಸ್ಥೆಯ ಬಗ್ಗೆ ಅವರು ಹೆಣೆದಿದ್ದ ಕನಸುಗಳು ಅದನ್ನು ನನಸು ಮಾಡಲು ಅವರು ಪಟ್ಟ

ಪರಿಶ್ರಮ ಸ್ತುತ್ಯಾರ್ಹವಾದದು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಥಮ ಆದ್ಯತೆಯನ್ನು ಕೊಡುತ್ತಲೆ ಕೆಳ ಹಾಗೂ ಮಧ್ಯಮ ವರ್ಗದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪೂರ್ಣ ಉತ್ತೇಜನ ಕೊಟ್ಟಿದ್ದರು. ಹೆಣ್ಣು ಮಕ್ಕಳಿಗಾಗಿ ವಸತಿ ಶಾಲೆಗಳ ನಿರ್ಮಾಣ ಹಾಗೂ ಕಲಾ ಪ್ರಪಂಚ ಎಂಬ ವಿಶ್ವ ಸಂಸ್ಕೃತಿಯನ್ನು ಬಿಂಬಿಸುವ ಬೃಹತ್ ಯೋಜನೆ ಅವರ ಕನಸಾಗಿತ್ತು. ತಮ್ಮ ಪ್ರಗತಿ ಪಥದಲ್ಲಿ ಎಷ್ಟೇ ಎಡರು ತೊಡರುಗಳು ಬಂದರೂ ಸಹ ಸಾಧಿಸಿದ್ದು ಕೆಲವಷ್ಟು, ಸಾಧಿಸಬೇಕಾದ್ದು ಬಹಳಷ್ಟು ಎಂಬ ಸಂಕಲ್ಪ ಶಕ್ತಿಯನ್ನೇ ಶ್ರೀ ರಕ್ಷೆಯಾಗಿ ಪಡೆದು ಛಲದಿಂದ ಸಾಧನೆಯ ಹಾದಿಯಲ್ಲಿ ಸಾಗಿದ್ದ ಶಕ್ತಿ ಡಾ॥ನಾಗೇಶ್ ಹತ್ವಾರ್.

1957 ರಲ್ಲಿ ಪ್ರಾರಂಭವಾದ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಬೆಂಗಳೂರಿನ ಚಾಮರಾಜಪೇಟೆ, ವಿಜಯನಗರ, ಮಾಳಗಾಳ ಹಾಗೂ ರಾಮನಗರದಲ್ಲಿ ಶಾಖೆಗಳನ್ನು ಪ್ರಾರಂಭಿಸಿ 2007 ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಉತ್ಸಾಹದಿಂದ ಆಚರಿಸಿಕೊಂಡಿದೆ. ಸುವರ್ಣ ಮಹೋತ್ಸವದ ನೆನಪು ಆರುವ ಮುನ್ನವೇ ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ಡಾ. ನಾಗೇಶ್ ಹತ್ವಾರ್‌ರವರು 16.01.2010 ರಂದು ಬೃಹದಾಕಾರವಾಗಿ ಬೆಳೆದ ಶಿಕ್ಷಣ ಸಂಸ್ಥೆ, ಶಿಕ್ಷಕರು, ವಿದ್ಯಾರ್ಥಿಗಳು ಬಂಧುಮಿತ್ರರನ್ನು ಅಗಲಿ ಪರಲೋಕದೆಡೆಗೆ ಪ್ರಯಾಣ ಮಾಡಿದರು. ಅವರ ಸಾಧನೆಯ ಸಂಕೇತವಾಗಿ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಪ್ರಜ್ವಲಿಸುತ್ತಿದೆ.

ಈಗ ಭಾರತೀಯ ಸಂಸ್ಕೃತಿ ವಿದ್ಯಾಪೀಠದ ಸಕಲ ಜವಾಬ್ದಾರಿಯನ್ನು ಧರ್ಮ ಪತ್ನಿಯಾದ ಮಾತೃಶ್ರೀ ಪುಟ್ಟಮ್ಮ ಹತ್ವಾರ್ ಹಾಗೂ ಮಕ್ಕಳಾದ ಡಾ॥ ಕೆ.ಎನ್. ಪುಷ್ಪಲತ, ಶ್ರೀಮತಿ ಉಷಾ ಆಚಾರ್ಯ ಹಾಗೂ ಶ್ರೀ ವೆಂಕಟೇಶ್ ರವರಿಗೆ ವಹಿಸಿದ್ದಾರೆ. ಎಲ್ಲಾ ಶಾಖೆಗಳಲ್ಲೂ ನಡೆಯುತ್ತಿರುವ ಪ್ರತಿಯೊಂದು ಕಾರ್ಯಕ್ರಮದಲ್ಲೂ ಮಾನ್ಯರ ಇರುವಿಕೆಯು ಗೋಚರಿಸುತ್ತಿದ್ದು, ಡಾ॥ ನಾಗೇಶ್ ಹತ್ವಾರ್‌ರವರು ಅಮರರಾಗಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯು ಶಿಕ್ಷಣ, ಕ್ಷೇತ್ರಕ್ಕೆ ಡಾ॥ ಕೆ. ನಾಗೇಶ್ ಹತ್ವಾರ್ ಸಲ್ಲಿಸಿರುವ ಸೇವೆಯನ್ನು ಸರ್ವರೂ ನೆನಪಿನಲ್ಲಿ ಇಟ್ಟುಕೊಳ್ಳುವ ನಿಟ್ಟಿನಲ್ಲಿ ಚಾಮರಾಜಪೇಟೆಯ 4ನೇ ಮುಖ್ಯರಸ್ತೆಯ 4ನೇ ಅಡ್ಡರಸ್ತೆಗೆ "ಡಾ॥ ಕೆ. ನಾಗೇಶ್ ಹತ್ವಾರ್ ರಸ್ತೆ" ಎಂದು ನಾಮಕರಣ ಮಾಡಿ ಗೌರವ ಸೂಚಿಸಿದೆ.




ಸಿಬ್ಬಂದಿ ವರ್ಗದವರನ್ನು ಒಂದು ಕುಟುಂಬದಂತೆ ಕಾಣುತ್ತಿದ್ದ ಹತ್ವಾರರು ಎಲ್ಲರಿಗೂ ಪಿತೃ ಸಮಾನರಾಗಿದ್ದರು. ಸಮಯ ಪರಿಪಾಲನೆ, ಶಿಸ್ತು, ಗುರು ಹಿರಿಯರಲ್ಲಿ ಭಕ್ತಿ, ಗೌರವ ಹೊಂದಿ ಸ್ನೇಹ ಜೀವಿಯಾಗಿ ಸ್ವಚ್ಛ ವ್ಯಕ್ತಿತ್ವವನ್ನು ಹೊಂದಿದ್ದರು. ಮಾನ್ಯರು ನೆಟ್ಟ ವಿದ್ಯಾದಾನದ ಜ್ಞಾನ ಸಿಂಧುವಿನ ಬೀಜ ಇಂದು ಹೆಮ್ಮರವಾಗಿ ನೂರಾರು ಫಲ ಪುಷ್ಪ ಗಳನ್ನು ನೀಡುತ್ತಿದೆ. ಮಹಾತ್ಮ ಗಾಂಧೀಜಿಯವರ ಅದೇಶದಂತೆ ಸಮಾಜದ ಒಳತಿಗಾಗಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ 50 ವರ್ಷಗಳ ಕಾಲ ನಡೆಸಿ ತಮ್ಮ ಮನದಾಸೆಯಂತ ಹೆಣ್ಣು ಮಕ್ಕಳ ವಿದ್ಯಾಭಾಸಕ್ಕೆ ಸಕಲ ವ್ಯವಸ್ಥೆಯನ್ನು ಮಾಡಿದ ಅವರ ಸಾರ್ಥಕ ಜೀವನ ಎಲ್ಲರಿಗೂ ಆದರ್ಶ ಪ್ರಾಯವಾಗಿದೆ.

ಕಮಲಾ ನೆಹರು ವಿದ್ಯಾಸಂಸ್ಥೆ

81, ನಿಟ್ಟೂರು ಶ್ರೀನಿವಾಸ ರಾವ್ ರಸ್ತೆ, ಬಸವನಗುಡಿ,
ಬೆಂಗಳೂರು – 560 004

ಶ್ರೀಯುತ ಚಿಕ್ಕಯ್ಯನವರು ಮಂಡ್ಯ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಹುಲ್ಲೇನಹಳ್ಳಿ ಗ್ರಾಮದವರು. ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಯುತರು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.


ಶ್ರೀ. ಚಿಕ್ಕಯ್ಯ

ಶ್ರೀಯುತ. ಅಣ್ಣಯ್ಯನವರ ಸಹಯೋಗದೊಂದಿಗೆ ಬಸವನಗುಡಿಯಲ್ಲಿರುವ ಯುವಕ ಸಂಘದಲ್ಲಿ ಸುಮಾರು 60 ವರ್ಷದ ಸೇವೆಯಲ್ಲಿ, 35 ವರ್ಷ ಖಜಾಂಚಿಯಾಗಿ, 10 ವರ್ಷ ಕಾರ್ಯದರ್ಶಿಯಾಗಿ, ಆರ್ಥಿಕ ಅಸಮಾನತೆಯಿಂದ ಅವಕಾಶ ವಂಚಿತರಾದ ವಿದ್ಯಾರ್ಥಿಗಳಿಗೆ ಉಚಿತ ಉಪನ್ಯಾಸ ತರಗತಿಗಳ ವ್ಯವಸ್ಥೆಯನ್ನೂ ಒದಗಿಸುವುದರ ಮೂಲಕ ಆರ್ಥಿಕವಾಗಿ ತಮ್ಮ ಶೈಕ್ಷಣಿಕ ಪ್ರಗತಿ ಕಾಣಲು ಕಾರಣವಾಗಿದೆ.

ಬಸವನ ಗುಡಿಯಲ್ಲಿ 1936 ರಲ್ಲಿ ಪ್ರಾರಂಭವಾದ ಹೆಚ್.ಬಿ ಸಮಾಜದಲ್ಲಿ (ಹರಿಕಥಾ ಭಜನಾ) 1990 ರಿಂದ ಕಾರ್ಯದರ್ಶಿಯಾಗಿ ಸಾರ್ವಜನಿಕರಿಗೆ ಅತ್ಯಂತ ವ್ಯವಸ್ಥಿತವಾದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಜನಪರವಾದ ಕಾರ್ಯಗಳನ್ನು ನಡೆಸಲು ವಿಶೇಷವಾದ ಸವಲತ್ತುಗಳನ್ನು ಒದಗಿಸುವುದರ ಮೂಲಕ ಧಾರ್ಮಿಕ ಮತ್ತು ಸಾಮಾಜಿಕ ಸೇವೆಯನ್ನು ಸಲ್ಲಿಸಲಾಗಿದೆ.

1957 ರಲ್ಲಿ ಬಸವನಗುಡಿ ಮತ್ತು ಉಮರ್ ಭಾಗ್‌ನಲ್ಲಿ ಪ್ರಾರಂಭವಾದ ಕಮಲಾ ನೆಹರು ವಿದ್ಯಾಸಂಸ್ಥೆಯ ಅಡಿಯಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆಯು ಕುಂಟಿತಗತಿಯಲ್ಲಿ ಸಾಗುತ್ತಿದ್ದ ವೇಳೆಯಲ್ಲಿ, 1992 ರಲ್ಲಿ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡು ಇಲ್ಲಿಯವರೆವಿಗೂ ಯಶಸ್ವಿಯಾಗಿ ಬಹುಮುಖಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

1956 ರಲ್ಲಿ ಸ್ಥಾಪನೆಯಾದ ಕಮ್ಯುನಿಟಿ ಸೆಂಟರ್ ವಿದ್ಯಾಸಂಸ್ಥೆಯ ಅಡಿಯಲ್ಲಿ ಕೇವಲ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಂತದವರೆಗೆ ಮಾತ್ರ ನಡೆಯುತ್ತಿತ್ತು. 2001 ರಲ್ಲಿ ಕಾರ್ಯದರ್ಶಿಯಾಗಿ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಪದವಿ ಪೂರ್ವ, ಪದವಿ (ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ) ಹಾಗೂ ಸ್ನಾತಕೋತ್ತರ



(ಎಂ.ಬಿ.ಎ, ಎಂ.ಸಿ.ಎ) ಪದವಿವರೆಗೂ ವಿಸ್ತರಿಸಿಕೊಂಡು ಜನಮನ್ನಣೆ ಗಳಿಸಿಕೊಂಡಿದೆ.

ರಾಷ್ಟ್ರ ಪ್ರಶಸ್ತಿ ಪಡೆದ "ಬಂಗಾರದ ಹೂ" ಚಲನಚಿತ್ರ ನಿರ್ದೇಶಕರಾದ ಶ್ರೀಯುತ. ಬಿ.ಎ. ಅರಸುಕುಮಾರ್‌ರವರು 1976 ರಲ್ಲಿ ಸ್ಥಾಪಿಸಿದ ಶ್ರೀನಿಧಿ ವಿದ್ಯಾ ಸಂಸ್ಥೆಯಲ್ಲಿ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. 1990 ರಿಂದ ಶ್ರೀಯುತ. ಚಿಕ್ಕಯ್ಯರವರು ಸುಮಾರು 33 ವರ್ಷದಿಂದ ಕನ್ನಡ ಭಾಷೆ ಮೇಲಿನ ಅಭಿಮಾನದಿಂದ ಕನ್ನಡ ಶಾಲೆಯನ್ನು ಉಳಿಸಿಕೊಂಡು ಬರುವುದರ ಜೊತೆಗೆ, ಸದರಿ ವಿದ್ಯಾಸಂಸ್ಥೆಯು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸುಮಾರು 600 ವಿದ್ಯಾರ್ಥಿಗಳನ್ನು ಹೊಂದಿರುವ ಕನ್ನಡ ಮಾಧ್ಯಮ ಶಾಲೆ ಇದಾಗಿದೆ.

ಬಿಇಎಲ್ ಶಿಕ್ಷಣ ಸಂಸ್ಥೆ

ಎಂಇಎಸ್ ರಿಂಗ್ ರಸ್ತೆ, ಜೆಪಿ ರಾಜರತ್ನಂ ವೃತ್ತ
ಜಾಲಹಳ್ಳಿ, ಬೆಂಗಳೂರು – 560 013


ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ತನ್ನದೆ ಆದ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ಕಳೆದ 60 ವರ್ಷಗಳಿಂದ ಉತ್ತಮ ಮೌಲ್ಯಾಧಾರಿತ ಶಿಕ್ಷಣ ನೀಡುತ್ತ ಬಂದಿರುವ ಶಾಲೆಯೇ ಬಿ.ಇ.ಎಲ್ ಪ್ರೌಢ ಶಾಲೆ. ಬ್ರಿಟಿಷರ ದಾಸ್ಯದ ಸಂಕೋಲೆಗಳನ್ನು ಕಳಚಿಕೊಂಡು, ಜಗತ್ತಿಗೆ ತನ್ನ ಅಸ್ಮಿತೆ ಮತ್ತು ಅನನ್ಯತೆಯನ್ನ ಸಾರಲು ಉತ್ಸುಕತೆಯ ಹೊಸ್ತಿಲಲ್ಲಿ ನಿಂತಿದ್ದ, ನಮ್ಮ ಭಾರತ ದೇಶದ ಮುಂದೆ ಹಲವು ಸವಾಲುಗಳಿದ್ದವು. ಅವುಗಳಲ್ಲಿ ಮುಖ್ಯವಾಗಿ ಶಿಕ್ಷಣ ಹಾಗೂ ಉದ್ಯೋಗದ ಸಮಸ್ಯೆಗಳು. ಇದಕ್ಕೆ ಉತ್ತರವೆಂಬಂತೆ ಹಸಿರು ಕ್ರಾಂತಿಯೊಂದಿಗೆ ಕೈಗಾರಿಕಾ ಕ್ರಾಂತಿಯ ಅಲೆಗಳು ದೇಶವನ್ನು ವ್ಯಾಪಿಸತೊಡಗಿದವು. ಆಗ ಉದಯಿಸಿದ ಹಲವು ಸಾರ್ವಜನಿಕ ಉದ್ಯಮಗಳಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಉದ್ಯಮ ಸಂಸ್ಥೆಯೂ ಒಂದು. ಈಗ ನವರತ್ನಗಳ ಸಾಲಿಗೆ ಸೇರಿರುವ ಈ ಕಾರ್ಖಾನೆ 1954 ರಲ್ಲಿ ಆರಂಭಗೊಂಡಿತು. ಅಂದಿನ ಬೆಂಗಳೂರು ಗ್ರಾಮಾಂತರ ಭಾಗದ ಅರೇಹಳ್ಳಿ–ನಗರದ ಸಂಕ್ರಮಣಾವಸ್ಥೆಯಲ್ಲಿದ್ದ 'ಜಾಲಹಳ್ಳಿ' ಗ್ರಾಮದ ಸಮೀಪ ಬೀಜಾಂಕುರಿಸಿತು. ಆಗಾಗಲೇ ಅಲ್ಲಿ ಎಚ್.ಎಂ.ಟಿ ಕಾರ್ಖಾನೆ ಕಾರ್ಯಾರಂಭ ಮಾಡಿತ್ತು.

ಆರಂಭದಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಎಚ್‌ಎಂಟಿ ಕಾರ್ಖಾನೆಗಳು ಜಂಟಿಯಾಗಿ ತಮ್ಮ ಉದ್ಯೋಗಿಗಳ ಹಾಗೂ ಸ್ಥಳೀಯ ಜನರ ಶೈಕ್ಷಣಿಕ ಆಗತ್ಯವನ್ನು ಪೂರೈಸಲು ಸಾಮಾಜಿಕ ಹೊಣೆಗಾರಿಕೆ ಅಂಶವಾಗಿ 19 ನೇ ಜೂನ್ 1957 ರಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಆರಂಭಿಸಿದವು. ಈ ಪುಟ್ಟ ಶಿಕ್ಷಣ ಸಂಸ್ಥೆ ಜನರ ಆಡುಮಾತಿನಲ್ಲಿ ಫ್ಯಾಕ್ಟರಿ ಸ್ಕೂಲ್ ಎಂದೇ ಜನಪ್ರಿಯವಾಗಿತ್ತು. ತದನಂತರ ಭಾರತ್ ಎಲೆಕ್ಟ್ರಾನಿಕ್ಸ್ ನ ಅಂಗ ಸಂಸ್ಥೆಯಾಗಿ ಬಿಇಎಲ್ ಶಿಕ್ಷಣ ಸಂಸ್ಥೆ ಆಗಸ್ಟ್ 17–1967 ರಂದು ಪ್ರತ್ಯೇಕ ಅಸ್ತಿತ್ವ ಪಡೆಯಿತು.



ಶ್ರೀಮತಿ ಮಲ್ಲಿಕಾ ಘೋಷ್

ಈ ಶಿಕ್ಷಣ ಸಂಸ್ಥೆಯ ಆರಂಭದಲ್ಲಿ ಅಧ್ಯಕ್ಷರಾಗಿ ಆಡಳಿತ ಮಂಡಳಿಯನ್ನು ಮುನ್ನಡೆಸಿದವರು ಶ್ರೀಮತಿ ಮಲ್ಲಿಕಾ ಘೋಷ್. ವಿಶೇಷವೆಂದರೆ, ಶಾಲೆಯ ಪಯಣ ಆರಂಭಗೊಂಡದ್ದು ಹದಿನಾಲ್ಕು ಮಂದಿ ವಿದ್ಯಾರ್ಥಿಗಳು ಹಾಗೂ ಐದು ಮಂದಿ ಸಿಬ್ಬಂದಿ ವರ್ಗದವರಿಂದ, ಅಂದಿನ ಕೇಂದ್ರೀಯ ವಾಯು ಪಡೆ ಸಿಪಾಯಿಗಳ ನೆಲೆಗಾಗಿ, ಎರಡನೇ ಮಹಾಯುದ್ಧದಲ್ಲಿ ಯುದ್ಧ ಖೈದಿಗಳಾಗಿದ್ದ ಇಟಲಿ ದೇಶದ ಸಿಪಾಯಿಗಳು ನಿರ್ಮಿಸಿದ್ಧ ಇಟಾಲಿಯನ್ ಬ್ಯಾರಕ್ಸ್‌ನಲ್ಲಿ ಎಂಬುದು ಗಮನಾರ್ಹ ಸಂಗತಿ.




ಶ್ರೀ ಎಸ್. ಸುಬ್ಬರಾಯನ್

ಶಾಲಾ ಆಡಳಿತ ನಿರ್ವಹಣೆಗೆ ಬಿಇಎಲ್ ಕಾರ್ಖಾನೆಯ ಹಿರಿಯ ಅಧಿಕಾರಿಗಳನ್ನು ನೇಮಿಸಿ ಅವರಿಗೆ ಹೆಚ್ಚುವರಿ ಜವಾಬ್ದಾರಿ ನೀಡುತ್ತಿದ್ದರು. ಹೀಗೆ ನೇಮಕವಾದ ಅಧಿಕಾರಿಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇದ್ದರೆ ಶಾಲೆಯ ಬೆಳವಣಿಗೆಗೆ ತುಂಬ ಸಹಕಾರಿಯಾಗುತ್ತಿತ್ತು. ಈ ರೀತಿ ನೇಮಕಗೊಂಡು ಶಿಕ್ಷಣ ಕ್ಷೇತ್ರದಲ್ಲಿ ತುಂಬ

ಆಸಕ್ತಿ ವಹಿಸಿ ಬಿ.ಇ.ಎಲ್ ಶಿಕ್ಷಣ ಸಂಸ್ಥೆಯ ಬೆಳವಣಿಗೆಯಲ್ಲಿ ಎದ್ದು ಕಾಣುವ ವ್ಯಕ್ತಿಯೆಂದರೆ ಶ್ರೀಯುತ ಎಸ್. ಸುಬ್ಬರಾಯನ್ ಅವರು.

ಇಂದು ಬಿಇಎಲ್ ಶಿಕ್ಷಣ ಸಂಸ್ಥೆ ಹಂತ ಹಂತವಾಗಿ ಪ್ರಾಥಮಿಕ ಶಿಕ್ಷಣದಿಂದ ಪದವಿ ಶಿಕ್ಷಣ ನೀಡುವವರೆಗೂ ಸಂಸ್ಥೆ ಬೆಳೆದು ನಿಂತಿದೆ. ನಮ್ಮ ರಾಷ್ಟ್ರದ ಯಾವುದೇ ಸಾರ್ವಜನಿಕ ಉದ್ಯೋಗಿಗಳ ಮಕ್ಕಳಿಗೆ ಪ್ರಾಥಮಿಕ ಹಂತದಿಂದ ಪದವಿಯವರೆವಿಗೂ ಪೂರ್ಣ ಪ್ರಮಾಣದ ಶಿಕ್ಷಣ ನೀಡುತ್ತಿರುವ



ನಿದರ್ಶನವಿಲ್ಲ. ನರ್ಸರಿ ಶಾಲೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ಪ್ರೌಢಶಾಲೆ, ಸಿ.ಬಿ.ಎಸ್.ಇ ಪಠ್ಯಕ್ರಮದ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜು, ರಾಜ್ಯ ಸರ್ಕಾರಿ ಪಠ್ಯಕ್ರಮದ ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜು, ವಿಶೇಷವಾಗಿ ವಿಕಲ ಚೇತನ ಮಕ್ಕಳ ಶಾಲೆ ಒಟ್ಟು 7 ಸಂಸ್ಥೆಗಳನ್ನು ಬಿಇಎಲ್ ಶಿಕ್ಷಣ ಸಂಸ್ಥೆಯು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದೆ. ಒಂದು ಸಂದರ್ಭದಲ್ಲಿ ಕನ್ನಡ, ಇಂಗ್ಲಿಷ್, ತಮಿಳು, ತೆಲುಗು ಮಾಧ್ಯಮಗಳಲ್ಲಿ ಜನರ ಅಗತ್ಯಗಳಿಗೆ ಪೂರಕವಾಗಿ ಶಿಕ್ಷಣ ಮಾಧ್ಯಮಗಳನ್ನು ಹೊಂದಿತ್ತು. ಪ್ರಸ್ತುತ ಸಂದರ್ಭಕ್ಕೆ ಅನುಗುಣವಾಗಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ನಡೆಸುತ್ತಿದೆ.

ಬಿಇಎಲ್ ಶಿಕ್ಷಣ ಸಂಸ್ಥೆ ವ್ಯಕ್ತಿತ್ವ ವಿಕಸನ, ಸೇವಾ ಮನೋಭಾವ, ಸಾಂದರ್ಭಿಕತೆಯ ಪ್ರಾಮುಖ್ಯತೆ, ಸ್ವಾವಲಂಬನೆ, ಕೌಶಲ್ಯ ಅಭಿವೃದ್ಧಿ ಹಾಗೂ ರಾಷ್ಟ್ರ ಪ್ರೇಮದ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನತ್ತಲೇ ಸದಾ ನಿರತವಾಗಿದೆ. ಲಾಭಕೋರತನ ಹಾಗೂ ಭ್ರಷ್ಟಾಚಾರವೆಂಬುದು ದೂರದ ಮಾತು. ಅಂಕಗಣಿತ ಹಾಗೂ ಹಣದ ಕುಣಿತಗಳೆರಡೂ ಈ ಸಂಸ್ಥೆಯ ಬಾಗಿಲಿನಿಂದ ಹೊರಗಡೆಯೇ ನಿಂತಿವೆ. ಈ ನಿಟ್ಟಿನಲ್ಲಿ ವಾಣಿಜ್ಯೀಕೃತ ಶಿಕ್ಷಣ ಸಂಸ್ಥೆಗಳ ನಡುವೆ, ಈ ಬಿ.ಇ.ಎಲ್ ಶಿಕ್ಷಣ ಸಂಸ್ಥೆ ಕೆಸರಲ್ಲಿ ಅರಳಿರುವ 'ಕಮಲ' ಎಂದರೆ ಅತಿಶಯೋಕ್ತಿಯಾಗಲಾರದು. ಇದರ ನೆರಳಲ್ಲಿ ಸಿದ್ದಗೊಂಡ ಪ್ರತಿಭಾನ್ವಿತ ವಿದ್ಯಾರ್ಥಿಗಳು, ರಾಷ್ಟ್ರ ಕಟ್ಟುವ ಕ್ಷೇತ್ರಗಳಾದ – ಮಿಲಿಟರಿ, ವೈದ್ಯಕೀಯ, ಉದ್ಯಮ, ವಿಜ್ಞಾನ, ತಂತ್ರಜ್ಞಾನ, ಆಡಳಿತ, ಕ್ರೀಡೆ, ಕಲೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಯತ್ನಿಸುತ್ತಿದ್ದಾರೆ.

ಈ ಸಂಸ್ಥೆಯಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ನಾಡ ಉತ್ಸವ, ರಾಷ್ಟ್ರ ನಾಯಕರ ಜನ್ಮೋತ್ಸವಗಳ ಆಚರಣೆಗಳು ನಾಡಿನ ವಿದ್ಯಾ ಸಂಸ್ಥೆಗಳಿಗೆ ಅನುಕರಣೀಯವಾಗಿವೆ. ಒಂದೇ ಪ್ರದೇಶದ ವ್ಯಾಪ್ತಿಯಲ್ಲಿ ಬಿ.ಇ.ಎಲ್ ವಿದ್ಯಾಸಂಸ್ಥೆಗಳು ಬೆಳಗಿನ 8.30ರ ದಿನಚರಿ ಆರಂಭಗೊಳ್ಳುವುದು ನಾಡಗೀತೆ ಹಾಗೂ ರಾಷ್ಟ್ರಗೀತೆಯೊಂದಿಗೆ. ಏಕಕಾಲದಲ್ಲಿ ಹಲವು ಸಂಸ್ಥೆಗಳಲ್ಲಿ ಈ ಗೀತೆಗಳು ಸಾವಿರಾರು ವಿದ್ಯಾರ್ಥಿಗಳು ಕಂಠದಿಂದ ಹೊರ ಹೊಮ್ಮುತ್ತಿದ್ದರೆ, ನಡೆದಾಡುವ ಜನರ ಮನದಲ್ಲಿ ಒಮ್ಮೆ ರಾಷ್ಟ್ರ ಹಾಗೂ ನಾಡ ಪ್ರೇಮದ ರೋಮಾಂಚನ

ಪುಟಿದೇಳುವಂತಾಗುತ್ತದೆ. ಇದನ್ನು ಅನುಭವಿಸಬೇಕಾದರೆ, ಒಮ್ಮೆ ಬೆಳಗ್ಗೆ ಶಾಲಾ ಅವಧಿಯಲ್ಲಿ ಈ ಪ್ರದೇಶಕ್ಕೆ ಭೇಟಿ ನೀಡಿ ರೋಮಾಂಚನದಲ್ಲಿ ಪಾಲ್ಗೊಳ್ಳಿ.

ಪ್ರತಿದಿನ ಬೆಳಿಗ್ಗೆ ಒಂದು ಕಡೆ ಬಿ.ಇ.ಎಲ್ ಕಾರ್ಖಾನೆ ಪ್ರವೇಶಿಸಿ ತಮ್ಮ ದುಡಿಮೆಯ ಮೂಲಕ ರಾಷ್ಟ್ರ ನಿರ್ಮಾಣಕ್ಕಾಗಿ ಧಾವಿಸುವ ಸಾವಿರಾರು ಉದ್ಯೋಗಿಗಳು ಮತ್ತೊಂದು ಕಡೆ ಭವಿಷ್ಯದ ಹರಿಕಾರರಾದ ವಿದ್ಯಾರ್ಥಿ ಸಮೂಹ ಶಾಲಾ ಕಾಲೇಜಿನ ಕಡೆಗೆ ಕಲಿಕೆಯ ಉತ್ಸಾಹದಲ್ಲಿ ಜ್ಞಾನದ ತೊರೆಯಂತೆ ಹರಿದು ಬರುವ ದೃಶ್ಯ ನೋಡುವುದೇ ಒಂದು ಆನಂದ. ಇಂತಹ ದೃಶ್ಯ ಇತರೆಡೆ ಸಿಗುವುದು ಅಪರೂಪ. ಈ ಒಂದು ಸ್ಥಳ ಕಾಯಕ, ಜ್ಞಾನ ಮತ್ತು ಹಸಿರಿನ ಮಹಾಸಂಗಮ.

ಈ ಸಂಸ್ಥೆಯ ಮತ್ತೊಂದು ವಿಶೇಷವೆಂದರೆ, ಆರಂಭದಲ್ಲಿ ಶಿಕ್ಷಣ ಪಡೆದ ಮೊದಲ ತಲೆಮಾರಿನಿಂದ, ಪ್ರಸ್ತುತ ಅದೇ ಕುಟುಂಬದ 3–4 ನೇ ಪೀಳಿಗೆಯವರು ಕೂಡಾ ಇಲ್ಲಿಯೇ ಕಲಿಕೆ ಮುಂದುವರೆಸಿದ್ದಾರೆ. ಇದರಿಂದಾಗಿಯೇ ಈ ಸಂಸ್ಥೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿ, ಪರಂಪರೆಯ ಗುರುತನ್ನು ಮೂಡಿಸಲು ಸಾಧ್ಯವಾಗಿದೆ. ಹಾಗಾಗಿಯೇ ಬಿ.ಇ.ಎಲ್ ಶಿಕ್ಷಣ ಸಂಸ್ಥೆ ಎಂದಾಕ್ಷಣ ಕೇವಲ ಕಲಿಕೆಯ ಕೇಂದ್ರ ಮಾತ್ರವಲ್ಲ, ಸಂಸ್ಕೃತಿ, ಪರಂಪರೆ ಜೀವನ ಕ್ರಮದ ಒಂದು ಮಾದರಿ ಎನ್ನಬಹುದು. ಆಗಾಗ ಸಂಸ್ಥೆಯ ಆವರಣಕ್ಕೆ ಬರುವ ಹಿರಿಯ ಹಾಗೂ ಕಿರಿಯ ತಲೆಮಾರಿನ ಮಾಜಿ ವಿದ್ಯಾರ್ಥಿಗಳು ಅಥವಾ ಪ್ರಸ್ತುತ ಪೋಷಕರು ಎನಿಸಿಕೊಂಡವರು ಕೃತಜ್ಞತೆಯ ಭಾವ, ವಿನಮ್ರತೆ ಮತ್ತು ಸಾರ್ಥಕತೆಯ ಜೊತೆಗೆ, ಅವಿಸ್ಮರಣೀಯ ನೆನಪುಗಳ ಪಯಣವನ್ನು ಮೆಲುಕು ಹಾಕಲು ಯತ್ನಿಸಿ ಭಾವುಕರಾಗುತ್ತಾರೆ.

ಭಾಷಾ ವೈವಿಧ್ಯತೆ ಹಾಗೂ ಸಾಂಸ್ಕೃತಿಕ ವಿಶಿಷ್ಟತೆಯ ದೃಷ್ಟಿಯಿಂದಲೂ ಈ ಸಂಸ್ಥೆ ಮಿನಿ ಭಾರತ. ಕನ್ನಡ, ತಮಿಳು, ತೆಲುಗು, ಮಲೆಯಾಳ, ತುಳು, ಕೊಂಕಣಿ, ಕೊಡವ, ಉತ್ತರ ಕರ್ನಾಟಕ, ಹಿಂದಿ, ಉರ್ದು... ಹೀಗೆ ಹಲವು ಭಾಷಾ ಪ್ರಬೇಧಗಳ ಹಿನ್ನೆಲೆಯ ಕುಟುಂಬಗಳು, ಕನ್ನಡತನದ ಕೂಡು ಕುಟುಂಬವಾಗಿ ಸಮಗ್ರ ಭಾರತವನ್ನೇ ಕಾಣಬಹುದು. ಈ ಹಿನ್ನೆಲೆಯಲ್ಲಿ ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ ಎಂಬ ಸಾಲುಗಳು ಇಲ್ಲಿ ಅನ್ವರ್ಥವಾಗಿವೆ. ಒಂದು ಹಂತದಲ್ಲಿ ಈ ವಿದ್ಯಾಸಂಸ್ಥೆ ಬಿಇಎಲ್



ಕಾರ್ಖಾನೆಯಂತೆಯೇ ಪ್ರತಿದಿನ ಎರಡು ಶಿಫ್ಟ್‌ಗಳಲ್ಲಿ ನಡೆಯುತ್ತಿತ್ತು. ಆ ಮಟ್ಟಿನ ಜನಪ್ರಿಯತೆ ಮತ್ತು ಶಾಲಾ ಪ್ರವೇಶಕ್ಕೆ ಬೇಡಿಕೆ ಹೆಚ್ಚಿತ್ತು. ಜ್ಞಾನಾರ್ಜನೆಯನ್ನು ನಿರಾಕಾರಿಸಬಾರದೆಂಬ ಉದಾರತನ ಅಂದಿನ ಶಾಲಾ ಆಡಳಿತ ಮಂಡಳಿಯ ನಿಲುವಾಗಿತ್ತು. ಹೀಗಾಗಿ ಉತ್ತರ ಬೆಂಗಳೂರಿನಲ್ಲಿಯೇ ಅತಿ ಹೆಚ್ಚಿನ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಬೆಡಗು, ಬಿನ್ನಾಣ, ಪ್ರದರ್ಶನ, ಲಾಭ ಇಂತಹ ಪದಗಳಿಂದ ದೂರವಾಗಿರುವುದರಿಂದಲೇ, ಈ ಸಂಸ್ಥೆ ಮೌಲ್ಯಾಧಾರಿತ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಇಂದಿಗೂ ಪಾತ್ರವಾಗಿದೆ. ಅದೇ ರೀತಿ ಬದಲಾವಣೆ, ನಾವೀನ್ಯತೆ ಕಾಲಕ್ಕೆ ಅನುಗುಣವಾಗಿ ಕಾಲದ ನದಿಯೊಂದಿಗೆ ಜೀವಂತವಾಗಿ ರಜತ ಮಹೋತ್ಸವ, ಸುವರ್ಣ ಮಹೋತ್ಸವಗಳನ್ನು ಕಂಡು ಇಂದಿಗೂ ಹರಿಯುತ್ತಲೇ, ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಅಮೃತ ಮಹೋತ್ಸವದತ್ತ ದಾಪುಗಾಲು ಇಟ್ಟಿದೆ. ಇಂತಹ ಸಂಸ್ಥೆಗಳು ಇನ್ನೂ ಹೆಚ್ಚಾಗಲಿ ಎಂಬುದು ನಮ್ಮೆಲ್ಲರ ಆಶಯ.

ವಿವೇಕಾನಂದ ಎಜುಕೇಷನಲ್ ಸೆಂಟರ್

ಸಂಖ್ಯೆ 1, ಬಿ. ಎಚ್.ಎಸ್. ಶಾಲೆ ಎದುರು, 4ನೇ ಟಿ ಬ್ಲಾಕ್ ಪೂರ್ವ,
ಜಯನಗರ 3ನೇ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು – 560 011

ಜಯನಗರದ ಎರಡನೆಯ ಬ್ಲಾಕಿನ ಸರ್ವೋದಯ ವಿದ್ಯಾ ಸಂಸ್ಥೆ ಹಾಗೂ ನಾಲ್ಕನೇ ಬ್ಲಾಕಿನ ವಿವೇಕಾನಂದ ಎಜುಕೇಷನಲ್ ಸೆಂಟರ್ ಶಿಕ್ಷಣ ಸಂಸ್ಥೆಗಳ ಸ್ಥಾಪಕರು ಶ್ರೀಮತಿ. ಜಯಲಕ್ಷ್ಮಿ ಸಿದ್ದಯ್ಯನವರು. ತಾನು ಜನ್ಮ ನೀಡಿದ ಮೂವರು ಮಕ್ಕಳಿಗೆ ಮಾತ್ರವಲ್ಲದೇ, ಸ್ಥಾಪಿಸಿದ ಶಿಕ್ಷಣ ಸಂಸ್ಥೆಗೂ ತಾಯಿ ಎಂದು ಭಾವಿಸಿ ಹಲವಾರು ದಶಕಗಳು ಅದನ್ನು ಪೋಷಣೆ ಮಾಡಿದ ಮಹಾ ಸಾಧ್ವಿ, ವಿಶೇಷವಾಗಿ ಬಡಮಕ್ಕಳ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಆ ಮಕ್ಕಳೆಲ್ಲಾ ವಿದ್ಯಾವಂತರಾಗಿ, ದೇಶಕ್ಕೆ ಸಮಾಜಕ್ಕೆ ಉತ್ತಮ ಕಾಣಿಕೆ ನೀಡುವಂತಾಗಬೇಕು ಎಂಬ ಹಂಬಲ ಇವರದ್ದಾಗಿತ್ತು.



ಶ್ರೀಮತಿ. ಜಯಲಕ್ಷ್ಮಿ ಸಿದ್ದಯ್ಯ
ಸ್ಥಾಪಕರು

ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕ ಕಾರ್ಯದರ್ಶಿಗಳಾಗಿದ್ದ ಶ್ರೀಯುತ

ಕೆ.ಹೆಚ್. ರಾಮಯ್ಯ ಮತ್ತು ಶ್ರೀಮತಿ. ರೇವಮ್ಮನವರ ಪುತ್ರಿಯಾಗಿ 13.11.1928 ರಂದು ಬೆಂಗಳೂರಿನಲ್ಲಿ ಜನಿಸಿದರು. ಆರಂಭದ ಶಿಕ್ಷಣವನ್ನು ಮಹಿಳಾ ಸೇವಾ ಸಮಾಜದಲ್ಲಿ ಪಡೆದರು. ಶ್ರೀಮತಿ. ರಾಜಂ ಸರಸ್ವತಿ, ಲಕ್ಷೀಬಾಯಿ, ಕಮಲಾಬಾಯಿ ಮೊದಲಾದ ಉಪಾಧ್ಯಾಯರ ಮಾರ್ಗದರ್ಶನ ಒಳ್ಳೆಯ ವಿದ್ಯಾರ್ಥಿನಿಯನ್ನಾಗಿ ರೂಪಿಸಿತು. ಅವರ ಪ್ರಭಾವ ಉತ್ತಮ ಚರ್ಚಾಪಟುವಾಗಲು, ಆ ಮೂಲಕ ಹಲವಾರು ಪ್ರಶಸ್ತಿಗಳು ಲಭಿಸಲು ಕಾರಣವಾಯಿತು. ವಾಲಿಬಾಲ್ ತಂಡದ ನಾಯಕಿಯಾಗಿ ಹಲವಾರು ಬಹುಮಾನಗಳಿಗೆ ಪಾತ್ರರಾದರು. ಶ್ರೀಮಂತ ಕುಟುಂಬದಲ್ಲಿ ಜನಿಸಿ, ತಂದೆ ತಾಯಿಯರ ಮುದ್ದಿನ ಮಗಳಾಗಿ ಒಡಹುಟ್ಟಿದವರ ಕಣ್ಮಣಿಯಾಗಿ, ತುಂಬು ಸಂಸಾರದಲ್ಲಿ ಬೆಳೆದರು. ಹೀಗೆ ಇಂಟರ್ ಮೀಡಿಯಟ್ ವರೆಗೆ ಶಿಕ್ಷಣ ಮುಗಿಸಿದರು.



ಶ್ರೀ ಸಿದ್ದಯ್ಯ

ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಹಾಯಕ ಅಯುಕ್ತರಾಗಿದ್ದ ಶ್ರೀ ಸಿದ್ದಯ್ಯನವರೊಡನೆ ವಿವಾಹವಾಯಿತು. ಮದುವೆಯಾಗಿ ಬಹುಕಾಲವಾದರೂ ಮಕ್ಕಳಾಗದಿದ್ದಾಗ ಶ್ರೀ ಸಿದ್ದಯ್ಯನವರ ಸಲಹೆಯಂತೆ ಶಾಲೆಯನ್ನು ಪ್ರಾರಂಭಿಸುವ ಆಲೋಚನೆ ಮೂಡಿತು. "ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಯ್ಯ" ಎಂಬುದನ್ನು ನುಡಿಮುತ್ತಾಗಿಸುವಲ್ಲಿ ಹಾದಿಬೀದಿಯಲ್ಲಾಡುವ ಬಡ ಮಕ್ಕಳಿಗೆ ವಿದ್ಯಾಭ್ಯಾಸ ಕೈಗೆಟುಕುವಂತೆ ಮಾಡಬೇಕೆಂಬ ಮಹದಾಸೆಯಿಂದ ತಮ್ಮ ಮನೆಯ ಕಾರ್‌ಶೆಡ್‌ನಲ್ಲಿಯೇ ಸರ್ವೋದಯ ವಿದ್ಯಾ ಸಂಸ್ಥೆ ಎಂಬ ಹೆಸರಿನಿಂದ 1959 ರಲ್ಲಿ ನರ್ಸರಿ ಶಾಲೆಯನ್ನು ಪ್ರಾರಂಭಿಸಿದರು. ಆರಂಭದಲ್ಲಿ ಕೆಲವೇ ಮಂದಿ ಮಕ್ಕಳು ಶಾಲೆಗೆ ದಾಖಲಾದರು.

ಸರ್ವೋದಯ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಬೇಕಾದ ನಿವೇಶನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಜಯನಗರದ ಎರಡನೆಯ ಬ್ಲಾಕಿನಲ್ಲಿ ಒಂದನ್ನು ಮತ್ತು ನಾಲ್ಕನೇಯ ಬ್ಲಾಕಿನಲ್ಲಿ ಒಂದು

ನಿವೇಶನವನ್ನು ಪಡೆದರು. ಎರಡೂ ನಿವೇಶನಗಳಲ್ಲಿ ಮಾದರಿ ಶಾಲೆಗೆ ಬೇಕಾದ ಸರ್ವಸಜ್ಜಿತ ಕಟ್ಟಡ ನಿರ್ಮಾಣ ಮಾಡಿದರು. ಎರಡನೆಯ ಬ್ಲಾಕಿನಲ್ಲಿ ಸರ್ವೋದಯ ಕನ್ನಡ ಪ್ರಾಥಮಿಕ ಶಾಲೆಯನ್ನು, ನಾಲ್ಕನೇಯ ಬ್ಲಾಕಿನಲ್ಲಿ ತಮ್ಮ ಕಲ್ಪನೆಯ ಕೂಸಾದ ರವೀಂದ್ರನಾಥ ಟ್ಯಾಗೋರರ ಶಾಂತಿನಿಕೇತನವನ್ನು ನೆನಪಿಗೆ ತರುವಂತ "ವಿವೇಕಾನಂದ ವಿದ್ಯಾ ಸಂಸ್ಥೆ" ಎಂದು ನಾಮಕರಣ ಮಾಡಿ ಎರಡೂ ಸ್ಥಳಗಳಲ್ಲಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿದರು. ದಿನೇ ದಿನೇ ಮಕ್ಕಳ ದಾಖಲಾತಿ ಹೆಚ್ಚುತ್ತಾ ಸಂಸ್ಥೆ ಅಭಿವೃದ್ಧಿಯಾಗತೊಡಗಿತು. ಶ್ರೀಮತಿ ಜಯಲಕ್ಷ್ಮಿಯವರು ಆನಂದಸಾಗರದಲ್ಲಿ ತೇಲುತ್ತಿದ್ದರಾದಾರೂ ಯಾವುದೋ ಒಂದು ಮೂಲೆಯಲ್ಲಿ ಸ್ವಂತ ಮಕ್ಕಳನ್ನು ಪಡೆಯುವ ಬಯಕೆ. ಇದು ಶಿವಾಜಿನಗರದ ಸುಂದರ ಯೋಗ ಶಾಲೆವರೆಗೂ ದಂಪತಿಗಳನ್ನು ಕರೆದೊಯ್ತು. ಯೋಗಾಚಾರ್ಯ ಸುಂದರಂ ಅವರ ಸಲಹೆಯ ಮೇರೆಗೆ ದಂಪತಿಗಳು ಕ್ರಮಬದ್ಧವಾಗಿ ಯೋಗಾಭ್ಯಾಸ ಮಾಡ ತೊಡಗಿದರು. ಆಚಾರ್ಯರ ಅಪ್ಪಣೆಯಂತೆ ಸಂಪೂರ್ಣ ಸಸ್ಯಾಹಾರಿಗಳಾದರು. ಆಶ್ಚರ್ಯವೋ ಎನ್ನುವಂತೆ ಕೆಲವೇ ವರ್ಷಗಳಲ್ಲಿ ಸಂತಾನ ಪ್ರಾಪ್ತಿಯಾಗಿ 1964 ರಲ್ಲಿ ಮಗ ವಿವೇಕಾನಂದನ ಜನನವಾಯಿತು. ಮಾರನೆಯ ವರ್ಷ ದ್ವಿತೀಯ ಪುತ್ರ ರಾಮಾನಂದ ಜನಿಸಿದರೆ, 1971 ರಲ್ಲಿ ಮೂರನೇ ಮಗ ದಯಾನಂದನ ಜನನವಾಯಿತು. ಅದೇ ವರ್ಷ ಶ್ರೀಮತಿ ಜಯಲಕ್ಷ್ಮಿ ಸಿದ್ದಯ್ಯನವರು ಜಯನಗರದ ನಾಲ್ಕನೇ ಬ್ಲಾಕಿನ ವಿವೇಕಾನಂದ ಶಿಕ್ಷಣ ಕೇಂದ್ರದಲ್ಲಿ ಆಂಗ್ಲ ಮಾಧ್ಯಮ ಶಾಲೆಯನ್ನು ಆರಂಭಿಸಿದರು. ಹಣವಂತರು, ಚೆನ್ನಾಗಿರೋರು ಬುದ್ಧಿವಂತರು ಎಲ್ಲಾದರೂ ಬದುಕುತ್ತಾರೆ. ಅಂತವರಿಗೆ ನಾವು ಸಹಾಯ ಮಾಡೋದು ಮುಖ್ಯವಲ್ಲ, ಕೈಯಲ್ಲಿ ಆಗದವರನ್ನು ನೋಡಿಕೊಳ್ಳುವುದೇ ಜೀವನದಲ್ಲಿ ನಾವು ಮಾಡುವ ಸಾಧನೆ ಎನ್ನುತ್ತಿದ್ದರು.

1982 ರಲ್ಲಿ ಶ್ರೀಮತಿ. ಜಯಲಕ್ಷ್ಮಿ ಸಿದ್ದಯ್ಯನವರು ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದರು. ಕಾರ್ಯಕಾರಿ ಸಮಿತಿಯ ಸದಾಸ್ಯರಾದ ಏಕೈಕ ಮಹಿಳೆ ಎಂಬ ಕೀರ್ತಿ ಅವರದಾಯಿತು. 1982 ರಿಂದ 2000 ವರೆಗೆ ನಡೆದ ಒಕ್ಕಲಿಗರ ಸಂಘದ ಚುನಾವಣೆಗಳಲ್ಲಿ ನಾಲ್ಕು ಸಲ ವಿಜಯಶಾಲಿಗಳಾಗಿದ್ದಾರೆ. ಕಾರ್ಯಕಾರಿ ಸಮಿತಿಯಲ್ಲಿ ಉಪಾಧ್ಯಕ್ಷರಾಗಿ, ಗೌರವ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಸಮುದಾಯದವರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಯಜಮಾನರಾಗಿದ್ದ ಶ್ರೀ ಸಿದ್ದಯ್ಯನವರ ಬೆಂಬಲ, ಪ್ರೋತ್ಸಾಹ ತುಂಬಾ ಇತ್ತು. ಆದರೆ ದುರಾದೃಷ್ಟವೆಂಬಂತೆ ಶ್ರೀ ಸಿದ್ದಯ್ಯನವರು ಹೃದಯಘಾತದಿಂದ 1982 ರಲ್ಲಿ ದೈವಾಧೀನರಾದರು. ಆಗ ಮಕ್ಕಳಿನ್ನೂ ಚಿಕ್ಕವರು, ಅವರನ್ನು ಸಲಹಿ ಸಾಕುವ ಜವಾಬ್ದಾರಿ, ಶಿಕ್ಷಣ ಸಂಸ್ಥೆಯ ದಿನ ನಿತ್ಯದ ಚಟುವಟಿಕೆಗಳ ಪರಾಮರ್ಶೆ, ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಕೆಲಸಗಳ ಬಾಹುಳ್ಯ, ಇವೆಲ್ಲವನ್ನೂ ಒಬ್ಬಂಟಿಯಾಗಿ, ನಿರ್ಭಯರಾಗಿ ಎದುರಿಸಿ ಜಯಶೀಲರಾದರು. ಕಾರ್ಯಕ್ಷೇತ್ರ ವ್ಯಾಪಕವಾಗಿದ್ದರೂ ಅದನ್ನು ಸಮರ್ಥರಾಗಿ ನಿರ್ವಹಿಸಿದರು. ಶಾಲಾ ಕಾರ್ಯಕ್ರಮಗಳಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸಿ ವಿದ್ಯಾರ್ಥಿಗಳು,ಶಿಕ್ಷಕರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ನಾಲ್ಕು ಜನರ ನಡುವೆ ಎದ್ದು ಕಾಣುವಂತ, ಗೌರವಿಸುವಂತಹ ವ್ಯಕ್ತಿತ್ವ ಅವರದ್ದಾಗಿತ್ತು.

ಶಿಕ್ಷಣವೇತ್ತರಾಗಿ, ಲೋಕೋಪಕಾರಿಯಾಗಿ, ಸಮಾಜಸೇವಕರಾಗಿ ಅವರ ಸಾಧನೆಗೆ ಜವಾಬ್ದಾರಿಯುತ ತಾಯಿಯಾಗಿ ಮಹತ್ತರವಾದ ಜವಾಬ್ದಾರಿಯನ್ನು ಶ್ರೀಮತಿ. ಜಯಲಕ್ಷ್ಮಿ ಸಿದ್ದಯ್ಯನವರು ಹೊಂದಿದ್ದರು ಎನ್ನುವುದು ಅವರ ಮಕ್ಕಳ ಸಮಾಜಮುಖಿ ಸ್ಥಾನಮಾನ ಪಡೆದಿರುವುದನ್ನು ಕಂಡಾಗ ತಿಳಿಯಬಹುದು. ಹೀಗೆ ಮಕ್ಕಳ ಕಲ್ಯಾಣಕ್ಕಾಗಿ ಉರಿಯುತ್ತಿದ್ದ ನಂದಾದೀಪ ತಾ॥ 25–5–2002 ರಂದು ಆರಿತು. ಶ್ರೀಮತಿ. ಜಯಲಕ್ಷ್ಮಿ ಸಿದ್ದಯ್ಯನವರ ಇಹಲೋಕದ ಕಾರ್ಯ ಮುಗಿಯಿತಾದರೂ ಅವರ ಸಾಧನೆಗಳು ಎಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿವೆ. ಮಕ್ಕಳು ಸಂಸ್ಥೆಯನ್ನು ಮುನ್ನಡೆಸುವ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ರಾಜ್ಯ ಪಠ್ಯಕ್ರಮ ವಸ್ತುವಿನ ಜೊತೆಗೆ ಐ.ಸಿ.ಎಸ್.ಇ ಪಠ್ಯಕ್ರಮವನ್ನು ಬೋಧಿಸುತ್ತಿದ್ದಾರೆ. ಡಾ॥ವಿವೇಕಾನಂದ ಸಿದ್ದಯ್ಯನವರು ಕಾರ್ಯದರ್ಶಿಗಳಾಗಿ ಶಿಕ್ಷಣ ಸಂಸ್ಥೆಯ ಸರ್ವತೋಮುಖ ಪ್ರಗತಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.


ಡಾ॥ ವಿವೇಕಾನಂದ
ಕಾರ್ಯದರ್ಶಿಗಳು




ಸಂಸ್ಥೆಯು ಐವತ್ತು ವರ್ಷಗಳು ಪೂರೈಸಿದುದರ ಸಂಕೇತವಾಗಿ 2010 ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಇದರ ಜ್ಞಾಪಕಾರ್ಥವಾಗಿಯೇ ಮಕ್ಕಳ ಕನಸಿನ ಲೋಕ ಕಾಣುವಂತ ಯೂನಿಕಿಡ್ಜ್ (Unikidz) ವಿಶೇಷವಾದ ನರ್ಸರಿ ಶಾಲೆಯನ್ನುಪ್ರಾರಂಭಿಸಿದ್ದಾರೆ.

ಜನತಾ ವಿದ್ಯಾಲಯ

2ನೇ ಮುಖ್ಯ ರಸ್ತೆ, 8 ನೇ ಅಡ್ಡ ರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಾಮರಾಜಪೇಟೆಯ ಎರಡನೇ ಮುಖ್ಯ ರಸ್ತೆಯಲ್ಲಿ ಕಂಡು ಬರುವ ಶಿಕ್ಷಣ ಸಂಸ್ಥೆಯೇ ಜನತಾ ವಿದ್ಯಾಲಯ. ಈ ಶಾಲೆ ಸ್ಥಾಪನೆಯಾದುದು 1959. ಚಾಮರಾಜಪೇಟೆ ಜಂಗಮ ಕ್ಷೇತ್ರದ ಮಠಾಧಿಪತಿಗಳಾದ ಚಿದ್ಘನ ಸ್ವಾಮಿಗಳು ಈ ವಿದ್ಯಾ ಸಂಸ್ಥೆಯ ಸ್ಥಾಪಕರು. ಸಮಾಜದಲ್ಲಿ ವಿದ್ಯೆಯ ಪ್ರಾಮುಖ್ಯತೆ ತಿಳಿದು ಧರ್ಮಬೋಧನೆ, ಆಚರಣೆ ಜೊತೆ ವಿದ್ಯೆ ಸಮಾಜ ಮುಖಿಯಾಗಬಲ್ಲದೆಂದು ಶಿಕ್ಷಣ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿ ಜನತಾ ವಿದ್ಯಾಲಯ ಆರಂಭಸಿದ್ದಾರೆ.



ಶ್ರೀ ಚಿದ್ಘನ ಸ್ವಾಮಿಗಳು
ಸ್ಥಾಪಕರು



ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಈಗ

- ಜನತಾ ಹಿರಿಯ ಪ್ರಾಥಮಿಕ ಶಾಲೆ
- ಜನತಾ ಪ್ರೌಢಶಾಲೆ
- ಜನತಾ ಪದವಿ ಪೂರ್ವ ಕಾಲೇಜು
- ಜನತಾ ಪದವಿ ಮತ್ತು ನರ್ಸಿಂಗ್

ಕಾರ್ಯ ನಿರ್ವಹಿಸುತ್ತಿವೆ.

ದಿ ಬೆಂಗಳೂರು ಎಜುಕೇಷನ್ ಸೊಸೈಟಿ(ರಿ.)

4ನೇ ಮುಖ್ಯರಸ್ತೆ, 8 ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003

ಬಸವನಗುಡಿಯಂತೆ ಮಲ್ಲೇಶ್ವರವೂ ಶೈಕ್ಷಣಿಕವಾಗಿ ಉತ್ತಮ ವಾತಾವರಣವುಳ್ಳ ಬೆಂಗಳೂರಿನ ಒಂದು ಪ್ರದೇಶ. ಇಲ್ಲಿನ ಹಲವಾರು ಸಂಘ–ಸಂಸ್ಥೆಗಳು ನಗರದ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಉಳಿಸಿ, ಬೆಳೆಸುವ ಪವಿತ್ರ ಕಾರ್ಯದಲ್ಲಿ ನಿರತವಾಗಿವೆ. ಅಂತಹ ಒಂದು ಸಂಸ್ಥೆ ಮಲ್ಲೇಶ್ವರದ 8ನೇ ಕ್ರಾಸ್ ನಲ್ಲಿರುವ 'ದಿ ಬೆಂಗಳೂರು ಎಜುಕೇಷನ್ ಸೊಸೈಟಿ'. ಆರು ದಶಕಗಳ ಹಿಂದೆ ಒಂದು ಸಣ್ಣ ಜೋಪಡಿಯಲ್ಲಿ ಪ್ರಾರಂಭಗೊಂಡು ಇಂದು ಬೃಹದಾಕಾರವಾಗಿ ಬೆಳೆದು ನಾಲ್ಕು ಅಂತಸ್ತುಗಳ ಕಟ್ಟಡದೆತ್ತರಕ್ಕೆ ಬೆಳೆದಿದೆ. ಸುಪ್ರಸಿದ್ಧ ಗಾಂಧಿವಾದಿಗಳೂ, ಗಾಂಧಿ ಸಾಹಿತ್ಯ ಸಂಘದ ಬೆಳವಣಿಗೆಗೆ ಕಾರಣರಾದವರೂ ಆದ ಸಿದ್ದವನಹಳ್ಳಿ ಕೃಷ್ಣಶರ್ಮ ಇದರ ಸಂಸ್ಥಾಪಕ ಅಧ್ಯಕ್ಷರು. ಮೌಲ್ಯಾಧಾರಿತ ಶಿಕ್ಷಣ ನೀಡುವ ನಗರದ ಕೆಲವೇ ಕೆಲವು ಸಂಸ್ಥೆಗಳಲ್ಲಿ ಒಂದಾಗಿರುವ 'ದಿ ಬೆಂಗಳೂರು ಎಜುಕೇಷನ್ ಸೊಸೈಟಿ' ಸಾಗಿ ಬಂದ ಹಾದಿ ಹೀಗಿದೆ.


60 ವರ್ಷಗಳ ಹಿಂದೆ ಮಲ್ಲೇಶ್ವರದಲ್ಲಿ ಪ್ರಾಥಮಿಕ ಶಾಲೆಯೊಂದು ನಡೆಯುತ್ತಿದ್ದು ಕಾರಣಾಂತರಗಳಿಂದ ಅದನ್ನು ನಡೆಸುತ್ತಿದ್ದ ಮಲೆಯಾಳಿ ದಂಪತಿ ಒಮ್ಮಿಂದೊಮ್ಮೆಲೇ ಶಾಲೆಯನ್ನು ಮುಚ್ಚಿಬಿಟ್ಟರು. ಕೆಲವು ವಿದ್ಯಾರ್ಥಿಗಳು




ಶಾಲೆಯ ಅಂದಿನ ಮತ್ತು ಇಂದಿನ ಚಿತ್ರ



ಮತ್ತು ಶಿಕ್ಷಕಿಯರು ಅದೇ ಪ್ರದೇಶದಲ್ಲಿ ಅದೇ ಸಮಯಕ್ಕೆ ಪ್ರಾರಂಭಗೊಂಡಿದ್ದ ಇನ್ನೊಂದು ಶಾಲೆಯನ್ನು ಸೇರಿಬಿಟ್ಟರು. ಆದರೆ ಶಾಲೆಗೆ ನಿಷ್ಠೆಯಿಂದ


ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ
ಸಂಸ್ಥಾಪಕ ಅಧ್ಯಕ್ಷರು


ಶ್ರೀ ಪಿ. ರಾಮದೇವ್


ಶ್ರೀ ಎಸ್.ಸಿ. ವೆಂಕಟೇಶ್

ದುಡಿಯುತ್ತಿದ್ದ ಕೆ.ಆರ್. ನೀಲಮ್ಮ, ಎಸ್. ರುಕ್ಮಿಣಿಯಮ್ಮ, ಪ್ರೇಮ, ಮಂಜುಳಾ ಮತ್ತು ಪ್ರಭಾದೇವಿ ಎಂಬ ಶಿಕ್ಷಕಿಯರು ಇದರಿಂದ ಆತಂಕಕ್ಕೊಳಗಾದರು. ಇವರೆಲ್ಲರೂ ಸಮಾಜ ಸೇವಕರಾಗಿ ಹೆಸರುವಾಸಿಯಾಗಿದ್ದರು ಎಸ್.ಸಿ ವೆಂಕಟೇಶ್ ಮತ್ತು ಅಂದಿನ ಈ ವಿಭಾಗದ ಪಾಲಿಕೆ ಸದಸ್ಯ ಪಿ. ರಾಮದೇವ್ ಅವರನ್ನು ಸಂಪರ್ಕಿಸಿದರು. ವೆಂಕಟೇಶ್ ಅವರು ಮನವಿಗೆ ಸ್ಪಂದಿಸಿ

ಮಲ್ಲೇಶ್ವರದಲ್ಲೇ ಒಂದು ನಿವೇಶನವನ್ನು ಹುಡುಕಿದರೆ, ಅಲ್ಲಿ ಶಾಲೆಯನ್ನು ಮತ್ತೆ ಪ್ರಾರಂಭಿಸುವುದಾಗಿ ಹೇಳಿದರು. ಐವರು ಶಿಕ್ಷಕಿಯರಲ್ಲೊಬ್ಬರಾದ ಮಂಜುಳಾ ಅವರು ತಮ್ಮ ಸಹೋದರಿಯ ನೆರವಿನೊಂದಿಗೆ ಮಲ್ಲೇಶ್ವರದಲ್ಲೇ ಇದ್ದ ಪೊಲೀಸ್ ಇನ್ಸ್ಪೆಕ್ಟರ್ ರಾಮದಾಸ್ ಅವರು 8ನೇ ಮುಖ್ಯರಸ್ತೆ 9ನೇ ಕ್ರಾಸ್ ಬಳಿಯಿದ್ದ ತಮ್ಮ ನಿವೇಶನಕ್ಕೆ ಸೇರಿದ ಖಾಲಿ ಜಾಗದಲ್ಲಿ ಶಾಲೆಯನ್ನು ನಡೆಸಲು ಅನುಮತಿ ಪಡೆದರು. ಪಿ. ರಾಮದೇವ್ ಅವರು ನಿವೇಶನವನ್ನು ಸ್ವಚ್ಛಗೊಳಿಸಲು ಜನರ ನೆರವು ನೀಡಿದರು. ಹಸನುಗೊಂಡ ನಿವೇಶನದಲ್ಲಿ ಎಸ್.ಸಿ. ವೆಂಕಟೇಶ್ ಅವರು ತಡಿಕೆಗಳು ಏಳು ಜೋಪಡಿಗಳನ್ನು ನಿರ್ಮಿಸಿಕೊಟ್ಟರು, ತಮ್ಮ ಕಟ್ಟಡದಲ್ಲಿದ್ದ ಪೀಠೋಪಕರಣಗಳನ್ನು ಕಳುಹಿಸಿಕೊಟ್ಟರು. ಹೀಗೆ ಶಾಲೆಯು ಪುನಶ್ಚೇತನ ಪಡೆ‍ಯು ಪ್ರಾರಂಭಗೊಳ್ಳಲು ಸಿದ್ಧವಾಯಿತು. 1965 ರ ಜನವರಿ 18 ರಂದು ಸರಳ ರೀತಿಯಲ್ಲಿ ಉದ್ಘಾಟನೆಗೊಂಡಿತು.

ಮಕ್ಕಳ ಮತ್ತು ಸಮಾಜ ಕಲ್ಯಾಣ ಸಂಸ್ಥೆಯ ಅಧ್ಯಕ್ಷರಾಗಿದ್ದ, ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಸರ್. ಸಿ. ವಿ.ರಾಮನ್‌ರ ಪತ್ನಿ ಲೋಕಸುಂದರಿ ರಾಮನ್ ಅವರು ಶಾಲೆಯನ್ನು ಉದ್ಘಾಟಿಸಿ ಇದು ಉತ್ತಮವಾಗಿ ಅಭಿವೃದ್ಧಿ ಹೊಂದಲಿ ಎಂದು ಆಶೀರ್ವದಿಸಿದರು.

ಶಾಲೆಯು ಈ ಸ್ಥಿತಿಗೆ ಬರಲು ಕಾರಣರಾದ ಎಸ್.ಸಿ ವೆಂಕಟೇಶ್, ಪಿ. ರಾಮದೇವ್ ಮೊದಲಾದವರೆಲ್ಲಾ ಅಂದಿನ ಕಾರ್ಯಕ್ರಮದಲ್ಲಿ



ಉಪಸ್ಥಿತರಿದ್ದರು. ಶಾಲೆಯ ವ್ಯವಸ್ಥಿತ ಆಡಳಿತ ನಿರ್ವಹಣೆಗಾಗಿ ಆ ಪ್ರದೇಶದ ಗಣ್ಯವ್ಯಕ್ತಿಗಳನ್ನೊಳಗೊಂಡ ಒಂದು ಆಡಳಿತ ಮಂಡಳಿಯನ್ನು ರಚಿಸಲಾಯಿತು. ಪ್ರಸಿದ್ಧ ಸಾಹಿತಿ ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಸಂಸ್ಥೆಯ ಮೊದಲ ಅಧ್ಯಕ್ಷರಾದರು. ಇವರೊಂದಿಗೆ ಆಡಳಿತ ಮಂಡಳಿಯಲ್ಲಿದ್ದ ಸ್ಥಾಪಕ ಸದಸ್ಯರೆಂದರೆ- ಡಾ॥ ಎಂ.ವಿ. ಕೃಷ್ಣರಾವ್, ಮಂಗಳಾ ರಾಮಚಂದ್ರ, ವೈ. ಮುನಿಸ್ವಾಮಪ್ಪ, ಬಿ. ಸೂರ್ಯನಾರಾಯಣ ರಾವ್, ಬಿ.ಎಂ. ರಾಮರಾವ್, ನಾಗರತ್ನ.ಆರ್.ರಾವ್, ಎನ್. ಕೃಷ್ಣಸ್ವಾಮಿ, ಉಮೇಶ್ ರುದ್ರ, ಟಿ. ಕೃಷ್ಣಮೂರ್ತಿ, ಬಿ.ಟಿ. ಪಾರ್ಥಸಾರಥಿ, ಎಸ್.ಸಿ. ವೆಂಕಟೇಶ್ ಮತ್ತು ಪಿ. ರಾಮದೇವ್.

ಶಿಕ್ಷಕಿಯರ ಪ್ರಾಮಾಣಿಕ ಪ್ರಯತ್ನ ಹಾಗೂ ಮೌಲ್ಯಾಧಾರಿತ ಶಿಕ್ಷಣಗಳಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಸೇರಿದರು. ತರಗತಿಗಳು ಸಾಲದೇ ಹೋದುದರಿಂದ ಶಾಲೆಯನ್ನು ಮರುವರ್ಷ, ಅಂದರೆ 1966ರಲ್ಲಿ ಮಲ್ಲೇಶ್ವರದ ಈಸ್ಟ್ ಪಾರ್ಕ್ ರಸ್ತೆಯಲ್ಲಿ ರಾಘವೇಂದ್ರ ಸ್ವಾಮಿ ಮಠದೆದುರು ವೇದ ವ್ಯಾಸಾಚಾರ್ ಎಂಬುವರ ಮನೆಯನ್ನು ಬಾಡಿಗೆ ಪಡೆದು ವರ್ಗಾವಣೆ ಮಾಡಲಾಯಿತು. ಈ ಮನೆಯ ಪ್ರತಿ ಕೋಣೆಯಲ್ಲಿಯೂ, ಊಟದ ಮನೆಯಲ್ಲಿಯೂ, ಕೊನೆಗೆ ಗ್ಯಾರೇಜ್ ನಲ್ಲಿಯೂ ತರಗತಿಗಳನ್ನು ನಡೆಸಲಾಯಿತು. ಹೀಗೆ ಜಾಗ ಚಿಕ್ಕದಾದರೂ ಶಾಲೆ ಉತ್ತಮ ಶಿಕ್ಷಣವನ್ನು ನೀಡುತ್ತಾ ಹಲವು ವರ್ಷಗಳನ್ನು ಈ ಕಟ್ಟಡದಲ್ಲಿಯೇ ಕಳೆಯಿತು. ನಂತರ ಈ ಕಟ್ಟಡವನ್ನು ಮಾಲೀಕರು ಬೇರೆಯವರಿಗೆ ಮಾರಿಬಿಟ್ಟಿದ್ದರಿಂದ ಶಾಲೆಯನ್ನು ತೆರವು ಮಾಡಿ ಕೊಡಬೇಕೆಂದು ಒತ್ತಾಯ ಮಾಡಲಾಯಿತು. ಆದರೆ ಈಗಾಗಲೇ ಬೆಳವಣಿಗೆಗೊಂಡಿದ್ದ ಶಾಲೆಯನ್ನು ಕೂಡಲೇ ವರ್ಗಾಯಿಸುವುದು ಕಷ್ಟಸಾಧ್ಯವಾಗಿತ್ತು. ಇವರು ಬಿಡಲೇಬೇಕೆಂದು ಮನೆ ಮಾಲೀಕರು ನ್ಯಾಯಾಲಯಕ್ಕೆ ಹೋದರು. ಆಗ ಶಾಲಾ ಅಧ್ಯಕ್ಷರು, ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್ ಆಗಿದ್ದ ಬಿ.ಟಿ. ಪಾರ್ಥಸಾರಥಿಯವರು ಶಾಲೆಗೆ ನೀಡಿದ ರಕ್ಷಣೆ ಅನುಪಮವಾದದ್ದು. ಆದರೂ ಶಾಲೆಗೆ ಪ್ರತ್ಯೇಕವಾದ ಒಂದು ನಿವೇಶನವನ್ನು ಹುಡುಕಿಕೊಂಡು ಅವರದ್ದೇ ಆದ ಒಂದು ಕಟ್ಟಡವನ್ನು ನಿರ್ಮಿಸಬೇಕೆಂಬ ಪ್ರಯತ್ನವೂ ನಡೆದಿತ್ತು. ಪಾರ್ಥಸಾರಥಿ ಮತ್ತು ಡಾ॥ಹೊ. ಶ್ರೀನಿವಾಸಯ್ಯ ಅವರ ಜಂಟಿ ಪ್ರಯತ್ನ ಹಾಗೂ ಗಾಂಧಿ ಸಾಹಿತ್ಯ ಸಂಘದ ನೀಲತ್ತಳ್ಳಿ ಕಸ್ತೂರಿ ಮತ್ತು ಇತರ ಸದಸ್ಯರ ನೆರವಿನಿಂದ ಮಲ್ಲೇಶ್ವರದ 8ನೇ ಕ್ರಾಸ್ ನಲ್ಲಿರುವ ಗಾಂಧಿ ಸಾಹಿತ್ಯ ಸಂಘದ ವಿಶಾಲ ಮೈದಾನದಲ್ಲಿಯೇ ಶಾಲಾ

ಕಟ್ಟಡವನ್ನು ನಿರ್ಮಿಸಲು ತೀರ್ಮಾನಿಸಲಾಯಿತು. ಆಗಿನ ಶಿಕ್ಷಣ ಸಚಿವ ಸುಬ್ಬಯ್ಯ ಶೆಟ್ಟಿಯವರು 1978 ರಲ್ಲಿ ಈ ಸ್ಥಳವನ್ನು ಶಾಲಾ ಕಟ್ಟಡ ನಿರ್ಮಿಸಲು ಶಿಲಾನ್ಯಾಸ ಮಾಡಿದರು. 1980 ರ ವೇಳೆಗೆ ಎರಡಂತಸ್ತಿನ ಕಟ್ಟಡ ಸಂಪೂರ್ಣಗೊಂಡು ಶಾಲೆಯು ಇಲ್ಲಿಗೆ ವರ್ಗಾವಣೆಗೊಂಡಿತು. 1984 ರ ವೇಳೆಗೆ ಅದರ ಮೇಲೆ ಮತ್ತೆರಡು ಅಂತಸ್ತುಗಳನ್ನು ನಿರ್ಮಿಸಿ, ಕಟ್ಟಡಕ್ಕೆ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಹೆಸರಿಡಲಾಯಿತು.


ಶಾಲೆಯ ಪ್ರಥಮ ಮುಖ್ಯೋಪಾಧ್ಯಾಯಿನಿಯಾಗಿ ದುಡಿದ ಶ್ರೀಮತಿ ಎಸ್.ವಿ.ಕಮಲಮ್ಮ ಅವರ ಸೇವೆ ಗಣನೀಯವಾದದ್ದು. ಸಂಕಷ್ಟ ಸಮಯದಲ್ಲಿ ಸಂಸ್ಥೆಯ ತೊಂದರೆಗಳನ್ನು ನಿವಾರಿಸಿದವರು. ಆಡಳಿತಾತ್ಮಕ ಪ್ರಾಂಶುಪಾಲರೂ, ಗೌರವ ಜಂಟಿ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ ನಾಗರತ್ನ. ಆರ್.ರಾವ್ ಅವರು ಖಾಯಿಲೆ ಮಲಗಿ ಆಸ್ಪತ್ರೆಯಲ್ಲಿದ್ದರೂ ಶಾಲೆಯ ಸ್ವಂತ ಕಟ್ಟಡದ ಕನಸು ಕಾಣುತ್ತಿದ್ದ ಬಿ.ಎಂ. ರಾಮರಾಯರು ಮತ್ತು ಪತ್ರಕರ್ತ ಕೃಷ್ಣಸ್ವಾಮಿಯವರ ಸೇವೆ ಸ್ಮರಣೀಯ.

ಹೀಗೆ ಹಲವಾರು ಗಣ್ಯರ ನೆರವು, ಶಿಕ್ಷಕಿಯರ ನಿಷ್ಠೆ ಇವುಗಳಿಂದಾಗಿ ಹಾಗೂ ಪೋಷಕರ ಬೇಡಿಕೆಯಿಂದಾಗಿ 1986 ರಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. 1990 ರಲ್ಲಿ ಪ್ರಾಥಮಿಕ ಶಾಲೆಗೆ ಶಾಶ್ವತ ಮಾನ್ಯತೆ ನೀಡಲಾಯಿತು. 1992 ರಲ್ಲಿ ಶಾಲೆಯು 18ನೇ ತಾಲೂಕು ಮಟ್ಟದ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಿತು. 1994 ರಲ್ಲಿ ಕಂಪ್ಯೂಟರ್ ತರಗತಿಗಳು ಪ್ರಾರಂಭಗೊಂಡವು.

1995ರ ಫೆಬ್ರವರಿ 18 ರಂದು ತ್ರಿದಶಮಾನೋತ್ಸವವನ್ನು ಶಾಲಾ ಆವರಣದಲ್ಲಿ ಆಚರಿಸಲಾಯಿತು. ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮಿಯವರು ಸಮಾರಂಭ ಉದ್ಘಾಟಿಸಿದರು. ನಿವೃತ್ತ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಹಿರಿಯ ನಿಟ್ಟೂರು ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು ಹಾಗೂ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಈ ಸಮಯದಲ್ಲೇ ಸಿದ್ದವನಹಳ್ಳಿ ಕೃಷ್ಣಶರ್ಮರ ತೈಲ ಚಿತ್ರವನ್ನು ಅನಾವರಣ ಮಾಡಿದ್ದಲ್ಲದೇ, ಶಾಲೆಯ ಬೆಳವಣಿಗೆಗಾಗಿ ಶ್ರಮಿಸಿದ ಶಿಕ್ಷಕ ವೃಂದವನ್ನು ಗೌರವಿಸಲಾಯಿತು. ಸಂಸ್ಥೆ ರೂಪಿಸಿಕೊಂಡಿರುವ ಉತ್ತಮ ಘನತೆ ಗೌರವಾನುಗುಣವಾಗಿ ಇದರ ನಾಲ್ಕನೇ ದಶಮಾನೋತ್ಸವವು ನವೆಂಬರ್

29,2005 ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ನಡೆದಿದೆ. ಅಂದಿನ ರಾಜ್ಯಪಾಲ ಟಿ.ಎನ್. ಚತುರ್ವೇದಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಈ ಕಾರ್ಯಕ್ರಮದಲ್ಲಿ ಶಾಸಕ ಎಂ.ಆರ್. ಸೀತಾರಾಮ್ ಗೌರವಾನ್ವಿತ ಅತಿಥಿಯಾಗಿ ಈ ಪ್ರದೇಶದ ಹಿರಿಯ ಗಣ್ಯವ್ಯಕ್ತಿ ಡಾ॥ಹೊ. ಶ್ರೀನಿವಾಸಯ್ಯ ಅಧ್ಯಕ್ಷತೆ ವಹಿಸಿದ್ದರು. 40 ವರ್ಷ ಸಾರ್ಥಕ ಸೇವೆ ಸಲ್ಲಿಸಿರುವ ಬಿ.ಇ.ಎಸ್ ಶಿಕ್ಷಣ ಸಂಸ್ಥೆ, 2005 ರ ಜೂನ್ 11 ರಂದು ಚತುರ್ಥ ದಶಮಾನೋತ್ಸವವನ್ನು ಆಚರಿಸಿಕೊಂಡಿದೆ. ಸ್ಥಳೀಯ ಶಾಸಕ ಎಂ.ಆರ್. ಸೀತಾರಾಮ್ ಉದ್ಘಾಟಿಸಿದ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ರಾಜ್ಯಪಾಲ ಟಿ.ಎನ್. ಚತುರ್ವೇದಿಯವರು ಆಗಮಿಸಿದ್ದರು. ಸಮಾರಂಭದಲ್ಲಿ "ನಲವತ್ತರ ನಲಿವು" ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಸಂಸ್ಥೆಯ ಆದರ್ಶಗಳು ಹಾಗೂ ಕಾರ್ಯಾಚರಣೆಯನ್ನು ಶ್ಲಾಘಿಸಿದರು. ನಂತರ 18.01.2015 ರಂದು ಸುವರ್ಣ ಮಹೋತ್ಸವವನ್ನು ಪ್ರೊ. ಕೆ ಜೆ ರಾವ್ ಅವರ ಅಮೃತ ಹಸ್ತದಿಂದ ನೆರವೇರಿಸಲಾಯಿತು.

ಶಾಲಾ ಕಟ್ಟಡಕ್ಕೆ ಸೇರಿಕೊಂಡೇ ಇರುವ ಗಾಂಧಿ ಸಾಹಿತ್ಯ ಸಂಘದ ನೀಲತ್ತಳ್ಳಿ ಕಸ್ತೂರಿಯವರ ನಿಕಟ ಸಂಪರ್ಕ ಹಾಗೂ ಗಾಂಧೀಜಿ ಬೆಂಗಳೂರಿಗೆ ಬಂದಿದ್ದಾಗ ಈ ಶಾಲಾ ಕಟ್ಟಡ ಇರುವ ನೆಲದಲ್ಲಿ ಓಡಾಡಿರುವುದು&ಇವೆಲ್ಲವೂ



ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು

ಈ ಶಾಲೆಯಲ್ಲಿ ಗಾಂಧಿ ವಿಚಾರಧಾರೆ ಜೀವಂತವಾಗಿರಲು ಪ್ರಮುಖ ಕಾರಣ. ಇಲ್ಲಿ ಗಾಂಧೀಜಿ ಆತ್ಮಚರಿತ್ರೆ ಮತ್ತು ಸಾಹಿತ್ಯವನ್ನು ಹಂತ ಹಂತವಾಗಿ ಓದಿಸಿ ನೈತಿಕ ಮೌಲ್ಯದ ಶಿಕ್ಷಣ ನೀಡಲಾಗುತ್ತಿದೆ. ಗಾಂಧಿ ಜಯಂತಿಯಂದು ಸಾಹಿತ್ಯ ಸಂಘದಲ್ಲಿ ಸಂಪೂರ್ಣವಾಗಿ ಮಕ್ಕಳೇ ನಡೆಸಿಕೊಡುವ ಕಾರ್ಯಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದು ಗಾಂಧಿ ಸಾಹಿತ್ಯ ಸಂಘ, ಗಾಂಧಿ ಸ್ಮಾರಕ ನಿಧಿ, ಪ್ರಕೃತಿ ಜೀವನ ಕೇಂದ್ರ ಮುಂತಾದ ಸಂಸ್ಥೆಗಳ ಮುಖ್ಯಸ್ಥ ಹೋ. ಶ್ರೀನಿವಾಸಯ್ಯ ಅವರೇ ಬಿ.ಇ.ಎಸ್ ನ ಈಗಿನ ಅಧ್ಯಕ್ಷರು. ಸಿದ್ದವನಹಳ್ಳಿ ಕೃಷ್ಣಶರ್ಮರ ಪುತ್ರ ಎಸ್.ಕೆ. ಮೋಹನ್ ಸಂಸ್ಥೆಯ ಈಗಿನ ಗೌರವ ಕಾಯದರ್ಶಿಗಳಾಗಿ ದಿ ಬೆಂಗಳೂರು ಎಜುಕೇಷನ್ ಸೊಸೈಟಿ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿರುವ ಬೆಂಗಳೂರಿನ ಒಂದು ಅಪರೂಪದ ಸಂಸ್ಥೆಯಾಗಿ ಗಾಂಧಿ ವಿಚಾರಧಾರೆ, ಜೀವನ ಮೌಲ್ಯಗಳ ಉದ್ದೇಶ ತಿಳಿಸುತ್ತಾ ಮಕ್ಕಳನ್ನು ಸತ್ಪ್ರಜೆಗಳನ್ನಾಗಿಸುತ್ತಾ ಅವರ ಭವಿಷ್ಯಕ್ಕೆ ದಾರಿದೀಪವಾಗಿ ಬೆಳಗುತ್ತಿರುವುದು ಅವಿಸ್ಮರಣೀಯವೇ ಸರಿ.

ಸ್ಟ್ರೇಸಿ ಸ್ಮಾರಕ ಶಿಕ್ಷಣ ಸಂಸ್ಥೆ

52, ಸೇಂಟ್ ಮಾರ್ಕ್ಸ್ ರಸ್ತೆ, ಶಾಂತಲಾ ನಗರ,
ಅಶೋಕ್ ನಗರ, ಬೆಂಗಳೂರು - 560 001

ಸೇವೆಯೇ ಸಾಧನೆಯೆಂಬ ಉದ್ದೇಶವನ್ನಿಟ್ಟುಕೊಂಡು ಪ್ರಾರಂಭವಾದ ಸ್ಟ್ರೇಸಿ ಸ್ಮಾರಕ ಶಿಕ್ಷಣ ಸಂಸ್ಥೆ 1964 ರ ಜುಲೈ 14 ರಂದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು ಹಾಗೂ ದುರ್ಬಲವಾದವರನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭವಾದ ಸಂಸ್ಥೆ.

ಸ್ವಾತಂತ್ರ್ಯೋತ್ತರ ಭಾರತದ ಶೈಕ್ಷಣಿಕ ಪರ್ವದಲ್ಲಿ ತನ್ನದೇ ಆದ ಕೊಡುಗೆಯನ್ನು ಕೊಡಬೇಕಾದಾಗಿರುವುದು ಮತ್ತು ನೆರೆ-ಹೊರೆಯಲ್ಲಿ ಆಗಲೇ ಪ್ರಸಿದ್ಧಿಯಾದ ಮತ್ತು ಬಲಾಢ್ಯವಾದ ಶಿಕ್ಷಣ ಸಂಸ್ಥೆಗಳೊಂದಿಗೆ ಸಮಾನ ಮತ್ತು ಆರೋಗ್ಯಯುತವಾದ ಸ್ಪರ್ಧೆಯೊಂದಿಗೇ ಈ ಸಂಸ್ಥೆ ಪ್ರಾರಂಭವಾಯಿತು.

ನಮ್ಮ ಶಾಲೆ ಪ್ರಾರಂಭವಾದದ್ದು ಒಂದು ಪುಟ್ಟ ಕೊಠಡಿಯಲ್ಲಿ ಕೆಲವೇ ವಿದ್ಯಾರ್ಥಿಗಳೊಂದಿಗೆ. ಮೊದಲು ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಇದು ಶಾಲೆಯೂ ಹೌದು ಜೊತೆಗೆ ಕೌಟುಂಬಿಕ ವಾತಾವರಣವೂ ಕೂಡ. ಅನಂತರದಲ್ಲಿ ನಮ್ಮ ಸಂಸ್ಥೆ ಬೆಳೆಯುತ್ತಾ ಹೋಯಿತು, ಪ್ರವರ್ಧಮಾನಕ್ಕೆ ಬಂದಿತು.

ನಿವೃತ್ತ ಐಸಿಎಸ್ ಅಧಿಕಾರಿಗಳಾದ ಸನ್ಮಾನ್ಯ ರಾಲ್ಫ್ ಸ್ಟ್ರೇಸಿ ಅವರು ಈ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರು. ಈ ಸಂಸ್ಥೆ 1971 ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ



ಶ್ರೀಯುತ. ರಾಲ್ಫ್ ಸ್ಟ್ರೇಸಿ
ಸಂಸ್ಥಾಪಕರು

ಮಂಡಳಿಯ ಅನುಸಾರ ಪ್ರಾರಂಭವಾಯಿತು. 1975 ರಲ್ಲಿ ಶೇ.60 ರಷ್ಟು ಫಲಿತಾಂಶದೊಂದಿಗೆ ಮುನ್ನಡೆಯಿತು. ಅಲ್ಲದೇ ಶಾಶ್ವತ ಅನುದಾನ ರಹಿತ ಶಾಲೆಯಾಗಿ ಮುಂದುವರೆಯಿತು. ಮೊದಲಿನಿಂದಲೂ ನಮ್ಮ ಶಾಲೆ ಉತ್ತಮ ಫಲಿತಾಂಶದಿಂದಾಗಿ ಹೆಸರು ಮಾಡುತ್ತಲೇ ಬಂದಿತು. ಎಪ್ಪತ್ತು ಎಂಬತ್ತರ ದಶಕದಲ್ಲಿ ನಗರದ ಹೃದಯಭಾಗದಲ್ಲಿ ತನ್ನ ಸೇವೆಯನ್ನು ಸಮಾಜಕ್ಕೆ ನೀಡುತ್ತಾ ಬಂದಿದೆ.

ಶಾಲೆಯ ಆಡಳಿತ ಮಂಡಳಿ ಬಗ್ಗೆ ಹೇಳುವುದಾದರೆ ಮಾನ್ಯ ರಾಲ್ಫ್ ಸ್ಟ್ರೇಸಿ ಯವರು (ಐಸಿಎಸ್ ನಿವೃತ್ತ) ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿ ಆಮೂಲಾಗ್ರ ಸೇವೆಗಳನ್ನು ನಿರ್ವಹಿಸಿದ್ದಾರೆ. ಅವರ ಕಾಲಾನಂತರ ಅವರ ಪರಿವಾರದವರು ಉಸ್ತುವಾರಿಯನ್ನು ವಹಿಸಿಕೊಂಡು ಯಶಸ್ವಿಯಾಗಿ ಮುನ್ನೆಡೆಸಿದರು.

ಅನಂತರದಲ್ಲಿ ಆಡಳಿತ ಮಂಡಳಿ ಬದಲಾಗಿ ವಿಂಗ್ ಕಮಾಂಡರ್ ಉಂಬರ್ ಕೋಮನ್ ಅಧ್ಯಕ್ಷರಾಗುತ್ತಾರೆ. ಶ್ರೀ ಬಿ. ಮರಿರಾಜ್ (ನಿವೃತ್ತ ಡಿಜಿಪಿ)ಕಾರ್ಯದರ್ಶಿಗಳಾಗುತ್ತಾರೆ. ರಮಾನಂದ್ ಚೀಫ್ ಇಂಜಿನಿಯರ್ (ನಿವೃತ್ತ) ಉಪಾಧ್ಯಕ್ಷರಾಗುತ್ತಾರೆ. ಶ್ರೀಮತಿ ಎಸ್.ಎಂ. ಸ್ಟ್ರೇಸಿ ಯವರು ಖಜಾಂಚಿಯಾಗುತ್ತಾರೆ. ಶ್ರೀ ವೇಣುಗೋಪಾಲ್ ನಿವೃತ್ತ ಐಟಿಐ, ಜಿ.ಎಂ. ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ.

ನಮ್ಮ ಆಡಳಿತ ಮಂಡಳಿ ಶಿಕ್ಷಕ ಮತ್ತು ಕಚೇರಿ ಸಿಬ್ಬಂದಿಗಳ ಬಗ್ಗೆ ಸದಾ ಮಾನವೀಯ ಮಿಡಿತವನ್ನು ಹೊಂದಿದೆ. ಅವರ ಏಳಿಗೆಯನ್ನು, ಶ್ರೇಯಸ್ಸನ್ನು ಬಯಸುತ್ತಿದ್ದರು. ಇದರ ಫಲವಾಗಿಯೇ ಸರ್ಕಾರಿ ಶಿಕ್ಷಕ ವೇತನ ಶ್ರೇಣಿಯಂತೆಯೇ ನಮ್ಮಲ್ಲೂ ಅದರ ಸರಿಸಮನಾಗಿ ವೇತನ ನೀಡಲಾಯಿತು. ಇತರ ಸೌಲಭ್ಯಗಳಾದ ಭವಿಷ್ಯ ನಿಧಿ, ಗುಂಪು ವಿಮೆ, ಗ್ರಾಚ್ಯುಟಿ ಮೊದಲಾದ ಸೌಲಭ್ಯಗಳನ್ನು ಉದಾರವಾಗಿ ನೀಡಲಾಯಿತು.

ಪ್ರಸ್ತುತ ಕಾರ್ಯದರ್ಶಿಗಳಾದ ಎಸ್. ಎ. ಕೃಬಾನಂದನ್ ಅವರು ಶ್ರೀ ಬಿ.ಎಂ. ವೆಂಕಟರಾಮಯ್ಯ ನವರು ಪ್ರಾಂಶುಪಾಲರಾಗಿದ್ದ ಸಂದರ್ಭದಲ್ಲಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕನಾಗಿ 1979 ನವೆಂಬರ್ 7 ರಂದು ಸೇರ್ಪಡೆಗೊಂಡು ಅಂದಿನಿಂದ ಇಂದಿನವರೆಗೂ ತಮ್ಮ ಅಳಿಲು ಸೇವೆಯನ್ನು ಸಂಸ್ಥೆಗಾಗಿ ಸಲ್ಲಿಸುತ್ತಿದ್ದಾರೆ. ವೆಂಕಟರಾಮಯ್ಯನವರ ನಿವೃತ್ತಿಯ ನಂತರ ಪೂರ್ಣಪ್ರಮಾಣದಲ್ಲಿ ಅಧಿಕಾರ ವಹಿಸಿಕೊಂಡು ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದ ಶ್ರೀ ಕೃಬಾನಂದನ್ ಅವರು ಒಬ್ಬ ಶಿಕ್ಷಕನಾಗಿ ವೃತ್ತಿಯನ್ನು ಆರಂಭಿಸಿ ಪ್ರಾಂಶುಪಾಲರಾಗಿ ಅನಂತರ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಸ್ಥೆಯು ಸಾಕಷ್ಟು ಪುರೋಭಿವೃದ್ಧಿ ಹೊಂದಲು ಅಧ್ಯಕ್ಷರಾದ ಶ್ರೀ ಪಿ ವಿ ಮನೋಹರ್ ಅವರ ಮಾರ್ಗದರ್ಶನ ಮುಖ್ಯವಾದುದು.



ಡಾ|| ಎಸ್. ಎ. ಕೃಬಾನಂದನ್
ಕಾರ್ಯದರ್ಶಿ

ಈ ಶಿಕ್ಷಣ ಸಂಸ್ಥೆ ನಿಧಾನವಾಗಿ ಪ್ರವರ್ಧಮಾನಕ್ಕೆ ಬಂದಿತು ಎನ್ನುವ ಸಂದರ್ಭದಲ್ಲಿಇನ್ನೊಂದು ಮೈಲಿಗಲ್ಲಂತೆ 1997 ರಲ್ಲಿ ಪದವಿ ಪೂರ್ವ ಕಾಲೇಜನ್ನು ವಿಜ್ಞಾನ ಮತ್ತು ವಾಣಿಜ್ಯ ಸಂಯೋಜನೆಯೊಂದಿಗೆ ಪ್ರಾರಂಭಿಸಲಾಯಿತು. ಅದಕ್ಕೆಂದೇ ಹಳೆಯ ಕಟ್ಟಡಕ್ಕೆ ಹೊಂದಿಕೊಂಡಂತೆ ಹೊಸದಾದ ಭವ್ಯವಾದ ಕಟ್ಟಡವನ್ನು ನಿರ್ಮಿಸಲಾಯಿತು. ಇದು ನನ್ನ ಆಡಳಿತಾವಧಿಯ ಸಂದರ್ಭದಲ್ಲೇ ಆದದ್ದು ಎನ್ನುವುದು ವಿಶೇಷ. ವಿಜ್ಞಾನ ವಿದ್ಯಾರ್ಥಿಗಳಿಗೆ ವಿಶಾಲವಾದ ಲ್ಯಾಬೋರೇಟರಿಗಳು ಹಾಗೂ ಗ್ರಂಥ ಭಂಡಾರ



ಶ್ರೀ ವಿ.ಪಿ. ಮನೋಹರ್
ಅಧ್ಯಕ್ಷರು



ಈ ಕಟ್ಟಡದ ವಿಶೇಷ. ನಮ್ಮ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ವೈದ್ಯರಾಗಿದ್ದಾರೆ, ಇಂಜಿನಿಯರ್ಗಳಾಗಿದ್ದಾರೆ, ಕೈಗಾರಿಕೋದ್ಯಮಿಗಳಾಗಿದ್ದಾರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ. ಹ್ಯಾರಿಸ್ ಅವರು ನಮ್ಮ ಸಂಸ್ಥೆಯ ವಿದ್ಯಾರ್ಥಿ ಎಂಬುದು ನಮ್ಮ ಹೆಮ್ಮೆ ಮತ್ತು ಸಂತೋಷ.


2018 ರ ಹತ್ತನೆಯ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕಗಳನ್ನು ಇಡೀ ರಾಜ್ಯಕ್ಕೆ ಮೊದಲ ಶ್ರೇಣಿ ಗಳಿಸಿದ್ದು ನಮ್ಮೆಲ್ಲರ ಸಂತೋಷವನ್ನು ಇಮ್ಮಡಿಗೊಳಿಸಿದ್ದು ವಿಶೇಷ.

॥ विद्ययाऽमृतमश्नुते ॥

ಶ್ರೀ ರಾಜೇಶ್ವರಿ ವಿದ್ಯಾಶಾಲಾ

ಕೆಂಚೇನಹಳ್ಳಿ, ರಾಜರಾಜೇಶ್ವರಿನಗರ,
ಬೆಂಗಳೂರು – 560 098

ಸುಮಾರು ಐವತ್ತು ವರ್ಷಗಳ ಹಿಂದಿನ ಮಾತು. ಮೈಸೂರು ರಸ್ತೆಗೆ ಸನಿಹದಲ್ಲಿದ್ದ ಕೆಂಚೇನಹಳ್ಳಿ ಒಂದು ಪುಟ್ಟ ಹಳ್ಳಿಯಾಗಿತ್ತು. ಎಲ್ಲಾ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿದ್ದ ಈ ಗ್ರಾಮದ ಮಕ್ಕಳಿಗೆ ವಿದ್ಯಾಭ್ಯಾಸ ಒಂದು ಗಗನಕುಸುಮವಾಗಿತ್ತು. ಇಂದು ಮೈಸೂರು – ಬೆಂಗಳೂರು ಹೆದ್ದಾರಿಯಲ್ಲಿ ಸಂಚರಿಸುವ ಎಲ್ಲರ ಕಣ್ಮನಗಳನ್ನು ಶ್ರೀ ರಾಜರಾಜೇಶ್ವರಿನಗರದ ಸುಂದರ ಹೆಬ್ಬಾಗಿಲು ಸೆಳೆಯುತ್ತಿದೆ. ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಶ್ರೀ ರಾಜರಾಜೇಶ್ವರಿನಗರದ ಹೆಸರು ಮತ್ತು ಪ್ರಸಿದ್ಧ ಹಿನ್ನಲೆಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ತಿರುಚ್ಚಿ ಸ್ವಾಮಿಗಳವರ ಕೊಡುಗೆ ಅಪಾರ.




ಪರಮಪೂಜ್ಯ ಶ್ರೀ ಶಿವಪುರಿ ಬಾಬಾ ಅವರ ಪರಮಭಕ್ತರು, ಅನುಯಾಯಿಗಳೂ ಆದ ವಿದೇಹ ಕೈವಲ್ಯಮುಕ್ತ ಬ್ರಹ್ಮಲೀನ ಪರಮಪೂಜ್ಯ ಪರಿವ್ರಾಜಕಾಚಾರ್ಯ ಶ್ರೀಮತ್ ಪರಮಹಂಸ ಸಚ್ಚಿದಾನಂದ ಪ್ರಣವ ಸ್ವರೂಪ

ಪರಮಾಚಾರ್ಯ ಜಗದ್ಗುರು ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿಗಳವರು ಕೆಂಚೇನಹಳ್ಳಿ ಕೈಲಾಸಾಶ್ರಮ ಮಹಾಸಂಸ್ಥಾನಕ್ಕೆ 1959 ರಂದು ಮಠಾಧಿಪತಿಗಳಾಗಿ ಪಾದಾರ್ಪಣೆ ಮಾಡಿದರು. ಆಶ್ರಮ, ದೇವಾಲಯಗಳ ಅಭಿವೃದ್ಧಿಯ ಜೊತೆ ಜೊತೆ ಸಾಮಾಜಿಕ ಹಾಗೂ ಶೈಕ್ಷಣಿಕ ಕಳಕಳಿಯಿಂದ ಗ್ರಾಮಾಂತರ ಪ್ರದೇಶದ ಬಡ, ಮಧ್ಯಮ ವರ್ಗದ ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸುವ ಆಲೋಚನೆ ಮಾಡಿದರು. ಅದಕ್ಕಾಗಿ ಶ್ರೀ ರಾಜೇಶ್ವರಿ ವಿದ್ಯಾ ಶಾಲೆ ಟ್ರಸ್ಟ್ ಅನ್ನು ಪ್ರಾರಂಭಿಸಿದರು. ಪರಮಪೂಜ್ಯರ ಈ ಸತ್ಕಾರ್ಯದಲ್ಲಿ ಶ್ರೀ ಎಂ.ಚಿನ್ನಸ್ವಾಮಿ, ಶ್ರೀ ವಿ. ಶಂಕರಪ್ಪ ಟ್ರಸ್ಟಿಗಳಾಗಿ ಸ್ವಾಮೀಜಿಯವರ ಆಜ್ಞಾನುವರ್ತಿಯಾದರು.

ಅರವತ್ತರ ದಶಕದಲ್ಲಿ ಈ ಪುಟ್ಟ ಗ್ರಾಮ ಮತ್ತು ಅಕ್ಕಪಕ್ಕದ ಹಳ್ಳಿಗಳ ಮಕ್ಕಳು ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕೂ ದೂರ ಪ್ರದೇಶಗಳಿಗೆ ಹೋಗಬೇಕಾದ ಪರಿಸ್ಥಿತಿ ಇತ್ತು. ಸಂಚಾರ ಸೌಲಭ್ಯಗಳ ಕೊರತೆಯಿಂದಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲುವ ಸಂಭವವಿತ್ತು. ಇಂಥ ಸನ್ನಿವೇಶದಲ್ಲಿ ಪರಮಪೂಜ್ಯ ಸ್ವಾಮೀಜಿಯವರ ದೂರದೃಷ್ಟಿ ಮತ್ತು ಕೃಪಾಶೀರ್ವಾದದಿಂದ ಶ್ರೀ ರಾಜೇಶ್ವರಿ ವಿದ್ಯಾಶಾಲಾ 1965 ರಲ್ಲಿ ಸ್ಥಾಪನೆಯಾಯಿತು. ಸಾವಿರಾರು ವಿದ್ಯಾರ್ಥಿಗಳು ಇಂದು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಯಿಂದ ಪ್ರಾರಂಭವಾದ ಈ ಸಂಸ್ಥೆ ಪ್ರೌಢಶಾಲೆಯಾಗಿ ಬೆಳೆದು ಗುರುಕುಲ ಸದೃಶ ವಾತಾವರಣ, ಸುಂದರವಾದ ಶಾಲಾ ಕಟ್ಟಡ, ವಿಶಾಲವಾದ ಆಟದ ಮೈದಾನ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಈ ಶಾಲೆಯು ಬಡ ಮತ್ತು ಮಧ್ಯಮ ವರ್ಗದ ಪೋಷಕ ಮಕ್ಕಳಿಗೆ ಆಧುನಿಕ ಶಿಕ್ಷಣವನ್ನು ನೀಡುತ್ತಾ ಜನಪ್ರಿಯವಾಗಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹಲವಾರು ವಿದ್ಯಾರ್ಥಿಗಳು ವಿವಿಧ ರಂಗಗಳಲ್ಲಿ ಯಶಸ್ವಿಯಾಗಿದ್ದಾರೆ. ಶಿಕ್ಷಣ, ರಾಜಕೀಯ, ವ್ಯಾಪಾರ, ಕಟ್ಟಡ, ಗೃಹ ನಿರ್ಮಾಣ, ಆಡಳಿತ ಸೇವೆ, ನ್ಯಾಯಾಂಗ ಕೃಷಿ, ತೋಟಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ನಮ್ಮ ವಿದ್ಯಾರ್ಥಿಗಳು ಸಾಧನೆ ಮೆರೆದಿದ್ದಾರೆ.

ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿಗಳು 14 ಜನವರಿ 2005 ರಂದು ಮಹಾಸಮಾಧಿಯಾದಾಗ ಅವರ ಉತ್ತರಾಧಿಕಾರಿಗಳಾಗಿ ಮಹಾ ಮಂಡಲೇಶ್ವರ



ಜಗದ್ಗುರು ಶ್ರೀ ಶ್ರೀ ಶ್ರೀ ಜಯೇಂದ್ರಪುರಿ ಮಹಾ ಸ್ವಾಮಿಗಳು ಕೈಲಾಸೇಶ್ವರ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದರು. ಶ್ರೀ ಶ್ರೀ ಶ್ರೀ ಜಯೇಂದ್ರಪುರಿ ಮಹಾ ಸ್ವಾಮಿಗಳು ಶ್ರೀ ತಿರುಚ್ಚಿ ಮಹಾಸ್ವಾಮಿಗಳನ್ನು 1986 ರಲ್ಲಿ ಮೊದಲ ಬಾರಿಗೆ ದರ್ಶನ ಮಾಡಿ ಅವರ ಶಿಷ್ಯತ್ವವನ್ನು ಪಡೆಯುತ್ತಾರೆ. ಅಲ್ಲಿಂದ ಹರಿದ್ವಾರದಲ್ಲಿ ಆರು ವರ್ಷಗಳ ವಿದ್ಯಾಭ್ಯಾಸ ಪೂರೈಸಿ, ಉಜ್ಜೈನಿ, ಕಾಶಿ ಮತ್ತಿತರ ಉತ್ತರ ಭಾರತದ ಸ್ಥಳಗಳನ್ನು ಸಂದರ್ಶಿಸಿ 1994 ರಲ್ಲಿ ಬೆಂಗಳೂರಿಗೆ ವಾಪಸಾಗುತ್ತಾರೆ. ತಿರುಚ್ಚಿ ಮಹಾಸ್ವಾಮಿಗಳು 2003 ರಲ್ಲಿ ತಮ್ಮ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸುತ್ತಾರೆ. ತಿರುಚ್ಚಿ ಸ್ವಾಮಿಗಳು ಮಹಾಸಮಾಧಿಯಾದ ನಂತರ 2005 ರಲ್ಲಿ ಪೀಠಾಧ್ಯಕ್ಷರಾಗಿ ಗುರುಗಳ ಮಾರ್ಗದಲ್ಲಿಯೇ ಮಹಾಸಂಸ್ಥಾನವನ್ನು ಮುನ್ನಡೆಸುತ್ತಿದ್ದಾರೆ.

ಆಶ್ರಮದ ಪೀಠಾಧಿಪತಿಗಳು ಮಹಾ ಮಂಡಲೇಶ್ವರ ಜಗದ್ಗುರು ಶ್ರೀ ಶ್ರೀ ಶ್ರೀ ಜಯೇಂದ್ರಪುರಿ ಮಹಾ ಸ್ವಾಮಿಗಳು ಅಧ್ಯಕ್ಷರಾಗಿದ್ದು, ಡಾ. ಟಿ. ಆರ್ ಮೋಹನ್ ಅವರು ಕಾರ್ಯದರ್ಶಿಗಳಾಗಿದ್ದಾರೆ. ಶ್ರೀಯುತ ಡಾ. ಟಿ.ಆರ್. ಮೋಹನ್ ತಮ್ಮ ವೈದ್ಯಕೀಯ ಶಿಕ್ಷಣ ಪೂರೈಸಿ 1970 ರಲ್ಲಿ ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲಿ ಸುನೀತಾ ಕ್ಲಿನಿಕ್ ಆರಂಭಿಸಿದರು. ಮಾನವ ಸೇವೆಯೇ ಈಶ ಸೇವೆ ಎಂಬ ವಿವೇಕಾನಂದರ ವಾಣಿಯೇ ಇವರಿಗೆ ಸ್ಫೂರ್ತಿ. ಹೀಗಾಗಿ ತಮ್ಮ ಬಳಿ ಬರುವ ರೋಗಿಗಳಿಂದ ಅತ್ಯಲ್ಪ ಹಣವನ್ನು ಪಡೆಯುತಿದ್ದರು. ಬಾಲ್ಯದಲ್ಲಿಯೇ ರಾಮಕೃಷ್ಣಾಶ್ರಮದ ಸಂಪರ್ಕವಿದ್ದು ವಿವೇಕಾನಂದರ ಅಮೂಲಾಗ್ರ ಪರಿಚಯವಾಗಿತ್ತು ಮಾನವ ಸೇವೆ ಮತ್ತು ವ್ಯಕ್ತಿತ್ವ ನಿರ್ಮಾಣದ ಗುರಿ ಹೊಂದಿ ಹಲವು ಗೆಳೆಯರ ಜೊತೆ ಸೇರಿ



ಡಾ. ಟಿ.ಆರ್. ಮೋಹನ್

ಹೊಸಕೆರೆಹಳ್ಳಿ ವೀರಭದ್ರ ದೇವಸ್ಥಾನದ ಗುಡ್ಡೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಅದರ ಸುತ್ತಲೂ ಕಲ್ಲು ಬಂಡೆ ಒಡೆಯುವ ಕೆಲಸವನ್ನೂ ಮಾಡುವ ಕುಟುಂಬಗಳ ಜೋಪಡಿಗಳು. ವಾರಕ್ಕೊಮ್ಮೆ ಅವರ ಆರೋಗ್ಯ ತಪಾಸಣೆ ಮಾಡುವುದರ ಜೊತೆ ತರಕಾರಿ, ಸಾಬೂನು, ಹಲ್ಲುಪುಡಿ ಪೊಟ್ಟಣ ಇತ್ಯಾದಿಗಳನ್ನು ವಿತರಿಸುತ್ತ ಬಂದರು. ಗೆಳೆಯರ ಶ್ರಮದಾನದ ಫಲ ಗುಡ್ಡದ ಮೇಲಿನ ದೇವಾಲಯ ತಲುಪಲು ಮೆಟ್ಟಿಲುಗಳು ನಿರ್ಮಾಣವಾದವು.

ಶ್ರೀ ರಾಮಕೃಷ್ಣ ವಿವೇಕಾನಂದರ ಸಂದೇಶಗಳನ್ನು ಸುತ್ತಮುತ್ತಲ ಶಾಲೆ ಮಕ್ಕಳಿಗೆ ತಿಳಿಯುವಂತೆ ಸಣ್ಣ ಸಣ್ಣ ಪುಸ್ತಕಗಳನ್ನು ವಿತರಿಸಿ ಪ್ರಬಂಧ ಬರೆದು ಬಹುಮಾನ ನೀಡುವ ಕಾರ್ಯಕ್ರಮ ಪ್ರಾರಂಭಿಸಿದರು. ತಮ್ಮ ಗೆಳೆಯರೊಡನೆ ಪ್ರತಿ ಭಾನುವಾರ ರಾಮಕೃಷ್ಣ ಆಶ್ರಮದ ಸಂಜೆಯ ಭಜನೆ ಹಾಗೂ ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳ ತೊಡಗಿದರು.ಆಶ್ರಮದ ವಿವೇಕಾನಂದ ಬಾಲಕ ಸಂಘದಂತೆ ಮೈಸೂರು ರಸ್ತೆ ವ್ಯಾಪ್ತಿಯಲ್ಲೂ ಒಂದು ಬಾಡಿಗೆ ಮನೆಯಲ್ಲಿ ಪುಟ್ಟದಾಗಿ ಬಾಲಕ ಸಂಘವನ್ನು ಆರಂಭಿಸಿ ವಿದ್ಯಾರ್ಥಿಗಳು ಉಚಿತವಾಗಿ ಸಂಗೀತ ಕಲಿಯಲು ಸಹಾಯ ಮಾಡಿದರು. ಹೀಗೆ ಸಮಾಜ ಸೇವೆ, ಸಂಗೀತಾಭ್ಯಾಸ, ಸಾಹಿತ್ಯ ಪ್ರಚಾರ, ಶ್ರಮದಾನ, ಉಚಿತ ವೈದ್ಯಕೀಯ ಸುತ್ತುಮುತ್ತಲ ಹಳ್ಳಿಗಳಿಗೂ ವಿಸ್ತಾರವಾಗಿದೆ. ವೀರಣ್ಣನ ಗುಡ್ಡೆಯಲ್ಲಿ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪ್ರಾರಂಭವಾಯಿತು. 1970 ರಲ್ಲಿ ಅತ್ಯಂತ ದುರ್ಗಮವಾದ ಸ್ಥಳದಂತಿದ್ದ ವೀರಣ್ಣಗುಡ್ಡೆಯಲ್ಲಿ ಇಂದು ನೂರಾರು ಮಂದಿ ಒಟ್ಟಿಗೆ ಸೇರಿ ಭಜನಾ ಕಾರ್ಯಕ್ರಮ ಮಾಡುವ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿದೆ. ಇದರ ಜೊತೆಗೆ ರಾಜೇಶ್ವರಿ ವಿದ್ಯಾಶಾಲೆಯ ಅಭಿವೃದ್ಧಿಯೂ ಆಗ ತೊಡಗಿದೆ.

ಹೀಗೆ ಬೆಳೆಯುತ್ತಾ ಶ್ರೀ ರಾಜೇಶ್ವರಿ ವಿದ್ಯಾಶಾಲೆಯು ತನ್ನ ಸುವರ್ಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ 2017 ಜನವರಿ ತಿಂಗಳಲ್ಲಿ ಏಳು ದಿವಸಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡಿದೆ. ಶ್ರೀಯುತ ಗೋಪಾಲನ್ ಅವರು ರಾಜೇಶ್ವರಿ ವಿದ್ಯಾ ಶಾಲೆಗೆ ಸಹ ಉಪಾಧ್ಯಾಯರಾಗಿ ಪಾದಾರ್ಪಣೆ ಮಾಡಿದರು. ನಂತರ ಮುಖ್ಯೋಪಾಧ್ಯಾಯರಾಗಿ ಬಡ್ತಿ ಹೊಂದಿ ನಿವೃತ್ತರಾದ ಮೇಲೂ ಆಡಳಿತಾಧಿಕಾರಿಗಳಾಗಿ ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ವಿದ್ಯಾಭ್ಯಾಸ ಮಾಡಿದ ಹಲವಾರು ವಿದ್ಯಾರ್ಥಿಗಳು ಸಮಾಜಮುಖಿ ಕ್ಷೇತ್ರಗಳಲ್ಲಿ ತಮ್ಮದೇ ಆದ ಕಾರ್ಯಕ್ರಮಗಳೊಂದಿಗೆ ಶಾಲೆಯ



ಮೇಲಿನ ಅಭಿಮಾನದಿಂದ ಹಿರಿಯ ವಿದ್ಯಾರ್ಥಿಗಳು ಸಂಘ "ಸೌರಭ" ಸ್ಥಾಪಿಸಿ ಶಾಲೆಯ ಮೂಲಸೌಕರ್ಯ ಅಭಿವೃದ್ಧಿಗೆ ತುಂಬಾ ಸಹಕಾರಿಯಾಗಿದ್ದಾರೆ.

ಶ್ರೀ ರಾಜೇಶ್ವರಿ ವಿದ್ಯಾ ಶಾಲಾ ಅಡಿಯಲ್ಲಿ ನಡೆಯುತ್ತಿರುವ ಸಂಸ್ಥೆಗಳು:

ರಾಜೇಶ್ವರಿ ವಿದ್ಯಾ ಶಾಲಾ – ಗೋಣಿಕೊಪ್ಪ

ರಾಜೇಶ್ವರಿ ವಿದ್ಯಾನಿಕೇತನ – ಹುಲ್ಕೋಟಿ (ಗದಗ)

ಜ್ಞಾನಾಕ್ಷಿ ವಿದ್ಯಾನಿಕೇತನ – ರಾಜರಾಜೇಶ್ವರಿನಗರ

ಶಾರದಾಂಬಾ ವಿದ್ಯಾನಿಕೇತನ – ಗುಂಡ್ಲುಕೊತ್ತೂರು

ಶ್ರೀ ವಾಣಿ ಬಾಲಕಿಯರ ಪ್ರೌಢ ಶಾಲೆ

449, 3ನೇ ಅಡ್ಡರಸ್ತೆ, 2ನೇ ಹಂತ, ರಾಜಾಜಿನಗರ,
ಬೆಂಗಳೂರು – 560 010



ಶ್ರೀಯುತ ಕೆ. ಬಿ. ವೆಂಕಟೇಶ್
ಸಂಸ್ಥಾಪಕ ಕಾರ್ಯದರ್ಶಿ

ವಿದ್ಯಯಾ ಅಮೃತಮಶ್ನುತೇ

ರಾಜಾಜಿನಗರದ 1ನೇ ಎನ್ ಬ್ಲಾಕಿನ ಶ್ರೀ ವಾಣಿ ಬಾಲಕಿಯರ ಪ್ರೌಢಶಾಲೆಯನ್ನು ಪ್ರಾರಂಭಿಸಿದವರು ಶ್ರೀಯುತ ಕೆ.ಬಿ ವೆಂಕಟೇಶ್ ಅವರು. ಶ್ರೀಯುತ ಕೆ.ಬಿ.ವೆಂಕಟೇಶ್ ರವರು ರಾಜಾಜಿನಗರದಲ್ಲಿ ಅತ್ಯಂತ ಜನಾನುರಾಗಿಗಳಾಗಿ ಸಮಾಜಸೇವೆ ಮಾಡುತ್ತಾ ನಿರಂತರ ಎಲ್ಲರ ಸಂಪರ್ಕವನ್ನು ಹೊಂದಿದ್ದವರು. "ಜನರ ಸೇವೆಯೇ ಜನಾರ್ದನ ಸೇವೆ" ಎಂದು ಕಾರ್ಪೊರೇಟರ್ ಆಗಿ ಜನರ ಏಳಿಗೆಗಾಗಿ ನಿರಂತರವಾಗಿ ಶ್ರಮಿಸಿದವರು. ಸಮಾಜ ಸೇವೆಯ ಜೊತೆಜೊತೆ ವಿದ್ಯಾ ಕ್ಷೇತ್ರದಲ್ಲಿ ಆಸಕ್ತಿಯನ್ನು ಹೊಂದಿದ್ದು ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆಂದೇ ಕರ್ನಾಟಕ ವಿದ್ಯಾಪೀಠ ಎಂಬ ಶಿಕ್ಷಣ ಸಂಸ್ಥೆಯನ್ನು

ಸ್ಥಾಪಿಸಿದರು. ಶ್ರೀಯುತರು "ಸಮಾಜ ಸೇವಾರತ್ನ" ಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಇಂತಹ ಧೀಮಂತರು ತಮ್ಮೊಡನೆ ನಿವೃತ್ತ ಡಿ.ಪಿ.ಐ ಹಾಗೂ ಶಿಕ್ಷಣ ತಜ್ಞರಾಗಿದ್ದ ಶ್ರೀ.ಜೆ.ಎಂ.ಟಿ. ರಾಜನ್ ಅವರನ್ನು ಅಧ್ಯಕ್ಷರನ್ನಾಗಿ ಹಾಗೂ ನಿವೃತ್ತ ಮುಖ್ಯ ಇಂಜಿನಿಯರ್ ಆದ ಶ್ರೀ.ಸಿ.ಭೈರಪ್ಪನವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿಕೊಂಡು ಶ್ರೀ ವಾಣಿ ಬಾಲಕಿಯರ ಪ್ರೌಢಶಾಲೆಯ ಕೀರ್ತಿಯನ್ನು ಬೆಳಗುವಲ್ಲಿ ಪ್ರಮುಖ ಪಾತ್ರ ವಹಿಸಿದರು.

1966ರಲ್ಲಿ ಪ್ರಾರಂಭವಾಗಿದ್ದ ಶ್ರೀವಾಣಿ ಬಾಲಕಿಯರ ಪ್ರೌಢಶಾಲೆಯನ್ನು 1974ರಲ್ಲಿ ತಮ್ಮ ದಕ್ಷತೆಯ ಆಡಳಿತಕ್ಕೆ ಒಳಪಡಿಸಿಕೊಂಡು ಬಾಲಕಿಯರ ವಿದ್ಯಾಭ್ಯಾಸದಲ್ಲಿ ಶಿಸ್ತು, ಸಂಯಮ ಮತ್ತು ಗೌರವವನ್ನು ಬೆಳೆಸಿ ರಾಜಾಜಿನಗರ ಬಡಾವಣೆಯ ಪ್ರತಿಷ್ಠಿತ ಶಾಲೆಯನ್ನಾಗಿ ಮಾಡಿದರು. ಶ್ರೀಯುತರು ಶ್ರೀವಾಣಿ ಬಾಲಕಿಯರ ಪ್ರೌಢಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಹುದ್ದೆಯನ್ನು ಅಲಂಕರಿಸಿ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನವನ್ನು ನೀಡಿದ್ದಲ್ಲದೇ ನಗರಸಭಾ ಸದಸ್ಯರೂ (ಕೌನ್ಸಿಲರ್)ಆಗಿ ತಮ್ಮ ಅನನ್ಯ ಸೇವೆಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅದರಂತೆ ಕಾಲಮಾನದೊಡನೆ ನಡೆದು ಬಂದ ನಿವೃತ್ತ ಮುಖ್ಯೋಪಾಧ್ಯಾಯಿನಿಯರುಗಳು ಶಿಕ್ಷಕವರ್ಗ ಹಾಗೂ ಸಿಬ್ಬಂದಿವರ್ಗ ನಮ್ಮ ಶಾಲೆಯ ಹೊಳಪಿನ ಛಾಪನ್ನು ಮಾಸದಂತೆ ಬೆಳಗಿಸಿದ್ದಾರೆ.

ಶಾಲೆಯ ಮೊದಲ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ. ಆರ್.ಎನ್.ಶಾಂತಾದೇವಿಯವರ ನೇತೃತ್ವದಲ್ಲಿ ಮಾದರಿ ಶಾಲೆಯಾಗಿ ಶಾಲೆ ಕಾರ್ಯ ನಿರ್ವಹಿಸಿ ಪ್ರಸ್ತುತ ಶ್ರೀಮತಿ. ಕವಿತ ಕೆ. ಆನಿಶೆಟ್ಟರ್ ರವರು ಶಾಲಾ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಕ್ಷ ಆಡಳಿತವನ್ನು ಹಿಂದಿನ ಪರಿಪಾಠದಂತೆ ಮುಂದುವರೆಸಿದ್ದಾರೆ.

ಶ್ರೀ. ಕೆ.ಬಿ.ವೆಂಕಟೇಶ್ ರವರ ನಂತರ ಅವರ ಸುಪುತ್ರಿಯಾದ ಶ್ರೀಮತಿ. ಲಕ್ಷ್ಮೀಮುನೇಗೌಡ ರವರು ಕಾರ್ಯದರ್ಶಿಯಾಗಿ ಹುದ್ದೆಯನ್ನು ಅಲಂಕರಿಸಿ ತಮ್ಮ ತಂದೆಯ ಕಾರ್ಯತತ್ಪರತೆಯನ್ನು ಮತ್ತಷ್ಟು ಉಜ್ವಲಗೊಳಿಸುತ್ತಿದ್ದಾರೆ.

ಖಜಾಂಚಿಗಳಾದ ಶ್ರೀಯುತ. ಎಂ. ಮುನೇಗೌಡರವರು, ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್, ಕ.ವಿ.ಪ್ರ.ನಿ. ಶೈಕ್ಷಣಿಕ ಆಡಳಿತಕ್ಕೆ

ಸಂಪೂರ್ಣ ಸಹಕಾರದ ಜ್ಯೋತಿಯನ್ನು ಹಚ್ಚಿ ಬೆಳಗಿಸುತ್ತಿದ್ದಾರೆ. ಶ್ರೀಯುತರು ಈ ಸಂಸ್ಥೆಗೆ ಖಜಾಂಚಿಗಳಾಗಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕರಾಗಿ ಶಿಕ್ಷಕರಿಗೆ ಮಾರ್ಗದರ್ಶಕರಾಗಿ ಅವಿರತವಾಗಿ ತಮ್ಮ ಅನನ್ಯವಾದ ಅನುಪಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಇವರೊಡನೆ ಹಿರಿಯ ನೇತಾರರಾಗಿರುವ, PWD ಯ ನಿವೃತ್ತ ಎಂಜಿನಿಯರ್ ಆಗಿರುವ ಶ್ರೀ. ಹೆಚ್. ರಾಮಯ್ಯನವರು ಅಧ್ಯಕ್ಷರಾಗಿ ಮತ್ತು ಶ್ರೀಮತಿ. ಶಾರದಮ್ಮ ಭೈರಪ್ಪನವರು ಉಪಾಧ್ಯಕ್ಷರಾಗಿ ಆಡಳಿತ ಮಂಡಳಿಯ ಚುಕ್ಕಾಣಿ ಹಿಡಿದಿದ್ದಾರೆ.

ಶಾಲೆಯು ಸತತವಾಗಿ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ದಾಖಲೆಯನ್ನು ಉಳಿಸಿಕೊಂಡು ಬರುತ್ತಿದೆ. ಬದಲಾದ ಶೈಕ್ಷಣಿಕ ಪದ್ಧತಿಗಳಾದ Trimester, Semester ಮತ್ತು ವಾರ್ಷಿಕ ಪರೀಕ್ಷೆ, ಕಲಿಕಾ ಚೇತರಿಕೆ ಮತ್ತು CCE ವಿಧಾನಗಳಿಗೆ ಅನುಗುಣವಾಗಿ ಶಿಕ್ಷಕರು ತರಬೇತಿ ಪಡೆದು, ಅತ್ಯುತ್ಸಾಹದಿಂದ ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರು, ಮುಖ್ಯೋಪಾಧ್ಯಾಯಿನಿಯವರ ಸೂಚನೆಗಳಂತೆ ಉತ್ತಮ ಶಿಕ್ಷಣ ಕಾರ್ಯ ನಡೆಸುತ್ತಿದ್ದಾರೆ.

ಶಿಕ್ಷಕವರ್ಗವು ಉತ್ತಮ ವಿದ್ಯಾರ್ಹತೆ ಹೊಂದಿದ್ದು ಪರಿಣತಿಯನ್ನು ಪಡೆದಿರುತ್ತಾರೆ ಹಾಗೂ ವಿದ್ಯಾರ್ಥಿಗಳ ಏಳಿಗೆಗಾಗಿ ಪರಿಶ್ರಮಿಸುತ್ತಿದ್ದಾರೆ. ಈ ಎಲ್ಲಾ ಕಾರ್ಯಗಳಿಗೂ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದದವರ ಪ್ರೇರಕ ಶಕ್ತಿಯಾಗಿ ನಿಂತಿರುವ ಮುಖ್ಯೋಪಾಧ್ಯಾಯಿನಿಯವರು ಶಾಲೆಯ ಅಭಿವೃದ್ಧಿಗೆ ಅವಿರತವಾಗಿ ದುಡಿಯುತ್ತಿದ್ದಾರೆ. ಅವರ ಮಾರ್ಗದರ್ಶನವು ಶಿಕ್ಷಕರಲ್ಲಿ ಹುರುಪನ್ನು ಮಕ್ಕಳಲ್ಲಿ ಉತ್ತೇಜನವನ್ನುಂಟು ಮಾಡುತ್ತಿದೆ.

ನಮ್ಮ ಶಾಲೆಯು ಶಿಕ್ಷಣ ಚಟುವಟಿಕೆ ಮಾತ್ರವಲ್ಲದೇ, ಸಹಪಠ್ಯ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ನಮ್ಮ ಶಾಲೆಯ ವಿದ್ಯಾರ್ಥಿನಿ ಕು.ಹರ್ಷಿತಾ ಅಂತರರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ ಭಾಗವಹಿಸಿ ದೇಶಕ್ಕೆ ಕೀರ್ತಿ ತರುವಲ್ಲಿ ಆಡಳಿತ ಮಂಡಳಿ ಮತ್ತು ಶಾಲೆಯ ಸಹಕಾರ ಬಹಳ ಪ್ರಮುಖವಾಗಿದೆ ಹಾಗೂ ಟೆಕ್ವಾಂಡೋದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದು ಶಾಲೆಯ ಮತ್ತು ದೇಶದ ಕೀರ್ತಿಯ ಮುಕುಟಕ್ಕೆ ಸಾಧನೆಯ ಗರಿ



ಕಟ್ಟಿದ್ದಾರೆ. ಶಾಸ್ತ್ರೀಯ ನೃತ್ಯ ಪ್ರದರ್ಶಕಳಾಗಿ ಕು॥ ಸುಷ್ಮ ಶ್ರೀನಿವಾಸ್ ಯೂರೋಪಿನ ಕೆಲವು ದೇಶಗಳಿಗೆ ಭೇಟಿ ನೀಡಿ ನಮ್ಮ ಸಂಸ್ಕೃತಿಯ ರಾಯಭಾರಿಯಾಗಿದ್ದಾಳೆ.

ನಮ್ಮ ಶಾಲೆಯು ಸುಮಾರು 45 ವರ್ಷಗಳಿಂದಲೂ ಸಾರ್ವಜನಿಕ ಶಿಕ್ಷಣ ಇಲಾಖೆಯು ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪರ್ಯಾಯ ವರ್ಷಗಳಲ್ಲಿ ಭುವನೇಶ್ವರಿಯ ಅಲಂಕಾರ ಮಾಡುತ್ತಾ ಹಿರಿಯರ ಹಾಗೂ ಇಲಾಖೆಯ ಅಭಿಮಾನದ ಶ್ಲಾಘನೆಯನ್ನು ಪಡೆಯುತ್ತಿದೆ. ಕಳೆದ ಎರಡು ಮೂರು ವರ್ಷಗಳಿಂದ ಕರ್ನಾಟಕ ಸರ್ಕಾರದ ವತಿಯಿಂದ ವಿಧಾನಸೌಧದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆಗೆ ವೇದಿಕೆ ಅಲಂಕಾರ ಮಾಡಿ ಇಲಾಖೆಯ ಮೆಚ್ಚುಗೆ ಪಡೆಯುವಲ್ಲಿ ಶಾಲೆಯ ಸೃಜನಾತ್ಮಕ ಶಿಕ್ಷಕರು ಯಶಸ್ವಿಯಾಗಿದ್ದಾರೆ.

ಆಡಳಿತ ಮಂಡಳಿಯ ಮಾರ್ಗದರ್ಶನ ಮುಖ್ಯೋಪಾಧ್ಯಾಯಿನಿಯವರ ಕಾರ್ಯ ತತ್ಪರತೆ ಮತ್ತು ಶಿಕ್ಷಕರ ಪರಿಶ್ರಮ ಮತ್ತು ಸೇವಾ ಬದ್ಧತೆ ಶಾಲೆಯನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಹಂಬಲ ಮತ್ತು ತುಡಿತ ಶಾಲೆಯಲ್ಲಿ ಅನುರಣಿಸುತ್ತಿದೆ. ಕೀರ್ತಿಯ ಪತಾಕೆ ಮತ್ತಷ್ಟು ಎತ್ತರಕ್ಕೆ ಏರಲಿ ಎಂಬುದು ಶಾಲೆಯ ಆಶಯವಾಗಿದೆ.

ಸುದರ್ಶನ ವಿದ್ಯಾ ಮಂದಿರ ಸಂಸ್ಥೆ

1163, 26ನೇ ಎ ಮುಖ್ಯ ರಸ್ತೆ, 4ನೇ ಟಿ ಬ್ಲಾಕ್ ಪೂರ್ವ
ಜಯನಗರ, ಬೆಂಗಳೂರು – 560 041

ಬೆಂಗಳೂರಿನ ಜಯನಗರದಲ್ಲಿರುವ ಪ್ರತಿಷ್ಠಿತ ಶಾಲೆಯಾದ ಸುದರ್ಶನ ವಿದ್ಯಾ ಮಂದಿರ 1967ರಲ್ಲಿ ಪ್ರಾರಂಭವಾಯಿತು. ಶಾಲೆಯ ಸಂಸ್ಥಾಪಕರು ಶ್ರೀಯುತ ಕೆ. ವಿ ಅಶ್ವತ್ಥನಾರಾಯಣ ಮತ್ತು ಶ್ರೀಮತಿ ಲಲಿತಾ ಅಶ್ವತ್ಥನಾರಾಯಣ. ಇವರು ತಮ್ಮ ಅಪ್ರಾಪ್ತ ವಯಸ್ಸಿನ ಪುತ್ರ ಸುದರ್ಶನರ ಅಕಾಲಿಕ ಮರಣದಿಂದ ನೊಂದು, ಅವರ ನೆನಪಿನಲ್ಲಿ ಸುದರ್ಶನ ವಿದ್ಯಾ ಮಂದಿರವನ್ನು ಸ್ಥಾಪಿಸಿದರು. ಶ್ರೀಯುತ ಅಶ್ವತ್ಥನಾರಾಯಣ ರವರಿಗೆ ಸದಾ ಬೆನ್ನೆಲುಬಾಗಿ ಇದ್ದವರು ಶ್ರೀಮತಿ ಲಲಿತಾ ಅಶ್ವತ್ಥನಾರಾಯಣ ರವರು.



ಸ್ಥಾಪಕರು : ಶ್ರೀ ಕೆ. ವಿ ಅಶ್ವತ್ಥನಾರಾಯಣ
ಶ್ರೀಮತಿ. ಲಲಿತಾ ಅಶ್ವತ್ಥನಾರಾಯಣ

ಆದರ್ಶ ದಂಪತಿಗಳಾದ ಇವರು ಆರ್ಥಿಕ ಸಂಕಷ್ಟದಲ್ಲಿದ್ಧರೂ ತಮ್ಮ ಧ್ಯೇಯವನ್ನು ಬಿಡದೆ ತಮಗೆ ದೊರೆತ ಚಿಕ್ಕ ಸ್ಥಳದಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಸಿದರು. ಮೊದಲು ಆರ್ಥಿಕ ಸಮಸ್ಯೆ ಎದುರಾದಾಗ ಲಲಿತಾ ಅಶ್ವತ್ಥನಾರಾಯಣ ರವರು ತಮ್ಮ ಪತಿಯೊಂದಿಗೆ ಸಮಾಲೋಚಿಸಿ, ಸಂಯಮದಿಂದ, ಧೈರ್ಯದಿಂದ ಅದನ್ನು ಸಮರ್ಥವಾಗಿ ನಿರ್ವಹಿಸುವ ಶಕ್ತಿಯನ್ನು ಪತಿಗೆ ನೀಡುತ್ತಿದ್ದರು. ಹಸನ್ಮುಖಿಯಾಗಿ ಮೌನದಿಂದ ಎಲೆ ಮರೆಯ ಕಾಯಿಯಂತೆ ಪತಿಯ ಕೆಲಸಕ್ಕೆ ನೆರವಾಗುತ್ತಿದ್ದರು.

ಪ್ರಾಥಮಿಕ ಶಾಲೆಯು ಪ್ರಾರಂಭವಾದಾಗ ಕೆಲವೇ ವಿದ್ಯಾರ್ಥಿ ಹಾಗೂ ಸಿಬ್ಬಂದಿಯನ್ನು ಹೊಂದಿದ್ದ ಶಾಲೆಯನ್ನು ಪ್ರತಿಷ್ಠಿತ ಶಾಲೆಯನ್ನಾಗಿ ಮಾಡಲು ತಮ್ಮ ತನು-ಮನ-ಧನವನ್ನು ಅರ್ಪಿಸಿ ಶಾಲೆಯ ಅಭಿವೃದ್ದಿಗೆ ಶ್ರಮವಹಿಸಿದವರು ಮತ್ತು ಗಾಂಧಿವಾದಿಯಾಗಿ ಸಮಯಪಾಲನೆಗೆ, ಶಿಸ್ತಿಗೆ ಬಹಳ ಮಹತ್ವವನ್ನು ಕೊಟ್ಟವರು, ಶಿಕ್ಷಕನಾಗಿ ಮಕ್ಕಳಿಗೆ ಸರಿಯಾದ ಮಾರ್ಗದರ್ಶನವನ್ನು ಕೊಟ್ಟವರು ಮತ್ತು ದೇಶಾದ್ಯಂತ ಹಿಂದಿ ಭಾಷಾ ಪ್ರಚಾರಕರಾಗಿ ಎಲ್ಲಾ ಕ್ಷೇತ್ರಗಳಲ್ಲೂ



ದುಡಿದವರು ಶ್ರೀಯುತ ಅಶ್ವತ್ಥನಾರಾಯಣ ರವರು. ಈ ಎಲ್ಲ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡಿರುವ ಶ್ರೀಮತಿ ಹೇಮಾ ನಾರಾಯಣ್ ರವರು ತಂದೆಯ ಮಾರ್ಗದರ್ಶನದಂತೆ ನಡೆದು ರಾಜ್ಯ ಪಠ್ಯಕ್ರಮದ ಜೊತೆಗೆ, ಪಿ.ಯು ಕಾಲೇಜು, ಐ.ಸಿ.ಎಸ್.ಇ ಮತ್ತು ಸಿ.ಬಿ.ಎಸ್.ಇ ಪಠ್ಯಕ್ರಮದ ಶಿಕ್ಷಣವನ್ನು ಶಾಲೆಯಲ್ಲಿಅಳವಡಿಸಿದರು.

ಸುದರ್ಶನ ವಿದ್ಯಾ ಮಂದಿರವು 56 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಜ್ಞಾನವಾಹಿನಿಯಾಗಿ ನಿರಂತರವಾಗಿ ಮಕ್ಕಳನ್ನು ಜ್ಞಾನದ ಅಲೆಯಲ್ಲಿ ತೇಲಿಸುತ್ತಿರುವುದಕ್ಕೆ ಕಾರಣಕರ್ತರಾದ ಶ್ರೀಯುತ. ಅಶ್ವತ್ಥನಾರಾಯಣ, ಲಲಿತಾ ಅಶ್ವತ್ಥನಾರಾಯಣ, ಹೇಮಾ ನಾರಾಯಣ್ ಮತ್ತು ಆಡಳಿತ ಮಂಡಳಿಯವರ ಸೇವೆ ಶ್ಲಾಘನೀಯ.

ಕಾರ್ಮೆಲ್ ಸಂಸ್ಥೆಗಳು

4 ನೇ ಮುಖ್ಯ ರಸ್ತೆ, ನ್ಯಾಯಾಂಗ ಕಾಲೋನಿ, 3 ನೇ ಹಂತ,
ಬಸವೇಶ್ವರ ನಗರ, ಬೆಂಗಳೂರು–560 079

ಸಂಸ್ಥೆಯ ಸಂಸ್ಥಾಪಕರಾದ ದಿವಂಗತ ಅಲೆಕ್ಸಾಂಡರ್ ಮೆನೇಜಸ್ ಪರೋಪಕಾರಿ ಸ್ವಭಾವ, ಸಹನಶೀಲ ಹಾಗೂ ಉದಾರ ಮನೋಭಾವದ ವ್ಯಕ್ತಿತ್ವದವರು. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಬೆಳವಣಿಗೆಯೊಂದಿಗೆ ವೈಯಕ್ತಿಕವಾದ ಪ್ರಗತಿಯನ್ನು ಸಾಧಿಸುವಲ್ಲಿ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸುವುದು ಅವರ ಕನಸಾಗಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಕಂಡ ಕನಸನ್ನು ನನಸಾಗಿಸುವಲ್ಲಿ ಯಶಸ್ಸನ್ನು ಕಂಡವರು ಸಹಧರ್ಮಿಣಿ – ಶ್ರೀಮತಿ ಡೊರೊಥಿ ಮೆನೇಜಸ್. ಈ ಕಾರ್ಯದಲ್ಲಿ ಕೈ ಜೋಡಿಸಿದ್ದಾರೆ.



ಅಲೆಕ್ಸಾಂಡರ್ ಮೆನೇಜಸ್
ಶ್ರೀಮತಿ. ಡೊರೊಥಿ ಮೆನೇಜಸ್
ಸಂಸ್ಥಾಪಕರು

ಶ್ರೀಯುತ ಅಲೆಕ್ಸಾಂಡರ್ ಮೆನೆಜಸ್ ಅವರು ಮೂಲತಃ ಕೊಯಂಬತ್ತೂರಿನವರು. ಇವರು ತಮ್ಮ ಶಿಕ್ಷಣವನ್ನು ಬೆಂಗಳೂರಿನ ಪ್ರತಿಷ್ಠಿತ ಸೇಂಟ್ ಜೋಸೆಫ್

ಕಾಲೇಜಿನಲ್ಲಿ ಮುಗಿಸಿ ನಂತರ ಭಾರತೀಯ ರೈಲ್ವೆಯಲ್ಲಿ ಉದ್ಯೋಗಿಯಾಗಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಶಿಕ್ಷಕಿಯಾಗಿದ್ದ ಶ್ರೀಮತಿ ಡೊರೊಥಿ ಮನೆಜಸ್ ಅವರೊಂದಿಗೆ ವಿವಾಹವಾದರು. ಶಿಕ್ಷಣದಲ್ಲಿ ಅಪಾರವಾದ ಆಸಕ್ತಿಯನ್ನು ಹೊಂದಿದ್ದ ಶ್ರೀಮತಿ ಡೊರೊಥಿ ಮೆನೆಜಸ್ ಅವರು ತಮ್ಮ ಪದವಿ ಹಾಗೂ ಬಿ.ಎಡ್ ಪ್ರಶಿಕ್ಷಣವನ್ನು ಮುಗಿಸಿ ಮಂಗಳೂರಿನ ಸೇಂಟ್ ಅಲೋಸಿಯಸ್ ವಿದ್ಯಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅಲೆಕ್ಸಾಂಡರ್ ಮೆನೇಜಸ್ ಅವರೊಂದಿಗೆ ವಿವಾಹವಾದ ನಂತರ ಶ್ರೀಮತಿ ಡೊರೊಥಿ ಮನೆಜಸ್ ಅವರು ಬೆಂಗಳೂರಿಗೆ ಬಂದು ಇಲ್ಲಿನ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಲು ಆರಂಭಿಸಿದರು.

ಶಿಕ್ಷಕಿಯಾಗಿದ್ದ ಡೊರೊಥಿ ಮನೆಜಸ್ ಅವರಲ್ಲಿ ತಮ್ಮದೇ ಆದ ಒಂದು ಶಿಕ್ಷಣ ಸಂಸ್ಥೆಯನ್ನು ಆರಂಭಿಸಬೇಕು ಎಂಬ ಉತ್ಕಟವಾದ ಬಯಕೆ. ಅವರ ಈ ತುಡಿತದ ಫಲವಾಗಿ ರಾಜಾಜಿನಗರದಲ್ಲಿ ಅಂಗ್ಲೋ ಇಂಡಿಯನ್ ಮಕ್ಕಳಿಗಾಗಿ ಬಾಡಿಗೆಯ ಕಟ್ಟಡದಲ್ಲಿ ಶಾಲೆಯೊಂದು ಪ್ರಾರಂಭವಾಯಿತು. ಹೀಗೆ ಪ್ರಾರಂಭ ವಾದ ಈ ಶಾಲೆಯಲ್ಲಿ ನಾಲ್ಕು ವಿದ್ಯಾರ್ಥಿಗಳು ಹಾಗೂ ಒಬ್ಬ ಶಿಕ್ಷಕಿ ಇದ್ದರು. ವರ್ಷ ವರ್ಷವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಂತೆ ಡೊರೊಥಿ ಮೆನೆಜಸ್ ಅವರಿಗೆ ಶ್ರೀ ಅಲೆಕ್ಸಾಂಡರ್ ಅವರ ಸಹಾಯದ ಅವಶ್ಯಕತೆ ಉಂಟಾಯಿತು. ತಮ್ಮ ಪತಿ ಸರ್ಕಾರಿ ಕೆಲಸವನ್ನು ತ್ಯಜಿಸಿ ಶಾಲೆಯ ನಿರ್ವಹಣೆಯಲ್ಲಿ ತಮ್ಮೊಂದಿಗೆ ಕೈಜೋಡಿಸಲು ಬರುವಂತೆ ಮನವೊಲಿಸಿದರು. ನಂತರದಲ್ಲಿ ಸಮಾನಮನಸ್ಕರಾದ ತಮ್ಮ ಸಮುದಾಯದ ಕೆಲವರೊಂದಿಗೆ ಸೇರಿ ಕಾರ್ಮೆಲ್ ವಿದ್ಯಾ ಸಂಸ್ಥೆ ಎಂಬ ಭಾಷಾ ಅಲ್ಪ ಸಂಖ್ಯಾತ ವಿದ್ಯಾ ಸಂಸ್ಥೆಯನ್ನು 1968 ರಲ್ಲಿ ಆರಂಭಿಸಿದರು.

ಹೀಗೆ ಬೆಂಗಳೂರಿನ ಬಸವೇಶ್ವರನಗರದ ನ್ಯಾಯಾಂಗ ಬಡಾವಣೆಯಲ್ಲಿ ಕಾರ್ಮೆಲ್ ಪ್ರೌಢ ಶಾಲೆಯು ಶ್ರೀ ಅಲೆಕ್ಸಾಂಡರ್ ಮೆನೇಜಸ್ ಹಾಗೂ ಶ್ರೀಮತಿ ಡೊರೊಥಿ ಮೆನೇಜಸ್ ಅವರ ದೂರದೃಷ್ಟಿಯ ಫಲವಾಗಿ ಸ್ಥಾಪನೆಯಾಯಿತು. ಹೀಗೆ ಒಂದು ಕೋಣೆ, ಒಬ್ಬ ಶಿಕ್ಷಕಿ, ನಾಲ್ಕು ಜನ ಮಕ್ಕಳಿಂದ ಆರಂಭವಾದ ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಸಾವಿರಾರು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಾಲೆಯು 1969ರಲ್ಲಿ ಬಾಡಿಗೆಯ ಒಂದು ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿದಾಗಿನಿಂದ ವರ್ಷದಿಂದ ವರ್ಷಕ್ಕೆ

ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವುಂಟಾಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಂತೆ ಎರಡು ಮೂರು ಕಟ್ಟಡಗಳಿಗೆ ವಿಸ್ತರಿಸಿತು. ಇದರಿಂದಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗಿ ವರ್ಷದಲ್ಲಿ ಬಸವೇಶ್ವರನಗರದ ಹೃದಯ ಭಾಗದಲ್ಲಿರುವ ನಿವೇಶನದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿ ಅಲ್ಲಿಗೆ ಶಾಲೆಯನ್ನು ಸ್ಥಳಾಂತರಿಸಬೇಕೆಂದು ತೀರ್ಮಾನವಾಯಿತು. ಪೋಷಕರ ಹಿತೈಷಿಗಳ ಗಣನೀಯವಾದ ಸಹಾಯ ಸಹಕಾರದೊಂದಿಗೆ ಹೊಸ ಕಟ್ಟಡದ ನಿರ್ಮಾಣ ಕಾರ್ಯ ಆರಂಭವಾಯಿತು. ಹಲವಾರು ಏಳು ಬೀಳುಗಳನ್ನು ಸಮಸ್ಯೆಗಳನ್ನು ಎದುರಿಸಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿತು. ಹೀಗೆ ನಿರ್ಮಾಣಗೊಂಡ ಸುಸಜ್ಜಿತವಾದ ಹೊಸ ಕಟ್ಟಡಕ್ಕೆ ಶಾಲೆಯು ಸ್ಥಳಾಂತರಗೊಂಡಿತು. ಸ್ವಂತ ಕಟ್ಟಡದ ಭದ್ರ ಬುನಾದಿಯೊಂದಿಗೆ ಶಾಲೆಯು ಹಂತ ಹಂತವಾಗಿ ಬೆಳೆಯಲಾರಂಭಿಸಿತು. ಹೀಗೆ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುತ್ತಿದ್ದ ಶಾಲೆಯು 1980 ರ ದಶಕದಲ್ಲಿ ಸಂಪೂರ್ಣವಾಗಿ ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿತು. 1993 ರಲ್ಲಿ ಆಡಳಿತ ಮಂಡಳಿಯು ಕಾರ್ಮೆಲ್ ವಿದ್ಯಾಸಂಸ್ಥೆಯ ಅಡಿಯಲ್ಲಿ ICSE ಪಠ್ಯಕ್ರಮವನ್ನು ಆರಂಭಿಸಿತು. ಹೀಗೆ ರಾಜ್ಯ ಪಠ್ಯಕ್ರಮ ಹಾಗೂ ಕೇಂದ್ರ ಪಠ್ಯಕ್ರಮಗಳು ಸಮಾನಾಂತರವಾಗಿ ಕಾರ್ಯನಿರ್ವಹಿಸಲು ಆರಂಭಿಸಿದವು.

ತುಂಬಾ ಉತ್ಸಾಹದಿಂದ ಹಾಗೂ ಸಮರ್ಪಣಾ ಮನೋಭಾವದಿಂದ ಈ ಸಂಸ್ಥೆ ಹಂತ ಹಂತವಾಗಿ ಬೆಳೆಯುತ್ತಾ ಬಂದಿತು. ಅಂದು ಅವರು ಕಂಡ ಕನಸು ಇಂದು ಆಧುನಿಕವಾದ ಕಟ್ಟಡ ಅಗತ್ಯ ವಾದ ಮೂಲಸೌಕರ್ಯಗಳ ಜೊತೆಜೊತೆಗೆ ಶಿಕ್ಷಣದಲ್ಲಿಯ ಹೊಸತನವನ್ನು ಅಳವಡಿಸಿಕೊಳ್ಳುತ್ತ ಹಂತ ಹಂತವಾಗಿ ಮುಂದೆ ಸಾಗುತ್ತಿದೆ. ಆ ಮೂಲಕವಾಗಿ ಸಂಸ್ಥೆಯ ಧ್ಯೇಯವಾದ ನಿಷ್ಠೆ ಮತ್ತು ಪರಿಶ್ರಮ ಎನ್ನುವದು ಸಾಕಾರವಾಗುತ್ತಿದೆ. ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀಯುತ ಅಲೆಕ್ಸಾಂಡರ್ ಮೆನೇಜಸ್ ಅವರು 1997 ರಲ್ಲಿ ನಿಧನರಾದರು.

ಅಲ್ಲಿಂದ ಮುಂದೆ ಆಡಳಿತಾತ್ಮಕವಾದ ಎಲ್ಲ ಜವಾಬ್ದಾರಿಗಳು ಶ್ರೀಯುತ ರೋಶನ್ ಮೆನೇಜಸ್ ಅವರ ಹೆಗಲಿಗೆ ಬಂತು. ಇವರು ಕೂಡ ಇದೇ ಶಾಲೆಯ ಹಳೆಯ ವಿದ್ಯಾರ್ಥಿ ಎನ್ನುವುದು ಹೆಮ್ಮೆಯ ಸಂಗತಿ. ಶ್ರೀಯುತ ರೋಶನ್ ಮೆನೇಜಸ್ 1991 ರಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಮುಗಿಸಿದ್ದರೂ ಕೂಡ ಇವರು ಆ ಮಾರ್ಗದಲ್ಲಿ ಸಾಗದೆ ತಮ್ಮ ಕುಟುಂಬದ ವಿದ್ಯಾ



ಶ್ರೀ ರೋಶನ್ ಮೆನೇಜಸ್

ಸಂಸ್ಥೆಯನ್ನು ಸೇರಿ ಸಂಸ್ಥೆಯ ನಿರ್ವಹಣೆಯ ಜವಾಬ್ದಾರಿಯ ಅನುಭವವನ್ನು ಪಡೆಯಲು ಆರಂಭಿಸಿದರು. ಆರು ವರ್ಷಗಳ ಕಾಲ ತಮ್ಮ ತಂದೆಯವರ ಅಡಿಯಲ್ಲಿ ಆಡಳಿತದ ತರಬೇತಿಯನ್ನು ಪಡೆದರು. ತಂದೆಯವರ ನಿಧನ ನಂತರ ಸಂಸ್ಥೆಯ ಕಾರ್ಯದರ್ಶಿಯಾಗಿ ಸಂಪೂರ್ಣವಾಗಿ ಜವಾಬ್ದಾರಿಯನ್ನು ಹೊತ್ತರು. 1997 ರಿಂದ ಇವರು ಕಾರ್ಯದರ್ಶಿಯಾಗಿ ಆಡಳಿತವಹಿಸಿಕೊಂಡಾಗಿನಿಂದ ಆರಂಭಿಸಿ ಇಲ್ಲಿಯವರೆಗೆ ಕಾರ್ಮೆಲ್ ವಿದ್ಯಾಸಂಸ್ಥೆಯು ಶೈಕ್ಷಣಿಕವಾಗಿ, ಮೂಲಭೂತ ಸೌಕರ್ಯಗಳ ನಿರ್ಮಾಣ, ಆಧುನಿಕ ತಂತ್ರಜ್ಞಾನದಳ ಅಳವಡಿಕೆ ಹಾಗೂ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಆಧುನಿಕ ಜಗತ್ತಿನ ಅಗತ್ಯತೆಗಳನ್ನು ಒಳಗೊಳ್ಳುವಿಕೆಯೂ ಸೇರಿದಂತೆ ಹಲವು ವಿಚಾರಗಳಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಿರುವುದು ಕಂಡು ಬರುತ್ತಿದೆ.



ಮೆನೇಜಸ್ ಕುಟುಂಬದ ನಿಸ್ವಾರ್ಥ ಸೇವೆಯ ಕಾರಣದಿಂದ ಪುಟ್ಟ ಗಿಡವಾಗಿ ಆರಂಭವಾದ ಈ ವಿದ್ಯಾಸಂಸ್ಥೆಯು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಶಾಲೆಯ ಆರಂಭಿಕ ವರ್ಷಗಳಲ್ಲಿ ಶಿಕ್ಷಕರಿಂದ ಪೋಷಕರಿಂದ ದೊರೆತ ಅಮೂಲ್ಯವಾದ ಸಹಕಾರ ಕೂಡ ವಿದ್ಯಾ ಸಂಸ್ಥೆಯ ಬೆಳವಣಿಗೆಯಲ್ಲಿ ಗಣನೀಯವಾದ ಪಾತ್ರವನ್ನು ವಹಿಸಿದೆ. ಸಂಸ್ಥಾಪಕ ಅಧ್ಯಕ್ಷರಾದ ದಿವಂಗತ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಅವರು ಉದಾರವಾದ ವ್ಯಕ್ತಿತ್ವವನ್ನು ಹೊಂದಿದ್ದವರು. ಇದು ಹಲವಾರು ಜನರ ಮೇಲೆ ಪ್ರಭಾವವನ್ನು ಬೀರಿದೆ. ಸಂಸ್ಥೆಯ ಬೆಳವಣಿಗೆಯಲ್ಲಿ ಇವರ ಕೊಡುಗೆ ಎಂದೆಂದೂ ಚಿರಸ್ಮರಣೀಯ.

ಪ್ರಸ್ತುತ ಪ್ರೀ ನರ್ಸರಿಯಿಂದ ಆರಂಭಿಸಿ ದ್ವಿತೀಯ ಪದವಿ ಪೂರ್ವ ತರಗತಿಯವರೆಗೆ ಸುಮಾರು ಸುಮಾರು 3200 ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ಸುಮಾರು 210 ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬಾಪು ಶಿಕ್ಷಣ ಸಂಸ್ಥೆ

ತ್ರಿವೇಣಿ ರಸ್ತೆ, ಯಶವಂತಪುರ,
ಬೆಂಗಳೂರು – 560 022

ಬೆಂಗಳೂರಿನ ಹೃದಯ ಭಾಗ ಯಶವಂತಪುರದಲ್ಲಿ 1968 ರಲ್ಲಿ ಶ್ರೀ ಪಿ.ವಿ ಶ್ರೀರಾಮರೆಡ್ಡಿಯವರು ಬಾಪು ಸಂಸ್ಥೆಯನ್ನು ಪ್ರಾರಂಭಿಸುತ್ತಾರೆ. ಮೂಲತಃ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಪಾಳ್ಯ ಎಂಬ ಕುಗ್ರಾಮದಲ್ಲಿ ಶೀಪಟೇಲ್ ವೆಂಕಟಸ್ವಾಮಿರೆಡ್ಡಿ ಮತ್ತು ಶ್ರೀಮತಿ ನಾರಾಯಣಮ್ಮ ದಂಪತಿಗಳ ಮಗನಾಗಿ ಶ್ರೀ ಪಿ ವಿ ಶ್ರೀರಾಮರೆಡ್ಡಿ ಯವರು 29-12-1939 ರಂದು ಜನಿಸಿದರು. ಪ್ರಾಥಮಿಕಶಾಲೆ ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಶ್ರೀನಿವಾಸಪುರದಲ್ಲಿ ಪಡೆಯುತ್ತಾರೆ. ಹೆಚ್ಚು ಓದಬೇಕೆಂಬ ಆಸಕ್ತಿ ಇರುವ ಕಾರಣ ಉಟ್ಟ ಬಟ್ಟೆಯಲ್ಲಿ ಬರಿಗಾಲಿನಲ್ಲಿ ಬೆಂಗಳೂರಿಗೆ ಬರುತ್ತಾರೆ. ಬೆಂಗಳೂರಿನಲ್ಲಿ ಯಶವಂತಪುರದ ಸುತ್ತ ಮುತ್ತಲಿನ ಮಕ್ಕಳಿಗೆ ಮನೆ ಪಾಠ ಹೇಳಿಕೊಡುತ್ತಿದ್ದರು. ಜೊತೆಗೆ ರೈಲ್ವೆ ಸ್ಟೇಷನ್ನಿನಲ್ಲಿ ಕೂಲಿ ಕೆಲಸ ಮಾಡಿ ಇದರಿಂದ ಬಂದ ಹಣವನ್ನು ಬಳಸಿಕೊಂಡು ಬೆಂಗಳೂರಿನ


ಪಿ.ವಿ ಶ್ರೀರಾಮರೆಡ್ಡಿ

ಸೆಂಟ್ರಲ್ ಕಾಲೇಜಿನಲ್ಲಿ 1965 ರಲ್ಲಿ ಬಿ.ಎಸ್ಸಿ ಪದವಿಗೆ ಸೇರಿಕೊಳ್ಳುತ್ತಾರೆ. ಇವರು ಅದ್ಭುತ ಹಾಡುಗಾರ ಆಗಿರುತ್ತಾರೆ. ಇವರ ಪ್ರತಿಭೆಗೆ ಮೆಚ್ಚಿದ ಅಧ್ಯಾಪಕರು ಘಂಟಸಾಲ ಎಂಬ ಬಿರುದನ್ನು ನೀಡಿ ಗೌರವಿಸುತ್ತಾರೆ. ನಂತರ ಮುಂದೆ ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜಿನಲ್ಲಿ ಬಿ.ಇ ಪದವಿಯನ್ನು ಪಡೆಯುತ್ತಾರೆ. ಈ ಮೂಲಕ ಉತ್ತಮ ಶಿಕ್ಷಣವನ್ನು ನೀಡುವ ಸಲುವಾಗಿ 1964-65 ರಲ್ಲಿ ಬಾಪು ಟ್ಯುಟೋರಿಯಲ್ಸ್ ಪ್ರಾರಂಭಿಸುತ್ತಾರೆ. ಜೊತೆಗೆ ಹೆಸರಘಟ್ಟ ಸರ್ಕಾರಿ ಶಾಲೆಯಲ್ಲೂ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು.

ಮನೆ ಪಾಠ ಹೇಳಿಕೊಡುತ್ತಿದ್ದ ಕಾರಣ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ. ಗಣಿತ ವಿಷಯದಲ್ಲಿ ಆಸಕ್ತಿ ಪಡೆದಿದ್ದ ಶ್ರೀ ಪಿ. ವಿ. ರಾಮರೆಡ್ಡಿಯವರ ಪಾಠದ ವೈಖರಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಕುತೂಹಲ ಕೆರಳಿಸುವುದು ಮಾತ್ರವಲ್ಲದೆ ಅವರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದರು. ಇವರ ಪಾಠವನ್ನು ಕೇಳಲು ತರಗತಿಗಳಲ್ಲಿ ಸ್ಥಳಾವಕಾಶವಿಲ್ಲದಿದ್ದರೂ ಎಷ್ಟೋ ಬಾರಿ ತರಗತಿಯ ಬಾಗಿಲಲ್ಲಿ ನಿಂತು ಪಾಠ ಕೇಳಿದ ಉದಾಹರಣೆಗಳು ಉಂಟು, ತಮ್ಮ ಪಾಠದ ಮೂಲಕ ಸರಳವಾಗಿ ವಿದ್ಯಾರ್ಥಿಗಳಿಗೆ ಜ್ಞಾನದಾಸೋಹವನ್ನು ಪಸರಿಸಿದರು. ಕಲಿಯಬೇಕೆಂಬ ಆಸಕ್ತಿಯಿಂದ ಬರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠವನ್ನು ಬೋಧಿಸುತ್ತಿದ್ದರು.

ಒಮ್ಮೆ ಹೆಣ್ಣು ಮಕ್ಕಳ ಶಾಲೆಯನ್ನು ಪ್ರಾರಂಭಿಸಲು ಅನುಮತಿಗೆ ಆಸಕ್ತರು ಅರ್ಜಿಯನ್ನು ಹಾಕಬಹುದು ಎಂಬ ಪತ್ರಿಕಾ ಪ್ರಕಟಣೆ ನೋಡುತ್ತಾರೆ. ಶಿಕ್ಷಕರಾಗಿ ಅನುಭವ ಹೊಂದಿದ್ದ ಕಾರಣ ಶಾಲೆ ಪ್ರಾರಂಭಿಸಲು ಮನಸ್ಸು ಮೂಡುತ್ತದೆ. ದೇಶದ ಅಭಿವೃದ್ಧಿಯಾಗಬೇಕಾದರೆ ಅದು ಹೆಣ್ಣು ಮಕ್ಕಳ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ದೃಢವಾಗಿ ಅರಿತಿದ್ದರು. ಬಾಪು ಸೈಂಟಿಫಿಕ್ ಅಂಡ್ ಎಜುಕೇಷನ್ ಅಸೋಸಿಯೇಷನ್ ಎಂಬ ಹೆಸರಿನಲ್ಲಿ ಹೆಣ್ಣು ಮಕ್ಕಳ ಶಾಲೆ ಪ್ರಾರಂಭಿಸಲು ಅನುಮತಿಯನ್ನು ನೀಡುವಂತೆ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ 1968 ರಲ್ಲಿ ಸಲ್ಲಿಸುತ್ತಾರೆ. ಅನುಮತಿ ದೊರೆಯುತ್ತಿದ್ದಂತೆ ಮೂರು ಗುಡಿಸಲುಗಳನ್ನು ಬಾಡಿಗೆಗೆ ಪಡೆದು ಉದ್ಘಾಟನಾ ಘಂಟೆಯನ್ನು ಶ್ರೀ ಪಿ ವಿ ಶ್ರೀರಾಮರೆಡ್ಡಿಯವರು ಬಾರಿಸುವುದರ ಮೂಲಕ ಶಾಲೆ ಪ್ರಾರಂಭವಾಗುತ್ತದೆ. ಯಶವಂತಪುರ ಸುತ್ತಮುತ್ತಲಿನ ಮನೆ ಮನೆಗೂ ತೆರಳಿ ಪೋಷಕರಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಹುರಿದುಂಬಿಸುತ್ತಿದ್ದರು. ಯಾವುದೇ ಡೊನೇಷನ್

ಇಲ್ಲದೇ ಶಿಕ್ಷಣ ಪಡೆಯಬಹುದೆಂದು ಪೋಷಕರ ಮನವೊಲಿಸಿ ತರಗತಿಗೆ ವಿದ್ಯಾರ್ಥಿಗಳನ್ನು ನೋಂದಾಯಿಸುತ್ತಿದ್ದರು. ಒಂದೊಂದು ತರಗತಿಯಲ್ಲಿ ಕೇವಲ 10-12 ವಿದ್ಯಾರ್ಥಿನಿಯರು ಮಾತ್ರ ಇದ್ದರು.

ಶ್ರೀ ಪಿ.ವಿ. ಶ್ರೀರಾಮರೆಡ್ಡಿಯವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲೂಕಿನ ನಾರಾಯಣರೆಡ್ಡಿ ಮತ್ತು ಮುನಿವೆಂಕಟಮ್ಮ ದಂಪತಿಗಳ ಮಗಳಾದ ಎನ್. ಕಮಲಮ್ಮ ಅವರ ಜೊತೆ 1972 ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಎನ್. ಕಮಲಮ್ಮನವರು ಬಿ.ಎಸ್ಸಿ ಪದವೀಧರರಾಗಿದ್ದು, ಮದುವೆಯ ನಂತರ ಶ್ರೀ ರಾಮರೆಡ್ಡಿಯವರ ಪ್ರೋತ್ಸಾಹದಿಂದ ಬಿ.ಎಡ್ ಮತ್ತು ಇಂಗ್ಲೀಷ್‌ನಲ್ಲಿ ಎಂ.ಎ ಪದವಿಯನ್ನು ಪಡೆದರು.


ಡಾ. ಕಮಲಮ್ಮ
ಅಧ್ಯಕ್ಷರು

ಶಾಲೆಯ ದಿನನಿತ್ಯದ ಚಟುವಟಿಕೆಗಳಲ್ಲಿ ಗಂಡನಿಗೆ ಸಹಾಯಕರಾಗಿ ನಿಂತರು. ಐದಾರು ವರ್ಷಗಳಲ್ಲಿ ಶಾಲೆ ಸಾಕಷ್ಟು ಬೆಳೆಯುತ್ತಾ ಹೋದಂತೆ ಸಂಸ್ಥೆಯ ಸದಸ್ಯರಲ್ಲಿ ವೈಮನಸ್ಸು ತಲೆದೋರಿತು. ಸದಸ್ಯರೊಬ್ಬರು ಹೊಸದಾಗಿ ಬೇರೊಂದು ಶಾಲೆಯನ್ನು ಪ್ರಾರಂಭಿಸಿ ಇಲ್ಲಿನ ವಿದ್ಯಾರ್ಥಿಗಳನ್ನು ತಮ್ಮ ಶಾಲೆಗೆ ಸೇರುವಂತೆ ಒತ್ತಾಯಿಸಿದರು. ಆದರೆ ಅಲ್ಲಿನ ಪೋಷಕರು ಮತ್ತು ವಿದ್ಯಾರ್ಥಿಗಳು ಶ್ರೀ ಪಿ.ವಿ. ಶ್ರೀರಾಮರೆಡ್ಡಿ ಮತ್ತು ಕಮಲಮ್ಮನವರು ಉತ್ತಮ ಶಿಕ್ಷಕರಾಗಿ ಅನುಭವ ಇರುವ ಕಾರಣ ತಮ್ಮ ಮಕ್ಕಳನ್ನು ಇದೇ ಸಂಸ್ಥೆಯಲ್ಲೇ ವಿದ್ಯಾಭ್ಯಾಸ ಮುಂದುವರಿಸುತ್ತೇವೆಂದು ತೀರ್ಮಾನಿಸುತ್ತಾರೆ. ಈ ಸಂದರ್ಭದಲ್ಲಿ ಶಾಲೆಯ ಪೂರ್ಣ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಅವರದ್ದಾಗುತ್ತದೆ.

ಪ್ರಾರಂಭದ ದಿನಗಳಲ್ಲಿ ಯಾರ ಸಹಕಾರವಿಲ್ಲದೆ ದಂಪತಿಗಳಿಬ್ಬರೇ ಶಾಲೆಯ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಎಲ್ಲಾ ವಿಷಯಗಳನ್ನು ಬೋಧಿಸುವುದು, ಮೂರು ಗುಡಿಸಲುಗಳನ್ನು ಬೆಳಿಗ್ಗೆ ಐದು ಗಂಟೆಗೆ ಬಂದು ಸ್ವಚ್ಛಗೊಳಿಸುವುದು, ಮತ್ತೆ ಮನೆಗೆ ಹೋಗಿ ಪುನಃ ಒಂಭತ್ತು ಗಂಟೆಗೆ ಬಂದು

ಶಾಲೆಯ ಮುಖ್ಯ ಶಿಕ್ಷಕಿಯಾಗಿ ಬೆಲ್ ಹೊಡೆದು ಪ್ರಾರ್ಥನೆ ಮಾಡಿಸಿ ತರಗತಿ ಪಾರಂಭ ಮಾಡುವುದು. ಮೂರು ತರಗತಿಗಳನ್ನು ನೋಡಿಕೊಳ್ಳುತ್ತಿದ್ದರು. ಒಂದು ತರಗತಿಗೆ ಕ್ರೀಡಾ ಚಟುವಟಿಕೆ ನೀಡಿದರೆ, ಇನ್ನುಳಿದ ತರಗತಿಗಳಿಗೆ ಪಾಠ ಮಾಡುವುದು, ಓದಿಸುವುದು, ವಿದ್ಯಾರ್ಥಿಗಳಿಗೆ ಕೆಲವು ವಿದ್ಯಾಭ್ಯಾಸದ ಕೆಲಸ ಒಪ್ಪಿಸುವುದು ನಡೆಯುತ್ತಿತ್ತು. 1975–76ರ ಸಾಲಿನಲ್ಲಿ ಎಷ್ಟೆಲ್ಲಾ ಸಮಸ್ಯೆಗಳು ಎದುರಾದರೂ ಎದೆಗುಂದದೆ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರು. ವಿದ್ಯಾರ್ಥಿಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಂಡರು.

ಮಕ್ಕಳು ಮತ್ತು ಪೋಷಕಕರೂ ಸಹ ಸಂಸ್ಥೆಯ ಮೇಲೆ ಬಹಳ ವಿಶ್ವಾಸವಿಟ್ಟಿದ್ದರು. ಶ್ರೀ ಪಿ ವಿ ಶ್ರೀರಾಮರೆಡ್ಡಿ, ಮತ್ತು ಶ್ರೀ ಎನ್. ಕಮಲಮ್ಮನವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಗುರುತಿಸಲ್ಪಟ್ಟರು. ಮೊದಲನೇ ತಂಡದ ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸಾಗಿ 100% ಫಲಿತಾಂಶ ಬಂದಾಗ ಶಾಲೆಯ ಕೀರ್ತಿ ಮತ್ತಷ್ಟು ಹಬ್ಬಿತು. ವರ್ಷ ವರ್ಷ ವಿದ್ಯಾರ್ಥಿನಿಯರ ದಾಖಲಾತಿ ಹೆಚ್ಚುತ್ತಾ ಹೋಯಿತು.

ಮುಖ್ಯೋಪಾಧ್ಯಾಯಿನಿಯಾಗಿ ಕಮಲಮ್ಮ ಶಾಲೆಯ ಬೆಳವಣಿಗೆ ಜೊತೆ ಇಲಾಖಾ ಸೂಚನೆಯಂತೆ ಪ್ರಾಥಮಿಕ ತರಗತಿಗಳಿಗೆ ಸಂಬಂಧಪಟ್ಟಂತೆ ಆಂಗ್ಲ ಭಾಷೆಯ ಪುಸ್ತಕಗಳು, ಒಂಭತ್ತು, ಹತ್ತನೇ ತರಗತಿಯ ಜೀವಶಾಸ್ತ್ರದ ವಿಷಯ ಪಠ್ಯ ಪುಸ್ತಕಗಳ ರಚನೆಯಲ್ಲಿ ಸದಸ್ಯರಾಗಿ ಕೆಲಸ ನಿರ್ವಹಿಸಿದರು. ಬಾಪು ಸಂಸ್ಥೆ ವಿಭಿನ್ನ ದೃಷ್ಟಿಕೋನಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಸಿದ್ಧಿ ಪಡೆಯುತ್ತಾ ಇಲಾಖಾ ಮಟ್ಟದಲ್ಲಿ ಹೆಚ್ಚು ಹೆಸರು ಮಾಡುತ್ತಾ ಸಾಗುತ್ತಿದೆ. 'ದೀಪಾವಳಿ ಜಾಗೃತಿ ಜಾಥಾ' ಕಾರ್ಯಕ್ರಮವು ಇಡೀ ದೇಶದಲ್ಲಿ ಮಾದರಿಯಾಗುವ ಮೂಲಕ ಹೆಚ್ಚು ಪ್ರಶಂಸೆಗೆ ಪಾತ್ರವಾಯಿತು. ಸ್ವತಃ ರಾಷ್ಟ್ರಪತಿಯವರು ಈ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಮೆಚ್ಚುಗೆ ಪತ್ರವನ್ನು ಸಂಸ್ಥೆಗೆ ನೀಡಿರುತ್ತಾರೆ. ಇದಲ್ಲದೇ ಪರಿಸರ ಜಾಗೃತಿಯನ್ನು ಮೂಡಿಸುವ ಬೀದಿ ನಾಟಕಗಳ ಪ್ರದರ್ಶನ, ಸಮಾಜೋಪಯೋಗಿ ವಸ್ತುಗಳ ಉತ್ಪಾದನಾ ಕಾರ್ಯಾಗಾರ ಆಯೋಜಿಸುವುದು, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷರಾಗಿ ಶೈಕ್ಷಣಿಕ ಪ್ರಗತಿಗಾಗಿ ಸಾಕಷ್ಟು ಸುಧಾರಣೆಗಳನ್ನು ತಂದಿರುತ್ತಾರೆ. ಇವೆಲ್ಲಕ್ಕಿಂತ ಕಳಶವಿಟ್ಟಂತೆ, 1993 ರವರೆಗೆ ಗುಡಿಸಲನ್ನು ಹೊಂದಿದ್ದ ಬಾಪು ಶಾಲೆಗೆ ತಾವು ಹಾಗೂ ತಮ್ಮ ಯಜಮಾನರು ಜೀವನಪೂರ್ತಿ ಶ್ರಮದಿಂದ ಗಳಿಸಿದ ಎಲ್ಲಾ ಹಣವನ್ನು ಸಂಗ್ರಹಿಸಿ ಹೊಸ

ಕಟ್ಟಡಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ದಿನಗಳು ಉರುಳಿದಂತೆ ಬಾಪು ಶಾಲೆಯು ಉತ್ತಮ ಫಲಿತಾಂಶ ನೀಡಿ, ವಾರ್ಷಿಕ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆಯುತ್ತಿದ್ದು ಈ ಫಲಿತಾಂಶ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಪ್ರತಿ ವರ್ಷವು ಹೊಸ ಹೊಸ ಶೈಕ್ಷಣಿಕ ಪ್ರಯತ್ನಗಳನ್ನು ಮಾಡುತ್ತಾ ಉತ್ತಮ ಫಲಿತಾಂಶವನ್ನು ನೀಡಿ ಬಾಪು ಬಾಲಿಕಾ ಶಾಲೆಯು ಬೆಂಗಳೂರು ನಗರದಲ್ಲೇ ಉತ್ತಮ ಶಿಕ್ಷಣ ನೀಡುವುದರ ಮೂಲಕ ಪ್ರಸಿದ್ಧಿಯನ್ನು ಪಡೆಯಿತು. ಪೋಷಕರ ಬೇಡಿಕೆಯ ಮೇರೆಗೆ 1997-98 ರಲ್ಲಿ ಗಂಡು ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಕೊ. ಎಜುಕೇಷನ್ ಪದ್ಧತಿಯನ್ನು ಇಲಾಖಾ ಅನುಮೋದನೆಯ ಮೇರೆಗೆ ಆರಂಭಿಸಲಾಯಿತು. ಎಸ್.ಎಸ್.ಎಲ್.ಸಿ ನಂತರ ತಮ್ಮ ಸಂಸ್ಥೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಲು 1994 ರಲ್ಲಿ ಕಲೆ, ವಾಣಿಜ್ಯ, ವಿಜ್ಞಾನ ವಿಭಾಗಗಳಲ್ಲಿ ಬಾಪು ಸಂಯುಕ್ತ ಪದವಿ ಪೂರ್ವ ಕಾಲೇಜನ್ನು, 2004-05 ನೇ ಸಾಲಿನಲ್ಲಿ ಡಿ.ಇಡಿ ಶಿಕ್ಷಕರ ತರಬೇತಿ ಕಾಲೇಜನ್ನು, 2005- 06 ರಲ್ಲಿ ಬಾಪು ಬಿ.ಇಡಿ ಕಾಲೇಜನ್ನು, 2006-07 ರಲ್ಲಿ ಪದವಿ ಕಾಲೇಜನ್ನು, 2008-09 ರಲ್ಲಿ ಬಾಪು ಸಂಜೆ ಕಾಲೇಜು, 2020ರಲ್ಲಿ ಬಾಪು ಕಿಡ್ಸ್ ಪ್ಯಾರಡೈಸ್ ಎಂಬ ವಿಶೇಷ ಸೌಲಭ್ಯಗಳನ್ನು ಹೊಂದಿರುವ ಪ್ರಾಥಮಿಕ ಶಾಲೆ ಪ್ರಾರಂಭಿಸಲಾಯಿತು.

2006ರಲ್ಲಿ ಸಂಸ್ಥಾಪಕರಾದ ಶ್ರೀ ಪಿ.ವಿ. ಶ್ರೀರಾಮರೆಡ್ಡಿಯವರು ದೈವಾಧೀನರಾದ ನಂತರ ಅವರ ಆಶಯದಂತೆ ಶ್ರೀಮತಿ ಕಮಲಮ್ಮನವರು ಬಾಪು ಸಂಸ್ಥೆಗೆ ಅಧ್ಯಕ್ಷರಾಗಿ ಉತ್ತಮವಾದ ಶಿಕ್ಷಣವನ್ನು ನೀಡಲು ಮಾರ್ಗದರ್ಶನ ನೀಡುತ್ತಿದ್ದಾರೆ. ಶ್ರೀರಾಮರೆಡ್ಡಿಯವರ ಮಗನಾದ ಶ್ರೀ ಸುಭಾಷ್ ಅವರು ಇಂಜಿನಿಯರಿಂಗ್ ಪದವೀಧರರಾಗಿದ್ದು ಬಾಪು ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯದರ್ಶಿಗಳಾಗಿ ತಂದೆಯ ಹಾದಿಯಲ್ಲೇ ಸಂಸ್ಥೆಯನ್ನು ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಡಾ. ಇ. ವೆಂಕಟರೆಡ್ಡಿಯವರು ಸಂಶೋಧಕರಾಗಿ, ಪ್ರಾಧ್ಯಾಪಕರಾಗಿ ಹೆಚ್ಚು ಅನುಭವ ಹೊಂದಿದ್ದು ಹೊಸ ಹೊಸ ಯೋಜನೆಗಳನ್ನು ಅಳವಡಿಸಿಕೊಂಡು ಕಾಲೇಜಿನ ಪ್ರಾಚಾರ್ಯರಾಗಿ ಸಂಸ್ಥೆಯನ್ನು ವ್ಯವಸ್ಥಿತವಾಗಿ ಮುನ್ನಡೆಸುತ್ತಿದ್ದಾರೆ. ಶ್ರೀಮತಿ ರೇಖಾ ಅವರು ಬಾಪು ಕಾಲೇಜಿನ ನಿರ್ದೇಶಕರಾಗಿ ಸಂಸ್ಥೆಯ ಅಭಿವೃದ್ಧಿಗೆ ಮಾರ್ಗಸೂಚನೆಗಳನ್ನು ನೀಡುತ್ತಿದ್ದಾರೆ. ಉತ್ತಮ ಶೈಕ್ಷಣಿಕ ಗುಣ ಮಟ್ಟದ ಯೋಜನೆಗಳ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರ ಮನಸ್ಸಿಗೆ ತೃಪ್ತಿದಾಯಕ ರೀತಿಯ ಉತ್ತಮ ಶಿಕ್ಷಣ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯತ್ತ ಮುನ್ನಡೆಯುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ



ಬಾಪು ಸಂಸ್ಥೆ ಎಂಬ ಮರವು ಹಲವು ರೆಂಬೆ ಕೊಂಬೆಗಳನ್ನು ಹೊಂದಿ ಅಭಿವೃದ್ಧಿಯತ್ತ ಸಾಗುತ್ತಿದೆ ಅವುಗಳು ಈ ಕೆಳಗಿನಂತಿವೆ: ಬಾಪು ಬಾಲಿಕಾ ಪ್ರೌಢಶಾಲೆ, ಬಾಪು ಬಾಲ ಭಾರತಿ ಪ್ರಾಥಮಿಕ ಶಾಲೆ, ಬಾಪು ಸಂಯುಕ್ತ ಪದವಿ ಪೂರ್ವ ಕಾಲೇಜು, ಬಾಪು ಡಿ. ಇಡ್ ಕಾಲೇಜು, ಬಾಪು ಬಿ.ಇಡ್. ಕಾಲೇಜು, ಬಾಪು ಪದವಿ ಕಾಲೇಜು, ಬಾಪು ಸಂಜೆ ಪದವಿ ಪೂರ್ವ ಕಾಲೇಜು, ಬಾಪು ಸಂಜೆ ಪದವಿ ಕಾಲೇಜು, ಬಾಪು ಕಿಡ್ಸ್ ಪ್ಯಾರಡೈಸ್ ಶಾಲೆ.


ಬಾಪು ಸಂಸ್ಥೆಯು ಅಭಿವೃದ್ಧಿಯ ಕಡೆಗೆ ಸಾಗುತ್ತಿದೆ. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉನ್ನತ ಮಟ್ಟದ ಉದ್ಯೋಗಳನ್ನು ಪಡೆದುಕೊಂಡಿದ್ದಾರೆ ಮತ್ತು ವಾಣಿಜ್ಯೋದ್ಯಮಿಗಳಾಗಿ ಉದ್ಯೋಗವಕಾಶಗಳನ್ನು ಸಮಾಜಕ್ಕೆ ನೀಡುತ್ತಿದ್ದಾರೆ. ಸಮಾಜದಲ್ಲಿ ಸತ್ಪ್ರಜೆಗಳಾಗಿ ಜೀವನ ಸಾಗಿಸುತ್ತಿರುವುದು ಒಂದು ಸಂತೋಷಕರವಾದ ವಿಷಯ. ಬಾಪು ಒಂದು ಆಲಯವಾಗಿ ಸ್ಥಾಪನೆಗೊಂಡು ವಿದ್ಯಾಲಯವಾಗಿ ಬೆಳೆದು ಮಹಾವಿದ್ಯಾಲಯವಾಗಿ ಪ್ರತಿಷ್ಠಾಪನೆಗೊಂಡು ವಿಶ್ವವಿದ್ಯಾಲಯದ ಕಡೆಗೆ ಅಡಿಗಲ್ಲು ಹಾಕುತ್ತಿದೆ.

ಕೆ.ಟಿ.ಎಸ್.ವಿ ಸಂಘ(ರಿ)

ಸಿಎ–13, 10ನೇ ಮುಖ್ಯರಸ್ತೆ, 5ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು – 560 010

ಯಾವುದೇ ಜನಾಂಗದ ಏಳಿಗೆಗೆ ಸಾಕ್ಷರತೆಯ ಮಟ್ಟ ಹೆಚ್ಚಿಸಿ ಅರಿವು ಉಂಟು ಮಾಡುವುದೇ ಪ್ರಧಾನವೆಂದು ತಿಳಿದು ನಮ್ಮ ತಿಗಳ ಜನಾಂಗದ ಕೆಲವು ಮುಖಂಡರು ಸಂಘಟಿತರಾಗಿ ಜನಾಂಗದ ಒಂದು ವಿದ್ಯಾಭಿವೃದ್ಧಿ ಸಂಘವನ್ನು ರಾಜ್ಯಮಟ್ಟದಲ್ಲಿ ಪ್ರಾರಂಭಿಸಲು ತೀರ್ಮಾನಿಸಿ ದಿನಾಂಕ: 29.06.1968 ರಲ್ಲಿ ಕರ್ನಾಟಕ ತಿಗಳರ (ಅಗ್ನಿವಂಶ ಕ್ಷತ್ರಿಯ) ವಿದ್ಯಾಭಿವೃದ್ಧಿ ಸಂಘವನ್ನು ನೋಂದಣಿ ಮಾಡಿಸಿದರು. ಶ್ರೀರಾಮಪುರದ ಬಾಡಿಗೆ ಕಟ್ಟಡದಲ್ಲಿ ಜನಾಂಗದ 15 ಜನ ವಿದ್ಯಾರ್ಥಿಗಳಿಗೆ ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಶಿಕ್ಷಣದ ಮಹತ್ವವನ್ನು ಪ್ರಚಾರ ಮಾಡಿ ಜನಾಂಗದ ಬಡ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದೇ ಮುಖ್ಯ ಉದ್ದೇಶವಾಗಿತ್ತು.

ತದನಂತರ ಸಂಘದ ಕಾರ್ಯಕಲಾಪಗಳನ್ನು ಸ್ಥಿರಪಡಿಸಲು ಸ್ವಂತ ಕಟ್ಟಡದ ಅವಶ್ಯಕತೆಯನ್ನು ಅರಿತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ 1970ರಲ್ಲಿ ಬೇಡಿಕೆ ಸಲ್ಲಿಸಲಾಯಿತು. ಸರ್ಕಾರ 30 ವರ್ಷಗಳ ಗುತ್ತಿಗೆ ಆಧಾರದ ಮೇರೆಗೆ 1973ರಲ್ಲಿ ರಾಜಾಜಿನಗರ 5ನೇ ಬ್ಲಾಕ್‌ನ ಹಾಲಿ ನಿವೇಶನವನ್ನು ವಿದ್ಯಾರ್ಥಿ ನಿಲಯ ಮತ್ತು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಲು ನೀಡಲಾಯಿತು. ಈ ವೇಳೆಯಲ್ಲಿ ದಿ॥ ಟಿ.ವಿ. ತಿಮ್ಮಯ್ಯನವರು ಕಾರ್ಯದರ್ಶಿಗಳಾಗಿ ಸಂಘದಲ್ಲಿ


ಎಸ್. ಸಿದ್ಧಗಂಗಯ್ಯ
ಅಧ್ಯಕ್ಷರು


ಟಿ.ವಿ. ತಿಮ್ಮಯ್ಯ
ಕಾರ್ಯದರ್ಶಿ



ಸಿ.ಜಿ.ಮರಿಗೌಡ
ಖಜಾಂಚಿ


ಹೆಚ್.ಡಿ. ವೆಂಕಟಸ್ವಾಮಿ
ಸದಸ್ಯರು

ಕೆಲಸ ನಿರ್ವಹಿಸುತ್ತಿದ್ದರು. ಇವರ ಪ್ರಯತ್ನದಿಂದಲೇ ಈ ನಿವೇಶನವನ್ನು ಸಂಘಕ್ಕೆ ಪಡೆಯಲು ಸಾಧ್ಯವಾಯಿತು. ಈ ನಿವೇಶನದಲ್ಲಿ ಜನಾಂಗದ ದಾನಿಗಳಿಂದ ಬಂದ ಹಣದಿಂದ ಒಂದು ತಾತ್ಕಾಲಿಕ ಸಿಮೆಂಟ್ ಶೀಟಿನ ಕಟ್ಟಡ

ನಿರ್ಮಿಸಿ 15 ವಿದ್ಯಾರ್ಥಿಗಳನ್ನು ಹೊಂದಿದ ಬಾಲಕರ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಯಿತು. 1973 ರಲ್ಲಿ ದಿ॥ ಡಿ. ದೇವರಾಜ್ ಅರಸ್‌ರವರು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾಗಿದ್ದರು. ಇವರಿಂದ ಮೊದಲ ಹಂತದ ಕಟ್ಟಡ ಶಂಕುಸ್ಥಾಪನೆಯಾಯಿತು. ದಿ॥ ಡಿ. ದೇವರಾಜ್ ಅರಸ್ರವರು ಜನಾಂಗದ ಹಿನ್ನಲೆ ಅರಿತು ನಿಯೋಜಿತ ವಿದ್ಯಾರ್ಥಿ ನಿಲಯದ ಕಟ್ಟಡಕ್ಕಾಗಿ ಸರ್ಕಾರದಿಂದ ವಿಶೇಷ ಒಂದು ಲಕ್ಷ ರೂಪಾಯಿಗಳ ಧನ ಸಹಾಯವನ್ನು ಮಂಜೂರು ಮಾಡಿದರು. ಇದರ ಜೊತೆಗೆ ಜನಾಂಗದವರಿಂದ ದಾನದ ರೂಪದಲ್ಲಿ ಹಣ ಸಂಗ್ರಹಿಸಿ ಮೂರು ಲಕ್ಷ ರೂಪಾಯಿಗಳ ಖರ್ಚಿನಲ್ಲಿ 1981 ರಲ್ಲಿ ಹತ್ತು ಕೊಠಡಿಯುಳ್ಳ 15 ಚದರ ಅಡಿಗಳ ಕಟ್ಟಡ ನಿರ್ಮಿಸಿ 40 ಜನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಯಿತು. ನಂತರ ಜನಾಂಗದವರಿಂದ ದಾನದ ರೂಪದಲ್ಲಿ ಹಣ ಸಂಗ್ರಹಿಸಿ, ಆರು ಲಕ್ಷ ರೂಪಾಯಿಗಳ ಖರ್ಚಿನಲ್ಲಿ 25 ಚದರ ಅಡಿಗಳ ಎರಡನೇ ಹಂತದ ಕಟ್ಟಡವನ್ನು 1984ರಲ್ಲಿ ಪೂರೈಸಲಾಯಿತು.

1985 ರಲ್ಲಿ ನಮ್ಮ ಮಾತೃಭಾಷೆ ಕನ್ನಡ ಮಾಧ್ಯಮದಲ್ಲಿ ಬಿ.ಇಡಿ. ಕಾಲೇಜನ್ನು ಆಗಿನ ಸಂಘದ ಅಧ್ಯಕ್ಷರಾಗಿದ್ದ ದಿ. ಡಾ॥ ಟಿ.ವಿ. ತಿಮ್ಮೇಗೌಡರ ಮಾರ್ಗದರ್ಶನದಲ್ಲಿ ಪ್ರಾರಂಭಿಸಲಾಯಿತು. ಶಿಕ್ಷಣ ತಜ್ಞ ಡಾ॥ ಟಿ.ವಿ. ತಿಮ್ಮೇಗೌಡರು ತುಮಕೂರು ಪಟ್ಟಣದ ಗರಡಿ ಚಿಕ್ಕಣ್ಣನ ಪಾಳ್ಯ ನಿವಾಸಿ ಶ್ರೀ ವೀರಣ್ಣನವರ ಮಗನಾಗಿ 15-06-1914 ರಲ್ಲಿ ಜನಿಸಿದರು. ತಂದೆ-ತಾಯಿಗಳು ಅವಿದ್ಯಾವಂತರಾದರು, ತಮ್ಮ ಮಕ್ಕಳಿಬ್ಬರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ಇವರ ಬಯಕೆ. ಗೌಡರು ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸವನ್ನು ತುಮಕೂರಿನಲ್ಲಿ ಮುಗಿಸಿ ಮುಂದೆ ಇಂಟರ್ ಮೀಡಿಯಟ್ ಕಾಲೇಜು ಸೇರಿದರು.


ಡಾ॥ ಟಿ.ವಿ. ತಿಮ್ಮೇಗೌಡರು

ಅಷ್ಟು ಹೊತ್ತಿಗೆ ಗೌಡರ ಅಣ್ಣನವರು ತಾಂತ್ರಿಕ ಶಿಕ್ಷಣ ಮುಗಿಸಿ ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನೌಕರಿಯಲ್ಲಿದ್ದು ಕಬ್ಬನ್ ಪೇಟೆಯಲ್ಲಿ ಬಾಡಿಗೆ ಕೊಠಡಿಯಲ್ಲಿ ಇದ್ದರು. ಗೌಡರು ಅಣ್ಣನೊಡನೆ ಅದೇ

ಕೊಠಡಿಯಲ್ಲಿದ್ದುಕೊಂಡು ಸ್ವಯಂ ಅಡಿಗೆ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರಿಸಿ ಅಂತಿಮ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು ವಿದ್ಯಾರ್ಥಿ ವೇತನ ಪಡೆದು ಉನ್ನತ ಶಿಕ್ಷಣ ಮುಗಿಸಿ ಪದವೀಧರರಾದರು. ಮೊದಲಿಗೆ ಗುಮಾಸ್ತ ಕೆಲಸಕ್ಕೆ ಸೇರಿದರು. ಆದರೆ ಆ ಹುದ್ದೆ ಅವರಿಗೆ ಹಿಡಿಸಲಿಲ್ಲ. ನಂತರ ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಾಲಾ ಉಪಾಧ್ಯಾಯರ ಹುದ್ದೆ ಅಲಂಕರಿಸಿ ಮಂಡ್ಯ ಹಾಗೂ ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಹಾಗೂ ವಿಭಾಗದ ಕಾರ್ಯದರ್ಶಿಗಳಾಗಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದರು. ತುಮಕೂರಿನಲ್ಲಿ ಶಾಲಾ ತಪಾಸಣಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದರು.

ಆಂಗ್ಲ ಭಾಷಾ ಬೋಧನೆಯ ವಿಶೇಷ ತರಬೇತಿಗಾಗಿ 1946 ರಲ್ಲಿ ಲಂಡನ್ನಿಗೆ ಹೋದ ತಿಮ್ಮೇಗೌಡರು ಭಾಷಾ ಪ್ರಾವೀಣ್ಯತೆಯನ್ನೂ ಪಡೆದುಕೊಂಡು ಚಿನ್ನದ ಪದಕ ಗಳಿಸಿ ಇಲಾಖೆಗೆ ಕೀರ್ತಿ ತಂದರು. ತರಬೇತಿಯಿಂದ ಮರಳಿ ಬರುತ್ತಿದ್ದಂತೆ ಮಹಾತ್ಮಾ ಗಾಂಧೀಜಿಯವರ ಸೇವಾಶ್ರಮದಲ್ಲಿ 6 ತಿಂಗಳ ತರಬೇತಿ, ನಂತರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ಮುಂದೆ ಉಪನಿರ್ದೇಶಕರಾಗಿ ಬಡ್ತಿ ಪಡೆದು ಬೆಂಗಳೂರು ವಿಭಾಗಕ್ಕೆ ನೇಮಕಗೊಂಡರು. ಉಪನಿರ್ದೇಶಕರಾಗಿ ಚಿತ್ರದುರ್ಗ ಹಾಗೂ ಧಾರವಾಡ ವಿಭಾಗದಲ್ಲಿ ಸೇವೆ ಸಲ್ಲಿಸಿದರು. 1957ರಲ್ಲಿ ಉಪ ಆಯುಕ್ತರಾಗಿ ಬಡ್ತಿ ಪಡೆದು ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ವರ್ಗಾಯಿಸಿದರು. ನಂತರ ಇವರು ವಯಸ್ಕರ ಶಿಕ್ಷಣ ಮಂಡಳಿಯ ನಿರ್ದೇಶಕರಾಗಿ, ಇಲಾಖೆಯ ಜಂಟಿ ನಿರ್ದೇಶಕರಾಗಿ, ನಿರ್ದೇಶಕರಾಗಿ 1972ರಲ್ಲಿ ನಿವೃತ್ತಿಯಾದರು.


ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಶಂಕರೇಗೌಡರು ಇವರಿಗಾಗಿ ಪಠ್ಯಪುಸ್ತಕ ಇಲಾಖೆಯನ್ನೇ ನಿರ್ಮಿಸಿ ಅದರ ನಿರ್ದೇಶಕರನ್ನಾಗಿ ಮಾಡಿದರು. ಹೊಸದಾಗಿ ಆದ ಪಠ್ಯ ಪುಸ್ತಕಗಳ ಇಲಾಖೆಯನ್ನು ಆಧುನಿಕ ಶಿಕ್ಷಣ ಪರಂಪರೆಗೆ ಅನುಸಾರವಾಗಿ ಪಠ್ಯಪುಸ್ತಕಗಳನ್ನು ರಚಿಸಲು ಒಂದು ನೂತನ ಇಲಾಖೆಯನ್ನೇ ನಿರ್ಮಾಣ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು 1972ರಲ್ಲಿ ನಿವೃತ್ತಿಯಾದ ನಂತರ ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘದಲ್ಲಿ ಅಧ್ಯಕ್ಷರಾಗಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ನಿರತರಾದರು. 1973ರಿಂದಲೇ ಕನ್ನಡ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಸರ್ಕಾರದಲ್ಲಿ ಹೋರಾಟ ನಡೆಸಿದರು. ಕೊನೆಗೂ 1986ರಲ್ಲಿ

ಕೆ.ಟಿಎ.ಸ್.ವಿ ಸಂಘದ ಆಶ್ರಯದಲ್ಲಿ ಕನ್ನಡ ಮಾಧ್ಯಮ ಪದವೀಧರ ಶಿಕ್ಷಕರ ತರಬೇತಿಗೆ ರಾಜಾಜಿನಗರ ಶಿಕ್ಷಣ ಮಹಾವಿದ್ಯಾಲಯವನ್ನು ಮಂಜೂರಿ ಪಡೆದು ಶಿಕ್ಷಣ ಕಾಲೇಜು ಸ್ಥಾಪನೆ ಮಾಡಿದ ಕೀರ್ತಿಯು ಶ್ರೀ ಟಿ.ವಿ ತಿಮ್ಮೇಗೌಡರಿಗೆ ಸಲ್ಲುತ್ತದೆ. ಗೌಡರು ಕಾಲೇಜಿನಲ್ಲಿ ಅಧ್ಯಯನ ನಿರ್ದೇಶಕರಾಗಿ ಉತ್ತಮ ಬೋಧಕ ಸಿಬ್ಬಂದಿಯೊಡನೆ 6 ವರ್ಷಗಳ ಕಾಲ ಶಿಕ್ಷಣ ಸಂಸ್ಥೆಯನ್ನು ಅಭಿವೃದ್ಧಿಪಡಿಸಿದರು.

1987ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ನಿಂದ ಸಾಲ ಪಡೆದು 40 ಚದರ ಅಡಿಗಳ ಕಟ್ಟಡವನ್ನು 8.50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿ ಸಂಘದ ಆಶ್ರಯದಲ್ಲಿ ಒಂದು ಬಾಲಕ–ಬಾಲಕಿಯರ ಪ್ರೌಢಶಾಲೆಯನ್ನು ತೆರೆಯಲಾಯಿತು. ತದನಂತರ ಹಂತ ಹಂತವಾಗಿ ಅವಶ್ಯಕತೆಗನುಸಾರವಾಗಿ ಕಟ್ಟಡಗಳನ್ನು ನಿರ್ಮಿಸಲಾಯಿತು. ಕೆಲವು ವರ್ಷಗಳು ಕಳೆದ ನಂತರ 1990ರಲ್ಲಿ ಒಂದು ಬಾಲಕ– ಬಾಲಕಿಯರ ಪದವಿ ಪೂರ್ವ ಕಾಲೇಜು, ನಂತರ ಒಂದು ಪದವಿ ಕಾಲೇಜು ಅಂದರೆ ಬಿ.ಕಾಂ. ಬಿ.ಎ. ಹಾಗೂ ಬಿ.ಬಿ.ಎ. ಪದವಿಗಳ ಕಾಲೇಜುಗಳನ್ನು



ಪ್ರಾರಂಭಿಸಲಾಯಿತು. ಸಂಘ ಪ್ರಾರಂಭವಾಗಿ 25 ವರ್ಷಗಳ ಸವಿನೆನಪಿಗಾಗಿ ಒಂದು ಸಾಂಸ್ಕೃತಿಕವಾದ ರಜತ ಮಹೋತ್ಸವದ ಸಭಾಂಗಣವನ್ನು ನಿರ್ಮಿಸಿ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳ ಸಭೆ, ಸಮಾರಂಭಗಳಿಗೆ ಬಿಟ್ಟುಕೊಡಲಾಯಿತು. ನಂತರ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ.ಕೃಷ್ಣರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಂಗಳೂರಿನ ವಿಜಯನಗರದಲ್ಲಿ 179/69 ಅಡಿ ಉದ್ದಗಲದ ನಿವೇಶನವನ್ನು ಗುತ್ತಿಗೆ ಆಧಾರದ ಮೇರೆಗೆ ಮಹಿಳಾ ವಿದ್ಯಾರ್ಥಿನಿಲಯ ಹಾಗೂ ಮಹಿಳಾ ಕಾಲೇಜು ತೆರೆಯಲು ಒಂದು ನಿವೇಶನವನ್ನು ನೀಡಿದರು. ಸದರಿ ನಿವೇಶನದಲ್ಲಿ ದಾನಿಗಳ ಸಹಾಯ ಮತ್ತು ಎಂ.ಪಿ. ಗ್ರಾಂಟ್‌ನಿಂದ ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಿಸಿ ಒಂದು ಮಹಿಳಾ ವಿದ್ಯಾರ್ಥಿನಿಲಯ ಹಾಗೂ ಒಂದು ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾರಂಭಿಸಿ 13 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಹಾಲಿ ಈ ನಿಲಯದಲ್ಲಿ 50 ಜನ ವಿದ್ಯಾರ್ಥಿನಿಯರು ವಾಸ್ತವ್ಯಮಾಡುತ್ತಿದ್ದಾರೆ.



ಶ್ರೀ ಕೆಂಪಯ್ಯ
ಕಾರ್ಯದರ್ಶಿ

ಸುಧೀರ್ಘವಾಗಿ ಬೆಳೆದ ಈ ಸಂಘದ ಪ್ರಸ್ತುತ ಕಾರ್ಯದರ್ಶಿಗಳಾಗಿ ಶ್ರೀ ಕೆಂಪಯ್ಯನವರು ಸೇವೆ ಸಲ್ಲಿಸುತ್ತಿದ್ದು ಇದರ ಆಶ್ರಯದಲ್ಲಿ ಒಟ್ಟು ಒಂಭತ್ತು ವಿವಿಧ ವಿದ್ಯಾಸಂಸ್ಥೆಗಳು ನಡೆಯುತ್ತಿದ್ದು, ಇದರಲ್ಲಿ 2200 ಕ್ಕೂ ಮಿಗಿಲಾಗಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಸಂಘದ ಶಿಕ್ಷಣ ಸಂಸ್ಥೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅಗತ್ಯ ಶಿಕ್ಷಣ ನೀಡುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಆ ಮೂಲಕ ಸಮಾಜಕ್ಕೆ 50 ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಸಂಸ್ಥೆಯನ್ನು ಸ್ಥಾಪಿಸಿದವರಿಗೆ ಹಾಗೂ ಕಾಯೇನವಾಚಾ, ಮನಸಾ, ಪರಿಶುದ್ಧತೆಯಿಂದ ನಡೆಸಿಕೊಂಡು ಬರುತ್ತಿರುವ ಈಗಿನ ಪದಾಧಿಕಾರಿಗಳಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಜಿಂದಾಲ್ ಫಿಲಾಂಥ್ರೋಫಿಕ್ ಸಂಸ್ಥೆ

ತುಮಕೂರು ರಸ್ತೆ, ಜಿಂದಾಲ್ ನಗರ, ಅಂಚೆಪಾಳ್ಯ,
ಬೆಂಗಳೂರು – 560 073

ಈ ಮೊದಲು ಎಸ್.ಜೆ. ಜಿಂದಾಲ್ ಟ್ರಸ್ಟ್ ಎಂದು ಕರೆಯುತ್ತಿದ್ದ ಸೀತಾರಾಮ್ ಜಿಂದಾಲ್ ಫೌಂಡೇಷನ್ 1969ರಲ್ಲಿ ಸ್ಥಾಪಿತವಾದುದು. ಇದು ಬೆಂಗಳೂರು ನಗರದ ಪ್ರಖ್ಯಾತ ಸರ್ಕಾರೇತರ ಔದಾರ್ಯ ಸಂಘಟನೆ. ಮಾನವೀಯ ದೃಷ್ಟಿಯಿಂದ ಸಮಾಜದ ನಿರ್ಗತಿಕರ, ಬಡವರ ಆಶಾಕಿರಣವಾಗಿ ಅವರ ಮೇಲ್ಮೆಗಾಗಿ ದುಡಿಯುವ ಉದ್ದೇಶವನ್ನೇ ಪ್ರಧಾನವಾಗಿ ಉಳ್ಳದ್ದು. ಇದರ ಸಂಸ್ಥಾಪಕ ಹಾಗೂ ರೂವಾರಿ ಡಾ॥ ಸೀತಾರಾಮ್ ಜಿಂದಾಲ್. 2024ರ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಹೌದು.



ಡಾ. ಸೀತಾರಾಮ್ ಜಿಂದಾಲ್

ಅವರ ಆಶೋತ್ತರಗಳಂತೆ ಸಾಮಾಜಿಕ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಶಿಕ್ಷಣ, ಆರೋಗ್ಯ, ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು

ಕೈಗೊಂಡರು. ಜಾತಿ, ಮತ, ಪಂಥ ಬೇಧವಿಲ್ಲದೇ ಸರ್ವರಿಗೂ ಇದರ ಉಪಯೋಗವಾಗಬೇಕೆಂಬ ಭಾವನೆ ಇವರದ್ದಾಗಿತ್ತು.

ಸೀತಾರಾಮ್ ಜಿಂದಾಲ್ ಫೌಂಡೇಷನ್ ಹಲವಾರು ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಪಾಠಶಾಲೆಗಳನ್ನು ಆರಂಭಿಸಿವೆ. ಇದಲ್ಲದೇ ಪ್ರತಿವರ್ಷ 1200 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, 500 ಕ್ಕೂ ಹೆಚ್ಚು ಶಾಲೆಗಳಿಗೆ ಸಹಾಯಧನ ಕಳೆದ 46 ವರ್ಷಗಳಿಂದ ನೀಡುತ್ತಾ ಬಂದಿದೆ. ಸರ್ಕಾರದಿಂದ ಯಾವುದೇ ರೀತಿಯ ಸಹಾಯ ಪಡೆಯದೆ ಸ್ವತಂತ್ರವಾಗಿ, ಯಾವುದೇ ರಾಜಕೀಯ ಅಥವಾ ವಾಣಿಜ್ಯ ಉದ್ದೇಶಗಳಿಲ್ಲದೇ ಕೇವಲ ಸೇವಾ ಮನೋಭಾವದಿಂದ ಈ ಕಾರ್ಯ ಮಾಡುತ್ತಿದೆ.

ಬೆಂಗಳೂರು ಗ್ರಾಮಾಂತರದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಪ್ರಗುನ್ ಜಿಂದಾಲ್ ಫಿಲಾಂಥ್ರೋಫಿಕ್ ಸಂಸ್ಥೆಯು ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾನ್ಯತೆ ಪಡೆಯುವ ಮೂಲಕ 2003ರಲ್ಲಿ ಪಿ.ಸಿ.ಎಂ.ಬಿ, ಪಿ.ಸಿ.ಎಂ.ಸಿ, ಇ.ಬಿ.ಎ.ಸಿಎಸ್ ಸಂಯೋಜನೆಯನ್ನೊಳಗೊಂಡ 125 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡು, 2022-2023 ನೇ ಪಿ.ಸಿ.ಎಂ.ಬಿ. ಪಿ.ಸಿ.ಎಂ.ಸಿ, ಸಾಲಿನಲ್ಲಿ ಇ.ಬಿ.ಎ.ಎಸ್, ಇ.ಬಿ.ಎ.ಬಿಎಂ, ಇ.ಬಿ.ಎ.ಸಿಎಸ್ ಹೆಚ್ಚುವರಿ ತರಗತಿಗೆ ಅನುಮೋದನೆ ದೊರಕಿದ್ದು, ಇಂದು 790 ವಿದ್ಯಾರ್ಥಿಗಳನ್ನು ಹೊಂದುವುದರ ಜೊತೆಗೆ 2010ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ಜಿಂದಾಲ್ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಮೂಲಕ ಬಿ.ಕಾಂ ಹಾಗೂ ಬಿ.ಸಿ.ಎ ಪದವಿ ಕೋರ್ಸ್‌ಗಳನ್ನು, 2014-15ರಲ್ಲಿ ಬಿ.ಬಿ.ಎ (ಬಿ.ಬಿ.ಎಂ). 2016-17ರಲ್ಲಿ ಬಿ.ಎಸ್ಸಿ ಹಾಗೂ ಎಂ.ಕಾಂ ಸ್ನಾತಕೋತ್ತರ ಪದವಿ ತರಗತಿಗಳನ್ನು, 2022-23ರಲ್ಲಿ ಸ್ನಾತಕೋತ್ತರ ಡಿಪ್ಲೊಮಾ (ಹೆಚ್ ಆರ್ ಎಂ) ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ 2015ರಲ್ಲಿ ನ್ಯಾಕ್ ನಿಂದ ಮಾನ್ಯತೆ ಪಡೆದುಕೊಂಡಿದ್ದು, ಇಂದಿಗೆ 1592 ವಿದ್ಯಾರ್ಥಿಗಳನ್ನು ಹೊಂದಿದ್ದು, ISO ದಿಂದ ಪ್ರಮಾಣೀಕೃತಗೊಂಡ ಪ್ರತಿಷ್ಠಿತ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.

ಇದೆಲ್ಲದರ ಜೊತೆಗೆ ಉತ್ತಮ ಅಧ್ಯಾಪಕರ ಬಳಗ ಹೊಂದಿದ್ದು. 60ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧವನ್ನು ಪ್ರಾಧ್ಯಾಪಕರು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಮಂಡಿಸಿರುತ್ತಾರೆ. ಇಷ್ಟೇ ಅಲ್ಲದೆ ಓರ್ವ ಪ್ರಾಧ್ಯಾಪಕರು ಬೆಂಗಳೂರು

ವಿಶ್ವವಿದ್ಯಾಲಯ ನೀಡುವ 'ಕ್ರೀಡಾಪುರಸ್ಕಾರ' ಪಡೆದರೆ, ಮತ್ತೊರ್ವ ಪ್ರಾಧ್ಯಾಪಕರು ಭಾರತಯಾತ್ರಾ ಕೇಂದ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ರಾಜ್ಯ ಮಟ್ಟದ 'ಸಂಸಪ್ರಶಸ್ತಿ' ಪಡೆದುಕೊಂಡಿರುವುದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದೆ. ಹೀಗೆ ವಿದ್ಯಾರ್ಥಿಗಳ ಬೌದ್ಧಿಕ, ದೈಹಿಕ ಸಾಮರ್ಥ್ಯ ಹೆಚ್ಚಿಸುವಲ್ಲಿ ಈ ಎಲ್ಲ ಅಂಶಗಳು ಕಾರಣವಾಗಿದ್ದು, ಇಂತಹ ಉತ್ತಮ ಸಂಸ್ಥೆಯನ್ನು ಸ್ಥಾಪಿಸಿದ ಯಶಸ್ಸು ಡಾ. ಸೀತಾರಾಂ ಜಿಂದಾಲ್ ಅವರದು. ಅವರ ಆಶಯದಂತೆ ಇಂದು ಈ ಸಂಸ್ಥೆಯು ಈ ಸುತ್ತಮುತ್ತಲಿನ ಭಾಗದಲ್ಲಿ ಹೆಸರಾಂತ ವಿದ್ಯಾ ಸಂಸ್ಥೆಯಾಗಿ ರೂಪುಗೊಂಡಿದೆ. ಇದರಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಕೆ.ಆರ್.ರಘುನಾಥ್ ಅವರು ಮತ್ತು ಉಪಾಧ್ಯಕ್ಷರಾದ ಶ್ರೀಯುತ ಧೀರಜ್ ಸಿಂಗ್ ಅವರ ಆಲೋಚನೆಗಳು, ಚಿಂತನಾಕ್ರಮಗಳ ಪಾತ್ರವು ಪ್ರಮುಖವಾಗಿದೆ. ಜೊತೆಗೆ ಪ್ರಾಂಶುಪಾಲರಾದ ಪ್ರೊ. ವೀಣಾ.ಟಿ ರವರೂ ಸಹ ಸಂಸ್ಥೆಯ ಏಳ್ಗೆಗಾಗಿ ಹೊಸಹೊಸ ಯೋಜನೆಗಳನ್ನು ರೂಪಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದರಲ್ಲಿ ಮುಂದಾಗಿದ್ದು, 2023ನೇ ಸಾಲಿನಲ್ಲಿ ವಿದ್ಯಾಸೌಧ ಆಕಾಡೆಮಿ ನಿರ್ವಹಣಾ ಹಾಗೂ ವಿಜ್ಞಾನ ಕಾಲೇಜು ಇವರ ಈ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿ 'ವಿದ್ಯಾರತ್ನ ಪುರಸ್ಕಾರ' ನೀಡಿ ಗೌರವಿಸಿರುತ್ತದೆ.

ನಮ್ಮ ಸಂಸ್ಥೆಯು ಮುಂಬರುವ ದಿನಗಳಲ್ಲಿ ಹಲವಾರು ಹೊಸ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿದ್ದು, ಪದವಿಪೂರ್ವ ವಿಭಾಗದಿಂದ ಹೊಸಹೊಸ ಸಂಯೋಜನೆಗಳನ್ನು ಪರಿಚಯಿಸುವುದು, ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಹೆಚ್ಚಿಸುವುದು ಅಷ್ಟೇ ಅಲ್ಲದೆ ಪದವಿ ತರಗತಿಗಳನ್ನು ಸ್ವಾಯತ್ತಗೊಳಿಸುವ ಚಿಂತನೆಯನ್ನು ಈಗಾಗಲೇ ನಡೆಸಿದೆ.

ಒಟ್ಟಾರೆ ನಮ್ಮ ಸಂಸ್ಥೆಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸುವಲ್ಲಿ, ನಾಯಕತ್ವದ ಗುಣ ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಗಿದೆ ಎನ್ನಬಹುದು. ಏಕೆಂದರೆ ಇಂದು ಹಲವಾರು ವಿದ್ಯಾ ಸಂಸ್ಥೆಗಳು ವಾಣಿಜ್ಯೀಕೃತಗೊಂಡು ನಾ ಮುಂದು ತಾ ಮುಂದು ಎಂದು ಪೈಪೋಟಿ ನಡೆಸುತ್ತಾ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮುಂದಾಗುತ್ತಿದ್ದರೆ, ಇಂತಹ ಶೈಕ್ಷಣಿಕ ಸಂಸ್ಥೆಗಳ ಎದುರು ನಮ್ಮ ವಿದ್ಯಾಸಂಸ್ಥೆಯು ಉನ್ನತ ಧ್ಯೇಯೋದ್ದೇಶದೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ತನ್ನದೇ



ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡು ಶೈಕ್ಷಣಿಕ ಪ್ರಗತಿಯನ್ನು ಕಾಣುವ ಮೂಲಕ ಯಶಸ್ವಿಯಾದ ವಿದ್ಯಾಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಪ್ರಸ್ತುತ ಬೆಂಗಳೂರಿನಲ್ಲಿ

1. ಜಿಂದಾಲ್ ನೇಚಾರ್ ಕ್ಯೂರ್ ಇನ್ಸ್ಟಿಟ್ಯೂಟ್
2. ಜಿಂದಾಲ್ ಪಬ್ಲಿಕ್ ಸ್ಕೂಲ್
3. ಜಿಂದಾಲ್ ಪದವಿ ಪೂರ್ವ ಕಾಲೇಜು
4. ಜಿಂದಾಲ್ ಮಹಿಳೆಯರ ಪದವಿ ಕಾಲೇಜು
5. ವಿಜಿ ಕಾಲೇಜ್ ಫಾರ್ ನ್ಯಾಚುರೋಪತಿ ಮತ್ತು ಯೋಗ
6. ಮಹಿಳಾ ಕಲಾ ಮತ್ತು ಕರಕುಶಲ ಚಾರಿಟಬಲ್ ಇನ್ಸ್ಟಿಟ್ಯೂಟ್
7. ಆರೋಗ್ಯ ಶಿಕ್ಷಣ ಕೇಂದ್ರ, ಬೆಂಗಳೂರು – ಈ ಸಂಸ್ಥೆಗಳ ಮುನ್ನಡೆಗೆ ಕಟೀಬದ್ಧವಾಗಿದೆ

ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ (ರಿ.)

11 ನೇ ಅಡ್ಡ ರಸ್ತೆ, ಪಶ್ಚಿಮ ಪಾರ್ಕ್ ರಸ್ತೆ, ವೇಣುಗೋಪಾಲಸ್ವಾಮಿ
ದೇವಸ್ಥಾನ ಎದುರು, ಮಲ್ಲೇಶ್ವರಂ, ಬೆಂಗಳೂರು – 560 003


ಶ್ರೀಮತಿ. ಎಸ್. ಲೀಲಾವತಿ

ವನಸುಮದೊಳೆನ್ನ ಜೀವನವು ವಿಕಸಿಸುವಂತೆ,
ಮನವನನುಗೊಳಿಸು ಗುರುವೇ, ಹೇ ದೇವಾ

ಉಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು
ವಿಪುಲಾಶ್ರಯವನೀವ
ಸುಫಲ ಸುಮಭರಿತ ಪಾದಪದಂತೆ
ನಿಜ ಮಾಡೋಲ್ವಿನಿಂ
ಮನವನನುಗೊಳಿಸು ಗುರುವೇ, ಹೇ ದೇವಾ

ವ್ಯಕ್ತಿ ಮನಸ್ಸು ಮಾಡಿದರೆ ಶಕ್ತಿಯಾಗಿ ಬಾಳಬಲ್ಲ. ಗಿಡವೊಂದು ಮರವಾಗಿ ಬೆಳೆದು ನಿಲ್ಲುತ್ತದೆ. ನೂರಾರು ಜೀವನದ ಕೊನೆಯವರೆಗೂ ಪರೋಪಕಾರದ ಕಾರ್ಯದಲ್ಲಿ ತೊಡಗುತ್ತದೆ. ಅದರಂತೆಯೇ ಒಂದು ಗಿಡದಂತಿದ್ದು ನಂತರ ಹೆಮ್ಮರವಾಗಿ ಸಾವಿರ ಜನರಿಗೆ ಕಲ್ಪವೃಕ್ಷದಂತೆ ಬಾಳಿದವರು ಶ್ರೀಮತಿ. ಎಸ್.ಲೀಲಾವತಿಯವರು.


ಶ್ರೀ. ಎಸ್.ಆರ್. ರಾಮಸ್ವಾಮಿ ಮತ್ತು ಶ್ರೀಮತಿ. ರಾಜಮಣಿ ಅವರ ಪುತ್ರಿ ಶ್ರೀಮತಿ ಎಸ್. ಲೀಲಾವತಿ. ಇವರು 1934 ಆಗಸ್ಟ್ 10 ರಂದು ಜನಿಸಿದರು. ಬಾಲ್ಯದಲ್ಲಿಯೇ ಗುರಿಯನ್ನಿಟ್ಟುಕೊಂಡು ಬೆಳೆದರು. ಬಾಲ್ಯದಲ್ಲಿದ್ದಾಗ ಶಾಲೆಯನ್ನು ನೋಡಿದವರಲ್ಲ, ತಾತ ಶ್ರೀ ರಾಮಚಂದ್ರ ಸ್ವಾಮಿಯವರು ಇವರಿಗೆ ಮನೆಯಲ್ಲಿಯೇ ಪಾಠವನ್ನು ಹೇಳಿಕೊಡುತ್ತಿದ್ದರು. ಆ ಹಂತದಲ್ಲಿಯೇ ಅವರು ಇಂಗ್ಲಿಷಿನಲ್ಲಿ ಪ್ರಾವೀಣ್ಯತೆಯನ್ನೂ ಪಡೆದರು. 5ನೇ ತರಗತಿಯಲ್ಲಿದ್ದಾಗ ಶಾಲೆಯ ಮೆಟ್ಟಿಲನ್ನೇರಿದರು. ಬಸವನಗುಡಿಯ ದಿ ಹೋಂ ಸ್ಕೂಲಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣವನ್ನು ಮಹಿಳಾ ಸೇವಾ ಸಮಾಜದಲ್ಲಿ ಕಲಿತರು. ಚೆನ್ನೈನಲ್ಲಿರುವ ಕ್ವೀನ್ ಮೇರಿ ಕಾಲೇಜಿನಲ್ಲಿ ಪಿ.ಯು.ಸಿ ಹಾಗೂ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ ಪದವಿಯನ್ನು ಪಡೆದರು. ಯೂನಿವರ್ಸಿಟಿ ಆಫ್ ಮದ್ರಾಸಿನಿಂದ ಮೂವರು ವಿದ್ಯಾರ್ಥಿಗಳು ಮಾತ್ರ ಬಿ.ಎ ಪದವಿಯನ್ನು ಪಡೆದಿದ್ದರು. ಅವರಲ್ಲಿ ಇವರೂ ಒಬ್ಬರು. ಐಎಎಸ್ ಪರೀಕ್ಷೆಗಾಗಿ ಸಕಲ ತಯಾರಿಯನ್ನು ಮಾಡಿಕೊಂಡಿದ್ದರು. ಅಲ್ಲಿಯ ಉಪನ್ಯಾಸಕರ / ಸ್ನೇಹಿತೆಯರ ಒತ್ತಾಸೆಯಂತೆ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಸೇರಿದರು. ಈ ವೃತ್ತಿಯನ್ನು ಆಸ್ವಾದಿಸಿದರು, ಅನುಭವಿಸಿದರು, ಆನಂದಿಸಿದರು. ಶಿಕ್ಷಕ ವೃತ್ತಿಯ ಮೇಲೆ ಆಸಕ್ತಿ ಹೊಂದಲು ಕಾರಣರಾದ ಸಹಪಾಠಿಗಳು ಮತ್ತು ಶಿಕ್ಷಕರನ್ನು ಜೀವನದ ಕೊನೆಯವರೆವಿಗೂ ಸ್ಮರಿಸುತ್ತಿದ್ದರು. ಇವರು ಶಿಕ್ಷಕ ವೃತ್ತಿಯನ್ನು ಕಾಯಕವನ್ನಾಗಿ ಮಾಡಿಕೊಂಡಿದ್ದರಿಂದ ನಮ್ಮ ಸಮಾಜವು ಅನರ್ಘ್ಯ ರತ್ನವೊಂದನ್ನು ನೋಡುವಂತಾಯಿತು.

ಶ್ರೀ. ಡಿ. ನಾರಾಯಣ ಸ್ವಾಮಿಯವರೊಂದಿಗಿನ ವಿವಾಹವು ಲೀಲಾವತಿಯವರನ್ನು ಬೆಂಗಳೂರಿಗೆ ಕರೆತಂದಿತು. ಮಲ್ಲೇಶ್ವರದಲ್ಲಿರುವ ಬಿ. ಪಿ. ಇಂಡಿಯನ್ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾದರು. ಅಲ್ಪಾವಧಿಯಲ್ಲಿಯೇ ಅಪಾರವಾದ ಜನಪ್ರಿಯತೆಯನ್ನು ಗಳಿಸಿದರು. ನಂತರ ಮಲ್ಲೇಶ್ವರಂನಲ್ಲಿ ಒಂದು ಸಂಸ್ಥೆಯನ್ನು 1970 ರಲ್ಲಿ ಸ್ಥಾಪಿಸಿದರು. ಕೇವಲ ಮೂರು ವಿದ್ಯಾರ್ಥಿಗಳಿಗೆ ಇಬ್ಬರು ಶಿಕ್ಷಕರು. ಶ್ರೀಮತಿ ಲೀಲಾವತಿಯವರು ಮುಖ್ಯೋಪಾಧ್ಯಾಯಿನಿ. ಇವರ ಸಮರ್ಥ ಮಾರ್ಗದರ್ಶನದಿಂದ ನೆರೆ ಹೊರೆಯಲ್ಲಿ ಪ್ರಖ್ಯಾತಿ ಪಡೆಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಕೊಠಡಿಗಳ ಕೊರತೆ ಉಂಟಾಯಿತು. ತಾತ್ಕಾಲಿಕ ಕಟ್ಟಡ, ಮರದ ಹಲಗೆಯ ಮೇಲ್ಚಾವಣಿ, ಶಿಥಿಲಾವಸ್ಥೆಯ ಕಟ್ಟಡ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದರೂ,

ಪಾಲಕ ಪೋಷಕರು ತಕರಾರು ಮಾಡುತ್ತಿರಲಿಲ್ಲ. ಮೂರು ವಿದ್ಯಾರ್ಥಿಗಳಿದ್ದ ಶಾಲೆಯಲ್ಲಿ ಈಗ ಸುಮಾರು 4000 ವಿದ್ಯಾರ್ಥಿಗಳಿದ್ದಾರೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ. ಅಂಬೆಗಾಲಿಟ್ಟಿದ್ದ ಶಾಲೆ ಶ್ರೀಮತಿ ಲೀಲಾವತಿಯವರ ಯೋಜನೆ ಮತ್ತು ದೂರದೃಷ್ಟಿಯಿಂದಾಗಿ ಸುವರ್ಣ ಮಹೋತ್ಸವವನ್ನು ಕಾಣುವಂತಾಯಿತು. ಪ್ರಭಾವಲಯದಲ್ಲಿ ಶ್ರೀಮತಿ. ಲೀಲಾವತಿಯಿದ್ದರೆ ಅವರ ಸುತ್ತ ಆಕಾಶಕಾಯಗಳಂತೆ ಶಿಕ್ಷಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪರಿಶ್ರಮವಿದೆ. ಹಾಜರಾತಿಯಲ್ಲಿ ಹೆಚ್ಚಳವನ್ನು ನೋಡಿ 11ನೇ ಕ್ರಾಸ್ ನಲ್ಲಿ ಕಟ್ಟಡವನ್ನು ಭೋಗ್ಯಕ್ಕೆ ಪಡೆದುಕೊಂಡರು.1977 ರಲ್ಲಿ 7 ನೇ ತರಗತಿ ಮೊದಲ ಬ್ಯಾಚ್ ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆ ತೆಗೆದುಕೊಂಡರೆ, 1984 ರಲ್ಲಿ ಮೊದಲ ಬ್ಯಾಚ್ ಎಸ್.ಎಸ್. ಎಲ್.ಸಿ ಪರೀಕ್ಷೆಗೆ ಹಾಜರಾದರು. ಶಾಲೆಯ ದಿನನಿತ್ಯದ ಚಟುವಟಿಕೆಗಳು ಪಾಲಕರ ಹಾಗೂ ಪೋಷಕರ ಮೆಚ್ಚುಗೆಗೆ ಪಾತ್ರವಾಗಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ ಪರಿವರ್ತಿಸುವ ಬೇಡಿಕೆಗಳು ಹೆಚ್ಚಾದವು. ಆದ್ದರಿಂದ ಪೋಷಕರ ಮನವಿಗೆ ಸ್ಪಂದಿಸಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ತರಗತಿಗಳು ಪಿಯುಸಿ ಇಲಾಖಾ ಅನುಮೋದನೆಯೊಂದಿಗೆ ಆರಂಭವಾದವು. ಪದವಿ ಪೂರ್ವ ಕಾಲೇಜಿಗೂ ಊಹಿಸಲಾಗದ ಪ್ರೋತ್ಸಾಹ ಹಾಗೂ ಬೇಡಿಕೆ ಪೋಷಕ ಮತ್ತು ವಿದ್ಯಾರ್ಥಿ ವೃಂದದಿಂದ ಹರಿದು ಬಂದು ಬೆಂಗಳೂರು ಉತ್ತರ ಜಿಲ್ಲೆಯಲ್ಲಿಯೇ ಒಂದು ಪ್ರತಿಷ್ಠಿತ ಕಾಲೇಜಾಗಿ ರೂಪಗೊಂಡಿತು.

ಶ್ರೀಮತಿ. ಲೀಲಾವತಿಯವರು ಸಂಸ್ಥಾಪಕಿ ಟ್ರಸ್ಟಿಯಾಗಿ ಶಿಕ್ಷಕ/ಬೋಧಕೇತರ ಸಿಬ್ಬಂದಿಗಳಿಗೆ ಏನಾದರೂ ತೊಂದರೆಯಾದರೆ ಆರ್ಥಿಕವಾಗಿಯೂ ಸಹಾಯ ಮಾಡುತ್ತಿದ್ದರು. ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದೆಂಬ ಸಿದ್ಧಾಂತವನ್ನು ಮೈಗೂಡಿಸಿಕೊಂಡಿದ್ದರು. ಕೋದಂಡರಾಮಪುರದಲ್ಲಿರುವ ಬಿಬಿಎಂಪಿ ಶಾಲೆಯನ್ನು 2020 ರಲ್ಲಿ ದತ್ತುವಾಗಿ ಸ್ವೀಕರಿಸಿ ಹಲವು ಸಂಪನ್ಮೂಲಗಳನ್ನು ಒದಗಿಸಿಕೊಟ್ಟರು. ಅಲ್ಲಿಯ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಶ್ರೀ ವಿದ್ಯಾ ಮಂದಿರದಂತಹ ಸಂಸ್ಥೆಯನ್ನು ಸಮಾಜಕ್ಕೆ ನೀಡಿದ ಶ್ರೀಮತಿ. ಲೀಲಾವತಿಯವರು ಕೆಂಪೇಗೌಡ ಪ್ರಶಸ್ತಿ, ಜೆ.ಸಿ. ಬೋಸ್ ಪ್ರಶಸ್ತಿ ಇತ್ಯಾದಿ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಲಕ್ಷಾಂತರ ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಬೋಧಕ/ಬೋಧಕೇತರ ವರ್ಗದವರಿಗೆ ಕಲ್ಪವೃಕ್ಷವಾಗಿ ತಮ್ಮ



ಶ್ರೀ. ಎನ್. ಬಾಬು ದೊರೈಸ್ವಾಮಿ
ಕಾರ್ಯದರ್ಶಿ

ಜೀವನವನ್ನು ಸಾರ್ಥಕಗೊಳಿಸಿಕೊಂಡ ಶ್ರೀಮತಿ. ಲೀಲಾವತಿಯವರು ಜುಲೈ 25, 2020 ರಂದು ದೈವಾಧೀನರಾದರು. ಅವರ ನಂತರ ಅವರ ಇಬ್ಬರು ಸುಪುತ್ರರು ಶ್ರೀ. ಎನ್. ಬಾಬು ದೊರೈ ಸ್ವಾಮಿ – ಕಾರ್ಯದರ್ಶಿಗಳಾಗಿ, ಶ್ರೀ. ಎನ್. ರವಿ ವಿಶ್ವನಾಥ ತಂದೆ–ತಾಯಿಗಳ ಆದರ್ಶದಂತೆ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಶ್ರೀಮತಿ. ಭಾರತಿ ಬಾಬು ದೊರೈಸ್ವಾಮಿಯವರು ಸಂಸ್ಥೆಯ ಪ್ರಾಂಶುಪಾಲರಾಗಿ ಲೀಲಾವತಿಯವರ ಕನಸುಗಳನ್ನು ಸಾಕಾರಗೊಳಿಸುತ್ತಿದ್ದಾರೆ. ಮಲ್ಲೇಶ್ವರಂನಲ್ಲಿ ಮೂರು ಪ್ರತ್ಯೇಕ ಕಟ್ಟಡಗಳಲ್ಲಿ ವಿವಿಧ ಹಂತದ ತರಗತಿಗಳು ಶ್ರೀ ವಿದ್ಯಾಮಂದಿರ ಎಜ್ಯುಕೇಶನ್ ಟ್ರಸ್ಟ್ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಯಲ್ಲಿ ಓದಿರುವ ವಿದ್ಯಾರ್ಥಿಗಳು ದೇಶ–ವಿದೇಶಗಳಲ್ಲಿ ಉನ್ನತ ಸಾಧನೆಗಳನ್ನು



ಮಾಡಿದ್ದಾರೆ; ಮಾಡುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು/ಬೋಧಕರು/ಬೋಧಕೇತರ ವರ್ಗದವರು ಶ್ರೀಮತಿ. ಎನ್.ಲೀಲಾವತಿಯವರನ್ನು ಮಾತೃ ಸ್ಥಾನದಲ್ಲಿಟ್ಟು ನೋಡುವರು. ಇದಕ್ಕೆ ಲೀಲಾವತಿಯವರ ವ್ಯಕ್ತಿತ್ವವೇ ಕಾರಣವೆಂದರೆ ಅತಿಶಯವಲ್ಲ.

ಕನಸು ಈಡೇರಿಸಿಕೊಂಡು ಜೀವನದಲ್ಲಿ ಯಶಸ್ಸು ಪಡೆಯುವುದು ಎಲ್ಲರ ಕನಸು. ಸ್ಟೀಫನ್ ಹಾಕಿಂಗ್ ಹೇಳುವಂತೆ ನೀವು ನಕ್ಷತ್ರಗಳನ್ನು ನೋಡಿರಿ, ಕಾಲಿನ ಬುಡ ನೋಡಿದರೆ ಪ್ರಯೋಜನವಿಲ್ಲ. ನೀವು ಏನು ನೋಡಿವಿರೋ ಅಷ್ಟು ಸಾಧನೆ ಮಾಡುವ ಕುರಿತು ಆಲೋಚಿಸಿ, ಈ ಬ್ರಹ್ಮಾಂಡ ಏಕಿದೆ ಎಂಬ ಕೂತೂಹಲ ಹೆಚ್ಚಿಸಿಕೊಳ್ಳಿ ಈ ಮಾತು ಶ್ರೀಮತಿ ಲೀಲಾವತಿಯವರ ಪಾಲಿಗೆ ಅಕ್ಷರಶಃ ನಿಜವಾಗಿದೆ.

B.E.S HIGH SCHOOL

ಭಾರತ್ ಎಜುಕೇಷನ್ ಸೊಸೈಟಿ (ರಿ.)

27, 16ನೇ ಮುಖ್ಯ ರಸ್ತೆ, 4ನೇ ಟಿ' ಬ್ಲಾಕ್ ಪೂರ್ವ,
ಪಟ್ಟಾಭಿರಾಮ ನಗರ, ಜಯನಗರ, ಬೆಂಗಳೂರು – 560 011

ಜಯನಗರ, ಬೆಂಗಳೂರು ನಗರದಲ್ಲಿ ಭಾರಿ ಬಡಾವಣೆ. ಅಲ್ಲಿಯು ಕೆಲವು ಶಿಕ್ಷಣ ಸಂಸ್ಥೆಗಳಿದ್ದರೂ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬರುವ ಮಕ್ಕಳಿಗೆ ಪ್ರವೇಶ ದೊರೆಯುವುದು



ಶ್ರೀ. ಬಿ.ಎಲ್. ಲಕ್ಕೇಗೌಡರು
ಸ್ಥಾಪಕರು

ಕಷ್ಟವಾಗುತ್ತಿತ್ತು. ಹಳ್ಳಿಗಳಿಂದ ಬಂದು ಸೇರಿದ್ದ ಕೆಲವು ಮುಖಂಡರು, ಸರ್ಕಾರಿ ಸೇವೆಯಲ್ಲಿದ್ದ ನಿವೃತ್ತರಾದ ಕೆಲವು ಅಧಿಕಾರಿಗಳು ಇದನ್ನು ಮನಗಂಡು ಎಲ್ಲರೂ ಸೇರಿ ತಾವೇ ಏಕೆ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬಾರದು ಎಂದು ಯೋಚಿಸಿ 1971ರಲ್ಲಿ ಭಾರತ್ ವಿದ್ಯಾ ಸಂಸ್ಥೆ (ಭಾರತ್ ಎಜುಕೇಷನ್ ಸೊಸೈಟಿ) ಯನ್ನು ಜಯನಗರ ಬಡಾವಣೆಯಲ್ಲಿ ಪ್ರಾರಂಭಿಸಿದರು. ಇದರ ಸ್ಥಾಪಕರು ಶ್ರೀ. ಬಿ.ಎಲ್. ಲಕ್ಕೇಗೌಡರು.

ಸರ್ಕಾರಕ್ಕೆ ಮನವಿ ಸಲ್ಲಿಸಿ ಸಂಸ್ಥೆಗೆ ಬೇಕಾದ ಸ್ಥಳವನ್ನು ಪಡೆದುಕೊಂಡರು. ಸರ್ಕಾರವು ಸಂಸ್ಥೆಯ ವಿಷಯದಲ್ಲಿ



ಶಾಲೆಯ ಅಂದಿನ ಮತ್ತು ಇಂದಿನ ಚಿತ್ರ



ಸದಭಿಮಾನವನ್ನು ತಾಳಿ ಎಲ್ಲ ಬಗೆಯ ಪ್ರೋತ್ಸಾಹವನ್ನು ನೀಡಿತು. ಸಾರ್ವಜನಿಕರು ತಮ್ಮ ಸಹಕಾರ ನೀಡಿದರು.

ಇದರ ಸ್ಥಾಪನೆಗೂ ಒಂದು ಘಟನೆ ಪ್ರೇರಣೆಯಾಗಿದೆ: 1971ರ ಪ್ರಾರಂಭದಲ್ಲಿ ಬೆಂಗಳೂರಿನ ಕಾಟನ್ ಪೇಟೆಯಲ್ಲಿ ರಾಮಕೃಷ್ಣ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರನ್ನು ನಿರುದ್ಯೋಗಿಯೊಬ್ಬನಿಗೆ ಕೆಲಸ ಕೊಡುವ

ಸಲುವಾಗಿ ಆಗಾಗ ಭೇಟಿ ಮಾಡುವ ಪ್ರಸಂಗ ಒದಗಿಬಂತು. ಆದರೆ ಇದರಿಂದ ಏನು ಪ್ರಯೋಜನವಾಗಲಿಲ್ಲ. ಉದ್ಯೋಗ ಕೊಡಿಸುವ ಭರವಸೆ ನೀಡಿದರು. ಮುಂದೆ ಜಯನಗರದಲ್ಲಿ ಶಿಶುವಿಹಾರ ಪ್ರಾರಂಭಿಸುವ ಇರಾದೆ ಇದೆ ಎಂದರು. ನಿರುದ್ಯೋಗಿಗೆ ಜೀವನೋಪಾಯ ಮಾರ್ಗ ಹೇಗಾದರೂ ತೋರಿಸಬೇಕೆಂಬ ಹಂಬಲ ಪ್ರಬಲವಾಗಿತ್ತು ಜೊತೆಗೆ ವಿದ್ಯೆ ಎಲ್ಲರ ಸ್ವತ್ತಾಗಲಿ ಎಂಬ ದೀಕ್ಷಾ ಭಾವನೆ ವಿದ್ಯಾ ಸಂಸ್ಥೆ ಹುಟ್ಟು ಹಾಕಬೇಕೆಂಬ ಚಿಂತನೆಗೆ ಚಾಲನೆ ನೀಡಿತು. ಸಮಾನ ಮನಸ್ಕ ಗೆಳೆಯರ ಸಭೆ ಸೇರಿಸಿ 1971ರ ಜುಲೈ 4ರಂದು ನಿರ್ಧಾರ ಪ್ರಕಟಿಸಲಾಯಿತು. ಜುಲೈ 7ರಂದು ಸಂಸ್ಥೆ ನೋಂದಣಿ ಮಾಡಿಸಿ ನಿರುದ್ಯೋಗಿಗೆ ಸಂಸ್ಥೆಯಲ್ಲಿ ಉದ್ಯೋಗವನ್ನು ನೀಡಲಾಯಿತು. ಹೀಗೆ ಮೈ ತಾಳಿದ ಸಂಸ್ಥೆಯೇ ಈಗಿನ ಬೆಂಗಳೂರಿನ ಜಯನಗರದ ಭಾರತ್ ವಿದ್ಯಾ ಸಂಸ್ಥೆ.

ನಾಡಿನ ಹಿರಿಯ ಚೇತನ, ವಿದ್ಯೆ ಎಲ್ಲರ ಹಕ್ಕು ಎಂದು ಹಳ್ಳಿಗಾಡಿನಲ್ಲಿ ವ್ಯಾಪಕ ಪ್ರಚಾರ ಮಾಡಿದ ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕ ದಿವಂಗತ ಕೆ.ಹೆಚ್. ರಾಮಯ್ಯನವರ ಪುತ್ರ ಶ್ರೀ ಕೆ.ಆರ್. ಮರುದೇವಗೌಡರೇ ಭಾರತ್ ವಿದ್ಯಾ ಸಂಸ್ಥೆಯ ಪ್ರಥಮ ಅಧ್ಯಕ್ಷರು.



ಸಂಸ್ಥೆಯ ಪ್ರಾರಂಭದ ಸರ್ವಸದಸ್ಯರ ಸಭೆ:
ಕೆ.ಆರ್. ಮರುದೇವಗೌಡ ಮತ್ತು ಇತರರು

1971-72 ರಲ್ಲಿ ಸಂಜೆ ಕಾಲೇಜು, 1972-73 ರಲ್ಲಿ ಪದವಿ ಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜು, ಶಿಕ್ಷಣ ಮಹಾ ವಿದ್ಯಾಲಯ, 1984-85ರಲ್ಲಿ ಔಷದ ವಿದ್ಯಾಲಯ, 1986 ರಲ್ಲಿ ಪ್ರೌಢಶಾಲೆ ನಂತರ ಶಿಶುವಿಹಾರ, ಪ್ರಾಥಮಿಕ ಶಾಲೆಗಳನ್ನು ಕಲ್ನಾರು ಶೀಟುಗಳ ಅಡಿಯಲ್ಲಿ ಪ್ರಾರಂಭಿಸಲಾಯಿತು. ಸಂಸ್ಥೆಗೆ ಅಂದಿನ ಬೆಂಗಳೂರು ನಗರಾಭಿವೃದ್ಧಿಯಲ್ಲಿ 4 ಎಕರೆ 30 ಗುಂಟೆ ವಿಶಾಲ ವಿಸ್ತೀರ್ಣ ಜಾಗವನ್ನು 1972 ರ ಫೆಬ್ರವರಿಯಲ್ಲಿ 45 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಪಡೆಯಲಾಯಿತು.

ನಂತರದ ವರ್ಷಗಳಲ್ಲಿ ಬಿಇಎಸ್ ಕಾನೂನು ವಿದ್ಯಾಲಯ, ತಾಂತ್ರಿಕ ವಿದ್ಯಾಲಯ, ಶಿಕ್ಷಕರ ತರಬೇತಿ ಸಂಸ್ಥೆ, ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ ಮತ್ತು ಸಾತನೂರಿನಲ್ಲಿ ಎಸ್. ಕರಿಯಪ್ಪ ಸ್ಮಾರಕ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಎಲ್ಲಾ ವಿದ್ಯಾಲಯಗಳಲ್ಲಿ ಇಂದು ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಕೋರ್ಸ್ ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. 250ಕ್ಕೂ ಹೆಚ್ಚು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಹಂತ ಹಂತವಾಗಿ ಬೆಳೆದು ಸಂಸ್ಥೆಯ ವಿಕಾಸದಲ್ಲಿ ಮಹತ್ವದ ಬೆಳವಣಿಗೆಯೊಂದಿಗೆ ಜಯನಗರದ ನಾಲ್ಕನೇ ಹಂತದಲ್ಲಿ ಇಂದು ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾಗಿ ಬೆಳೆದು ಸರ್ವರಿಗೂ ಶಿಕ್ಷಣ ಸಹಕಾರ ತತ್ವದೊಡನೆ, ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಾ 1996 ರಲ್ಲಿ ರಜತ ಮಹೋತ್ಸವ ವನ್ನು ಆಚರಿಸಿ ಮುನ್ನಡೆಯುತ್ತಿದೆ.

ಶ್ರೀಯುತರಾದ ಕೆ.ಆರ್. ಮರುದೇವೆಗೌಡ, ಡಾ. ಕೆ.ಎನ್. ಕುಚೇಲ, ಬಿ.ಎಲ್. ಲಕ್ಕೇಗೌಡ, ಶ್ರೀ ಟಿ. ಚಂದ್ರಶೇಖರ್, ಎಸ್ ಬಿ ನರಸಿಂಹಯ್ಯ,ಕೆ.ಎಸ್ ತಿಮ್ಮಪ್ಪಯ್ಯ, ಸಿ.ಎಸ್. ನಂಜಪ್ಪ, ಎಂ. ಚೌಡಯ್ಯ, ಜಿ. ಗೋವಿಂದ ರಾಜು, ಹೆಚ್.ಆರ್. ದಾಸೇಗೌಡ, ಎಂ.ಎಲ್. ಸುಬ್ಬಣ್ಣ, ಎಂ.ಕೆ. ಮುಟ್ಟಲಿಂಗಯ್ಯ, ಎಸ್. ಮಂಚಯ್ಯ, ಶ್ರೀ ಕೆ.ಎಸ್ ರಾಮೇಗೌಡ, ವಿ.ಪಿ ಸ್ವಾಮಿ, ಪಿ. ಪಿಳ್ಳಬೈರಪ್ಪ, ಹಚ್.ವಿ ಹಿರಣ್ಯಗೌಡ, ಕೆ.ಎಲ್ ಶಿವಲಿಂಗೇಗೌಡ, ಡಿ.ಸಿ. ಚನ್ನೇಗೌಡ, ಬಿ ಗಂಗಪ್ಪ, ವಿ.ಎಂ ರಂಗಸ್ವಾಮಿ, ಎಂ.ಎಸ್ ಹರೀಶ್, ಎಂ. ವೆಂಕಟಸ್ವಾಮಿ,ಎಸ್.ಎಂ ಮುನಿಯಪ್ಪ, ಎಂ.ಎಲ್ ನಾಗರಾಜ್, ಸಿ.ಎಸ್ ಮಲ್ಲಯ್ಯ, ಕೆ.ಬಿ.ಮಾದೇಗೌಡ ಇವರು ಅಂದು ಸ್ಥಾಪನೆಗೆ ನೆರವಾದರು

ಹೀಗೆ ಬೆಳೆದುಬಂದ ಬೃಹತ್ತಾದ ಸಂಸ್ಥೆಯ ಈಗಿನ ಆಡಳಿತ ಮಂಡಳಿ: ಶ್ರೀ ಎಸ್.ಟಿ. ಸೋಮಶೇಖರ್ – ಗೌರವಾಧ್ಯಕ್ಷರು, ಶ್ರೀ. ಕೆ.ಆರ್. ನಿರ್ಮಲ್ ಕುಮಾರ್ – ಅಧ್ಯಕ್ಷರು, ಶ್ರೀ. ಎನ್.ಎಸ್.ವಿಜಯ – ಉಪಾಧ್ಯಾಕ್ಷರು, ಶ್ರೀ. ಕೃಷ್ಣದಾಸ್ ಎಂ – ಕಾರ್ಯದರ್ಶಿ, ಶ್ರೀಮತಿ. ಬಿ.ಎಲ್. ನಂದಿನಿ– ಖಜಾಂಚಿ, ಶ್ರೀ. ಪಿ. ನರಸಿಂಹಮೂರ್ತಿ, ಶ್ರೀ. ಬಿ.ಆರ್. ವಾಸುದೇವ್, ಶ್ರೀ. ಜಿ.ಎನ್. ಆರ್.ಮೋಹನ, ಡಾ. ರಾಮೇಗೌಡ, ಶ್ರೀ.ಟಿ.ಆರ್. ವೆಂಕಟರೆಡ್ಡಿ, ಶ್ರೀ. ಕೆ.ಎಸ್. ಸುಧಾಕರ್, ಶ್ರೀ ಬಿ.ಸಿ. ಶಿವಲಿಂಗೇಗೌಡ, ಶ್ರೀ, ಮರಿಮಲ್ಲಯ್ಯ, ಶ್ರೀಮತಿ. ಸುಧಾದತ್ತು, ಶ್ರೀ. ಲಕ್ಷ್ಮಣ್, ಪ್ರೊ.ಟಿ ನಾರಾಯಣಪ್ಪ, ಪ್ರೊ.ಎನ್. ಕಾಮರಾಜ್, ಡಾ.ಟಿ.ಪಿ. ಯೋಗ, ಶ್ರೀ. ಎಂ.ಟಿ. ನಾಗರಾಜ್, ಶ್ರೀ ಎ.ಎಂ. ರಾಮಕೃಷ್ಣಯ್ಯ, ಶ್ರೀ ರವೀಂದ್ರಕಾಂತ.

ಈ ಆಡಳಿತ ಮಂಡಲಿಯ ನೇತೃತ್ವದಲ್ಲಿ ಕೆಳಗಿನ ಶಾಲಾ ಕಾಲೇಜು ನಡೆಯುತ್ತಿವೆ.


ಬಿಇಎಸ್ ಶಿಕ್ಷಣ ಮಹಾ ವಿದ್ಯಾಲಯ (B.Ed), ಬಿಇಎಸ್ ಪದವಿ ವಿದ್ಯಾಲಯ, ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಮಹಾ ವಿದ್ಯಾಲಯ, ಬಿಇಎಸ್ ಪದವಿ ಪೂರ್ವ ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿದ್ಯಾಲಯ, ಬಿಇಎಸ್ ಕಾನೂನು ಮಹಾ ವಿದ್ಯಾಲಯ (3 ಮತ್ತು 5 ವರ್ಷಗಳ ಕೋರ್ಸ್), ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಪೂರ್ವ ಕಾಲೇಜು, ಬಿಇಎಸ್ ಔಷಧ ವಿದ್ಯಾಲಯ(ಡಿ. ಫಾರ್ಮಾ), ಬಿಇಎಸ್ ತಾಂತ್ರಿಕ ವಿದ್ಯಾಲಯ (ಡಿಪ್ಲೊಮಾ ಇನ್ ಇಂಜಿನಿಯರಿಂಗ್ ಕೋರ್ಸ್), ಬಿಇಎಸ್ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕೇಂದ್ರ (ಡಿ.ಇಡಿ), ಬಿಇಎಸ್ ಕನ್ನಡ ಮಾಧ್ಯಮ ಪ್ರೌಢಶಾಲೆ, ಬಿಇಎಸ್ ನರ್ಸರಿ, ಪ್ರಾಥಮಿಕ ಮತ್ತು ಆಂಗ್ಲ ಪ್ರೌಢಶಾಲೆ, ಬಿಇಎಸ್ ಸಿಬಿಎಸ್ಇ ಶಾಲೆ, ಬಿಇಎಸ್ ಮಹಿಳಾ ವಿದ್ಯಾರ್ಥಿನಿಲಯ, ಶ್ರೀ ಕೆ.ಎಸ್. ಕರಿಯಪ್ಪ ಸ್ಮಾರಕ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆ – ಸಾತನೂರು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿ (ನೋಂ)
Panchajanya vidya Peetha Welfare Trust (R)
Rajajinagar, Bangalore

ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿ (ನೋಂ)

19ನೇ ಮುಖ್ಯರಸ್ತೆ, 1ನೇ 'ಎನ್' ಬ್ಲಾಕ್, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಹಂತ, ನಾಗಪುರ, ಬೆಂಗಳೂರು – 560 010

ಹೆಣ್ಣೊಂದು ಕಲಿತರೆ ನಾಡೇ ಕಲಿತಂತೆ ಎಂಬ ನಾಣ್ಣುಡಿಯನ್ನು ಸತ್ಯವಾಗಿಸಿದ ಹಾಗೂ ರಾಜಕೀಯ ಮುತ್ಸದ್ದಿಯಾದ ಶ್ರೀಮಾನ್ ಜಯಪ್ರಕಾಶ ನಾರಾಯಣರವರು ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್ 1ನೇ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ಇದರ ಸಂಸ್ಥಾಪಕ ಕಾರ್ಯದರ್ಶಿಗಳು. ಬೆಂಗಳೂರು ಗ್ರಾಮಾಂತರ ಜಿಲ್ಲೆ (ಈಗಿನ ರಾಮನಗರ ಜಿಲ್ಲೆ) ಮಾಗಡಿ ತಾಲ್ಲೂಕಿನ ಮಣ್ಣಿನ ಮಗನಾದ ಶ್ರೀಮಾನ್ ಎಂ.ಹೆಚ್. ಜಯಪ್ರಕಾಶ್ ನಾರಾಯಣರವರು ದಿನಾಂಕ: 21–12–1926 ರಂದು ದಿ॥ ಶ್ರೀಮಾನ್ ಹುಚ್ಚ ಹನುಮಯ್ಯನವರು ಮತ್ತು ಲಕ್ಷ್ಮಮ್ಮ ದಂಪತಿಗಳಿಗೆ ದ್ವಿತೀಯ ಪುತ್ರರಾಗಿ ಜನಿಸಿದರು. ಇವರ ಮೂಲ ಹೆಸರು ಚಿಕ್ಕ ಹನುಮಯ್ಯ.



ಶ್ರೀಯುತ. ಜಯಪ್ರಕಾಶ್ ನಾರಾಯಣ
ಸಂಸ್ಥಾಪಕ ಕಾರ್ಯದರ್ಶಿಗಳು

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ತಂದೆ-ತಾಯಿಯಿಂದ ಬಳುವಳಿಯಾಗಿ ಬಂದ ಉತ್ತಮ ಸಂಸ್ಕಾರ, ದೈವಭಕ್ತಿ ಹಾಗೂ ಹುಟ್ಟು ಪ್ರತಿಭೆಗಳೊಳಗೂಡಿ ಆಕರ್ಷಕ ಮುಖಚರ್ಯೆಯುಳ್ಳವರಾಗಿ ಬೆಳೆಯುತ್ತಿದ್ದರು. ಪ್ರಾಥಮಿಕ ಹಂತದ ವಿದ್ಯಾರ್ಜನೆಯನ್ನು ಮಣ್ಣಿಗನಹಳ್ಳಿ ಹಾಗೂ ತುಮಕೂರಿನ ಎ.ಕೆ. ಬೋರ್ಡಿಂಗ್ ಹೋಮ್‌ನಲ್ಲಿ ಪಡೆದರು. ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಹೈಸ್ಕೂಲ್ ಸೇರಿದರು. ಬಾಯ್ಸ್ ಹೋಮ್ ವಿದ್ಯಾರ್ಥಿ ನಿಲಯದಲ್ಲಿ ಉಚಿತ ಊಟ ವಸತಿಗಾಗಿ ಪ್ರವೇಶ ಪಡೆದರು. ಪ್ರತಿಭಾವಂತ ಹಾಗೂ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಜೆ.ಪಿ ಯವರು ದೊರಕಿದ ಉತ್ತಮ ಅವಕಾಶವನ್ನು ಉಪಯೋಗಿಸಿಕೊಂಡು 1945-46 ರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ, 1947-48 ರಲ್ಲಿ ವಿಜ್ಞಾನ ವಿಭಾಗದ ಇಂಟರ್-ಮೀಡಿಯಟ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ನಂತರ ಸೆಂಟ್ರಲ್ ಕಾಲೇಜಿನಲ್ಲಿ ಪ್ರೊ.ಬಿ. ಬೊಂಡೊಡೆಯವರ ಸಲಹೆಯ ಮೇರೆಗೆ ಭೌತಶಾಸ್ತ್ರ ಬಿ.ಎಸ್ಸಿ (ಆನರ್ಸ್)ಗೆ ಸೇರ್ಪಡೆಯಾದರು. ಸೆಂಟ್ರಲ್ ಕಾಲೇಜಿನ ವಸತಿ ನಿಲಯದಲ್ಲಿದ್ದು ವ್ಯಾಸಂಗ ಮುಂದುವರೆಸಿದರು. ವಿದ್ಯಾರ್ಥಿದೆಸೆಯಲ್ಲಿಯೇ ತಂದೆಯವರ ಸಾಮಾಜಿಕ ಸೇವೆಯಿಂದ ಪ್ರಭಾವಿತರಾಗಿದ್ದ ಜೆ.ಪಿ. ಯವರು ತಮ್ಮನ್ನು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡರು ಹಾಗೂ ದಿ.ಹೆಚ್. ನರಸಿಂಹಯ್ಯನವರ ಆದರ್ಶ ದೇಶಪ್ರೇಮದಿಂದ ಪ್ರೇರಣೆಗೊಂಡು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿ ಬಂದರು. ಸ್ವಾತಂತ್ರ್ಯ ನಂತರ ಮೈಸೂರಿನ ಮಹಾರಾಜರ ಆಳ್ವಿಕೆ ಕೊನೆಗಾಣಿಸಿ ಪ್ರಜಾಪ್ರಭುತ್ವ ಸರ್ಕಾರ ರಚಿಸಲು ಹೋರಾಟ ಆರಂಭವಾಯಿತು. ಇದಕ್ಕಾಗಿ ಮೈಸೂರು ಚಲೋ ಚಳುವಳಿಯಲ್ಲಿ ಗೆಳೆಯರಾದ ಎಚ್. ಸಂಜೀವಯ್ಯ ಹಾ...ಾ ನರಸಿಂಹಯ್ಯನವರ ಜೊತೆ ಕೈ ಜೋಡಿಸಿ "ಇಂಕ್ವಿಲಾಬ್ ಪತ್ರಿಕೆ"ಯನ್ನು ರಾತ್ರೋ ರಾತ್ರಿ ಬೀದಿಗಳಲ್ಲಿ ಲೈಟ್ ಕಂಬಗಳ ಮೇಲೆ ಅಂಟಿಸುತ್ತಿದ್ದರು. ವಿದ್ಯಾರ್ಥಿಗಳೆಲ್ಲರನ್ನು ಜಾಥಾ ಹೊರಡಿಸಲು ಮುಂದಾಳತ್ವ ವಹಿಸಿದಾಗ ಮತ್ತೊಮ್ಮೆ ಜೈಲುವಾಸ ಅನುಭವಿಸಿ ಹೊರ ಬಂದರು. ಈ ಸಮಯದಲ್ಲಿ ಸ್ವಾತಂತ್ರ್ಯ ಸಮಾಜವಾದಿ ಹೋರಾಟಗಾರರಾದ ಲೋಕನಾಯಕ ಶ್ರೀಮಾನ್ ಜಯಪ್ರಕಾಶ ನಾರಾಯಣರವರ ಪ್ರಭಾವಕ್ಕೆ ಒಳಗಾಗಿ ತಮ್ಮ ಹೆಸರನ್ನು ಜಯಪ್ರಕಾಶ ನಾರಾಯಣ ಎಂದು ಬದಲಾಯಿಸಿಕೊಂಡರು.

1971 ರಲ್ಲಿ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದ ದಿ. ಶ್ರೀ.ಎ. ಕೃಷ್ಣಪ್ಪನವರು "ಪಾಂಚಜನ್ಯ" ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು, ಇವರು ಹರಿಕಥಾ ವಿದ್ವಾಂಸರು, ಸಮಾಜ ಸೇವಕರು, ಆಗಿದ್ದು ಪ. ಜಾತಿ / ಪಂ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದ ವಿದ್ಯಾರ್ಥಿನಿಯರಿಗಾಗಿ ಬೆಂಗಳೂರಿನ ಶ್ರೀರಾಮಪುರದಲ್ಲಿ ವಿದ್ಯಾರ್ಥಿ ನಿಲಯವೊಂದನ್ನು ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಜಯಪ್ರಕಾಶ ನಾರಾಯಣರವರ ಕಾರ್ಯಕೌಶಲತೆ, ದಕ್ಷತೆಯನ್ನು ಗುರುತಿಸಿ ಅವರನ್ನು ತಮ್ಮ ಆಪ್ತ ಶಿಷ್ಯರನ್ನಾಗಿ ಸ್ವೀಕರಿಸಿದರು. ಈ ವಿದ್ಯಾರ್ಥಿನಿಯರ ಮಂದಿರವೇ ಮುಂದೆ ಪಾಂಚಜನ್ಯದ ಹೆಸರಲ್ಲಿ ಜೆ.ಪಿ ಯವರು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಲು ಕಾರಣವಾಯಿತು.

ನ ಹೀ ಜ್ಞಾನೇನ ಸದೃಶಮ್ ಈ ಉಕ್ತಿಯನ್ನು ಸತ್ಯವಾಗಿಸುವುದು ತಮ್ಮ ಪಾಂಚಜನ್ಯ ವಿದ್ಯಾಪೀಠ ಶಿಕ್ಷಣ ಸಂಸ್ಥೆಯ ಗುರಿಯಾಗಬೇಕು. ತನ್ಮೂಲಕ ಶಿಕ್ಷಣವು ಎಲ್ಲಾ ನೊಂದ ಬಡವರ್ಗದ ಕೆಳವರ್ಗದ ಹೆಣ್ಣುಮಕ್ಕಳಿಗೆ ಉಚಿತ ವಾಗಿ ದೊರೆಯುವಂತಾಗಬೇಕು. ತನ್ಮೂಲಕ ಸಮಾಜದ ಏಳಿಗೆಯನ್ನು ಸಾಧಿಸಬೇಕೆಂಬುದು ಆಶಯ ಹೊತ್ತ ಜೆ.ಪಿ ಯವರು ಅಂದಿನ ರಾಷ್ಟ್ರನಾಯಕರಾದ ಶ್ರೀ ಬಾಬು ಜಗಜೀವನರಾಮ್ ರವರ ಆಶೀರ್ವಾದ ಪಡೆದು ಹೆಣ್ಣು ಮಕ್ಕಳ ವಸತಿ ನಿಲಯಕ್ಕೆ ಜಗಜೀವನರಾಮ್ ವಿದ್ಯಾರ್ಥಿನಿ ಮಂದಿರ ಎಂದು ಮರುನಾಮಕರಣ ಮಾಡಿದರು. 1971 ರಲ್ಲಿ ಶ್ರೀಮಾನ್ ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರಾಜಾಜಿನಗರ 1ನೇ ಎನ್ ಬ್ಲಾಕ್‌ನಲ್ಲಿ ನಿವೇಶನವನ್ನು ಮಂಜೂರು ಮಾಡಿಸಿಕೊಂಡರು. ಸಮಾಜ ಕಲ್ಯಾಣ ಇಲಾಖೆ ಜೊತೆ ಕರಾರನ್ನು ಮಾಡಿಕೊಂಡು ಹೆಣ್ಣು ಮಕ್ಕಳ ಉಚಿತ ವಸತಿನಿಲಯವನ್ನು ಪ್ರಾರಂಭಿಸಿದರು. ವಸತಿ ಮತ್ತು ಶಿಕ್ಷಣ ಒಂದೇ ಕಡೆ ದೊರೆಯಬೇಕೆಂಬ ಉದ್ದೇಶದಿಂದ "ಪಾಂಚಜನ್ಯ ವಿದ್ಯಾಪೀಠ ಶಿಕ್ಷಣ ಸಂಘ"ವನ್ನು ಕರ್ನಾಟಕ ಸೊಸೈಟಿ 1960ರ ಕಾಯ್ದೆ ನಿಯಮಗಳಡಿಯಲ್ಲಿ ರಿ ಸಂಖ್ಯೆ 238/72-73 ದಿ: 30-10-1972 ರಲ್ಲಿ ನೋಂದಣಿ ಮಾಡಿಸಿದರು (ಮೈಸೂರು ಕಾಯ್ದೆ ನಿಯಮ ನಂ. 17-1960) ಪ್ರಾರಂಭದಲ್ಲಿ ಶ್ರೀಯುತ ಕೆ.ಟಿ. ತಿರುಮಲಸ್ವಾಮಿ ನಿವೃತ್ತ ಕಮಿಷನರ್ ಇದರ ಅಧ್ಯಕ್ಷರಾಗಿದ್ದರು. ಡಾ. ದಯಾನಂದ.ಕೆ.ಹೆಚ್, ಡಾ॥ ವೆಂಕಟಯ್ಯ, ಡಾ॥ವಿ. ಗಂಗಯ್ಯ, ಡಾ. ಚಿಕ್ಕರಂಗಯ್ಯ ಇವರುಗಳು ಸದಸ್ಯರಾಗಿದ್ದರು. ಸಮಾಜ ಸೇವಕರು ಮತ್ತು ದಾನಿಗಳು ಆಗಿದ್ದ

ದಿ. ಖಂಡೇರಾಯಶೆಟ್ಟಿ, ಶ್ರೀಮತಿ. ಲಲಿತಮ್ಮ.ಬಿ ಇವರುಗಳು ಜೆ.ಪಿ ಯವರಿಗೆ ಪ್ರೋತ್ಸಾಹ ನೀಡಿ ನೆರವಾದರು. 1973 ರಲ್ಲಿ ಪಾಂಚಜನ್ಯ ವಿದ್ಯಾಪೀಠದ ಸನಿವಾಸಿತ ಬಾಲಕಿಯರ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಆರಂಭದಲ್ಲಿ ಕೇವಲ 18 ವಿದ್ಯಾರ್ಥಿನಿಯರಿದ್ಧರು. ಶ್ರೀಮತಿ ಶಾಂತಾ.ಕೆ ಈ ಶಾಲೆಯ ಪ್ರಥಮ ಉಪಾಧ್ಯಾಯಿನಿ ಹಾಗೂ ಮುಖ್ಯೋಪಾಧ್ಯಾಯಿನಿ ಯಾಗಿದ್ದರು. ನಂತರ ಶ್ರೀಮತಿ. ಯು. ಸರೋಜಿನಿ ರಾವ್ ಕಿಣಿ ರವರು ಮುಖ್ಯೋಪಾಧ್ಯಾಯರಾಗಿ, ದೀರ್ಘಾವಧಿ ಸೇವೆ ಸಲ್ಲಿಸಿದ್ದರು. ಪಾಂಚಜನ್ಯ ನಿವಾಸಿತ ಬಾಲಕಿಯರ ಪ್ರೌಢಶಾಲೆಯು ಅಂದು 550 ವಿದ್ಯಾರ್ಥಿನಿಯರನ್ನು ಹೊಂದಿತ್ತು.

1974–1975 ರಲ್ಲಿ ಪಾಂಚಜನ್ಯ ವಿದ್ಯಾಪೀಠ ನರ್ಸರಿ, ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಆಂಗ್ಲ ಹಿರಿಯ ಪ್ರಾಥಮಿಕ ಪಾಠ ಶಾಲೆ, ಇವುಗಳನ್ನು ಆರಂಭಿಸಿದರು. 1–8–1985 ರಲ್ಲಿ ಅಂದಿನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಮತಿ. ಸರೋಜಿನಿ ರಾಮ್ ಕಿಣಿ ರವರ ಪ್ರಯತ್ನದಿಂದ ಪ್ರೌಢ ಶಾಲೆ, ಪಿ.ವಿ.ಪಿ ಸಂಯುಕ್ತ ಪದವಿ ಪೂರ್ವ ಮಹಿಳಾ ಕಾಲೇಜಾಗಿ ಉನ್ನತೀಕರಣಗೊಂಡಿತು. ರಾಜಾಜಿನಗರದಿಂದ ಮಲ್ಲತ್ತಹಳ್ಳಿ, ಮತ್ತಿಕೆರೆ, ಅಗ್ರಹಾರ ದಾಸರಹಳ್ಳಿ ವರೆಗೆ ಕಾರ್ಯ ಕ್ಷೇತ್ರ ವಿಸ್ತರಿಸಿತು. ಪ್ರಾಥಮಿಕ, ಪ್ರೌಢ ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ಅಲ್ಲಿ ಪ್ರಾರಂಭಿಸಲಾಯಿತು. 1979 ರ ಸಮಯಕ್ಕೆ ಎಲ್ಲೆಡೆ ಬೆಳೆಯುತ್ತಿದ್ದ ಪಾಂಚಜನ್ಯ ವಿದ್ಯಾಪೀಠ ಶಿಕ್ಷಣ ಸಂಘವನ್ನ ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿಯನ್ನಾಗಿ ಪರಿವರ್ತಿಸಿ ಒಂಭತ್ತು ಜನ ಸದಸ್ಯರನ್ನೊಳಗೊಂಡ ದತ್ತಿ ಸಮಿತಿ ರಚಿಸಿ ಅದಕ್ಕೆ ಜೆ.ಪಿ ಯವರೇ ಕಾರ್ಯದರ್ಶಿಗಳಾಗಿ 24 ವರ್ಷಗಳ ಸೇವೆಯನ್ನು ಸಲ್ಲಿಸಿರುತ್ತಾರೆ. ಇದರೊಂದಿಗೆ ಬೆಂ.ವಿ.ವಿ.ಯ ಸೆನೆಟ್ ಸದಸ್ಯರಾಗಿ ಡಾ॥ ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ, ರಮಾಬಾಯಿ ನರ್ಸಿಂಗ್ ಕಾಲೇಜು, ತುಮಕೂರಿನ ಸಿದ್ದಾರ್ಥ ತಾಂತ್ರಿಕ ಕಾಲೇಜು, ಇಲ್ಲಿಯೂ ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದರು ಹಾಗೂ ಆನಂದ ಕೋ–ಆಪರೇಟಿವ್ ಬ್ಯಾಂಕ್ ನ ಸಂಸ್ಥಾಪಕರಲ್ಲೊಬ್ಬರಾಗಿದ್ದರು.

ಇವರ ಮಹತ್ವ ಆಸೆ, ಈಗಿರುವ ವಿದ್ಯಾಸಂಸ್ಥೆಗಳ ಜೊತೆ ಬಿ.ಎಡ್. ಕಾಲೇಜು, ಟಿ.ಸಿ.ಹೆಚ್ ಹಾಗೂ ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್ ಇವುಗಳ ತರಬೇತಿ ಕೇಂದ್ರ ಮತ್ತು ಪ್ರತಿಭಾವಂತ ಹೆಣ್ಣುಮಕ್ಕಳಿಗೆ 5 ನೇ ತರಗತಿಯಿಂದ ಪಿ.ಯು.ಸಿ




ವರೆಗೂ ಕಿತ್ತೂರು ರಾಣಿ ಚನ್ನಮ್ಮ ಸೈನಿಕ ಶಾಲೆ ಬೆಳಗಾಂನ ಮಾದರಿಯಂತೆ ಶಾಲೆ ತೆರೆಯಬೇಕೆಂದು ಬೆಂಗಳೂರಿನ ಜಕ್ಕೂರಿನಲ್ಲಿ 15 ಎಕರೆ 10 ಗುಂಟೆ ಜಮೀನು ಸರ್ವೆ ನಂ. 99 ರಲ್ಲಿ ಮಂಜೂರು ಮಾಡಿಸಿದರು. ಉದ್ಯೋಗಸ್ಥ ಹೆಣ್ಣುಮಕ್ಕಳಿಗೆ ವಸತಿನಿಲಯ ತೆರೆಯುವುದು, ಪದವಿ ಕಾಲೇಜುಗಳನ್ನು ತೆರೆಯುವ ಯೋಜನೆ ಇದರಲ್ಲಿ ಸೇರಿತ್ತು. ಶ್ರೀ ಜೆ.ಪಿ ಯವರು ಶಿಕ್ಷಣ ಸಂಸ್ಥೆಯ ಉದ್ದೇಶವನ್ನು ಯಥಾವತ್ತಾಗಿ ಪಾಲಿಸಲು ಕಂಕಣ ಬದ್ಧರಾಗಿದ್ದರು. ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಅತಿ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಸದಾ ಶ್ರಮಿಸಿದ ಶ್ರೀಯುತರು ತಾ॥ 6-4-1995 ರಂದು ಇಹಲೋಕವನ್ನು ತ್ಯಜಿಸಿದರು.

ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ)

ಸಿ.ಎ. ನಂ. 2, 3ನೇ ಮುಖ್ಯ ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ,
2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು – 560 086

ಸಾಂಸ್ಕೃತಿಕ ಪರಂಪರೆಗೆ ಹೆಸರಾದ ಕರ್ನಾಟಕ ರಾಜ್ಯ ಶಿಕ್ಷಣ ಕ್ಷೇತ್ರದಲ್ಲೂ ಸಾಕಷ್ಟು ಸಾಧನೆ ಮಾಡಿದೆ. 1930 ರಲ್ಲಿ ಸಮಾಜ ಸೇವಕರಾದ ಬ್ರಹ್ಮಚಾರಿ ಪೂಜ್ಯ ಶ್ರೀ ಟಿ. ರಾಮಚಂದ್ರನ್ ರವರು ರಾಷ್ಟ್ರಪಿತ ಮಹಾತ್ಮಗಾಂಧೀಜಿರವರ ಭೇಟಿಯಿಂದ ಸ್ಫೂರ್ತಿಗೊಂಡು ಅವರ ಮಾರ್ಗದರ್ಶನದಂತೆ ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸುವ ಸಲುವಾಗಿ ಸಮಾಜದಲ್ಲಿನ ಹಿಂದುಳಿದ ಜನಾಂಗ ಮತ್ತು ದೀನ ದಲಿತರ ಉದ್ಧಾರಕ್ಕಾಗಿ, ದೀನ ಸೇವಾ ಸಂಘವನ್ನು 13ನೇ ಜನವರಿ 1930 ರಲ್ಲಿ ಶೇಷಾದ್ರಿಪುರಂನಲ್ಲಿರುವ ಸ್ಲಮ್ ಮಕ್ಕಳ ವಿದ್ಯಾರ್ಜನೆಗೋಸ್ಕರ ಕನ್ನಡ, ತೆಲಗು, ಮತ್ತು ತಮಿಳು ಭಾಷೆಯ ಪ್ರಾಥಮಿಕ ಶಾಲೆ ಮತ್ತು ಹಾಸ್ಟೆಲ್ ಸ್ಥಾಪಿಸಿದರು. ಈ ಸಂಸ್ಥೆಗಳನ್ನು ಪೂಜ್ಯ ಶ್ರೀ ಸದಾನಂದಜೀ ಮತ್ತು ಪೂಜ್ಯ ಶ್ರೀ



ಎಲ್.ಶಿವಲಿಂಗಯ್ಯ
ಸ್ಥಾಪಕರು

ಸರ್ವಾಮಿತ್ರಜೀರವರು ನೋಡಿಕೊಳ್ಳುತ್ತಿದ್ದರು. ಸಮಾಜ ಸೇವಕರಾದ ಪೂಜ್ಯ ಶ್ರೀ ಎಸ್. ಸದಾನಂದ್, ಪೂಜ್ಯ ಶ್ರೀ ಬಿ. ಸರ್ವಮಿತ್ರ ಮತ್ತು ಪೂಜ್ಯಶ್ರೀ ಆರ್.ವಿ. ಗುರ್ಜಾಲಿ ಮುಂತಾದವರೊಡನೆ ಸೇರಿ, ಹಿಂದುಳಿದ ಜನಾಂಗದ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುವ ಮೂಲಕ ಅವರಲ್ಲಿ ನಾಗರಿಕ ಗುಣ ಮತ್ತು ಶಿಸ್ತನ್ನು ಬೆಳೆಸುವ ಸಲುವಾಗಿ 1931 ರಲ್ಲಿ ಹರಿಜನ ಸೇವಕ ಸಂಘ, ಸೇವಾಶ್ರಮ ಮತ್ತು ಗಾಂಧಿ ವಿದ್ಯಾರ್ಥಿ ನಿಲಯ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಬೆಂಗಳೂರಿನ ಶ್ರೀರಾಮಪುರಂ ಬಡಾವಣೆಯಲ್ಲಿ ಸ್ಥಾಪಿಸಿದರು.

ದೀನ ಸೇವಾ ಸಂಘ ಶಿಕ್ಷಣ ಸಂಸ್ಥೆ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುತ್ತಾ ಅವರಲ್ಲಿ ಉತ್ತಮ ನಾಗರಿಕ ಗುಣಗಳನ್ನು ಬೆಳೆಸುವಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದ. ಇಂತಹ ವಿದ್ಯಾರ್ಥಿನಿಲಯದಲ್ಲಿ 1942 ರಿಂದ 1954 ರ ವರೆಗೆ ಶ್ರೀ. ಎಲ್. ಶಿವಲಿಂಗಯ್ಯ ರವರು ತಮ್ಮ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣವನ್ನು ಅಭ್ಯಾಸ ಮಾಡಿದುದರ ಜೊತೆಗೆ ತಮ್ಮ ಇಂಜಿನಿಯರಿಂಗ್ ಪದವಿಯನ್ನು ಕೂಡ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಶ್ರೀಯುತರಿಗೆ ಪೂಜ್ಯ ಶ್ರೀ ಸದಾನಂದರವರು ಎಲ್ಲಾ ರೀತಿಯ ಸಾಮಾಜಿಕ ಜ್ಞಾನ ಬೆಳೆಸುವ ಸಲುವಾಗಿ ಆಂದಿನ ಸಮಾಜದಲ್ಲಿನ ಉನ್ನತ ವ್ಯಕ್ತಿಗಳು, ಸುಧಾರಕರು, ಮೇಧಾವಿಗಳು ಮತ್ತು ವಿಜ್ಞಾನಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು.

ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಿನಾಂಕ 8-8-1954 ರಂದು ಬೆಂಗಳೂರಿನ ಲಾಲ್‌ಬಾಗ್ ಹಾಸ್ಟೆಲಿಗೆ ಭೇಟಿ ನೀಡಿದಾಗ, ಅವರ ಭೇಟಿ ಮತ್ತು ಮಾತಿನಿಂದ ಶ್ರೀ ಎಲ್., ಶಿವಲಿಂಗಯ್ಯರವರು ಸ್ಫೂರ್ತಿಗೊಂಡರು. ಅಂದು ಬಾಬಾ ಸಾಹೇಬ್ ಡಾ॥ ಅಂಬೇಡ್ಕರ್‌ರವರು ನಾನು ವಿದ್ಯಾವಂತರಿಗಾಗಿ ಕೆಲವು ಅನುಕೂಲಗಳನ್ನು ಮಾಡಿಕೊಟ್ಟೆ. ಆದರೆ ವಿದ್ಯಾವಂತರಿಗಾಗಿ ಹೆಚ್ಚು ಅನುಕೂಲಗಳನ್ನು ಮಾಡಲಾಗಲಿಲ್ಲ. ಆದರೆ ಈ ವಿದ್ಯಾವಂತರು ತಮ್ಮ ಅವಿದ್ಯಾವಂತ ಬಂಧುಗಳಿಗೆ ಸಹಕಾರಿಯಾಗುತ್ತಾರೆಂದು ಭಾವಿಸಿದ್ದೆ, ಆದರೆ ಈ ವಿದ್ಯಾವಂತರು ಸ್ವಾರ್ಥಿಗಳಾಗಿ ನನ್ನ ಭಾವನೆಯಂತೆ ಅವಿದ್ಯಾವಂತರಿಗಾಗಿ ಏನನ್ನೂ ಮಾಡಲಿಲ್ಲವೆಂದು ತಮ್ಮ ಮನದಾಳದ ನೋವನ್ನು ವ್ಯಕ್ತಪಡಿಸಿದರು. ಆಗ ಶ್ರೀಯುತ ಎಲ್. ಶಿವಲಿಂಗಯ್ಯರವರು ಡಾ.

ಬಾಬಾ ಸಾಹೇಬ್ ಆಂಬೇಡ್ಕರ್ ಅವರ ಕಣ್ಣಲ್ಲಿ ಕಣ್ಣಿಟ್ಟು ನೋಡಿ ನನಗೆ ಅವಕಾಶ ಮತ್ತು ಆಯುಸ್ಸು ಸಿಕ್ಕರೆ ತಮ್ಮ ನೋವನ್ನು ಕಿಂಚಿತ್ತಾದರೂ ಹೋಗಲಾಡಿಸಲು ಪ್ರಯತ್ನಿಸುತ್ತೇನೆಂದು ಮನಸ್ಸಿನಲ್ಲಿ ಪ್ರಮಾಣ ಮಾಡಿ ಅಂದಿನಿಂದ ಇಂದಿನವರೆಗೂ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಆಶಯವನ್ನು ಈಡೇರಿಸುವ ಸಲುವಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಪೂಜ್ಯಶ್ರೀ ಸದಾನಂದ, ಮತ್ತು ಪೂಜ್ಯಶ್ರೀ ಸರ್ವಮಿತ್ರರವರು ತಮ್ಮ ಅಚ್ಚುಮೆಚ್ಚಿನ ಮತ್ತು ಪ್ರತಿಭಾವಂತ ವಿದ್ಯಾರ್ಥಿಯಾಗಿ ಬೆಳೆದ ಶ್ರೀ. ಎಲ್.ಶಿವಲಿಂಗಯ್ಯ ಬಿ.ಇ, ಎಫ್.ಐ.ಇ, ನಿವೃತ್ತ ಇಂಜಿನಿಯರ್ ಇನ್ ಚೀಫ್ ಮತ್ತು ವಿಶೇಷ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ ಇವರನ್ನ ತಮ್ಮ ಜೀವಿತಾವಧಿಯ ನಂತರ ದೀನ ಸೇವಾ ಸಂಘದ ಅಧ್ಯಕ್ಷರಾಗುವಂತೆ ಪ್ರೇರೇಪಿಸುವುದರ ಜೊತೆಗೆ ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಟ್ಟರು. ತದನಂತರ 1971 ರ ಜೂನ್ 16 ರಂದು ಮೈಸೂರಿನ ಸಹಕಾರಿ ಸಂಘಗಳ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಶ್ರೀ. ಎಲ್ ಶಿವಲಿಂಗಯ್ಯರವರು ಮತ್ತು 10 ಜನ ಸಮಾನ ಮನಸ್ಕರು ಸೇರಿ ಶ್ರೀ. ಎಲ್. ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ(ರಿ) ಯನ್ನು ನೊಂದಾಯಿಸಲಾಯಿತು. ಅಂದಿನಿಂದ ಇಂದಿನವರೆಗೆ ಸಂಸ್ಥೆಯ ಧ್ಯೇಯೋದ್ದೇಶದಂತೆ ಗ್ರಾಮೀಣ ಪ್ರದೇಶದ ಬಡ ಹಾಗೂ ನಗರ ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವುದು, ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವುದು, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ದೀನ ದಲಿತರ ಹಾಗೂ ತುಳಿತಕ್ಕೊಳಗಾದ ಜನರ ಜೀವನ ಮಟ್ಟವನ್ನು ಶೈಕ್ಷಣಿಕವಾಗಿ ನೀಡುವುದರ ಮೂಲಕ ಸುಧಾರಿಸುವುದಾಗಿದೆ.

ಪ್ರಾರಂಭದ ದಿನಗಳಲ್ಲಿ ಸಂಸ್ಥೆಗೆ ತನ್ನದೇ ಆದ ಸ್ವಂತ ಕಟ್ಟಡವಿಲ್ಲದೆ ಮತ್ತು ಶ್ರೀರಾಮಪುರ ಕೊಳಚೆ ಪ್ರದೇಶವಾಗಿದ್ದುದರಿಂದ ವಿದ್ಯಾರ್ಥಿಗಳಿಗೆ ಉತ್ತಮವಾದ ಪರಿಸರವಿಲ್ಲದೆ ಮಾನಸಿಕ ತೊಂದರೆಯಾಗುತ್ತಿರುವುದನ್ನು ಮನಗಂಡು ನಮ್ಮ ಅಧ್ಯಕ್ಷರು ಅಂದಿನ ಸಿ.ಐ.ಟಿ.ಬಿ. ಟ್ರಸ್ಟ್ ಬೋರ್ಡ್ ಅಧ್ಯಕ್ಷರು ಮತ್ತು ಮಾಜಿ ಮಂತ್ರಿಗಳಾದ ದಿವಂಗತ ಪೂಜ್ಯ ಶ್ರೀ ಟಿ. ಚನ್ನಯ್ಯ ರವರ ಮೂಲಕ ಬೆಂಗಳೂರಿನ ಮಹಾಲಕ್ಷ್ಮೀಪುರದಲ್ಲಿನ ಸಿ.ಎ. ಸೈಟನ್ನು ಪಡೆದು ನಂತರ ಅಂದಿನ ಸಮಾಜ

ಕಲ್ಯಾಣ ಸಚಿವರಾದ ದಿವಂಗತ ಪೂಜ್ಯ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿರವರ ಮೂಲಕ ಸರ್ಕಾರದಿಂದ ಸುಮಾರು 2.5 ಲಕ್ಷ ರೂ.ಗಳ ಮಂಜೂರಾತಿ ಪಡೆದು ಗಾಂಧಿ ವಿದ್ಯಾರ್ಥಿನಿಲಯದ ಕಟ್ಟಡವನ್ನು ನಿರ್ಮಿಸಿದರು. ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ) ಆಡಿಯಲ್ಲಿ ಗಾಂಧಿ ವಿದ್ಯಾರ್ಥಿ ನಿಲಯವನ್ನು 1977-78 ನೇ ಶೈಕ್ಷಣಿಕ ಸಾಲಿನಲ್ಲಿ ಶ್ರೀರಾಮಪುರದಿಂದ ಮಹಾಲಕ್ಷ್ಮೀಪುರದ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಅಂದು ಕೇವಲ ಗಾಂಧಿ ವಿದ್ಯಾರ್ಥಿನಿಲಯದಿಂದ ಪಾರಂಭಗೊಂಡು ಇಂದು ಎ.ಎಂ.ಎಸ್. ಹಿರಿಯ ಪ್ರಾಥಮಿಕ ಪಾಠಶಾಲೆ, ಎ.ಎಂ.ಎಸ್ ಪ್ರೌಢಶಾಲೆ, ಎ.ಎಂ.ಎಸ್ ಸಂಯುಕ್ತ ಪದವಿಪೂರ್ವ ಕಾಲೇಜು, ಅಮಿತ ಶಿಕ್ಷಕರ ತರಬೇತಿ ಸಂಸ್ಥೆ (ಸಿಐಡಿ) ಅಮಿತ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಪದವಿ ಮಹಾವಿದ್ಯಾಲಯಗಳನ್ನು ಬೆಂಗಳೂರಿನಲ್ಲಿ ಮತ್ತು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಕಾಡುಕೊತ್ತನಹಳ್ಳಿಯಲ್ಲಿ ಎ.ಎಂ.ಎಸ್ ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ಮಕ್ಕಳ ಜ್ಞಾನಾರ್ಜನೆಗಾಗಿ ಪ್ರೌಢಶಿಕ್ಷಣವನ್ನು ನೀಡಲು ಅಂಬೇಡ್ಕರ್ ಸ್ಮಾರಕ ಪ್ರೌಢಶಾಲೆಯನ್ನು ದಿನಾಂಕ 20-06-1979 ರಂದು ಪ್ರಾರಂಭಿಸಲಾಯಿತು., ಅಂದು ಕೇವಲ 50 ವಿದ್ಯಾರ್ಥಿಗಳಿಂದ ಪ್ರಾರಂಭಿಸಲ್ಪಟ್ಟ ಪ್ರೌಢಶಾಲೆಯು ಪ್ರಸ್ತುತ ಸಾಲಿನಲ್ಲಿ 135 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮೂಲ ಶಿಕ್ಷಣ ಒದಗಿಸುವ ಹಿತದೃಷ್ಟಿಯಿಂದ, ಎ.ಎಂ. ಎಸ್ ಹಿರಿಯ ಪ್ರಾಥಮಿಕ ಪಾಠಶಾಲೆಯನ್ನು 1984 ರಲ್ಲಿ ಪ್ರಾರಂಭಿಸಲಾಯಿತು. ಈ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 7ನೇ ತರಗತಿವರೆಗೆ ಒಟ್ಟು 86 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರೌಢಶಿಕ್ಷಣದ ನಂತರ ಗ್ರಾಮೀಣ ಪ್ರದೇಶದ ಮಕ್ಕಳು, ಉನ್ನತ ಮಟ್ಟದ ವ್ಯಾಸಂಗ ಪಡೆಯಲು ಪಡುತ್ತಿದ್ದ ಕಷ್ಟವನ್ನು ಅರಿತು ಎ.ಎಂ.ಎಸ್ ಸಂಯುಕ್ತ ಪದವಿಪೂರ್ವ ಕಾಲೇಜನ್ನು ದಿನಾಂಕ 25-7-1984 ರಂದು ಪ್ರಾರಂಭಿಸಿತು. 1984 ರಲ್ಲಿ ಕಲಾ ವಿಭಾಗದಿಂದ ಪ್ರಾರಂಭವಾಗಿ 1985 ರಲ್ಲಿ ವಾಣಿಜ್ಯ ಮತ್ತು 1987 ರಲ್ಲಿ ವಿಜ್ಞಾನ ವಿಭಾಗಗಳು ಪ್ರಾರಂಭಿಸಲ್ಪಟ್ಟವು. ಪ್ರಸ್ತುತ ಸಾಲಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಂದ ಒಟ್ಟು 266 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಗ್ರಾಮೀಣ ಪ್ರದೇಶದ ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾರ್ಜನೆ ಬಗ್ಗೆ ಮಹತ್ವಾಕಾಂಕ್ಷೆ ಹೊಂದಿರುವ ನಮ್ಮ ಆಧ್ಯಕ್ಷರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ನಿಡುಕೊತ್ತನಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಸ್ಮಾರಕ ಪ್ರೌಢಶಾಲೆಯನ್ನು 1984 ರಲ್ಲಿ ಪ್ರಾರಂಭಿಸಿದರು. ಪ್ರಸ್ತುತ ಸಾಲಿನಲ್ಲಿ 8 ನೇ ತರಗತಿಯಿಂದ 10 ನೇ ತರಗತಿವರೆಗೆ ಒಟ್ಟು 167 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣಕ್ಕಾಗಿ ಕಷ್ಟಪಡುತ್ತಿದ್ದುದನ್ನು ಮನಗಂಡು ಉನ್ನತ ಶಿಕ್ಷಣ ಮತ್ತು ವೃತ್ತಿ ಶಿಕ್ಷಣವನ್ನು ನೀಡುವ ಸಲುವಾಗಿ 2004–05 ನೇ ಸಾಲಿನಲ್ಲಿ ನಮ್ಮ ಸಂಸ್ಥೆಯ ವತಿಯಿಂದ ಅಮಿತ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಇಡಿ) ಅಮಿತ ಶಿಕ್ಷಣ ಮಹಾವಿದ್ಯಾಲಯ(ಬಿ.ಇಡಿ..) ಮತ್ತು ಅಮಿತ ಸಂಜೆ ಪದವಿ ಮಹಾವಿದ್ಯಾಲಯ (ಬಿ.ಎ ಮತ್ತು ಬಿ.ಕಾಂ)



ಕಾಲೇಜುಗಳನ್ನು ಪ್ರಾರಂಭಿಸಿದ್ದು ಪ್ರಸ್ತುತ ಸಾಲಿನಲ್ಲಿ ಒಟ್ಟು 360 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಹೀಗೆ ನಮ್ಮ ಸಂಸ್ಥೆಯ ಆಶ್ರಯದಲ್ಲಿ ನಡೆಸುತ್ತಿರುವ ಎಲ್ಲಾ ಶಾಲಾಕಾಲೇಜುಗಳಿಂದ ಪ್ರಸ್ತುತ ಸಾಲಿನಲ್ಲಿ ಒಟ್ಟು ಒಂದು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ.

ಶ್ರೀಯುತರು ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ(ರಿ), ಆನಂದ ಸಾಮಾಜಿಕ ಮತ್ತು ಶೈಕ್ಷಣಿಕ ದತ್ತಿ, ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್, ದೀನ ಸೇವಾ ಸಂಘ ಮತ್ತು ಸೇವಾಶ್ರಮ ಶಿಕ್ಷಣ ಸಂಸ್ಥೆ ಹೀಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ನಿರಂತರವಾಗಿ ಸಮಾಜ ಸೇವೆ ಮತ್ತು ಡಾ. ಅಂಬೇಡ್ಕರ್ ರವರ ಗುರಿ ಸಾಧನೆಗಾಗಿ ಶ್ರಮಿಸುತ್ತಿರುವುದರಿಂದ ಇವರು ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿಯನ್ನು ಫೆಡರೇಷನ್ ಆಫ್ ಆಂಬೇಡ್ಕರ್‌ರೈಟ್ಸ್ ಆಂಡ್ ಬುದ್ದಿಸ್ಟ್ ಆರ್ಗನೈಸೇಷನ್ ಆಫ್ ಯುನೈಟೆಡ್ ಕಿಂಗ್ಡಮ್ ರಿಂದ ಮತ್ತು ಅಖಿಲ ಭಾರತ ಕೆನರಾ ಬ್ಯಾಂಕ್ ಎಸ್.ಸಿ./ ಎಸ್.ಟಿ ವೆಲ್‌ಫೇರ್ ಆಸೋಸಿಯೇಷನ್ ನಿಂದ ಅಂಬೇಡ್ಕರ್ ರತನ್ ಪ್ರಶಸ್ತಿಗೆ ಪಾತ್ರರಾಗಿರುತ್ತಾರೆ. ಇವರ ಶಿಸ್ತು, ಸಾಮಾಜಿಕ ಕಾಳಜಿ ಮತ್ತು ಸಮಾಜ ಸೇವೆಗಾಗಿ ಕುವೆಂಪು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು 2013 ರಲ್ಲಿ ನೀಡಿ ಪುರಸ್ಕರಿಸಿದೆ.



ಶ್ರೀ ಪಿ.ಎನ್. ಶ್ರೀಪತಿರಾವ್

ಆರಂಭದಲ್ಲಿ ಶಿಕ್ಷಣ ಸಂಸ್ಥೆಯ ಸ್ಥಾಪನೆ, ಬೆಳವಣಿಗೆ ಮತ್ತಿತರ ಖರ್ಚೆಲ್ಲವನ್ನು ಸ್ವಾಮಿಯ ದೇಗುಲ ಹಾಗೂ ಕಲ್ಯಾಣ ಮಂಟಪದ ಆದಾಯದ ಒಂದಂಶ ಪಡೆದು ವೆಚ್ಚ ಮಾಡುತ್ತಿತ್ತು. ಈಗ ಕನ್ನಡ ಮಾಧ್ಯಮ ಶಾಲೆಯು ಅನುದಾನ ಸಹಿತವಾಗಿದೆ. ಉಳಿಕೆ ವೆಚ್ಚ ಶಾಲೆಯಿಂದ ಬರುವ ಶುಲ್ಕದಿಂದ ಭರಿಸುತ್ತಿದೆ.

ಪ್ರಸ್ತುತ ಶ್ರೀ ನಾಗಪ್ಪನವರ ಸುಪುತ್ರರಾದ ಶ್ರೀಯುತ ಪಿ.ಎನ್. ಶ್ರೀಪತಿರಾವ್ ಅಧ್ಯಕ್ಷರಾಗಿ, ಶ್ರೀ ಗೋವಿಂದರಾಜು ಅವರ ಸುಪುತ್ರರಾದ ಶ್ರೀಯುತ ಜಿ.ರಾಮರಾವ್ ಅವರು ಕಾರ್ಯದರ್ಶಿಗಳಾಗಿದ್ದಾರೆ. ವಿಜಯ ಪದವಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರೊ॥ ಶ್ರೀಕಂಠ ಅವರು ಶಾಲೆಯ ಕಾರ್ಯದರ್ಶಿಗಳಾಗಿ ಮಾರ್ಗದರ್ಶನ



ನೀಡುತ್ತಿದ್ದಾರೆ. ಶಿಕ್ಷಣ ಸಂಸ್ಥೆಯಲ್ಲಿ ಒಟ್ಟಾರೆ ನಲವತ್ತೈದು ಮಂದಿ ಶಿಕ್ಷಕರು, ನರ್ಸರಿ, ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಛೇರಿಯಲ್ಲಿ ಮೂರು ಮಂದಿ, ಆರು ಜನ ಸಹ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಧಾರ್ಮಿಕ ಕ್ಷೇತ್ರದ ಹಿನ್ನಲೆಯುಳ್ಳ ಸ್ಥಳದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾಕಾಂಕ್ಷಿಗಳಿಗೆ ಸಹಾಯ ಮಾಡಲೆಂದೇ 1976 ರಲ್ಲಿ ಸ್ಥಾಪನೆಯಾದ ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ವಿದ್ಯಾಕೇಂದ್ರ ತನ್ನ ಐವತ್ತು ವಸಂತಗಳನ್ನು ಪೂರೈಸಿ ಸುವರ್ಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಕಾಲ ಸಮೀಪಿಸುತ್ತಿರುವುದು ಸಂಸ್ಥೆಯ ಬೆಳವಣಿಗೆಗೆ ದುಡಿಯುತ್ತಿರುವವರೆಲ್ಲರಿಗೂ ಹರ್ಷದಾಯಕವಾದುದೇ ಸರಿ.


ಮಾಡಲ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್

ಸಿ.ಎ ನಂ.1, ಟಿಂಬರ್ ಯಾರ್ಡ್ ಲೇಔಟ್, ಮುನೇಶ್ವರ ಬ್ಲಾಕ್,
ಬೆಂಗಳೂರು – 560 026

ಬೆಂಗಳೂರಿನ ಮುನೇಶ್ವರ ಬ್ಲಾಕ್ ನಲ್ಲಿ ವಿದ್ಯಾಸಂಸ್ಥೆಯಾದ ಶ್ರೀ ಪಟೇಲ್ ಗುಳ್ಳಪ್ಪ ವಿದ್ಯಾಸಂಸ್ಥೆಯು ಕಳೆದ 30 ವರ್ಷಗಳಿಂದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುತ್ತಾ ಬಂದಿದೆ.

ಶಿಕ್ಷಣವೆಂದರೆ ಕೇವಲ ಪಠ್ಯ ವಿಷಯವಲ್ಲ ಚಾರಿತ್ರ್ಯದ ನಿರ್ಮಾಣ, ಶಿಕ್ಷಣ ಸಂಸ್ಥೆಗಳೆಂದರೆ ಕೇವಲ ಭೌತಿಕ ಕಟ್ಟಡಗಳಲ್ಲ. ವಿದ್ಯಾರ್ಥಿಗಳ ಬದುಕನ್ನು ಅರಳಿಸಿ ಭವಿಷ್ಯದ ಜವಾಬ್ದಾರಿಯುತ ನಾಗರಿಕರಾಗಿ ರೂಪಿಸುವ ದೇವಾಲಯಗಳು ನಂಬಿಕೆಯೊಂದಿಗೆ ಡಾ. ಬಿ.ಎಂ. ಪಟೇಲ್ ಪಾಂಡು ರವರು ಗಾಳಿಆಂಜನೇಯ ದೇವಸ್ಥಾನದ ಸನ್ನಿಧಿಗೆ ಕೂಗಳತೆ ದೂರದಲ್ಲಿ ಕೀರ್ತಿಶೇಷರಾದ, ಕೊಡುಗೈ ದಾನಿ, ತನ್ನ ಸ್ವತಃ ಬೆಲೆಬಾಳುವ ಆಸ್ತಿಯನ್ನು ದೀನದಲಿತರ ಏಳ್ಗೆಗಾಗಿ ದಾನಮಾಡಿದ ತಮ್ಮ ತಾತರವರಾದ ಶ್ರೀ ಪಟೇಲ್ ಗುಳ್ಳಪ್ಪನವರ ನಾಮಾಂಕಿತದಲ್ಲಿ ಸ್ಥಳಿಯ ಜನರ ಶಿಕ್ಷಣಕ್ಕಾಗಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ.

ಆವಲಹಳ್ಳಿಯ ಪಟೇಲ್ ಮನೆತನದಲ್ಲಿ ಜನಿಸಿದ ಪಾಂಡು ಶ್ರೀ ಮಹಾದೇವ್ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಸರ್ಕಾರಿ ಕಾಲೇಜಿನಲ್ಲಿ



ಡಾ. ಬಿ.ಎಂ ಪಟೇಲ್ ಪಾಂಡು–ಸಂಸ್ಥಾಪಕರು

ವ್ಯಾಸಂಗ ಮಾಡಿ ಬಿ.ಎ ಪದವಿಯನ್ನು ಪಡೆದರು. ಪದವಿನಂತರ ಸರ್ಕಾರಿ ಕೆಲಸಕ್ಕೆ ಸೇರಿದರು. ವಿದ್ಯಾಭ್ಯಾಸದ ದಿನಗಳಿಂದ ಕಲೆ, ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ಹೆಚ್ಚಿನ ಆಸಕ್ತಿ ಪಡೆದಿದ್ದ ಶ್ರೀಯುತರು ಸರ್ಕಾರಿ ನೌಕರರ ಸಂಘದಲ್ಲಿ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಈ ಮೊದಲಿಗೆ 1976 ರಲ್ಲಿ ತ್ಯಾಗರಾಜನಗರದಿಂದ ಮಾಡಲ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು ತಮ್ಮ ಸುಪರ್ಧಿಗೆ ಪಡೆದುಕೊಂಡು 1976 ರಲ್ಲಿ ಆವಲಹಳ್ಳಿಗೆ ಸ್ಥಳಾಂತರಿಸಿ ಅಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ನಂತರ 1982 ರಲ್ಲಿ ಶ್ರೀಪಟೇಲ್ ಗುಳ್ಳಪ್ಪ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಯಿತು. ಶ್ರೀಯುತರ ಮಾರ್ಗದರ್ಶನದಂತೆ ಸಂಸ್ಥೆಯು ಉತ್ತಮ ಫಲಿತಾಂಶದೊಂದಿಗೆ ಪ್ರಗತಿಯೊಂದಿಗೆ ಮುಂದುವರಿದ ಶಿಕ್ಷಣವನ್ನು ಸಹ ಕಲ್ಪಿಸಲು ಪದವಿಪೂರ್ವ ಹಾಗೂ ಪದವಿ ಕಾಲೇಜನ್ನು ಸ್ಥಾಪಿಸಲಾಯಿತು. ಸುತ್ತಮುತ್ತಲ ಬಡಾವಣೆಯ ನಾಗರಿಕರ ಒತ್ತಾಯದ ಮೇರೆಗೆ ಜಾಗತೀಕ ಮಟ್ಟದಲ್ಲಿ ಜ್ಞಾನಾರ್ಜನೆಗಾಗಿ 1996 ರಲ್ಲಿ ಅಜಯ್ ಲಿಟಲ್ ಫ್ಲವರ್ ಕಾನ್ವೆಂಟ್ ಹಾಗೂ ನ್ಯಾಷನಲ್ ಇಂಗ್ಲೀಷ್ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಿ ಉತ್ತಮ ಗುಣಾತ್ಮಕ ಶಿಕ್ಷಣವನ್ನು ಕಡಿಮೆ ಶುಲ್ಕದಲ್ಲಿ ನೀಡಲಾಗುತ್ತಿದೆ.

ಶ್ರೀ ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆಯು ಶೈಕ್ಷಣಿಕ ಸೇವೆಯ ಜೊತೆಗೆ ಸ್ಥಳೀಯ ನಿವಾಸಿಗಳ ಆರ್ಥಿಕ ಸಬಲೀಕರಣಕ್ಕಾಗಿ ಪಟೇಲ್ ಪ್ಯಾರಮೆಡಿಕಲ್ ಮತ್ತು ಪಟೇಲ್ ಅಪೆರಲ್ ತರಬೇತಿ ಕೇಂದ್ರ ಸ್ಥಾಪನೆಯೊಂದಿಗೆ ಸಾವಿರಾರು ಮಂದಿಗೆ ತರಬೇತಿ ಹಾಗೂ ಉಚಿತ ಹೊಲಿಗೆ ಯಂತ್ರಗಳನ್ನು ನೀಡುವುದರ ಮೂಲಕ ಆರ್ಥಿಕ ಸಬಲೀಕರಣಕ್ಕೆ ನಾಂದಿಯಾಗಿದ್ದಾರೆ.




ಡಾ॥ ಬಿ.ಎಂ.ಪಟೇಲ್ ಪಾಂಡುರವರ ಅವಿರತ ಶ್ರಮ ಮತ್ತು ನಿರಂತರ ಪ್ರಯತ್ನದೊಂದಿಗೆ 3 ಕಚ್ಚಾಕೊಠಡಿಗಳಲ್ಲಿ ಪ್ರಾರಂಭವಾದ ಸಂಸ್ಥೆಯು 3 ಅಂತಸ್ಥಿನ ಪಕ್ಕಾ ಕೊಠಡಿಗಳೊಂದಿಗೆ, ಗ್ರಂಥಾಲಯ, ಪ್ರಯೋಗಾಲಯ, ಒಳಾಂಗಣ ಸಭಾಂಗಣ, ಆಟದ ಮೈದಾನ, ಸ್ಮಾರ್ಟ್ ಕ್ಲಾಸ್ ವ್ಯವಸ್ಥೆ, ಮುಂತಾದ ಮೂಲಭೂತ ಸೌಕರ್ಯಗಳ ಜೊತೆಗೆ ಆಟದ ಮೈದಾನಕ್ಕೆ ಮೇಲ್ಛಾವಣಿ ವ್ಯವಸ್ಥೆ ಹೊಂದಿರುತ್ತದೆ.

ಸಂಸ್ಥೆಯ ಶೈಕ್ಷಣಿಕ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಪರಿಸರಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಂಯುಕ್ತಾಶ್ರಯದಲ್ಲಿ "ಹಳದಿ ಶಾಲೆ" ಪ್ರಶಸ್ತಿಯನ್ನು, ಉದಯಭಾನು ಕಲಾ ಸಂಘದ ವತಿಯಿಂದ "ಕುವೆಂಪು ಆದರ್ಶ ಶಾಲೆ" ಪ್ರಶಸ್ತಿಯನ್ನು ನೀಡಿರುತ್ತವೆ.

ಸಿ.ಎಂ. ನ್ಯಾಷನಲ್ ಪಬ್ಲಿಕ್ ಶಾಲೆ

ಮಣಿಗ್ರೀವಧಾಮ, ಬಂಡೆಪ್ಪ ಗಾರ್ಡನ್ ಮುಖ್ಯ ರಸ್ತೆ
ಮುತ್ಯಾಲ ನಗರ, ಜಾಲಹಳ್ಳಿ, ಬೆಂಗಳೂರು – 560 054

ಬೆಂಗಳೂರು ಮಹಾನಗರದ ಉತ್ತರಭಾಗದಲ್ಲಿನ ಗೋಕುಲ ಬಡಾವಣೆಯಲ್ಲಿ ಸ್ಥಾಪಿತವಾಗಿರುವ ಶ್ರೀ ಹನುಮಾನ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿಗಳೇ ಶ್ರೀಯುತ ಹೆಚ್.ಪಿಳ್ಳಾಂಜನಪ್ಪನವರು.




ಶ್ರೀ ಹೆಚ್.ಪಿಳ್ಳಾಂಜನಪ್ಪ
ಸಂಸ್ಥಾಪಕರು

ಬೆಂಗಳೂರು ಉತ್ತರ ಜಿಲ್ಲೆಯ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷರಾಗಿ ಜಿಲ್ಲೆಯ ಪ್ರೌಢಶಾಲೆಗಳ ಕೆಲಸ ಕಾರ್ಯಗಳಿಗೆ ಮಾರ್ಗದರ್ಶಕರಾಗಿದ್ದುದು ಮಾತ್ರವಲ್ಲದೆ ರಾಷ್ಟ್ರಪ್ರಶಸ್ತಿ ವಿಜೇತರಾಗಿದ್ದಾರೆ. ಶ್ರೀಯುತ ಹೆಚ್.ಪಿಳ್ಳಾಂಜನಪ್ಪನವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ನಾರಾಯಣಪುರ ಗ್ರಾಮದ ಹನುಮಂತರಾಯಪ್ಪನವರ ಸಹೋದರರಾದ ಹನುಮಪ್ಪನವರ ದ್ವಿತೀಯ ಪುತ್ರರಾಗಿ ಜನಿಸಿದರು. ತಮ್ಮ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಹುಟ್ಟೂರಾದ ನಾರಾಯಣಪುರದ ಸರ್ಕಾರಿ ಶಾಲೆಯಲ್ಲಿ ಮುಗಿಸಿದರು. ಮಾಧ್ಯಮಿಕ

ಶಾಲಾ ವಿದ್ಯಾಭ್ಯಾಸ ಐದರಿಂದ ಏಳನೇ ತರಗತಿಯ ಶಿಕ್ಷಣವನ್ನು ಬಿಜ್ಜವಾರದಲ್ಲಿ ಮುಂದುವರೆಸಿದರು. ಪ್ರೌಢಶಾಲಾ ವಿದ್ಯಾಭ್ಯಾಸವನ್ನು ವಿಜಯಪುರದಲ್ಲಿ ಮಾಡಿ, ಪಿಯುಸಿ ಮತ್ತು ಬಿ.ಎಸ್ಸಿ ಪದವಿಯನ್ನು ಚಿಕ್ಕಬಳ್ಳಾಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪಡೆದರು. ನಂತರ ಸ್ನಾತಕೋತ್ತರ ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಂದುವರೆಸಿ, ಪ್ರಾಣಿಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಪಡೆದರು. ಆರಂಭದಿಂದ ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇದ್ದುದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದಿಂದಲೇ ಬಿ.ಎಡ್ ಪದವಿಯನ್ನು ಪಡೆದರು.

ಶ್ರೀಯುತ ಹೆಚ್.ಪಿಳ್ಳಾಂಜನಪ್ಪನವರು ತಮ್ಮ ವ್ಯಾಸಂಗ ಮುಗಿಸಿ ವಿಭಜಿತ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ಮುನ್ಸಿಪಲ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಶಿಕ್ಷಕ ವೃತ್ತಿ ಆರಂಭಿಸಿದರು. ಮೂರು ವರ್ಷಗಳ ಅನುಭವದ ತರುವಾಯ ಬೆಂಗಳೂರು ನಗರ ವಿವೇಕಾನಂದ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡರು. ಹೀಗಾಗಿ, ವೃತ್ತಿ ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೆ ವರ್ಗವಾಯಿತು. ಶಿಕ್ಷಕ ವೃತ್ತಿ ಮಾಡುತ್ತಿದ್ಧಾಗಲೇ ತಮ್ಮದೇ ಆದ ಒಂದು ಶಿಕ್ಷಣ ಸಂಸ್ಥೆ ಸ್ಥಾಪಿಸಬೇಕೆಂಬ ಆಸೆ ಮನದಾಳದಲ್ಲಿ ಮೂಡಿತು. ಅದೇ ಸಮಯದಲ್ಲಿ ಯಶವಂತಪುರದ ಮೋಹನ್ ಕುಮಾರ್ ಬಡಾವಣೆಯಲ್ಲಿ ಕನ್ನಡ ಮಾಧ್ಯಮ ಶಾಲೆಯನ್ನು ಆಡಳಿತ ಮಂಡಳಿ ನೀಡುತ್ತದೆ ಎಂಬ ವಿಷಯ ತಿಳಿಯಿತು. ಶಾಲೆಯ ಪರಿಸರ, ಸದ್ಯದ ಸ್ಥಿತಿಗತಿ ಅಷ್ಟೊಂದು ಪ್ರೋತ್ಸಾಹದಾಯಕವಾಗಿಲ್ಲದಿದ್ಧರೂ ಶಿಕ್ಷಣ ಸಂಸ್ಥೆ ಸ್ಥಾಪಿಸಬೇಕೆಂಬ ಈರ್ಷೆಯಿಂದ ಅದನ್ನು ತಮ್ಮ ವಶಕ್ಕೆ ಪಡೆದರು. ಅದು ಅನುದಾನಿತ ಶಾಲೆಯಾಗಿದ್ದು ಚಿಲ್ಡ್ರನ್ಸ್ ಮೆಮೋರಿಯಲ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಎಂದು ಮರು ನಾಮಕರಣ ಮಾಡುತ್ತಾ ಸಂಸ್ಥೆಯದ ಪ್ರಗತಿಗಾಗಿ ತಮ್ಮದೇ ಯೋಜನೆಯನ್ನು ಕೈಗೊಂಡರು. ಉಪನ್ಯಾಸಕ ವೃತ್ತಿ, ಸಂಸ್ಥೆಯ ಜವಾಬ್ದಾರಿ ಎರಡನ್ನೂ ನಿಭಾಯಿಸುವುದು ಕಷ್ಟಸಾಧ್ಯ ಎಂದಾಗ ಹನ್ನೆರಡು ವರ್ಷಗಳ ಸುದೀರ್ಘ ಉಪನ್ಯಾಸ ವೃತ್ತಿಗೆ ಒಲ್ಲದ ಮನಸ್ಸಿನಿಂದ ರಾಜೀನಾಮೆ ನೀಡಿದರು.

ಹೀಗಾಗಿ ತಮ್ಮ ಪೂರ್ತಿ ಗಮನವನ್ನು ಸಂಸ್ಥೆಯನ್ನು ಬೆಳೆಸುವ, ಪೋಷಿಸುವ ಕಡೆ ನೀಡಿದರು. ಪ್ರಾಥಮಿಕ ಹಂತದಿಂದ ಪ್ರೌಢಶಾಲೆ ಅನಂತರ ಪದವಿ ಪೂರ್ವ ಕಾಲೇಜು ಸ್ಥಾಪಿಸಿದರು. ಇದರ ಜೊತೆ ಡಿ.ಎಡ್ ಕಾಲೇಜು, ಇವೆಲ್ಲಕ್ಕೂ ಉತ್ತಮ ಸೌಕಾರ್ಯ ನೀಡಲೆಂದೇ ಮೂರು ಅಂತಸ್ತಿನ ಸುಸಜ್ಜಿತವಾದ ಕಟ್ಟಡ



ನಿರ್ಮಾಣ ಮಾಡಿದರು. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಉದ್ಘಾಟನೆ ಮಾಡುತ್ತಾ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆ ಮಾಡಲು ಹೊರಟಿರುವ ಶ್ರೀ ಪಿಳ್ಳಾಂಜನಪ್ಪನವರಿಗೆ ಕಾರ್ಯದಲ್ಲಿ ಯಶಸ್ಸು ಲಭಿಸಲಿ ಎಂದು ಆಶೀರ್ವದಿಸಿದರು. ಇದೇ ಸಂದರ್ಭದಲ್ಲಿ ಶಿವಗಂಗೆಯ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳ ಶಿಷ್ಯರು ವಿಜಯಪುರ ಬಸವ ಕಲ್ಯಾಣ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಮಹಾದೇವ ಸ್ವಾಮಿಗಳು ತಮ್ಮ ಗುರುಗಳನ್ನು ನೆನೆಸಿಕೊಂಡು ಪಿಳ್ಳಾಂಜನಪ್ಪನವರು ಕುಗ್ರಾಮದಲ್ಲಿ ಹುಟ್ಟಿದ್ದರೂ ಇಂದು ಸ್ವಗ್ರಾಮದಲ್ಲಿ ಉನ್ನತ ಮಟ್ಟಕ್ಕೆ ಬೆಳೆಯುತ್ತಿದ್ದಾರೆ. ಇವರು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ತಮ್ಮ ಗುರುಗಳ ಆಶೀರ್ವಾದ ಕೋರಿದರು. ನರ್ಸರಿಯಿಂದ ಪದವಿ ಪೂರ್ವ ಕಾಲೇಜು ಮತ್ತು ಡಿ.ಇಡಿ ಶಿಕ್ಷಣ ಸಂಸ್ಥೆಯ ಸ್ಥಾಪಕರಾಗಿ, ಪ್ರಚಾರ್ಯರಾಗಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅವಕಾಶ ಮಾಡಿಕೊಡುತ್ತಿದ್ದಾರೆ.

ಈಗ ಶ್ರೀ ಹನುಮಾನ್ ಸಮೂಹ ವಿದ್ಯಾಸಂಸ್ಥೆಗಳು ಈ ಕೆಳಗಿನ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ :

- ಶ್ರೀ ಹನುಮಾನ್ ಡಿ.ಎಡ್ ಕಾಲೇಜು– ಮುಖ್ಯ ರಸ್ತೆ, ಮುತ್ಯಾಲನಗರ, ಬಂಡಪ್ಪ ಗಾರ್ಡನ್, ಗೋಕುಲ, ಬೆಂಗಳೂರು–54
- ಸಿ.ಎಂ. ನ್ಯಾಷನಲ್ ಸಂಂ ಯುಕ್ತ ಪದವಿ ಪೂರ್ವ ಕಾಲೇಜು – ಮಣಿಗ್ರೀವ ಧಾಮ, ಮುತ್ಯಾಲನಗರ, ಬಂಡಪ್ಪ ಗಾರ್ಡನ್, ಗೋಕುಲ, ಬೆಂಗಳೂರು–54
- ಸಿ.ಎಂ. ನ್ಯಾಷನಲ್ ಹಿರಿಯ ಪ್ರಾಥಮಿಕ ಪಾಠ ಶಾಲೆ – ಮುಖ್ಯ ರಸ್ತೆ, ಮುತ್ಯಾಲನಗರ, ಬಂಡಪ್ಪ ಗಾರ್ಡನ್,ಗೋಕುಲ, ಬೆಂಗಳೂರು–54
- ನ್ಯಾಷನಲ್ ಹಿರಿಯ ಪ್ರಾಥಮಿಕ ಪಾಠ ಶಾಲೆ – ಮೋಹನ್ ಕುಮಾರ್ ನಗರ, ಯಶವಂತಪುರ, ಬೆಂಗಳೂರು–22



- ಚಿಲ್ಡ್ರನ್ ಮೆಮೋರಿಯಲ್ ನ್ಯಾಷನಲ್ ಅನುದಾನಿತ ಹಿರಿಯ ಪ್ರಾಥಮಿಕ ಪಾಠ ಶಾಲೆ - ಮೋಹನ್ ಕುಮಾರ್ ನಗರ, ಯಶವಂತಪುರ, ಬೆಂಗಳೂರು–22
- ಚಿಲ್ಡ್ರನ್ ಮೆಮೋರಿಯಲ್ ನ್ಯಾಷನಲ್ ಪ್ರೌಢ ಶಾಲೆ(ಕನ್ನಡ ಮಾಧ್ಯಮ) ಯಶವಂತಪುರ, ಬೆಂಗಳೂರು–22

ಶ್ರೀಯುತ ಪಿಳ್ಳಾಂಜನಪ್ಪನವರಿಗೆ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ನಿರ್ವಹಿಸಿರುವ ಕಾರ್ಯಸಾಧನೆಗಳಿಗೆ ಸಂದಿರುವ ರಾಷ್ಟ್ರೀಯ ಪ್ರಶಸ್ತಿ ಮತ್ತು ಪುರಸ್ಕಾರಗಳು ಎಂದರೆ ●ಜ್ಯುವೆಲ್ ಆಫ್ ಇಂಡಿಯಾ, ●ಬೆಸ್ಟ್ ಎಜುಕೇಷನಲಿಸ್ ಆಫ್ ದಿ ಇಯರ್, ●ನ್ಯಾಷನಲ್ ಗೋಲ್ಡ್ ಸ್ಟಾರ್ ಅವಾರ್ಡ್, ●ಲೈಫ್ ಟೈಮ್ ಅಚೀವ್ ಮೆಂಟ್ ಅವಾರ್ಡ್, ●ರಾಜೀವ್ ಗಾಂಧಿ ಶಿರೋಮಣಿ ಅವಾರ್ಡ್, ●ಪ್ರೈಡ್ ಆಫ್ ಇಂಡಿಯಾ ಅವಾರ್ಡ್, ●ಉತ್ತಮ ಶಿಕ್ಷಕ ಪ್ರಶಸ್ತಿ, ●ಆದರ್ಶ ಮುಖ್ಯ ಶಿಕ್ಷಕ ಪ್ರಶಸ್ತಿ, ●ಶಿಕ್ಷಣ ಶ್ರೀ ಪ್ರಶಸ್ತಿ ಮತ್ತು ● ವಿದ್ಯಾ ಸಂಸ್ಥೆಗೆ ನ್ಯಾಷನಲ್ ಉದ್ಯೋಗ್ ಎಕ್ಸೆಲೆನ್ಸಿ ಅವಾರ್ಡ್ ದೊರೆತಿದೆ.


ಬಾಲಮೋಹನ ವಿದ್ಯಾ ಮಂದಿರ

1ನೇ ಕೆ ಬ್ಲಾಕ್, ನಂ 44/1, 19ನೇ ಬಿ ಮುಖ್ಯ ರಸ್ತೆ, 1ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560 010

ಭಗವಂತನ ಅನುಗ್ರಹದಿಂದ ಈ ಭೂಮಿಯಲ್ಲಿ ಜನ್ಮತಾಳಿದ ಪ್ರತಿಯೊಬ್ಬ ಮಾನವನೂ ತನ್ನದೇ ಆದ ಚಿಂತನಾ ಲಹರಿಯನ್ನು ಪಡೆದಿರುತ್ತಾನೆ. ಅಪರೂಪಕ್ಕೆಂಬಂತೆ ಕೆಲವರು ತಮಗಾಗಿ ಬಾಳದೆ ದೀನದಲಿತರ, ನಿರ್ಗತಿಕರ ಸೇವೆಯೇ ತಮ್ಮ ಧ್ಯೇಯವೆಂದು ಭಾವಿಸುತ್ತಾರೆ. ಅವರಿಗಾಗಿ ಏನಾದರೂ ಒಂದು ಯೋಜನೆ ಸ್ಥಾಪಿಸಿ ಸಾರ್ಥಕ ಜೀವನ ಅನುಭವಿಸಿ ಅಜರಾಮರರಾಗುತ್ತಾರೆ. ಜನರ ಸೇವೆಯೇ ಜನಾರ್ದನನ ಸೇವೆ ಎಂದು ತಿಳಿದು ವಿವಿಧ ರಂಗಗಳಲ್ಲಿ ಅಲ್ಪಸ್ವಲ್ಪ ಸೇವೆ ಮಾಡಲು ಮುಂದಾಗುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಅಳಿಲುಸೇವೆ ಮಾಡಲೆಂದೇ ಭಾವಿಸಿದ್ದವರು ಬೆಂಗಳೂರಿನ ರಾಜಾಜಿನಗರದ ಶ್ರೀಯುತ ಬಾಲಸುಬ್ರಹ್ಮಣ್ಯ ಅವರು ತಮ್ಮ ಗೆಳೆಯ ಶ್ರೀ ಮೋಹನ್ ಜೊತೆಗೂಡಿ ರಾಜಾಜಿನಗರದಲ್ಲಿ ಬಾಲಮೋಹನ ಶಿಕ್ಷಣ ಸಂಸ್ಥೆಯನ್ನು 1981 ಜೂನ್ ನಲ್ಲಿ ಪ್ರಾರಂಭಿಸುತ್ತಾರೆ. ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಬಡಾವಣೆಯ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ನೀಡುವುದೇ ಉದ್ದೇಶ.

ಹೀಗಾಗಿ ಬಾಲಮೋಹನ ವಿದ್ಯಾಮಂದಿರ ಬಾಲಸುಬ್ರಹ್ಮಣ್ಯಂ ಸ್ವಗೃಹದಲ್ಲೇ ಜನ್ಮ ತಾಳಿತು. ದಿನಗಳು ಕಳೆದಂತೆ ಶಾಲೆ ಪ್ರವರ್ಧಮಾನಕ್ಕೆ ಬಂದು ಬಡವಾಣೆಯಲ್ಲಿ ಒಳ್ಳೆಯ ಹೆಸರನ್ನೂ ಮಾಡಿತು. ಸುಮಾರು ಇಪ್ಪತ್ತು ಇಪ್ಪತ್ತೈದು

ವರ್ಷಗಳು ಕಳೆಯುತ್ತಿದ್ದಂತೆ ಸ್ಥಾಪಕರಿಗೆ ಶಾಲೆಯ ಆಡಳಿತ ನಿರ್ವಹಿಸುವುದು ಕಷ್ಟ ಎಂದೆನಿಸಿ ಸಮರ್ಥ ವ್ಯಕ್ತಿಗಳಿಗೆ ಶಾಲೆಯ ಜವಾಬ್ದಾರಿಯನ್ನು ವಹಿಸುವ ಆಲೋಚನೆ ಮಾಡಲಾರಂಭಿಸಿದರು. ಆ ಸಮಯದಲ್ಲಿ ತಮ್ಮ ಇಬ್ಬರು ಮಕ್ಕಳಾದ ಕು॥ ಅನಿತಾ ಮತ್ತೆ ಚಿ॥ ಪ್ರಮೋದ ಬಡಾವಣೆಯ ಪ್ರತಿಷ್ಠಿತ ವಿದ್ಯಾ ಸಂಸ್ಥೆ ವಿದ್ಯಾ ವರ್ಧಕ ಸಂಘ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಅದೇ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ವಿದ್ಯಾರ್ಥಿಗಳು ಮತ್ತು ಪೋಷಕ ವರ್ಗದಲ್ಲಿ ಉತ್ತಮ ಶಿಕ್ಷಕರೆಂದು ಹೆಸರು ಮಾಡಿದ್ಧ ಡಾ॥ ಎನ್. ಸತ್ಯಪ್ರಕಾಶ್ ಒಬ್ಬರು.


ಡಾ. ಎನ್. ಸತ್ಯಪ್ರಕಾಶ್

ಶ್ರೀಯುತ ಸತ್ಯಪ್ರಕಾಶ್ ಅವರು 21.01.1953 ರಂದು ಹುಲಿಕಲ್ಲು ಗ್ರಾಮದಲ್ಲಿ ಶಿಕ್ಷಕರಾದ ಬಿ ಎಸ್ ನಂಜುಂಡಯ್ಯ ಹಾಗೂ ಶ್ರೀಮತಿ ಸಾವಿತ್ರಮ್ಮ ಅವರ ಮಗನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿ, ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ದೊಡ್ಡಮಗ್ಗೆಯಲ್ಲಿ ಮಾಡಿದರು. ನಂತರ ಕೊಣನೂರಿನಲ್ಲಿ ಪದವಿ ಪೂರ್ವ ಶಿಕ್ಷಣ ಹಾಗೂ ಬಿ.ಎ ಪದವಿಗಳನ್ನು ಪೂರ್ಣಗೊಳಿಸಿದರು. ಸ್ವಪ್ರಯತ್ನದಿಂದ ಮುಂದೆ ಎಂ.ಎ(ಇತಿಹಾಸ),ಎಂ.ಎಡ್, ಬಿ.ಲಿಬ್ ಸೈನ್ಸ್ ಪದವಿಗಳನ್ನು ಪಡೆದು ಹಲವಾರು ವೃತ್ತಿಗಳಲ್ಲಿ ತೊಡಗಿಸಿಕೊಂಡರು. ಶಿಕ್ಷಕನಾಗಬೇಕೆಂಬ ಮನ ತೊಡರುತ್ತಿದ್ಧುದರಿಂದ 1981 ರಲ್ಲಿಆಧ್ಯಾಪಕ ವೃತ್ತಿಯನ್ನು ಸ್ವೀಕರಿಸಿದರು. ನಿಸ್ಪೃಹ, ಪ್ರಾಮಾಣಿಕ ಅಚ್ಚುಕಟ್ಟುತನದಿಂದ ಮಕ್ಕಳಿಗೆ ಮನದಟ್ಟಾಗುವಂತೆ ಬೋಧಿಸುವ ಕಲೆ, ವಾಙ್ಮಯ, ಸಮಯಪ್ರಜ್ಞೆ, ವಿದ್ಯಾರ್ಥಿಬಾಂಧವ್ಯ ಇವೆಲ್ಲ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಗುರುವನ್ನಾಗಿ ರೂಪಿಸಿದವು. ಜೊತೆಗೆ ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ಕಾರ್ಯಾಗಾರಗಳನ್ನು ನಡೆಸಿದ್ದರು. ಪಠ್ಯಪುಸ್ತಕಗಳ ರಚನಾ ಕಾರ್ಯಗಾರ, ಇತಿಹಾಸ ಗ್ರಂಥಗಳ ರಚನೆ, ಪ್ರಶ್ನೆ ಪತ್ರಿಕೆಗಳ ರಚನಾ ಕಾರ್ಯಾಗಾರಗಳಲ್ಲಿ ಪಾಲ್ಗೊಂಡಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿನ ಇವರ ಸೇವೆಯನ್ನು ಪರಿಗಣಿಸಿ ರಾಜ್ಯ ಹಾಗೂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗಳು,

ಕೆಂಪೇಗೌಡ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳ ಗೌರವಕ್ಕೆ ಭಾಜನರಾಗಿದ್ದರು.

ಒಮ್ಮೆ ಶ್ರೀಯುತ ಬಾಲಸುಬ್ರಹ್ಮಣ್ಯ ಅವರು ಸತ್ಯಪ್ರಕಾಶ್ ಅವರನ್ನು ಕಂಡು ತಮ್ಮ ಸಮಸ್ಯೆ ಅವರಿಗೆ ತಿಳಿಸಿ ಒಂದು ಪರಿಹಾರ ಸೂಚಿಸುವಂತೆ ವಿನಂತಿಸಿಕೊಳ್ಳುತ್ತಾರೆ. ಸತ್ಯಪ್ರಕಾಶ್ ಚೆನ್ನಾಗಿ ನಡೆಯುತ್ತಿರುವ ಶಾಲೆ ಮುಂದುವರೆಸಿಕೊಂಡು ಹೋಗುವ ಭರವಸೆಯನ್ನಿತ್ತು ಏನಾದರೂ ಒಂದು ವ್ಯವಸ್ಥೆ ಮಾಡುವುದಾಗಿ ತಿಳಿಸಿದರು. ಅನಂತರ ತಮ್ಮ ಗೆಳೆಯರೊಡನೆ ಶಾಲೆಯ ಸ್ವೀಕಾರದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಬಾಲಮೋಹನ ವಿದ್ಯಾ ಮಂದಿರ ಶಾಲೆಯ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳುವುದೆಂದು ತೀರ್ಮಾನಿಸಿಕೊಂಡು ಶ್ರೀಯುತ ಬಾಲಸುಬ್ರಮಣ್ಯಂ ಅವರಿಗೆ ತಿಳಿಸಿದರು. 1981 ರಲ್ಲಿ ಬಾಲಸುಬ್ರಮಣ್ಯ ಅವರಿಂದ ಪ್ರಾರಂಭವಾದ ಸಂಸ್ಥೆ 1994 ರಲ್ಲಿ ಶ್ರೀಯುತ ಹೆಚ್.ಆರ್. ರಾಮಚಂದ್ರರಾಯರು–ಅಧ್ಯಕ್ಷರಾಗಿ, ಶ್ರೀ ಗಿರಿಮಾಜಿ–ಉಪಾಧ್ಯಕ್ಷರಾಗಿ, ಡಾ॥ಎನ್. ಸತ್ಯಪ್ರಕಾಶ್–ಕಾರ್ಯದರ್ಶಿ, ಶ್ರೀ ಅನಂತ್–ಖಜಾಂಚಿಯಾಗಿ ಹಾಗೂ ಹೆಚ್.ಎಸ್. ಲಕ್ಷ್ಮೀನಾರಾಯಣ ಭಟ್ಟರು, ಎಂ.ವಿ. ಸತ್ಯನಾರಾಯಣ, ಟಿ.ಎಲ್. ಚಂದ್ರಶೇಖರ್ ಮತ್ತು ಶ್ರೀಮತಿ ಪಿ.ಕೆ.ಸುಬ್ಬಲಕ್ಷ್ಮಿ–ಸದಸ್ಯರಾಗಿ ನೂತನ ಆಡಳಿತ ಮಂಡಳಿ ರಚನೆಯಾಗಿ ಬಾಲಮೋಹನ ಶಿಕ್ಷಣ ಸಂಸ್ಥೆಯ ಆಡಳಿತ ಜವಾಬ್ದಾರಿಯನ್ನು ವರ್ಗಾಯಿಸಿಕೊಂಡರು. ಶ್ರೀಯುತ ಬಾಲಸುಬ್ರಮಣ್ಯಂ ಮತ್ತು ಶ್ರೀಯುತ ಮೋಹನ್ ಅವರ ಸಮಾಜ ಸೇವೆ ಕನಸುಗಳನ್ನು ನನಸಾಗಿಸುವ ಮಹತ್ತರ ಆಕಾಂಕ್ಷೆ ಪೂರೈಸಲು ಮುಂದಾದರು. ಆರ್ಥಿಕವಾಗಿ ಹಿಂದುಳಿದ ಸಮಾಜದ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದೆ. ವರ್ಷಗಳು ಕಳೆದಂತೆ ಆಡಳಿತ ಮಂಡಳಿಯಲ್ಲೂ ಬದಲಾವಣೆಗಳಾಗುತ್ತಾ ನುರಿತ ಜವಾಬ್ದಾರಿಯರಿತ ಶಿಕ್ಷಕ ವೃಂದ ಉತ್ತಮವಾಗಿ ದುಡಿಯುತ್ತಾ ಬಂದಿದೆ. ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ. ಪೋಷಕರಿಗೆ ಹೆಚ್ಚಿನ ಹೊರೆಯಾಗದ ರೀತಿಯಲ್ಲಿ ಪರಿಪೂರ್ಣ ಶಿಕ್ಷಣ ನೀಡುವುದು ಈ ಶಾಲೆಯ ಮುಖ್ಯ ಧ್ಯೇಯವಾಗಿದೆ. ನಿಜವಾಗಿಯೂ ಇದು ಶಾಲೆಯಲ್ಲ, ದೇವಸ್ಥಾನ ಎಂದರೆ ಅತಿಶಯೋಕ್ತಿಯಾಗಲಾರದು. ವಿದ್ಯಾರ್ಥಿಗಳ ಸಂಖ್ಯಾದೃಷ್ಟಿಯಲ್ಲಿ ಹೆಚ್ಚಿಲ್ಲದಿದ್ಧರೂ, ಪರೀಕ್ಷಾ ಫಲಿತಾಂಶ ಶೇಕಡ ನೂರರಷ್ಟಿದೆ. 42–43 ವಸಂತಗಳನ್ನು ಪೂರೈಸಿರುವ ಬಾಲಮೋಹನ ವಿದ್ಯಾ ಸಂಸ್ಥೆಯಲ್ಲಿ ಈಗ

ಶಿಕ್ಷಣ ತಜ್ಞ, ರಾಷ್ಟ್ರ ಪ್ರಶಸ್ತಿ ವಿಜೇತ ಡಾ॥ ಎನ್. ಸತ್ಯಪ್ರಕಾಶ್ – ಅಧ್ಯಕ್ಷರಾಗಿ, ಶ್ರೀ ಎಂ.ವಿ. ಸತ್ಯನಾರಾಯಣ – ಕಾರ್ಯದರ್ಶಿಗಳಾಗಿ, ಶ್ರೀ. ಎಂ. ಅನಂತ್ – ಖಜಾಂಚಿಯಾಗಿ ಆಡಳಿತ ಮಂಡಳಿಯ ಜವಾಬ್ದಾರಿ ವಹಿಸಿ ಕೊಂಡಿದ್ದಾರೆ.

ರಾಜಾಜಿನಗರದ ಸುತ್ತಮುತ್ತಲಿನ ಅನೇಕ ಬಡ ವಿದ್ಯಾರ್ಥಿಗಳನ್ನು ಬ್ರಾಹ್ಮೀ ಟ್ರಸ್ಟ್ ನ ಮುಖ್ಯಸ್ತರು ದತ್ತು ತೆಗೆದುಕೊಂಡು ಅವರಿಗೆ ವಿದ್ಯಾಭ್ಯಾಸವನ್ನು ಕೊಡಿಸುವುದರ ಮೂಲಕ ಸಮಾಜ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಬಾಲಮೋಹನ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡಿ ಉತ್ತಮ ಶಿಕ್ಷಣವನ್ನು ನೀಡಲು ಶಿಕ್ಷಕರು ಶ್ರಮವಹಿಸಿ ದುಡಿಯುತ್ತಿದ್ದಾರೆ. ಶಿಕ್ಷಣದ ಜೊತೆಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ಪರ್ದೆಗಳನ್ನು ನಡೆಸಲಾಗುತ್ತದೆ. ಜೊತೆಗೆ ಯೋಗ, ಭಗವದ್ಗೀತೆಗಳನ್ನು ಹೇಳಿ ಕೊಡಲಾಗುತ್ತದೆ. ಪ್ರತಿ ವರ್ಷ ವಾರ್ಷಿಕೋತ್ಸವ, ವಿಜ್ಞಾನ ವಸ್ತು ಪ್ರದರ್ಶನ ಕ್ರೀಡೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ದಕ್ಷಿಣಾ ಮೂರ್ತಿ




ಸ್ತೋತ್ರ ಪಠಣ ಕಾರ್ಯಕ್ರಮವನ್ನು ಅರಮನೆ ಮೈದಾನದಲ್ಲಿ ನಡೆಸಲಾಗಿತ್ತು. ವಿವಿಧ ಸಂಘಟನೆಗಳು ನಡೆಸುವ ವಿಜ್ಞಾನ, ಗಣಿತ, ಇಂಗ್ಲೀಷ್ ಮುಂದಾದ ವಿಷಯಗಳಿಗೆ ಸಂಬಂಧಿಸಿದಂತೆ ನಡೆಯುವ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಎಸ್. ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶಕ್ಕಾಗಿ ಶಾಲಾ ಅವಧಿಯ ನಂತರವೂ ತರಗತಿಗಳನ್ನು ತೆಗೆದುಕೊಳ್ಳಲಾಗುವುದು. ಸಂಪನ್ಮೂಲ ವ್ಯಕ್ತಿಗಳನ್ನು ಶಾಲೆಗೆ ಕರೆಸಿ ವಿದ್ಯಾರ್ಥಿಗಳಿಗೆ ಅವರಿಂದ ವಿಷಯಗಳ ವಿವರಣೆ ನೀಡುವುದುರ ಮೂಲಕ ವಿದ್ಯಾರ್ಥಿಗಳ ಸಂದೇಹಗಳನ್ನು ನಿವಾರಿಸಲಾಗುವುದು.

ಹೀಗೆ ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಾಲೆಯ ಆಡಳಿತ ಮಂಡಳಿಯವರು, ಶಿಕ್ಷಕರು ಸಹಕಾರಿಸುತ್ತಿದ್ದಾರೆ. ಆಡಳಿತ ಮಂಡಳಿಯವರು ಎಸ್.ಎಸ್.ಎಲ್.ಸಿ ಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದರ ಮೂಲಕ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ಲೌಕಿಕ ಆಸೆಗಳಿಗೆ ಬಲಿಯಾಗದೆ ಪೋಷಕರಿಗೆ ಹೊರೆಯಾಗದ ರೀತಿಯಲ್ಲಿ ಉತ್ತಮ ಶಿಕ್ಷಣ ನೀಡುವುದೇ ಈ ಶಾಲೆಯ ಮುಖ್ಯ ಧ್ಯೇಯವಾಗಿದೆ. ನಿಜವಾಗಿಯೂ ಇದು ಬರೀ ಶಾಲೆಯಲ್ಲ ದೇವಸ್ಥಾನ ಎಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ

29/೦, ಕನಕಪುರ ರಸ್ತೆ, ರಘುವನಹಳ್ಳಿ, ಬೆಂಗಳೂರು
ಮಹಾನಗರ ಪಾಲಿಕೆ ಲೇಔಟ್, ಕನಕಪುರ ರಸ್ತೆ, ಬೆಂಗಳೂರು–560062

'ಸಿದ್ದಗಂಗಾ' ಈ ಹೆಸರು ಕೇಳಿದರೆ ಸಾಕು ಭಕ್ತಿ ಭಾವುಕರ ಮೈಮನಗಳಲ್ಲಿ ಪುಳಕ ಉಂಟಾಗುತ್ತದೆ. ಹಳೆಯ ವಿದ್ಯಾರ್ಥಿಗಳಿಗೆ ತವರಿನ ನೆನಪಾಗುತ್ತದೆ. ಉಪಕೃತರಿಗೆ ಕೃತಾರ್ಥ ಭಾವ ಮುಖದಲ್ಲಿ ಗೆರೆಯೊಡೆಯುತ್ತದೆ.



ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು

ಇದು ನೊಂದವರ ಶಾಂತಿಧಾಮ, ಹಸಿದು ಬಂದವರ ಅಶನ ಗೃಹ, ಭವರೋಗಿಗಳ ಚಿಕಿತ್ಸಾಲಯ. ಸಮಸ್ತ ಜನಾಂಗದ ಮತ್ತು ಛಾತ್ರರ ಸಮರಸ ಭಾವನೆಯ ಶಾಂತಿಯ ತೋಟ. ಆತ್ಮ ವಿದ್ಯಾ ವಿನಯ ಭೂಷಿತ ಜಂಗಮಮೂರ್ತಿಗಳನ್ನು ಕಡೆದು ನಿಲ್ಲಿಸುವ ಕಮ್ಮಟ. ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಸುಮಾರು 700 ವರ್ಷಗಳಷ್ಟು ಇತಿಹಾಸವಿದೆ. ಅಲ್ಲಮಪ್ರಭು ಪರಂಪರೆಯ ಶ್ರೀ ಗೋಸಲ ಸಿದ್ದೇಶ್ವರರೆಂಬುವರು ತಮ್ಮ ಜಂಗಮ ಧರ್ಮದಂತೆ ದೇಶ ಸಂಚಾರ ಕೈಗೊಂಡು ಧರ್ಮ ಪ್ರಚಾರ ಮಾಡುತ್ತಾ ಈ ಕ್ಷೇತ್ರಕ್ಕೆ ಬಂದವರು. ಈ ಕ್ಷೇತ್ರದ ಪ್ರಕೃತಿ ಸೌಂದರ್ಯಕ್ಕೆ

ಮನಸೋತು ಇಲ್ಲಿಯೇ ಲಿಂಗ ಸ್ಥಾಪಿಸಿ ತಪಸ್ಸಿನಲ್ಲಿ ತೊಡಗಿದರು. ಮುಂದೆ ಶ್ರೀಮಠದ ಅಧಿಪತಿಗಳಾಗಿ ಬಂದಂತಹ ಮಠಾಧಿಪತಿಗಳು ಶಿವಯೋಗಿಗಳಿಂದ ಶ್ರೀ ಮಠ ಕೀರ್ತಿ ಸ್ಥಾಪನೆಯಾದ ಅಂದರೆ 1917 ರ ಪೂರ್ವದಲ್ಲಿ ಸಂಸ್ಕೃತ ಭಾಷೆಯನ್ನು ಬ್ರಾಹ್ಮಣೇತರರು ಕಲಿಯುವ ಮುಕ್ತ ಅವಕಾಶವಿರಲಿಲ್ಲ. ಉದ್ದಾನ ಶ್ರೀಗಳು 1917 ರಲ್ಲಿ ಅಧಿಕೃತವಾಗಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಜಾತಿ ಮತ ಪಂಥದ ಭೇದವಿಲ್ಲದೆ ಎಲ್ಲರೂ ಸಂಸ್ಕೃತ ಕಲಿಯುವ ಅವಕಾಶವನ್ನು ಕಲ್ಪಿಸಿಕೊಟ್ಟರು. ನಂತರ ಅವರ ವರ ಶಿಷ್ಯರಾದ ವರಮಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳು 1937 ರಲ್ಲಿ ಅದನ್ನು ಮಹಾಪಾಠಶಾಲೆಯನ್ನಾಗಿ ಮೇಲ್ಪಂಕ್ತಿಗೇರಿಸಿ ರಾಷ್ಟ್ರಮಟ್ಟದ ವಿದ್ವಾಂಸರನ್ನು ನೇಮಿಸಿಕೊಂಡು ವೇದ - ಉಪನಿಷತ್ತುಗಳನ್ನು, ತರ್ಕ, ವ್ಯಾಕರಣ, ಅಲಂಕಾರ ಮತ್ತು ವೇದಾಂತ ಇತ್ಯಾದಿ ಶಾಸ್ತ್ರಗಳನ್ನು ಎಲ್ಲರೂ ಕಲಿಯುವ ಅವಕಾಶಗಳನ್ನು ವಿಸ್ತರಿಸಿದರು. 1917 ರಲ್ಲಿ ಎಲ್ಲಾ ಕೋಮಿನವರಿಗೂ ಉಚಿತ ವಿದ್ಯಾರ್ಥಿ ನಿಲಯವನ್ನು ತೆರೆಯಲಾಯಿತು. 45 ವಿದ್ಯಾರ್ಥಿಗಳಿಂದ ಅರಂಭವಾದ ಉಚಿತ ವಿದ್ಯಾರ್ಥಿ ನಿಲಯ ಇಂದು ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳುಳ್ಳ ವಿದ್ಯಾರ್ಥಿನಿಲಯವಾಗಿದೆ. ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಅದೆಷ್ಟೋ ಮಂದಿ ಅನಾಥ ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ, ಆಸರೆ, ಪ್ರೀತಿ ಮತ್ತು ಹಿತವಚನಗಳನ್ನು ತಮ್ಮ ಕಣ್ಣರಿಕೆಯಲ್ಲಿಯೇ ಕಾಪಾಡುವ ಮಾತೃ ಹೃದಯಿಗಳಾಗಿದ್ದರು.

ಪರಮಪೂಜ್ಯರು ಗ್ರಾಮೀಣ ಜನತೆಯ ಅನಿಮಿತ್ತ ಬಂಧುಗಳು ಅಂದಿನ ಗ್ರಾಮೀಣ ಜನತೆಯ ಅನಕ್ಷರತೆಯನ್ನು ಕಂಡು ಅವರ ಮಕ್ಕಳಾದರೂ ಅಕ್ಷರಸ್ಥರಾಗಬೇಕೆಂಬ ಬಯಕೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಶಾಲೆ ಹಾಗೂ ಕಾಲೇಜುಗಳನ್ನು ಶ್ರೀಮಠದ ವತಿಯಿಂದ ಸ್ಥಾಪಿಸಿದರು. ಬಹುತೇಕ ಹಳ್ಳಿಗಳಲ್ಲಿ ಪ್ರೌಢಶಾಲೆ ಹಾಗೂ ಕಾಲೇಜುಗಳಿಲ್ಲದ ಸ್ಥಿತಿಯನ್ನು ಕಂಡು ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಪ್ರಾರಂಭಿಸಿದರು. ಅಂತಹ ಕನಸಿನ ಕೂಸು ಶ್ರೀ ಸಿದ್ದಗಂಗಾ ಗ್ರಾಮಾಂತರ ಪ್ರೌಢಶಾಲೆ ಹಾಗೂ ಶ್ರೀ ಸಿದ್ಧಗಂಗಾ ಪದವಿಪೂರ್ವ ಕಾಲೇಜು, ರಘುವನಹಳ್ಳಿ, ಬೆಂಗಳೂರು - 109.

ಶ್ರೀ ಸಿದ್ದಗಂಗಾ ಗ್ರಾಮಾಂತರ ಪ್ರೌಢಶಾಲೆ ಮತ್ತು ಕಾಲೇಜು, ರಘುವನಹಳ್ಳಿ, ಕನಕಪುರ ಮುಖ್ಯರಸ್ತೆ ಬೆಂಗಳೂರು. ಈ ಹೆಸರು ಕೇಳಿದರೆ ಸಾಕು ಶತಾಯುಷಿ, ಲಿಂಗೈಕ್ಯ ಯಜಮಾನ ಚಿಕ್ಕವೀರಪ್ಪನವರ ಹೆಸರು ತಳುಕು

ಎಂ.ಇ.ಸಿ ವಿದ್ಯಾಸಂಸ್ಥೆ


12, 9ನೇ ಎ ಅಡ್ಡ ರಸ್ತೆ, ಸೆಕ್ಟರ್ ಎ, ಯಲಹಂಕ ಸ್ಯಾಟಲೈಟ್ ಟೌನ್,
ಯಲಹಂಕ ನ್ಯೂ ಟೌನ್, ಬೆಂಗಳೂರು – 560 064

ಒಂದು ಒಳ್ಳೆಯ ಸರ್ವಶ್ರೇಷ್ಠ ಸಂಸ್ಥೆಯ ಹುಟ್ಟು ವಿನಮ್ರತೆಯಿಂದ, ಪರಿಶ್ರಮದಿಂದ, ಹಾಗೂ ಸಮರ್ಪಣೆಯಿಂದ ಆರಂಭವಾಗುತ್ತದೆ. ಅದೇ ರೀತಿ ಮಾಡೆಲ್ ಎಜುಕೇಶನ್ ಸೆಂಟರ್ ವಿದ್ಯಾಸಂಸ್ಥೆಯು 1972ರಲ್ಲಿ ಶ್ರೀಮತಿ ವಿಶಾಲಾಕ್ಷಮ್ಮ ಹಾಗೂ ಶ್ರೀ ಎನ್. ಚಂದ್ರಶೇಖರ್ ದಂಪತಿಗಳು ಯಲಹಂಕದಲ್ಲಿ ಅತ್ಯಲ್ಪ ಸೌಲಭ್ಯಗಳೊಂದಿಗೆ ಪ್ರಾರಂಭಿಸಿದರು. ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡು ರಾರಾಜಿಸುತ್ತಿರುವ ವಿದ್ಯಾಸಂಸ್ಥೆ. ಎಂ.ಇ.ಸಿ. 'ಇನ್ಸ್‌ಪೈರ್ ಟು ಎಜುಕೇಟ್' ಎಂಬ ಧ್ಯೇಯ ವಾಕ್ಯದೊಂದಿಗೆ ಮುಂದುವರಿಯುತ್ತಿದೆ. ಈ ಸಂಸ್ಥೆಯಲ್ಲಿ ರಾಜ್ಯ ಪಠ್ಯಕ್ರಮ, ಸಿ.ಬಿ.ಎಸ್.ಇ ಪಠ್ಯಕ್ರಮ, ಮತ್ತು ಐ.ಸಿ.ಎಸ್.ಸಿ ಪಠ್ಯಕ್ರಮಗಳನ್ನು ಬೋಧಿಸಲಾಗುತ್ತಿದೆ. ಸಂಸ್ಥೆಯು ಬೃಹದಾಕಾರವಾಗಿ ಬೆಳೆದು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಿದೆ.

ಒಂದು ಸಂಸ್ಥೆಯು ಉತ್ತಮವಾಗಿ ರೂಪುಗೊಳ್ಳಲು ಅದರ ಪರಿಸರ ಮತ್ತು ಸೌಲಭ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಣ್ಣ ಜಾಗದಲ್ಲಿ ಆರಂಭಗೊಂಡು ಇಂದು ವಿಶಾಲವಾದ ಆಟದ ಮೈದಾನ, ಅದರ ಸುತ್ತಲೂ ಗಿಡ ಮರಗಳ ಸಸ್ಯ ಕಾಶಿ, ಆವರಣದಲ್ಲಿ ಶ್ರೀ ಶಕ್ತಿ ವಿದ್ಯಾ ಗಣಪತಿಯ ದೇಗುಲ, ಜ್ಞಾನದಾಹಕ್ಕಾಗಿ

ಗ್ರಂಥಾಲಯ, ವಿದ್ಯಾರ್ಥಿಗಳ ಕುತೂಹಲಕ್ಕೆ ಹಾಗೂ ಜ್ಞಾನಾರ್ಜನೆಗೆ ಎಲ್ಲಾ ಪ್ರಯೋಗಾಲಯಗಳು ಆಧುನಿಕ ತಂತ್ರಜ್ಞಾನದಿಂದ ಒಳಗೊಂಡ ಉತ್ತಮ ಬೆಳಕು ಗಾಳಿಯಿಂದ ಕೂಡಿದ ಕೊಠಡಿಗಳು, ಆಯಾ ವಯಸ್ಸಿನ ಮಕ್ಕಳಿಗೆ ಅನುಗುಣವಾಗಿ ಬೇಕಾದ ಪೀಠೋಪಕರಣಗಳು ಮತ್ತು ಆಟೋಪಕರಣಗಳ ಸೌಲಭ್ಯಗಳು ಇವೆ.

ಈ ಮಾದರಿ ವಿದ್ಯಾಸಂಸ್ಥೆಯನ್ನು ಶ್ರೀಮತಿ. ವಿಶಾಲಾಕ್ಷಮ್ಮ ಹಾಗೂ ಶ್ರೀ ಎನ್ ಚಂದ್ರಶೇಖರ್ ದಂಪತಿಗಳು 1972 ರಲ್ಲಿ ಸ್ಥಾಪಿಸಿದರು. ಶ್ರೀಮತಿ. ವಿಶಾಲಾಕ್ಷಮ್ಮ ನವರು ಒಬ್ಬ ಧೀರ, ದಿಟ್ಟ ಹಾಗೂ ಅಂದುಕೊಂಡಿದ್ದನ್ನು ಸಾಧಿಸುವ ಮಹಿಳೆ. ಇವರು ಬಿ.ಎಸ್ಸಿ, ಬಿ.ಎಡ್, ಎಂ.ಎಡ್ ಪದವೀಧರೆ. ಶ್ರೀಮತಿ ವಿಶಾಲಾಕ್ಷಮ್ಮನವರು 1937ರ ಜುಲೈ 12ರಂದು ದೇವನಹಳ್ಳಿ ತಾಲ್ಲೂಕಿನ ಉದಯಗಿರಿ ಎಂಬ ಗ್ರಾಮದಲ್ಲಿ ಶ್ರೀ ವೆಂಕಟರಾಮ ಶರ್ಮ ಮತ್ತು ಶ್ರೀಮತಿ ನೀಲವೇಣಮ್ಮನವರ ಪುತ್ರಿಯಾಗಿ ಜನಿಸಿದರು. ಇವರು ಬಾಲ್ಯದಿಂದಲೇ ಓದಿನ ಕಡೆ ಹೆಚ್ಚು ಆಸಕ್ತಿ ಹೊಂದಿದ್ದರು. ಜೊತೆಗೆ ಗಿಡಮರಗಳನ್ನು ಬೆಳೆಸಲು ಬಹಳ ಇಷ್ಟಪಡುತ್ತಿದ್ದರು. ಇವರಿಗೆ ಸಮಾಜ ಹಾಗೂ ಪರಿಸರದ ಬಗ್ಗೆ ಬಹಳ ಕಾಳಜಿ. ಸದಾ ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಬೇಕೆಂದು ನಂಬಿದವರು ಹಾಗೂ ಅದೇ



ಕನಸನ್ನು ಕಂಡವರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆಯಬೇಕೆಂದು ಹಂಬಲಿಸುತ್ತಿದ್ದರು. ಇವರು ಶಿಕ್ಷಕಿಯಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರು.

ಶ್ರೀಮತಿ. ವಿಶಾಲಕ್ಷಮ್ಮನವರು 1971ರಲ್ಲಿ ಶ್ರೀಯುತ ಎನ್. ಚಂದ್ರಶೇಖರ್ ರವರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಮದುವೆಯ ನಂತರ ಇವರ ಕನಸಿಗೆ ಬೆಂಬಲ ಸಿಕ್ಕಿತು. ಅದನ್ನು ಸಾಕಾರಗೊಳಿಸಲು ಹೆಣ್ಣು ಮಕ್ಕಳ ಶಾಲೆ ತೆರೆಯಲು ಸಂಕಲ್ಪಿತರಾದರು. ತಮ್ಮ ವೃತ್ತಿಗೆ ರಾಜೀನಾಮೆ ಕೊಟ್ಟು, ಯಲಹಂಕದಲ್ಲಿ ಶಾಲೆ ತೆರೆಯಲು ನಿರ್ಧರಿಸಿದರು. ಅಂದಿನ ದಿನಗಳಲ್ಲಿ ಯಲಹಂಕ ಒಂದು ಹಳ್ಳಿಯಾಗಿತ್ತು. ಸ್ಥಳೀಯ ಮುಖಂಡರ ಬೆಂಬಲ ಪಡೆದು ಒಂದು ಚಿಕ್ಕ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಶಾಲೆಯನ್ನು ತೆರೆಯಲು ನಿರ್ಧರಿಸಿದರು. ಅದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ಶ್ರೀಮತಿ ವಿಶಾಲಾಕ್ಷಮ್ಮನವರು ಅಂದುಕೊಂಡಿದ್ದನ್ನು ಸಾಧಿಸುವ ವ್ಯಕ್ತಿತ್ವ ಉಳ್ಳವರು. ಆದ್ದರಿಂದ, ಅವರು ಸುತ್ತಮುತ್ತಲಿನ ಹಳ್ಳಿಗಳಿಗೆ ಪುಸ್ತಕಗಳನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸಿ, ಮನವಿ ಮಾಡಿ ಮತ್ತು ಅಲ್ಲಿನ ಮುಖ್ಯಸ್ಥರನ್ನು ಒಪ್ಪಿಸಿ ಅವರ ಬೆಂಬಲದೊಂದಿಗೆ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತಂದು ತಮ್ಮ ಕನಸಿನ ಕೂಸಾದ ಎಂ. ಇ. ಸಿ ನರ್ಸರಿ ಹಾಗೂ ಬಾಲಕಿಯರ ಪ್ರೌಢಶಾಲೆಯನ್ನು 1972 ರಲ್ಲಿ ಪ್ರಾರಂಭಿಸಿದರು. ಇವರ ಧೈರ್ಯವೇ ಇವರಿಗೆ ಶ್ರೀರಕ್ಷೆಯಾಗಿತ್ತು. ಅವರ ಪತಿ ಶ್ರೀಯುತ. ಎನ್. ಚಂದ್ರಶೇಖರ್ ಅವರು ಬೆಂಬಲಕ್ಕೆ ನಿಂತರು.

ಶ್ರೀಮತಿ. ವಿಶಾಲಾಕ್ಷಮ್ಮ ಶಾಲಾ ಮುಖ್ಯೋಪಾಧ್ಯಾಯಿನಿಯಾಗಿ, ಆಡಳಿತಾಧಿಕಾರಿಣಿಯಾಗಿ ಪಟ್ಟ ಶ್ರಮ ಶ್ಲಾಘನೀಯ. ಆರ್ಥಿಕ ಮುಗ್ಗಟ್ಟು, ಸ್ಥಳದ ಅಭಾವ, ಪೈಪೋಟಿಗಳ ನಡುವೆಯೂ ತನ್ನ ಧ್ಯೇಯ ವನ್ನು ಸಾಧಿಸಿ ನಿಂತ ಧೀರ ಮಹಿಳೆ. ಇವರನ್ನು ನೋಡಿದಾಗ ಇವರು ಮುಖ್ಯೋಪಾಧ್ಯಾಯಿನಿ ಹೌದೋ? ಅಲ್ಲವೋ ಎಂಬ ಅನುಮಾನವಾಗುವಷ್ಟು ಸರಳ, ಸಾಕಾರಮೂರ್ತಿಯಾಗಿದ್ದರು. ತಮ್ಮ ಆಶಯಗಳಿಗೆ ತಕ್ಕಂತೆ ಕೆಲಸ ಮಾಡುವ ಶಿಕ್ಷಕರನ್ನೇ ಆರಿಸಿಕೊಂಡರು. ಇದರ ಫಲವಾಗಿಯೇ ಶಾಲಾ ಶಿಕ್ಷಕಿಯರೆಲ್ಲಾ ಒಂದೇ ಕುಟುಂಬದವರಂತೆ ಮುಂದುವರೆದರು. ಶಿಕ್ಷಣ ಇಲಾಖೆಯವರು ಫಲಿತಾಂಶದ ಹೆಚ್ಚಳವನ್ನು ಕುರಿತು ಇತರ ಶಾಲೆಗಳೊಂದಿಗೆ ಹೋಲಿಸಿ ಟೀಕಿಸಿದರೆ, "ಅವರು ಪ್ರತಿಭೆಯುಳ್ಳ

ಮಕ್ಕಳನ್ನು ಮಾತ್ರ ಆರಿಸಿ ದಾಖಲು ಮಾಡಿಕೊಂಡು ಉತ್ತಮ ಫಲಿತಾಂಶ ಪಡೆಯುವುದರಲ್ಲಿ ಹೆಚ್ಚುಗಾರಿಕೆ ಏನೂ ಇಲ್ಲ. ಸಾಧಾರಣ ಮಟ್ಟದ ಅದಕ್ಕಿಂತಲೂ ಕಡಿಮೆ ಮಟ್ಟದ ಮಕ್ಕಳನ್ನು ತೆಗೆದುಕೊಂಡು ಪ್ರಗತಿಯನ್ನು ಸಾಧಿಸುವುದು ಹೆಚ್ಚಿನ ವಿಶೇಷ ಎನ್ನುತ್ತಿದ್ದರು.

ಒಂದೆಡೆ ಕುಳಿತು ತಮ್ಮ ಅಧಿಕಾರ ಚಲಾವಣೆ ಮಾಡುವ ವ್ಯಕ್ತಿಯಾಗಿರಲಿಲ್ಲ. ಶಾಲೆಯಿಂದ ಇತರ ಶಾಲೆಗಳಿಗೆ, ಶಾಲೆಯ ಇತರ ಶಾಖೆಗಳಿಗೆ ಚಟುವಟಿಕೆಯಿಂದ ಓಡಾಡುತ್ತಿದ್ದು ಅಲ್ಲಲ್ಲಿಯೇ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಗಣಕಯಂತ್ರ ವಿಭಾಗ, ಗ್ರಂಥಾಲಯ, ವೈಜ್ಞಾನಿಕ ಪ್ರಯೋಗಾಲಯ, ಅಕೌಂಟ್ಸ್ ವಿಭಾಗ ಎಲ್ಲಾ ವಿಭಾಗಗಳಲ್ಲಿಯೂ ಚಕ್ರದಂತೆ ಸುತ್ತಿ ಅಲ್ಲಿರುವ ಕುಂದುಕೊರತೆಗಳನ್ನು ನಿವಾರಿಸುತ್ತಿದ್ದರು. ಅವರ ಪರಿಶ್ರಮದ ಫಲ ಎಂ.ಇ.ಸಿ. ವಿದ್ಯಾಸಂಸ್ಥೆ ಅನೇಕ ಕುಟುಂಬಗಳಿಗೆ ನೆರಳನ್ನಿತ್ತಿರುವ ಕಲ್ಪವೃಕ್ಷ ಅದನ್ನು ಭಿತ್ತಿ ಬೆಳೆಸಿದ ಸ್ತ್ರೀಶಕ್ತಿ ಇಲ್ಲಿಯ ಮಾತೃ ಸ್ವರೂಪಿಣಿ ಶ್ರೀಮತಿ. ವಿಶಾಲಾಕ್ಷಮ್ಮನವರ ಕೀರ್ತಿ ಚಿರಸ್ಥಾಯಿಯಾಗಿರಲಿ.

ಶ್ರೀಯುತ ಎನ್ ಚಂದ್ರಶೇಖರ್ ರವರು ಒಬ್ಬ ಸೃಜನಶೀಲ ವ್ಯಕ್ತಿ. ಇವರು ಹುಟ್ಟಿದ್ದು 1934ರ ಮೇ 7 ರಂದು ಕನಕಪುರ ತಾಲೂಕಿನ ಹಾರೋಹಳ್ಳಿ ಎಂಬ ಗ್ರಾಮದಲ್ಲಿ ಶ್ರೀ ಎಚ್.ಎಸ್. ನಾಗಪ್ಪ ಮತ್ತು ಶ್ರೀಮತಿ. ವೆಂಕಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಇವರು ಪುರೋಹಿತ ಕುಟುಂಬಕ್ಕೆ ಸೇರಿದವರು, ಬಹಳ ಕಷ್ಟಪಟ್ಟು ಬದುಕನ್ನು ಕಟ್ಟಿಕೊಂಡವರು. ಇವರು ಬಿ.ಕಾಂ ಪದವೀಧರರು. ಲೆಕ್ಕಪತ್ರಗಳ ಪರಿಶೋಧಕರಾಗಿದ್ದರು. ಇವರು ಕಾಯಕವೇ ದೇವರೆಂದು ನಂಬಿದವರು, ಪ್ರಯತ್ನದಿಂದ ಎಲ್ಲವೂ ಸಾಧ್ಯ ಎಂದು ತಮ್ಮ ಬದುಕನ್ನು ರೂಪಿಸಿಕೊಂಡವರು. ಪ್ರಜ್ಞಾಶೀಲರು ಹಾಗೂ ಶಿಸ್ತಿನವರು, ಎಲ್ಲರಿಗೂ ಒಳಿತನ್ನೇ ಬಯಸುವ ವ್ಯಕ್ತಿತ್ವದವರು, ಯಾರಿಗೂ ಇಲ್ಲ ಎಂದು ಹೇಳಿದ ಜಾಯಮಾನದವರೇ ಅಲ್ಲ. ಇವರ ಸಾಮಾಜಿಕ ಕಳಕಳಿ ಶ್ಲಾಘನೀಯ. ಎಂ. ಇ. ಸಿ ವಿದ್ಯಾಸಂಸ್ಥೆಯ ವರ್ಚಸ್ಸನ್ನು ಸರ್ವತೋಮುಖವಾಗಿ ಬೆಳಸುವ ಪ್ರಯತ್ನದಲ್ಲಿ ಶ್ರೀ ಎನ್. ಚಂದ್ರಶೇಖರ್ ಅವರು ಶಾಲೆಯ ಆಂತರಿಕ ಕಾರ್ಯಕಲಾಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶ್ರೀ ಎನ್. ಚಂದ್ರಶೇಖರ್ ರವರು ಶಾಲೆಯ ಕಾರ್ಯದರ್ಶಿ ಸ್ಥಾನ ಅಲಂಕರಿಸಿದ ನಂತರ ಅವರ ನಿರಂತರ ಶ್ರಮದ ಫಲವಾಗಿ ಗುಡಿಸಲಿನಲ್ಲಿ ನಡೆಯುತ್ತಿದ್ದ ಶಾಲೆ ಇಂದು ಭವ್ಯ ಪರಿಸರ ಹೊಂದಿದ ವಾತಾವರಣದಲ್ಲಿ ನಡೆಯುತ್ತಿದೆ. ಶ್ರೀಯುತ ಎನ್. ಚಂದ್ರಶೇಖರ್ ರವರು ನಿರಂತರವಾಗಿ 25

ವರ್ಷಗಳ ಕಾಲ ಸ್ಕೌಟ್ ಮತ್ತು ಗೈಡ್ ಸಂಸ್ಥೆಗೆ ಸೇವೆ ಸಲ್ಲಿಸಿದ್ದಕ್ಕಾಗಿ ಸಿಲ್ವರ್ ಸ್ಟಾರ್ ಪುರಸ್ಕಾರವನ್ನು 2010ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಶ್ರೀಮತಿ. ಪ್ರತಿಭಾ ದೇವಿ ಪಾಟೀಲ್ ರವರಿಂದ ಪಡೆದಿದ್ದಾರೆ. ಇದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯ.

1972ರಲ್ಲಿ ಸಂಸ್ಥೆಯು ಪ್ರಾರಂಭವಾಗಿ ಅಭಿವೃದ್ಧಿಯ ಪಥದಲ್ಲಿರುವಾಗಲೇ ಮೊದಲನೆಯ ಎಸ್.ಎಸ್.ಎಲ್.ಸಿ ಮಕ್ಕಳ ತಂಡ 1976ರಲ್ಲಿ ಪಬ್ಲಿಕ್ ಪರೀಕ್ಷೆಗೆ ಹಾಜರಾಯಿತು. 6–7 ವರ್ಷಗಳು ಕಳೆಯುತ್ತಿದ್ದಂತೆ ಕಟ್ಟಡದ ಮಾಲೀಕರಿಂದ ಅಡಚಣೆಗಳು ಉಂಟಾಗಿ ಶಾಲೆಯನ್ನು ಅನಿವಾರ್ಯವಾಗಿ ವರ್ಗಾಯಿಸಬೇಕಾದಾಗ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಗಾಂಧೀನಗರದಲ್ಲಿ ಖರೀದಿಸಿದ ಜಾಗದಲ್ಲಿ ತುರ್ತಾಗಿ ತೆಂಗಿನ ಗರಿಗಳ ಮೇಲ್ಛಾವಣಿ ಹಾಕಿ, ಚಾಪೆಗಳನ್ನೇ ಅಡ್ಡಗೋಡೆಗಳನ್ನಾಗಿ ಮಾಡಿ ಒಂದು ಕಚ್ಚಾ ಕಟ್ಟಡವನ್ನು ಕಟ್ಟಿ ತರಗತಿಗಳನ್ನು ನಡೆಸುವ ಏರ್ಪಾಡು ಮಾಡಿದರು. ಆದರೂ ಮಳೆಗಾಲದಲ್ಲಿ ಒಮ್ಮೊಮ್ಮೆ ನೀರು ಸುರಿದು ತರಗತಿಗಳಿಗೆ ಅಡಚಣೆಯಾಗುತ್ತಿತ್ತು. ಇದನ್ನು ಯೋಚಿಸಿ ಮೇಲ್ಛಾವಣಿಗೆ ಸಿಮೆಂಟ್ ಶೀಟ್ ಹಾಕುವುದರ ಮೂಲಕ ಅದನ್ನು ದುರಸ್ತಿಪಡಿಸಿಲಾಯಿತು. ಅದೇ ಸಮಯಕ್ಕೆ ಸರ್ಕಾರದಿಂದ ಶಾಲೆಗೆ ಅನುದಾನವೂ ದೊರಕಿತು. 1980–81ರಲ್ಲಿ ಸರ್ಕಾರದ ಆದೇಶದ ಅನುಸಾರವಾಗಿ ಬರೀ ಹೆಣ್ಣುಮಕ್ಕಳ ಶಾಲೆಯಾಗಿದ್ದ ಎಂ.ಇ.ಸಿ. ಪ್ರೌಢಶಾಲೆಗೆ ಬಾಲಕರ ಸೇರ್ಪಡೆಯಾಯಿತು.

1970 ರ ದಶಕದಲ್ಲಿ ಯಲಹಂಕ ಉಪನಗರವಾಗಿ (ಸ್ಯಾಟಲೈಟ್ ಟೌನ್) ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿಯಾಗಿ ರೂಪುಗೊಂಡಿತು. ಹಾಗೆಯೇ ದೊಡ್ಡಬಳ್ಳಾಪುರದವರೆಗೆ ಕಾರ್ಖಾನೆಗಳು ಸ್ಥಾಪಿತವಾದವು ಮತ್ತು ಇಲ್ಲಿ ಗಾಲಿ ಮತ್ತು ಅಚ್ಚು ಕಾರ್ಖಾನೆ ಹಾಗೂ ಎಸ್ಕಾರ್ಟ್ಸ್ ಫ್ಯಾಕ್ಟರಿಗಳು ಇದ್ದುದರಿಂದ ಉದ್ಯೋಗವನ್ನು ಅರಸಿ ಬೇರೆ ಬೇರೆ ರಾಜ್ಯಗಳಿಂದ ಜನರು ಬರಲು ಪ್ರಾರಂಭಿಸಿದರು. ಆದ್ದರಿಂದ ಸಂಸ್ಥೆಯು ಕೇಂದ್ರ ಪಠ್ಯಕ್ರಮವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದರು. 1982 ರಲ್ಲಿ ಎಂ ಇ ಸಿ ಪಬ್ಲಿಕ್ ಶಾಲೆಯನ್ನು ಒಂದು ಸಣ್ಣ ಬಾಡಿಗೆಯ ಮನೆಯಲ್ಲಿ ಪ್ರಾರಂಭಿಸಿದರು. ಈ ಶಾಲೆಯು ಒಂದರಿಂದ ಏಳನೇ ತರಗತಿವರೆಗೆ ಸ್ವಾಭಾವಿಕವಾಗಿ ಬೆಳೆಯಿತು. ಆರಂಭದಲ್ಲಿ ಬೆರಳೆಣಿಕೆಯಷ್ಟು ಮಕ್ಕಳ ಸಂಖ್ಯೆ ವರ್ಷಗಳು ಕಳೆದಂತೆ ಸಹಸ್ರವಾಯಿತು.

ಕೆಲವೇ ಶಿಕ್ಷಕರ ಸಿಬ್ಬಂದಿಗಳನ್ನು ಹೊಂದಿದ್ದ ಶಾಲೆಯು ನೂರಾರು ಶಿಕ್ಷಕರು, ಸಿಬ್ಬಂದಿ ಆಶ್ರಯ ಕಂಡುಕೊಂಡರು.

1990-91ರಲ್ಲಿ ಸರ್ಕಾರದ ವತಿಯಿಂದ ಎಂ.ಇ.ಸಿ. ವಿದ್ಯಾ ಸಂಸ್ಥೆಗೆ ಯಲಹಂಕ ಉಪನಗರದ 'ಎ' ಸೆಕ್ಟರ್‌ನಲ್ಲಿ ಸ್ಥಳ ಮಂಜೂರಾಯಿತು. ಮಂಜೂರಾದ ಸ್ಥಳದಲ್ಲಿ ಹೊಸ ಕಟ್ಟಡವನ್ನು ಕಟ್ಟಿ ಪ್ರೌಢಶಾಲಾ ತರಗತಿಗಳನ್ನು ಹಾಗೂ ಸಿ.ಬಿ.ಎಸ್.ಇ ಪಠ್ಯಕ್ರಮ ತರಗತಿಗಳನ್ನು ಹೊಸದಾಗಿ ಕಟ್ಟಲ್ಪಟ್ಟ ಈಗಿನ ಕಟ್ಟಡಕ್ಕೆ ಸಂಭ್ರಮ, ಸಂತೋಷದಿಂದ ವರ್ಗಾಯಿಸಲಾಯಿತು. 1993ರಲ್ಲಿ ಹೊಸ ಶಾಲಾ ಕಟ್ಟಡದಲ್ಲಿ ಸುಸಜ್ಜಿತ ಪ್ರಯೋಗಾಲಯ ಹಾಗೂ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು.


ಶ್ರೀ ವಿನಯ್. ಸಿ


ಡಾ. ವಿದ್ಯಾ. ಸಿ

ಶ್ರೀಮತಿ ವಿಶಾಲಾಕ್ಷಮ್ಮ ಮತ್ತು ಶ್ರೀ ಚಂದ್ರಶೇಖರ್ ರವರ ಪುತ್ರರಾದ ಶ್ರೀ ವಿನಯ್.ಸಿ ಅವರು 2001 ರಿಂದ ತಮ್ಮ ತಂದೆಯವರ ಮಾರ್ಗದರ್ಶನದಲ್ಲಿ ವ್ಯವಸ್ಥಾಪಕರಾಗಿ ಶಾಲೆಯ ಕಾರ್ಯಕಲಾಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 2012 ರಿಂದ ಜಂಟಿ ಕಾರ್ಯದರ್ಶಿಗಳಾಗಿ ಸಂಸ್ಥೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯ ಚಟುವಟಿಕೆಗಳಲ್ಲಿ ಸಾಗುವುದರ ಜೊತೆಯಲ್ಲಿ ಅವರ ತಂದೆಯಂತೆ ಶಿಸ್ತು ಬದ್ಧ ಆಡಳಿತ ನೀಡಲು ಶಿಸ್ತಿನ ಸಿಪಾಯಿಯಂತೆ ಎಲ್ಲಾ ನೀತಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾ, ಶಾಲೆ ಬೆಳೆದಂತೆ ಬೇಕಾದ ಮೂಲಸೌಕರ್ಯಗಳನ್ನು ಒದಗಿಸುತ್ತಾ ಶಾಲೆಯನ್ನು ಮುನ್ನಡೆಸುತ್ತಿದ್ದಾರೆ.

2003 ಅಕ್ಟೋಬರ್ 7 ರಂದು ಶ್ರೀಮತಿ ವಿಶಾಲಾಕ್ಷಮ್ಮನವರು ನಿಧನರಾದ ನಂತರದಲ್ಲಿ, ಶ್ರೀಮತಿ ವಿಶಾಲಾಕ್ಷಮ್ಮ ಮತ್ತು ಶ್ರೀ ಚಂದ್ರಶೇಖರ್ ರವರ ಪುತ್ರಿಯಾದ ಡಾ. ವಿದ್ಯಾ.



ಸಿ ಅವರು ಎಂ.ಇ.ಸಿ. ವಿದ್ಯಾಸಂಸ್ಥೆಯನ್ನು ಮುನ್ನಡೆಸುವ ದೃಷ್ಟಿಕೋನದಿಂದ ಆಡಳಿತಾಧಿಕಾರಿಣಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಎಂ. ಇ. ಸಿ ಸಂಸ್ಥೆಗೆ ಪಾದಾರ್ಪಣೆಯನ್ನು ಮಾಡಿದರು. ಇವರು ತಾಯಿಯ ಮಾರ್ಗದಲ್ಲಿಯೇ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

ಎಂ. ಇ. ಸಿ. ಶಾಲೆಯಿಂದ ಅರಳಿದ ಮಕ್ಕಳು ಇಂದು ಅನೇಕ ಜವಾಬ್ದಾರಿಯುತ ಕಾರ್ಯಕ್ಷೇತ್ರಗಳಲ್ಲಿ ಅತ್ಯಂತ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇದು ನಮ್ಮ ಶಾಲೆಯಿಂದ ಸಮಾಜಕ್ಕೆ ಮಹತ್ತರ ಕೊಡುಗೆಯಾಗಿದೆ. ಹೀಗೆ ಎಂ.ಇ.ಸಿ ಸಂಸ್ಥೆಯು ಐವತ್ತು ವರ್ಷಗಳಿಂದ ಸಾಮಾಜಿಕ ಜವಾಬ್ದಾರಿಯನ್ನರಿತು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತಿದೆ.

ಗುಡ್ ಷಫರ್ಡ್ ಶಾಲೆ


143, 7ನೇ ಮುಖ್ಯರಸ್ತೆ, ಜಯನಗರ 5ನೇ ಬಡಾವಣೆ,

ಬೆಂಗಳೂರು – 560 041

1976 ರಲ್ಲಿ ಜುಲೈ ತಿಂಗಳ ಒಂದರಂದು ಗುಡ್ ಷಫರ್ಡ್ ಶಾಲೆ ಪ್ರಾರಂಭವಾಯಿತು. ಶಾಲೆಯ ಜನನ ಮತ್ತು ಬೆಳವಣಿಗೆ ಒಂದು ಸ್ವಾರಸ್ಯದ ವಿಷಯವೇ ಆಗಿದೆ. ಶಾಲೆಯ ಪ್ರಾರಂಭಕ್ಕೆ ಒಂದು ಪ್ರಬಲವಾದ



ಶ್ರೀ. ಡಿ ನರಸಿಂಗ ರಾವ್
ಸಂಸ್ಥಾಪಕ ಅಧ್ಯಕ್ಷರು



ಶ್ರೀ. ಕೆ. ಚಂಗಮ ರಾಜು

ಕಾರಣವೂ ಇದೆ. ಬಹುತೇಕ ಮಂದಿ ಉಪಾಧ್ಯಾಯರುಗಳು, ಹೋಲಿ ಕ್ರೈಸ್ಟ್ ಶಾಲೆಯ ಆಡಳಿತ ಮಂಡಳಿಯ ಕಾರ್ಯವೈಖರಿ ಬಗ್ಗೆ ಅಸಮಾಧಾನಗೊಂಡಿದ್ದರು. ಕಿರುಕುಳ ತಡೆಯಲಾರದೆ ಕೆಲವು ಮಂದಿ ಉಪಾಧ್ಯಾಯರು ಆಗಲೇ ಶಾಲೆಯನ್ನು ಬಿಟ್ಟು ಹೋಗಿದ್ದರು.

ಇನ್ನುಳಿದವರು 1976 ರ ಜೂನ್ ತಿಂಗಳಲ್ಲಿ, ಆ ಶಾಲೆಯನ್ನು ಬಿಟ್ಟು ಹೊರಬರಬೇಕಾದ ಸಂದರ್ಭ ಬಂತು. ಹೊರಬರುವುದಕ್ಕೆ ಮುಂಚೆ, ಅಸಮಾಧಾನಗೊಂಡ ಉಪಾಧ್ಯಾಯರು, ಒಂದೆಡೆ ಕಲೆತು ತರ್ಕಿಸಿದರು. ಬೇರೆ ಒಂದು ಹೊಸ ಶಾಲೆಯನ್ನು ಪ್ರಾರಂಭ ಮಾಡಬೇಕೆಂಬ ಅಭಿಪ್ರಾಯಕ್ಕೆ ಬಂದರು. ನಂತರ ಪ್ರತಿಯೊಂದು ಪೋಷಕರ ಮನೆಗಳಿಗೂ ಹೋಗಿ, ತಮ್ಮ ಮಕ್ಕಳನ್ನು ನಮ್ಮ ಸಂಗಡ ಕಳುಹಿಸಿ, ನಾವು ಒಂದು ಹೊಸ ಶಾಲೆಯನ್ನು ಪ್ರಾರಂಭ ಮಾಡುತ್ತೇವೆ ನಮಗೆ ಸಹಾಯ, ಸಹಕಾರ ನೀಡಿ ಎಂದು ಮನವಿ ಮಾಡಿಕೊಂಡರು. ಪೋಷಕರ ಪರವಾಗಿ ಪ್ರೊಫೆಸರ್ ರಾಮಕೃಷ್ಣರವರು ಜೂನ್ 15 ರಂದು ಸಂಜೆ 5 ಘಂಟೆಗೆ ಮಾಧವನ್ ಪಾರ್ಕ್‌ನಲ್ಲಿ ಪೋಷಕರ ಸಭೆಯನ್ನು ಕರೆದರು. ಅವರನ್ನು ಉದ್ದೇಶಿಸಿ ಮಾತನಾಡಿದರು. "ಒಂದು ಹೊಸ ಶಾಲೆ ಪ್ರಾರಂಭ ಮಾಡಬೇಕಾದರೆ, ಅದು ಒಂದು ಪ್ರಯಾಸದ ಕೆಲಸವೇ ಆಗಿದೆ. ಅದಕ್ಕೋಸ್ಕರ ಒಂದು ಕಟ್ಟಡ, ಉಪಾಧ್ಯಾಯರುಗಳು, ವಿದ್ಯಾರ್ಥಿಗಳು ಬೇಕು, ಎಲ್ಲಕ್ಕೂ ಮೇಲಾಗಿ ಸಂಬಳ, ಸಾರಿಗೆ ಕೊಡಲು ಹಣ ಬೇಕಾಗುತ್ತದೆ ಎಂದು ಸಲಹೆಗಳನ್ನು ಕೊಟ್ಟರು.

ನಂತರ ಉಪಾಧ್ಯಾಯರುಗಳು ಜಯನಗರ ಬಡಾವಣೆಯಲ್ಲಿ ಸುತ್ತಾಡಿ ಒಂದು ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಳ್ಳಲು ಒಪ್ಪಂದ ಮಾಡಿಕೊಂಡರು. ಆದರೆ ಅದಕ್ಕೆ ಅಡ್ವಾನ್ಸ್ ಕೊಡಲು ಹಣಕ್ಕಾಗಿ ಪರದಾಟವಾಯಿತು. ಅಡ್ವಾನ್ಸ್ ಕೊಡಲು ಯಾರ ಹತ್ತಿರವೂ ಹಣವಿರಲಿಲ್ಲ. ಉಪಾಧ್ಯಾಯಿನಿ ಕ್ಯಾಥರೀನ್ ಡೇವಿಸ್ ಅವರ ಭಾವ ಮೈದುನ ಶ್ರೀ.ಡಿ. ಫಿಲಿಪ್ಸ್ ಆಗ ತಾನೆ ಸೇನೆಯಿಂದ ನಿವೃತ್ತಿಗೊಂಡು ಹೊರಬಂದಿದ್ಧರು. ಅವರ ಕೈಯಲ್ಲಿ ನಿವೃತ್ತಿ ವೇತನ ರೂ. 12,000 ಹಣವಿತ್ತು. ಮಿ. ಡೇವಿಸ್ ಅವರ ಪ್ರಭಾವಕ್ಕೆ ಮಣಿದು ಮಿ. ಫಿಲಿಪ್ಸ್ ಆ ಹಣವನ್ನು ಬಿಲ್ಡಿಂಗ್‌ಗೆ ಅಡ್ವಾನ್ಸ್ ಕೊಡಲು ಧನಸಹಾಯ ಮಾಡಿದರು. ಹೀಗೆ ಶಾಲೆ ಪ್ರಾರಂಭ ಮಾಡಲು ಒಂದು ಬಿಲ್ಡಿಂಗ್ ದೊರೆಯಿತು. 12 ಮಂದಿ ಉಪಾಧ್ಯಾಯರುಗಳು ಮತ್ತು 550 ಮಂದಿ ವಿದ್ಯಾರ್ಥಿಗಳು ಹೋಲಿ ಕ್ರೈಸ್ಟ್

ಶಾಲೆಯನ್ನು ತೊರೆದು ಹೊರಬರಲು ಸಿದ್ಧರಾದರು. ಆದರೆ ಸಂಬಂಧಪಟ್ಟ ವಿದ್ಯಾ ಇಲಾಖೆಯಿಂದ, ಶಾಲೆ ನಡೆಸಲು ಅಪ್ಪಣೆ ಬೇಕು ಅಲ್ಲದೇ ಸರ್ಕಾರದಿಂದ ಅನುಮತಿ ಬೇಕು. ಇವುಗಳನ್ನು ಪಡೆಯಲು ಮತ್ತೆ ಉಪಾಧ್ಯಾಯರು ಶ್ರಮಪಡಬೇಕಾಯಿತು. ಈ ಎಲ್ಲಾ ಸಮಸ್ಯೆ ಬಗೆಹರಿಸಲು ಮತ್ತು ಹೆಚ್ಚಿನ ಮಾಹಿತಿ ಪಡೆಯಲು, ಉಪಾಧ್ಯಾಯ ವೃಂದ, ಸಹ ನಿರ್ದೇಶಕರಾಗಿದ್ದ ಶ್ರೀಮಾನ್. ಟಿ. ರಾಮಯ್ಯನವರಲ್ಲಿಗೆ ನಿಯೋಗ ಹೋದರು. ದಕ್ಷ ಆಡಳಿತ ಅಧಿಕಾರಿಗಳಾದ ರಾಮಯ್ಯನವರು ಅಮೋಘವಾದ ಸಲಹೆಗಳನ್ನುಕೊಟ್ಟು ಸಹಕರಿಸಿದರು. ಮೊದಲಿಗೆ ಒಂದು ಎಜುಕೇಶನ್ ಸೊಸೈಟಿ ಮಾಡಿಕೊಂಡು, ಮುಂದಿನ ಕಾರ್ಯಗಳನ್ನು ಪ್ರಾರಂಭಿಸಿ ಎಂದು ಸಲಹೆ ಕೊಟ್ಟರು. ಅವರ ಸಲಹೆ ಮೇರೆಗೆ ಗುಡ್ ಷಫರ್ಡ್ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿಕೊಂಡರು. ಅದು ರೆಜಿಸ್ಟರ್ ಕೂಡ ಆಯಿತು.

ಈ ಸಮಯಕ್ಕೆ ಸರಿಯಾಗಿ ಅಂದಿನ ಕರ್ನಾಟಕ ರಾಜ್ಯ ಕ್ರೀಡಾ ಸಂಸ್ಥೆಯಾ ಅಧ್ಯಕ್ಷರಾಗಿದ್ದ ಶ್ರೀಮಾನ್. ಡಿ.ಎಸ್.ನರಸಿಂಗ್ ರಾವ್ ಮತ್ತು ಸಮಾಜ ಸೇವಕರಾದ ಶ್ರೀಮಾನ್ ಕೆ.ಚಂಗಮರಾಜು ಅವರ ಸಹಾಯ ಮತ್ತು ಸಲಹೆ ಕೂಡಾ ದೊರೆಯಿತು. ಶ್ರೀ. ಡಿ.ಎಸ್.ನರಸಿಂಗ್ ರಾವ್ ಅವರ ಪ್ರಭಾವದಿಂದ ಆಗಿನ ವಿದ್ಯಾ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಅವರು,ಶಾಲೆ ಪ್ರಾರಂಭ ಮಾಡಲು ಅನುಮತಿ ನೀಡಿದರು. ಶ್ರೀ ಚಂಗಮರಾಜು ಅವರು ಶಾಲೆಗೆ ಬೇಕಾಗುವ ಬೆಂಚು, ಕುರ್ಚಿ, ಡೆಸ್ಕ್‌ಗಳನ್ನು ಎರವಲಾಗಿ ತರಿಸಿದರು.

ಈ ಎಲ್ಲಾ ಮಹತ್ತರದ ಸಾಧನೆಗಳು 1976 ರ ಮೇ ಮತ್ತು ಜೂನ್ ತಿಂಗಳುಗಳಲ್ಲಿ ನಡೆದು ಹೋದವು. ಕೊನೆಗೆ 1976 ರ ಜೂನ್ ಅಂತ್ಯದಲ್ಲಿ 12 ಮಂದಿ ಉಪಾಧ್ಯಾಯರುಗಳು, 550 ಮಂದಿ ವಿದ್ಯಾರ್ಥಿಗಳೊಂದಿಗೆ ಹೋಲಿ ಕ್ರೈಸ್ಟ್ ಶಾಲೆ ತೊರೆದು ಹೊರಬಂದರು. 1976 ಜುಲೈ ಒಂದನೇ ತಾರೀಖು ಹೊಸ ಶಾಲೆ ಉದಯವಾಯಿತು. ಉಪಾಧ್ಯಾಯರುಗಳಲ್ಲಿ ಬಹುತೇಕ ಮಂದಿ ಕ್ರಿಶ್ಚಿಯನ್ನರೇ ಆಗಿದ್ದರಿಂದ ಈ ಹೊಸ ಶಾಲೆಗೂ "ಗುಡ್ ಷಫರ್ಡ್ ಶಾಲೆ ಎಂದು ಹೆಸರಿಡಲಾಯಿತು. ಹೀಗೆ ಶ್ರಮಪಟ್ಟು ಹೋರಾಡಿ ಹೊಸ ಶಾಲೆಯ ಪ್ರಾರಂಭಕ್ಕೆ ಕಾರಣರಾದ ಉಪಾಧ್ಯಾಯರುಗಳೆಂದರೆ : ಶ್ರೀಮತಿ. ಕ್ಯಾಥರೀನ್ ಡೇವಿಸ್, ಶ್ರೀಮತಿ ಜಾಯ್ಸ್ ಡೊಮಿನಿಕ್, ಶ್ರೀ. ಬಿ.ಸಿ. ಅನಂತನಾರಾಯಣ, ಶ್ರೀಮತಿ ಸಿಂಥಿಯಾ ಜೆ ಪಿಂಟೋ, ಶ್ರೀಮತಿ ಲಿಂಡಾ ಪ್ರೇಮ್ ಕುಮಾರ್, ಶ್ರೀ

ಎ. ಫ್ರಾನ್ಸಿಸ್, ಶ್ರೀ ಜೆ. ಅಗಸ್ಟಸ್, ಶ್ರೀ ಬಿ. ಲೂಯಿಸ್, ಶ್ರೀ ಸುಂದಾಚಾರಿ, ಶ್ರೀಮತಿ ಲೂಸಿಯಾ, ಮಿಸ್. ಮಾರ್ಗರೆಟ್, ಶ್ರೀಮತಿ ಜೈಕಿರಣ್ ಸಿಂಗ್.

ಪ್ರಾರಂಭದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಒಂದು ರೂಪಾಯಿ ಅಡ್ಮಿಶನ್ ಫೀ ಮತ್ತು 15 ರೂ. ತಿಂಗಳಿಗೆ ಟ್ಯೂಷನ್ ಫೀ ಕೊಡಬೇಕೆಂದು ತೀರ್ಮಾನಿಸಲಾಯಿತು. ಇನ್ನು ಉಪಾಧ್ಯಾಯರುಗಳ ಸಂಬಳ. ಮೊದಲ ತಿಂಗಳ ಸಂಬಳ ಕೊಡಲು ಹಣವಿಲ್ಲ. ಆಗ ಶ್ರೀ ನರಸಿಂಗ್ ರಾವ್ ಮತ್ತು ಶ್ರೀ ಚಂಗಮರಾಜು ಅವರು ಮೊದಲು ತಿಂಗಳ ಸಂಬಳ ಕೊಡಲು ಸಹಾಯ ಮಾಡಿದರು. ಉಪಾಧ್ಯಾಯರುಗಳು ಕೂಡಾ ತಮ್ಮ ಔದಾರ್ಯವನ್ನು ತೋರಿ ಹೆಚ್ಚಿನ ಸಂಬಳ ಕೇಳದೆ, ಕೇವಲ 300 ರೂಪಾಯಿ ತಿಂಗಳ ಸಂಬಳಕ್ಕೆ ಕೆಲಸ ಮಾಡಲು ಒಪ್ಪಿಕೊಂಡರು.



ಶ್ರೀ ಗುಂಡೂರಾವ್ ಶಾಲೆಯ ಪ್ರಥಮ ಪ್ರಾಂಶುಪಾಲರು

ಒಂದು ತಿಂಗಳು ಆದ ಮೇಲೆ ವಿದ್ಯಾರ್ಥಿಗಳಿಂದ ಬಂದ ಸ್ಕೂಲ್ ಫೀಜಿನಿಂದ ಉಪಾಧ್ಯಾಯರುಗಳಿಗೆ ಸಂಬಳ ಕೊಡಲು ಸಾಧ್ಯವಾಯಿತು. ರಿಟೈರ್ಡ್ ಹೆಡ್ ಮಾಸ್ಟರ್ ಶ್ರೀ ಗುಂಡೂರಾವ್ ಪ್ರಾಂಶುಪಾಲರಾಗಿ ನೇಮಕಗೊಂಡರು. ಅವರು ದಕ್ಷತೆಯಿಂದ ಕೆಲಸ ಮಾಡಿ ಶಾಲೆಯ ಅಭಿವೃದ್ಧಿಗೆ ಕಾರಣರಾದರು. ಗುಡ್ ಷಫರ್ಡ್ ಎಜುಕೇಶನ್ ಸೊಸೈಟಿಯ ನಿಯಮಾವಳಿಗಳನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಸೊಸೈಟಿಗೆ ಸದಸ್ಯರುಗಳನ್ನು ಸೇರಿಸಿಕೊಂಡಾಗ ಶ್ರೀಯುತ ಡಾ॥ ಎಚ್.ಎ. ಗಂಗಪ್ಪ ನವರೂ ಸದಸ್ಯರಾದರು. ಶ್ರೀ. ಡಿ.ಎಸ್. ನರಸಿಂಗ್ ರಾವ್ ಅಧ್ಯಕ್ಷರಾದರು, ಶ್ರೀ. ಕೆ.ಚಂಗಮರಾಜು ಅವರು ಉಪಾಧ್ಯಕ್ಷರಾದರು.

14–8–1985ರಲ್ಲಿ ಬಾಡಿಗೆ ಕೊಟ್ಟು ಶಾಲೆ ನಡೆಸುತ್ತಿದ್ದ ಬಿಲ್ಡಿಂಗನ್ನು ಖರೀದಿಸಿಕೊಂಡೆವು. ಶಾಲೆಗೆ ಒಂದು ಸುಭದ್ರವಾದ ಮತ್ತು ಶಾಶ್ವತವಾದ ಬಿಲ್ಡಿಂಗ್ ದೊರೆತಂತಾಯಿತು. ನಂತರ ಆ ಬಿಲ್ಡಿಂಗ್ ಮೇಲೆ ಎರಡು ಅಂತಸ್ತು



ಶ್ರೀ.ಬಿ.ಸಿ.ಅನಂತ ನಾರಾಯಣ
ಪ್ರಸ್ತುತ ಪ್ರಾಂಶುಪಾಲರು

ಕೊಠಡಿಗಳನ್ನು ಕಟ್ಟಿ ಹೆಚ್ಚು ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಲಾಯಿತು. 1987 ರಲ್ಲಿ ಅನುಮತಿ ದೊರೆಯಿತು. ಹೈಸ್ಕೂಲ್ ನಡೆಸಲು ತೀರ್ಮಾನಿಸಿ ತರಗತಿಗಳನ್ನು ಪ್ರಾರಂಭಿಸಿದರು. 1992 ರಲ್ಲಿ ಹೈಸ್ಕೂಲ್ ನಡೆಸಿದ ಅನುಭವದ ಮೇಲೆ ಕಾಲೇಜು ತೆರೆಯುವ ಹಂಬಲ. ಆದರೆ ಸ್ಥಳದ ಕೊರತೆ ಇದ್ದುದರಿಂದ ಕಾಲೇಜು ಬಿಲ್ಡಿಂಗನ್ನು ಬೇರೆ ಸ್ಥಳದಲ್ಲಿ ಕಟ್ಟಬೇಕೆಂದು ಆಡಳಿತ ಮಂಡಳಿ ತೀರ್ಮಾನಿಸಿತು. ಅದೇ ಪ್ರಕಾರ ಕಾಲೇಜು ಬಿಲ್ಡಿಂಗ್ ಕಟ್ಟುವುದಕ್ಕೆ ತಾ॥ 27–11–1995 ರಂದು ಕೊತ್ತನೂರು ಬಡವಾಣೆಯಲ್ಲಿ ಇರುವ ಒಂದು ದೊಡ್ಡ



ನಿವೇಶನವನ್ನು ಕೊಂಡುಕೊಳ್ಳಲಾಯಿತು. ಸದ್ಯದಲ್ಲೆ ಅಲ್ಲಿ ಒಂದು ಕಟ್ಟಡ ನಿರ್ಮಿಸಿ ಕಾಲೇಜು ವಿಭಾಗವನ್ನು ತೆರೆಯಲು ಆಡಳಿತ ಮಂಡಳಿ ಯೋಜಿಸಿದೆ.

ಈಗ ಗುಡ್ ಷಫರ್ಡ್ ಶಾಲೆಯಲ್ಲಿ ವ್ಯಾಸಂಗ ಮಾಡಲು ಎಲ್ಲಾ ಸಾಧನ ಮತ್ತು ಸೌಕಾರ್ಯಗಳು ಇವೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಇದೆ. ಉಪಾಧ್ಯಾಯರುಗಳಿದ್ದಾರೆ. ಪೋಷಕರುಗಳಿಗೆಲ್ಲ ಇದೊಂದು ಪ್ರತಿಷ್ಠೆಯ ಶಾಲೆಯಾಗಿದೆ. ಆಡಳಿತ ಮಂಡಳಿಯೂ ಕೂಡ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅನೇಕ ಮಂದಿ ವಿದ್ಯಾರ್ಥಿಗಳು, ದೇಶ, ವಿದೇಶಗಳಲ್ಲಿ ನೆಲಸಿ ಕೆಲಸ ಮಾಡುತ್ತಿದ್ದಾರೆ.

ಅಂದಿನಿಂದ ಇಂದಿನವರೆಗೆ, 25 ವರ್ಷಗಳಲ್ಲಿ ಗುಡ್ ಷಫರ್ಡ್ ಶಾಲೆ ಬೆಳೆದುಕೊಂಡು ಬಂದು ಹೆಮ್ಮರವಾಗಿ ನಿಂತಿದೆ.

ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ವಿದ್ಯಾಕೇಂದ್ರ

ರಾಗೀಗುಡ್ಡ 9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069

ರಾಗೀಗುಡ್ಡ ಪ್ರದೇಶ ಹಿಂದೆ ಪಾಳೇಗಾರನ ಆಳ್ವಿಕೆಗೆ ಒಳಪಟ್ಟಿತ್ತು. ಒಂದು ಸುಗ್ಗಿಯ ಕಾಲದಲ್ಲಿ ವಿಪುಲವಾದ ರಾಗಿ ಬೆಳೆ ಬಂದು ಹರ್ಷಚಿತ್ತನಾದ ಪಾಳೆಗಾರ ಬೆಟ್ಟದಷ್ಟು ಧಾನ್ಯದ ರಾಶಿಗೆ ಸಂಭ್ರಮದಿಂದ ಪೂಜೆ ಮಾಡತೊಡಗಿದ.



ಧಾನ್ಯ ರಾಶಿಯ ಪೂಜೆಯಾದ ನಂತರ ದಾನ ನಡೆಯುವ ಸಂದರ್ಭದಲ್ಲಿ ಮೂರು ಜನ ನಾಮಧಾರಿ ದಾಸಯ್ಯಗಳು ಜಾಗಟೆ ಬಡೆಯುತ್ತಾ ಬಂದಾಗ ದಾನ ನೀಡಲು ಸೊಸೆ ಮುಂದಾಗುತ್ತಿದ್ದಂತೆ ಅತ್ತೆ ದಾನ ಮಾಡಲು ಬಿಡಲಿಲ್ಲ. ದೇವರು ಕೊಟ್ಟ ನೈವೇದ್ಯ ದೇವರಿಗೆ ಇಲ್ಲದ ಮೇಲೆ ಈ ರಾಶಿ ಇದ್ದರೇನು ಹೋದರೇನು ಎಂದು ಶಪಿಸಿದಳು. ಕ್ಷಣಮಾತ್ರದಲ್ಲಿ ರಾಗಿಯ ರಾಶಿಯೆಲ್ಲ ಕರಿ ಕಲ್ಲಿನ ಗುಡ್ಡವಾಯಿತು. ಕಾಲಾಂತರದಲ್ಲಿ ರಾಗೀಗುಡ್ಡ ಎಂಬ ಅಭಿದಾನ ಪಡೆಯಿತು.

ಸುಮಾರು ಐದಾರು ದಶಕಗಳ ಹಿಂದೆ ಬೆಳೆಯುತ್ತಿರುವ ಬೆಂಗಳೂರಿನ ನಿವಾಸಿಗಳ ಜನಸಂಖ್ಯೆಯನ್ನು ಗಮನಿಸಿ ಬೆಂಗಳೂರು ನಗರಾಭಿವೃದ್ಧಿ ಮಂಡಳಿ ಹೊಸ ಬಡಾವಣೆಗಳನ್ನು ನಾಲ್ಕೂ ದಿಕ್ಕಿಗೂ ವಿಸ್ತರಿಸಿತು. ಅದರಲ್ಲಿ ಜಯನಗರ ಬಡಾವಣೆ ಅತ್ಯಂತ ದೊಡ್ಡ ಬಡಾವಣೆಗಳಲ್ಲಿ ಒಂದು ಎಂದು ಪ್ರಸಿದ್ಧಿಯಾಗಿದೆ. ಹೌಸಿಂಗ್ ಬೋರ್ಡ್ ಮನೆಗಳು ನಿರ್ಮಿತವಾಗಿ, ವಾಸಕ್ಕೆ ಜನ ಬಂದರೂ ಸಹ ನಾಗರಿಕ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿತ್ತು. ಒಳಚರಂಡಿ, ಕುಡಿಯುವ ನೀರು, ರಸ್ತೆ, ಬೀದಿದೀಪ ಇತ್ಯಾದಿಗಳಿಂದ ವಂಚಿತರಾಗಿದ್ದ ಇವರುಅವುಗಳನ್ನು ಪಡೆಯಲೆಂದೇ "ಒಂಭತ್ತನೆಯ ಬಡಾವಣೆ ನಿವಾಸಿಗಳ ಸಂಘ"ವನ್ನು ಸ್ಥಾಪಿಸಿ, ಸಂಬಂಧಪಟ್ಟ ಅಧಿಕಾಗಿಗಳನ್ನು ಸಂಪರ್ಕಿಸಿ ಅಗತ್ಯವಾದ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಿಸಿದರು. ಇವರ ಕಾರ್ಯಬಾಹುಳ್ಯದ ಒಂದು ಕೊಂಡಿಯೇ ಕರಿಗಿರಿ ಮೇಲೆ ಆಂಜನೇಯನ ವಿಗ್ರಹ ಪ್ರತಿಷ್ಠಾಪನೆ ಮಾಡಿ ರಾಗಿಗುಡ್ಡವನ್ನಾಗಿ ಮಾಡಿದುದು.

ಜಯನಗರದ ಒಂಭತ್ತನೆಯ ಬಡಾವಣೆಯಲ್ಲಿ ಪುರಾಣ ಪ್ರಸಿದ್ಧ ಇತಿಹಾಸ ಹಿನ್ನೆಲೆ ಪಡೆದಿರುವ ಕ್ಷೇತ್ರ ರಾಗಿಗುಡ್ಡ. ಅದರ ಹಿನ್ನೆಲೆ ಅರಿತಿದ್ದ ಜನರು ಇದನ್ನೊಂದು ಪವಿತ್ರ ಕ್ಷೇತ್ರವಾಗಿ, ಧರ್ಮಕ್ಷೇತ್ರವಾಗಿ ಮಾಡಬೇಕೆಂಬ ಮನೋಭಾವನೆ ಹೊಂದಿದ್ದರು. ಶ್ರೀರಾಮ ಭಕ್ತನಾದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಅಂದಿನಿಂದ ಈ ಕ್ಷೇತ್ರ ಒಂದು ಧರ್ಮಕ್ಷೇತ್ರವಾಗಿ, ಸಾಂಸ್ಕೃತಿಕ ಕ್ಷೇತ್ರವಾಗಿ, ವಿದ್ಯಾಕ್ಷೇತ್ರವಾಗಿ ನಾಡಿನಾದ್ಯಂತ ಜನಮನ ಸೆಳೆದಿದೆ.



ಶ್ರೀಯುತ ಕೆ.ಪಿ.ರಾವ್

ಬಡಾವಣೆಯ ನಿವಾಸಿಗಳ ಆಶಯದಂತೆ ಧಾರ್ಮಿಕ ಕ್ಷೇತ್ರದ ಬೆಳವಣಿಗೆ ವಿದ್ಯಾಕ್ಷೇತ್ರದೆಡೆಗೆ ಮುಖ ಮಾಡುವಂತೆ ಮಾಡಿತು. ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಬೇಕೆಂಬ ಆಸೆಯ ಕುಡಿಗೆ ನೀರೆರೆದು ಪ್ರೋತ್ಸಾಹಿಸಿದವರು ಹಿಂದಿನ ರಾಗೀಗುಡ್ಡದ ಭಕ್ತಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀಯುತ ಕೆ.ಪಿ.ರಾವ್ ರವರು. ನಿವಾಸಿಗಳ


ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1976 ರಲ್ಲಿ ವಿದ್ಯಾ ಕೇಂದ್ರ ಸ್ಥಾಪಿಸಿದರು. 'ಮಾನವ ಸೇವೆಯೇ ಮಾಧವ ಸೇವೆ' ಎಂಬುದೇ ರಾಯರ ಮೂಲ ಮಂತ್ರ. ಎಲೆಮರೆಯ ಕಾಯಿಯಂತೆ ನಿಂತು ಶಾಲೆಯನ್ನು ತೆರೆಯಲು ಸಹಕರಿಸಿದವರು ಕಾಳೇನಹಳ್ಳಿ ಸೂರ್ಯನಾರಾಯಣ ಹಾಗೂ ಬಿ.ವಿ.ಸುಬ್ಬರಾವ್ ಅವರು.

ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯನ ಅಭಯದಂತೆ 1975–76 ರಲ್ಲಿ ಒಂದು ಕೊಠಡಿಯಲ್ಲಿ ನರ್ಸರಿ ಶಾಲೆ ಆರಂಭವಾಯಿತು. ಪ್ರತಿವರ್ಷ ಒಂದೊಂದು ತರಗತಿಗಳು ತೆರೆಯುತ್ತಾ 1983 ರಲ್ಲಿ 7ನೇ ತರಗತಿಯನ್ನು ತದನಂತರ 1984–85 ರಲ್ಲಿ ಎಂಟನೆಯ ತರಗತಿಯನ್ನುಳ್ಳ ಪ್ರೌಢಶಾಲೆಯನ್ನು ಆರಂಭಿಸಿದರು. ಕನ್ನಡ ಮಾಧ್ಯಮದ ಈ ಶಾಲೆ ಬೆಂಗಳೂರು ಕನ್ನಡ ಮಾಧ್ಯಮ ಶಾಲೆಗಳಲ್ಲಿಯೇ ಬಹಳಷ್ಟು ಹೆಸರು ಗಳಿಸಿದ ಶಾಲೆ ಎಂಬ ಕೀರ್ತಿ ಪಡೆದಿದೆ. ಪೋಷಕರ ಬೇಡಿಕೆಗೆ ಅನುಸಾರವಾಗಿ 2003–04ನೇ ಸಾಲಿನಿಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯನ್ನು ತೆರೆದಿದೆ.

ಕೇವಲ ಒಂದು ಕೊಠಡಿಯಿಂದ ಪ್ರಾರಂಭವಾದ ಶಾಲೆ ಇಂದು ಸುಸಜ್ಜಿತವಾದ 3 ಅಂತಸ್ತಿನ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿವೆ. ವಿಶಾಲವಾದ ಜಾಗ, ಗಾಳಿ ಬೆಳಕಿಗೆ ಯಾವ ತೊಂದರೆಯಿಲ್ಲದ ದೊಡ್ಡ ದೊಡ್ಡ ಕಿಟಕಿಗಳು, ಉತ್ತಮ ಪೀಠೋಪಕರಣಗಳು, ಸುಸಜ್ಜಿತ ಪ್ರಯೋಗ ಶಾಲೆ, ಉಪಯುಕ್ತವಾದ ಗ್ರಂಥ ಭಂಡಾರ, ಕ್ರೀಡಾಚಟುವಟಿಕೆಗಳಿಗೆ ಅಗತ್ಯವಾಗಿ ಬೇಕಾದ ಸಲಕರಣೆಗಳು ಇವೆಲ್ಲಕ್ಕಿಂತ ಮಿಗಿಲಾಗಿ ಉತ್ತಮ ಮಾರ್ಗದರ್ಶನ ನೀಡುವ ಶ್ರಮಿಕ ಗುರು ವೃಂದ. ಜಾತಿ, ಮತ, ಪಂಥ ಬೇಧವಿಲ್ಲದೇ ವಿದ್ಯಾಕಾಂಕ್ಷಿಗಳಾಗಿ ಬರುವವರನ್ನುಆದರದಿಂದ ಸ್ವಾಗತಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ಕಳುಹಿಸಲು ಸದಾ ಸಿದ್ದರಾಗಿರುವ ಆಡಳಿತ ಮಂಡಳಿ.

ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶಾಲೆಗಳು:–


- ಆರ್.ಎಸ್.ಪಿ.ಎ ನರ್ಸರಿ ಶಾಲೆ
- ಆರ್.ಎಸ್.ಪಿ.ಎ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ
- ಆರ್.ಎಸ್.ಪಿ.ಎ ಕನ್ನಡ ಮಾಧ್ಯಮ ಪ್ರೌಢಶಾಲೆ
- ಆರ್.ಎಸ್.ಪಿ.ಎ ಇಂಗ್ಲಿಷ್ ಮಾಧ್ಯಮ ಉನ್ನತ ಪ್ರಾಥಮಿಕ ಮತ್ತು ಪ್ರೌಢಶಾಲೆ



ಹಾಕಿಕೊಂಡಿರುತ್ತದೆ. ಏಕೆಂದರೆ ಸ್ವಾಮಿ ವಿವೇಕಾನಂದರು ಹೇಳುವಂತೆ "ಯಾರು ತಮಗೋಸ್ಕರ ಬದುಕಿರುತ್ತಾರೋ ಅವರು ಬದುಕಿದ್ದರೂ ಸತ್ತಂತೆಯೇ, ಮತ್ತೊಬ್ಬರಿಗಾಗಿ ಬದುಕುವುದು ನಿಜವಾದ ಬದುಕು" ಎಂಬಂತ ಕೇವಲ ನಾಲ್ಕನೇ ತರಗತಿ ವಿದ್ಯಾಭ್ಯಾಸ ಮಾಡಿದ್ದ ಚಿಕ್ಕವೀರಪ್ಪನವರಿಗೆ ಪರಮಪೂಜ್ಯ ಶ್ರೀಗಳವರಲ್ಲಿ ಅಪಾರವಾದ ಭಕ್ತಿ ಹಾಗೂ ಗೌರವ ಪರಮಪೂಜ್ಯರ ಕೋಟ್ಯಂತರ ಭಕ್ತಗಣಗಳಲ್ಲಿ ಮೇಲ್ಪಂಕ್ತಿ ಭಕ್ತರಾಗಿ ಭಕ್ತಿ ಭಂಡಾರಿಯಾಗಿದ್ದರು. ಈ ಪ್ರೀತಿ ಗೌರವದ ಸಂಕೇತವಾಗಿ ಹಾಗೂ ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣದ ಮಹತ್ವವನ್ನ ಅರಿತ ಚಿಕ್ಕವೀರಪ್ಪನವರು ರಘುವನಹಳ್ಳಿ ಗ್ರಾಮದಲ್ಲಿ ವಿದ್ಯಾರ್ಥಿಗಳ ನಿರಂತರ ವಿದ್ಯಾರ್ಜನೆಗೆ ಸಹಾಯವಾಗಲೆಂದು ಕನಕಪುರ ಮುಖ್ಯ ರಸ್ತೆಯಲ್ಲಿ ಶ್ರೀಮಠಕ್ಕೆ ಕೋಟ್ಯಾಂತರ ಬೆಲೆಬಾಳುವ ಒಂದು ಎಕರೆ 38 ಗುಂಟೆ ಜಮೀನನ್ನು ಉಚಿತವಾಗಿ ನೀಡಿದ ಶಿಕ್ಷಣ ಪ್ರೇಮಿ. ಇವರ ನಿರಂತರ ಶ್ರೀಗಳ ಮೇಲಿನ ಒತ್ತಡದ ಪ್ರತಿಫಲವಾಗಿ 1982–83 ರ ಶೈಕ್ಷಣಿಕ ಸಾಲಿನಿಂದ ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ ಆರಂಭವಾಯಿತು. ಕೇವಲ 35 ವಿದ್ಯಾರ್ಥಿಗಳಿಂದ ಆರಂಭವಾದ ಈ ಶಾಲೆಗೆ ಪರಮಪೂಜ್ಯರ ಇಚ್ಛೆಯ ಮೇರೆಗೆ ಶ್ರೀ ಯಜಮಾನ ಚಿಕ್ಕವೀರಪ್ಪನವರು ಅನೇಕ ಕೊಠಡಿಗಳನ್ನು, ಪೀಠೋಪಕರಣಗಳನ್ನು, ಇನ್ನೂ ಇತ್ಯಾದಿಗಳನ್ನು ಪೂರೈಸುತ್ತಾ ಶಾಲೆಯ ಅಭಿವೃದ್ಧಿಗೆ ಶ್ರಮಿಸಿದರು. ತಮ್ಮ ಏಳು ಜನ ಗಂಡು ಮಕ್ಕಳು ಹಾಗೂ ಓರ್ವ ಹೆಣ್ಣು ಮಕ್ಕಳನ್ನು ಹೊಂದಿದ್ದ ದೊಡ್ಡ ಸಂಸಾರವಾಗಿದ್ದರೂ ಸ್ವಾರ್ಥ ಹಿತವನ್ನು ಬಯಸದೆ, ನಿಸ್ವಾರ್ಥ ಜೀವನ ನಡೆಸಿ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಿದವರು ಶ್ರೀ ಚಿಕ್ಕವೀರಪ್ಪನವರು. ಸರಳ ಜೀವನವನ್ನು ನಡೆಸಿ ಶತಾಯುಷಿಗಳಾಗುವುದು ಇತ್ತೀಚಿನ ದಿನಗಳಲ್ಲಿ ಕಷ್ಟ. ಅವರ ನಿಯಮಿತ ಆಹಾರ ಪದ್ಧತಿ, ಬಾಹ್ಯ ಪ್ರಪಂಚದ ಆಸೆಗಳಿಗೆ ಮರುಳಾಗದೇ ಇರುವುದು, ಇದ್ದುದನ್ನು ಹಂಚಿ ತಿನ್ನುವ ಹೃದಯ ವೈಶಾಲ್ಯತೆ ಇವರ ಆಯುಷ್ಯದ ಗುಟ್ಟಾಗಿದ್ದು ದಿನಾಂಕ 01–08–2016 ರಂದು 107 ವಸಂತಗಳನ್ನು ಪೂರೈಸಿ

ಶಿವೈಕ್ಯರಾದರು. ಇವರ ಫಲಶ್ರುತಿಯಾಗಿ 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲೆಗೆ ದಾಖಲಾದರು. ಇಂದು ಇದು ಅನುದಾನಿತ ಶಾಲೆಯಾಗಿದ್ದು ಉಚಿತ ವಿದ್ಯಾಭ್ಯಾಸ ನೀಡಲಾಗುತ್ತಿದೆ. ದಾನಿಗಳ ಸಹಾಯದಿಂದ ಸಮವಸ್ತ್ರ ಹಾಗೂ ಸರ್ಕಾರದ ಬಿಸಿಯೂಟ ಕಾರ್ಯಕ್ರಮ ಕೂಡ ನಡೆಯುತ್ತಿದೆ.

ಪರಮಪೂಜ್ಯರ ಆಶೋತ್ತರದಂತೆ ಕಾಲೇಜು ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ನೀಡಬೇಕೆಂದು 2005 ರಲ್ಲಿ ಶ್ರೀ ಸಿದ್ದಗಂಗಾ ಪದವಿ ಪೂರ್ವ ಕಾಲೇಜು ಸ್ಥಾಪಿಸಲಾಯಿತು. ಕೇವಲ 33 ವಿದ್ಯಾರ್ಥಿಗಳಿಂದ ಆರಂಭವಾದ ಕಾಲೇಜು ಇಂದು 350 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾದಾನ ನೀಡುತ್ತಿದೆ. ಅನುದಾನ ರಹಿತ ಕಾಲೇಜು ಆಗಿದ್ದರೂ ಪರಮಪೂಜ್ಯರ ಆಶಯದಂತೆ ಬಡ ಮತ್ತು ಕೂಲಿ ಕೆಲಸ ಮಾಡುವ ಮಕ್ಕಳೂ ಓದುವ, ಹಾಗೂ ಸುತ್ತಮುತ್ತಲಿನ ಕಾಲೇಜು ಶುಲ್ಕಕ್ಕಿಂತ ಅತೀ ಕಡಿಮೆ ಶುಲ್ಕವಿದೆ. ಹಾಗೆಯೇ ಉತ್ತಮ ಗುಣಮಟ್ಟ ಶಿಕ್ಷಣ ನೀಡುತ್ತಿದ್ದು ಪ್ರತಿವರ್ಷ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗುವ ಮಕ್ಕಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಕಾಲೇಜಿನ ಅಭಿವೃದ್ಧಿಯಲ್ಲಿ ಕಾಲೇಜು ಸ್ಥಾಪನೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಶ್ರಮಿಸಿರುವ ಪ್ರಾಂಶುಪಾಲರಾಗಿದ್ದ ಶ್ರೀ ರೇಣುಕಯ್ಯನವರ ಕೊಡುಗೆ ಅಪಾರವಾಗಿದೆ. ನಂತರ ಪ್ರಭಾರ ಪ್ರಾಂಶುಪಾಲರಾಗಿ ಕುಮಾರಿ ಶ್ರೀನಿಧಿ ಕೆ.ಎಸ್, ಹಾಗೆ ಈಗಿನ ಪ್ರಾಂಶುಪಾಲರಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ಪ್ರೊ॥ ಸುಂದರ್ ರಾಜ್ ಇವರ ಕೊಡುಗೆ ಅಪಾರವಾಗಿದೆ. 2015–16 ಮೇ ಸಾಲಿನಲ್ಲಿ ಕು॥ ಹೇಮಲತಾ ಮತ್ತು ಕು ॥ ಮೇಘನ ಇವರು ಅಂದಿನ ಮುಖ್ಯ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಅಂದಿನ ಗೌರವಾನ್ವಿತ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ಸಭಾಂಗಣದಲ್ಲಿ ಸನ್ಮಾನಿಸಲ್ಪಟ್ಟು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.


ಶ್ರೀ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು



ಹಾಗೆಯೇ ಆಂಗ್ಲ ಮಾಧ್ಯಮ ಶಿಕ್ಷಣದ ಮಹತ್ವವನ್ನು ಅರಿತು ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳು ಹಾಗೂ ಹಾಲಿ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳವರ ಆಶಯದಿಂದ 2015 ರಲ್ಲಿ ಶ್ರೀ ಸಿದ್ದಗಂಗಾ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಲಾಯಿತು.


ಶ್ರೀಗಳ ಇಚ್ಛೆಯಂತೆ ಬಡ ಮಕ್ಕಳೂ ಅಂಗ್ಲ ಶಿಕ್ಷಣವನ್ನು ಪಡೆಯಲಿ ಎನ್ನುವ ಉದ್ದೇಶದಿಂದ ಅತ್ಯಂತ ಕಡಿಮೆ ಶುಲ್ಕದಲ್ಲಿ ವಿದ್ಯಾ ದಾನ ನೀಡುತ್ತಾ, ಕೇವಲ 45 ವಿದ್ಯಾರ್ಥಿಗಳಿಂದ ಆರಂಭವಾದ ಈ ಶಾಲೆ ಇಂದು 500 ವಿದ್ಯಾರ್ಥಿಗಳಿಗೆ ವಿದ್ಯಾದಾನ ನೀಡುತ್ತಿದೆ. ಇಂದು ಈ ವಿದ್ಯಾಸಂಸ್ಥೆಯು ಇಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಕಲಿಸುವ ವಿದ್ಯಾಪೀಠವಾಗಿ ಮಾರ್ಪಟ್ಟಿದೆ.



ವಿಶ್ವಚೇತನ ಶಿಕ್ಷಣ ಸಂಸ್ಥೆ

ಜಿ.ಕೆ.ಡಬ್ಲ್ಯೂ ಲೇಔಟ್, 4ನೇ ಅಡ್ಡ ರಸ್ತೆ, ವಿಜಯನಗರ,
ಬೆಂಗಳೂರು – 560 040

ಉತ್ತರಕರ್ನಾಟಕ ಭಾಗದ ಹಲವಾರು ಮಂದಿ ಬೆಂಗಳೂರಿಗೆ ಬಂದು ತಮ್ಮ ಜೀವನೋಪಾಯದ ಮಾರ್ಗಗಳನ್ನು ಕಂಡು ಕೊಂಡರು. ಹೀಗೆ ಬಂದವರಲ್ಲಿ ಹಲವಾರು ಮಂದಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಸಾಮಾಜಿಕ ಕಾರ್ಯದಲ್ಲಿ ನಿರತರಾಗಿದ್ದಾರೆ. ಅಂತಹವರಲ್ಲಿ ಒಬ್ಬರು ಶ್ರೀ. ಬಿ.ಎಂ. ಪುಟ್ಟೇಗೌಡ. ಅವರಿಗೆ ಸಹಕಾರ ನೀಡಿದವರು ಶ್ರೀ ಕರಿಬಸಪ್ಪ ಅವರು. ಶ್ರೀ ಬಿ.ಎಂ. ಪುಟ್ಟೇಗೌಡರು 1985 ರಲ್ಲಿ ವಿಶ್ವಚೇತನ ಟ್ರಸ್ಟ್ ನ್ನು ಸ್ಥಾಪಿಸಿದರು. ಸರ್ಕಾರದಿಂದ ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಲು ಅನುಮತಿಯನ್ನು ಪಡೆದರು.



ಶ್ರೀ. ಬಿ.ಎಂ. ಪುಟ್ಟೇಗೌಡ
ಸ್ಥಾಪಕರು

ಕನ್ನಡ ಮಾಧ್ಯಮದಲ್ಲಿ ಪ್ರೌಢಶಾಲೆಯನ್ನು, ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲು ಇಲಾಖಾ ಅನುಮತಿ ದೊರೆತಿದ್ದರೂ ಕಾರಣಾಂತರಗಳಿಂದ ಪ್ರೌಢಶಾಲೆ ಸ್ಥಾಪಿಸದೆ,



ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದರು. ಈ ಕಾಲೇಜಿಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಲು 1987 ರಲ್ಲಿ ಶ್ರೀ ಕರಿಬಸಪ್ಪ ಅವರು ಸೇರಿದರು. ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ, ಪ್ರೌಢಶಾಲೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು.

ಇಲಾಖೆ ಪ್ರೌಢಶಾಲೆ ಆರಂಭಿಸಲು 1985 ರಲ್ಲಿ ನೀಡಿದ್ಧ ಅನುಮತಿಯ ಮೇರೆಗೆ 1987 ರಲ್ಲಿ ವಿಶ್ವಚೇತನ ಕನ್ನಡ ಮಾಧ್ಯಮ ಪ್ರೌಢಶಾಲೆಯನ್ನು ಆರಂಭಿಸಿದರು. ಮೊದಲನೆಯ ವರ್ಷ 11 ಮಂದಿ ವಿದ್ಯಾರ್ಥಿಗಳು ದಾಖಲಾದರು. ಶಾಲೆಗೆ ಅನುಮತಿ ನೀಡಲು ಇಲಾಖೆ ತಿರಸ್ಕರಿಸಿತು. ಸಾಕಷ್ಟು ಪ್ರಯತ್ನದಿಂದ ನವೀಕರಣವಾಯಿತು. ಮತ್ತೊಂದು ಆಪತ್ತು ಎದುರಾಯಿತು. ಅದೇನೆಂದರೆ, ಶಾಲಾ ಕಟ್ಟಡದ ತೊಂದರೆ ಉಂಟಾಗಿ ಸ್ಥಳ ಬದಲಿಸಬೇಕಾಯಿತು. ಸ್ಥಳೀಯರ ಉಪಟಳದಿಂದ ಶಾಲೆ ನಡೆಸಲು ಅಸಾಧ್ಯವಾಗಿ ಆರ್.ಪಿ.ಸಿ ಬಡಾವಣೆಯಿಂದ ಬಸವೇಶ್ವರ ಬಡಾವಣೆಗೆ ಶಾಲೆಯನ್ನು ಸ್ಥಳಾಂತರಿಸಲು ಅನುಮತಿ ಪಡೆಯುವಲ್ಲಿ ಎಲ್ಲಾ ರೀತಿಯ ತೊಡಕುಗಳನ್ನು ದಾಟಿ ಸಫಲರಾಗಿ ಬಸವೇಶ್ವರ ಬಡಾವಣೆಯ ಬಸವೇಶ್ವರ ಹೌಸಿಂಗ್ ಸೊಸೈಟಿ ಕಟ್ಟಡದಲ್ಲಿ ಶಾಲಾ ತರಗತಿಗಳು ನಡೆಯ ತೊಡಗಿದವು.

ಈ ಹಂತದಲ್ಲಿ ಅಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಸನ್ಮಾನ್ಯ ಶ್ರೀ ರಾಘವೇಂದ್ರಾಚಾರ್ಯರ ಸಹಾಯ ಮರೆಯಲು ಸಾಧ್ಯವಿಲ್ಲ. ಶಾಲಾ ಸ್ಥಳಾಂತರಕ್ಕೆ ಅನುಮತಿ ನೀಡಿ ಶಾಲೆಯನ್ನು ಮುಚ್ಚುವ ಪ್ರಸಂಗದಿಂದ ನಮ್ಮನ್ನು ಪಾರು ಮಾಡಿದರು.

ವರ್ಷಗಳು ಕಳೆಯುತ್ತಿದ್ದಂತೆ ಶಿಕ್ಷಣ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಮಂಜೂರು ಮಾಡುವಂತೆ ಸರ್ಕಾರವನ್ನು ಪ್ರಾರ್ಥಿಸಿದೆವು. ಆರ್.ಪಿ.ಸಿ ಬಡಾವಣೆಯಲ್ಲಿ 5245 ಚ. ಮೀ ನಿವೇಶನ ಬಿ.ಡಿ.ಎ ದಿಂದ ಮಂಜೂರಾಗಿತ್ತು. ಅಧ್ಯಕ್ಷರ ಪರಿಶ್ರಮದಿಂದ ಮಂಜೂರದ ಈ ನಿವೇಶನ ಸ್ಥಳೀಯರ ವಿರೋಧದ



ನಡುವೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಯಿತು. ಛಲ ಬಿಡದ ಅಧ್ಯಕ್ಷರು ನ್ಯಾಯಾಲಯದ ಮೊರೆ ಹೋದರು. ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ತೀರ್ಪು ನಮ್ಮ ವಿರುದ್ಧ ಬಂತು. ಧೈರ್ಯಗೆಡದೆ, ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ಸನ್ಮಾನ್ಯ ಶ್ರೀರಾಮ ಜೋಯಿಸ್ ಅವರು ಸಮರ್ಪಕವಾಗಿ ವಾದ ಮಂಡಿಸಿ ತೀರ್ಪು ನಮ್ಮ ಪರವಾಗುವಂತೆ ಸಹಾಯ ಮಾಡಿದರು. ನಿವೇಶನ ನಮಗೆ ಮಂಜೂರು ಮಾಡುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಈ ಹೊತ್ತಿಗಾಗಲೇ ಸ್ಥಳೀಯರು ನಮಗೆ ನೀಡಬೇಕಾಗಿದ್ದ ನಿವೇಶನದಲ್ಲಿ ಗೃಹ ನಿರ್ಮಾಣ ಮಾಡಿಕೊಂಡಿದ್ದರು. ಬಿ.ಡಿ.ಎ ಅಧಿಕಾರಿಗಳು ಆರ್.ಪಿ.ಸಿ ಬಡಾವಣೆಯಲ್ಲಿ ನಿವೇಶನ ನೀಡದೆ ಜಿ.ಕೆ.ಡಬ್ಲ್ಯೂ ಬಡವಾಣೆಯಲ್ಲಿ 1467 ಚ.ಮೀ. ನಿವೇಶನ ನೀಡುವಂತೆ ಠರಾವು ಮಾಡಿದರು. ಹೀಗೆ ಮಂಜೂರಾದ ನಿವೇಶನದಲ್ಲಿ 2008 ರಲ್ಲಿ ಶ್ರೀಯುತ ಮನೋಹರ ಅವರ ಸಹಾಯ, ಸಿಬ್ಬಂದಿ ವರ್ಗದವರ ಸಹಕಾರದಿಂದ ನಮ್ಮದೇ ಆದ ಸ್ವಂತ ಕಟ್ಟಡ ನಿರ್ಮಿಸಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಸತತ ಹೋರಾಟದ ಫಲ 1993 ರಲ್ಲಿ ಪದವಿ ಪೂರ್ವ ಕಾಲೇಜು ಅನುದಾನಕ್ಕೆ ಒಳಪಟ್ಟಿತು. 2008ರಲ್ಲಿ ಪ್ರೌಢಶಾಲೆ ಅನುದಾನ ಪಡೆಯಿತು.

ವಾಸವಿ ವಿದ್ಯಾನಿಕೇತನ

ನಂ.3, ವಾಣಿ ವಿಲಾಸ್ ರಸ್ತೆ, ವಿಶ್ವೇಶ್ವರಪುರಂ,
ಬೆಂಗಳೂರು – 560 004

ಭಗವಂತನ ಅನುಗ್ರಹದಿಂದ ಭೂಮಿಯಲ್ಲಿ ಜನ್ಮ ತಾಳಿದ ಪ್ರತಿಯೊಬ್ಬರೂ ಒಂದೊಂದು ಧ್ಯೇಯೋದ್ದೇಶವನ್ನು ಪಡೆದಿದ್ದಾರೆ. ಜೀವನೋಪಾಯಕ್ಕಾಗಿ ಒಂದು ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ದುಡಿದು ಮಾಡಿದ ಸಂಪಾದನೆಯಿಂದ ತಾನಾಯಿತು ತನ್ನ ಸಂಸಾರವಾಯಿತು ಎಂದು ಹೆಚ್ಚಿನ ಜನ ಭಾವಿಸಿ ಬದುಕು ಸವೆಸುತ್ತಾರೆ. ಆದರೆ ದೈವಾನುಗ್ರಹವುಳ್ಳವರು ಮಾತ್ರ ಸಮಾಜದ ಹಾಗೂ ಪರರ ಚಿಂತನೆ ಮಾಡುತ್ತಾರೆ.



ಶ್ರೀ. ಪಿ.ಎನ್.ಎಸ್ ಮೂರ್ತಿ
ಸ್ಥಾಪಕರು

ತನ್ನಿಂದ ಸಮಾಜಕ್ಕೆ ಏನು ಮಾಡಲು ಸಾಧ್ಯ ಎಂದು ಯೋಚಿಸಿ ಅಸಾಧ್ಯವಾದುದನ್ನೇ ಮಾಡುತ್ತಾರೆ. ಹೀಗೆ ಸಮಾಜಮುಖಿಗಳು, ವ್ಯಾಪಾರಸ್ಥರೂ ಆಗಿದ್ದ ಶ್ರೀ. ಪಿ.ಎನ್.ಎಸ್ ಮೂರ್ತಿಯವರು ಕೇವಲ ತಮ್ಮ ವ್ಯಾಪಾರ ವ್ಯವಹಾರದಲ್ಲಿ ಮಾತ್ರ ತಲ್ಲೀನರಾಗದೆ,ಉತ್ತಮ ಸಮಾಜ ನಿರ್ಮಾಣಕ್ಕೆ ವಿದ್ಯೆ ಬಹು


ಮುಖ್ಯವೆಂದು ಅರಿತು ಅದರಲ್ಲೂ ಹೆಣ್ಣುಮಕ್ಕಳಿಗೆ ವಿದ್ಯೆ ಸಿಗುವಂತೆ ಮಾಡಲು ಬಯಸಿದರು. ತನ್ನ ಸಮಾಜದ ಪ್ರಮುಖರು, ಮಿತ್ರರು, ಬಂಧುಗಳ ಜೊತೆ ವಿಚಾರ ವಿನಿಮಯ ಮಾಡಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಚಿಂತಿಸಿದರು. ಈ ಚಿಂತನ ಮಂಥನದ ಫಲವೇ 1988 ರಲ್ಲಿ ವಾಸವಿ ವಿದ್ಯಾನಿಕೇತನದ ಉದಯ.

ವಾಣಿವಿಲಾಸ ರಸ್ತೆಯಲ್ಲಿ ಲಾಲ್‌ಬಾಗ್‌ನಿಂದ ನ್ಯಾಷನಲ್ ಕಾಲೇಜಿನ ಕಡೆ ಹೊರಟರೆ ಬಲಗಡೆ ಕಾಣುವ ಬೃಹತ್ತಾದ ಕಟ್ಟಡದಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆ ಇದಾಗಿದೆ. ಆರಂಭದ ದಿನಗಳಲ್ಲಿ ಕನ್ನಡ ಮಾಧ್ಯಮದಲ್ಲಿ 1–7ನೇ ತರಗತಿಯವರೆಗಿನ ಪ್ರಾಥಮಿಕ ಶಾಲೆಯನ್ನು ನಡೆಸ ತೊಡಗಿದರು. ಪೋಷಕರ ಬೇಡಿಕೆಯ ಮೇರೆಗೆ ಆಂಗ್ಲ ಮಾಧ್ಯಮ ಶಾಲೆಯ ತರಗತಿಗಳನ್ನು ಪ್ರಾರಂಭಿಸಿದರು. ಜೊತೆಗೆ ಸರ್ಕಾರಿ ಅನುದಾನದೊಡನೆ ಪ್ರೌಢಶಾಲೆಯನ್ನು ಹೆಣ್ಣುಮಕ್ಕಳಿಗಾಗಿ ಪ್ರಾರಂಭಿಸಿದರು. ವರ್ಷಗಳು ಕಳೆಯುತ್ತಿರುವಂತೆ ಶಾಲೆಗೆ ಪ್ರವೇಶದ ಬೇಡಿಕೆ ಕ್ರಮೇಣ ಹೆಚ್ಚಾಗುತ್ತಾ ಬಂತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಪಬ್ಲಿಕ್ ಪರೀಕ್ಷೆಯ ಫಲಿತಾಂಶ ಉತ್ತಮವಾಗಿದ್ದು, ಉತ್ತೀರ್ಣರಾದ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ಬೇರೆ ಸಂಸ್ಥೆಗಳಿಗೆ ಹೋಗುತ್ತಿದ್ದರು. ಇದನ್ನು ಮನಗಂಡ ಆಡಳಿತ ಮಂಡಳಿ ಪ್ರೌಢ ಶಾಲೆಯ ನಂತರ ಇದೇ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಜನೆ ಮುಂದುವರೆಸಲೆಂದೇ ಪೋಷಕರ ಕೋರಿಕೆಯ ಮೇರೆಗೆ ಪದವಿ ಪೂರ್ವ ಕಾಲೇಜನ್ನು ಆರಂಭಿಸಿದರು. ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭವಾಯಿತು. ಇವೆಲ್ಲಾ ಹೆಣ್ಣು ಮಕ್ಕಳ ಶಿಕ್ಷಣಕ್ಕೋಸ್ಕರ ಅದರಲ್ಲೂ ಆರ್ಥಿಕವಾಗಿ ಹಿಂದುಳಿದವರನ್ನೂ ಮನಸ್ಸಿನಲ್ಲಿಟ್ಟು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆ.

ಕಡಿಮೆ ಖರ್ಚಿನಲ್ಲಿ ಉತ್ತಮ ಶಿಕ್ಷಣ ದೊರೆಯುತ್ತಿದ್ದರಿಂದ ವರ್ಷೇ ವರ್ಷೇ ಪ್ರವೇಶದ ಸಂಖ್ಯೆ ಹೆಚ್ಚಾಯಿತು. ವಿದ್ಯಾಕ್ಷೇತ್ರದಲ್ಲಿ ತನ್ನದೇ ಆದ ಒಂದು ಛಾಪನ್ನು ಮೂಡಿಸಿ ಸುತ್ತಮುತ್ತಲಿನ ಹೆಣ್ಣು ಮಕ್ಕಳಿಗೆ ಹಾಗೂ ಅವರ ಪೋಷಕರಿಗೆ ಆಶಾದಾಯಕವಾಗಿ ಪರಿಣಮಿಸಿ ಬೆಳೆಯ ತೊಡಗಿತು. ಕಾಲ ಕಳೆದಂತೆ ಸುತ್ತಮುತ್ತಲೂ ವಾಸವಾಗಿರುವ ಪೋಷಕರ ಒತ್ತಾಯ ಹಾಗೂ ಸಂಸ್ಥೆಯಲ್ಲಿನ ಶಿಕ್ಷರ ಅಭಿಪ್ರಾಯ ಪರಿಗಣಿಸಿ ಪ್ರೌಢಶಾಲೆಯ ಎಂಟರಿಂದ ಹತ್ತನೆಯ ತರಗತಿಯಲ್ಲಿ ಗಂಡು ಮಕ್ಕಳಿಗೂ ಪ್ರವೇಶಾವಕಾಶ ನೀಡಲು 2011 ರಲ್ಲಿ

ಕೋ-ಎಜುಕೇಷನ್ ಪ್ರೌಢ ಶಾಲೆ ಸ್ಥಾಪಿಸಿದರು. ಇದಕ್ಕೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ಬಂದುದು ಮಾತ್ರವಲ್ಲದೆ ಇಲಾಖೆಯೂ ಅನುಮತಿಯನ್ನು ನೀಡಿತು. ಹೀಗಾಗಿ ವಾಸವಿ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಎರಡೂ ಸಾವಿರಕ್ಕಿಂತಲೂ ಮಿಗಿಲಾಗಿ ವಿದ್ಯಾರ್ಥಿಗಳು ಇಂದು ನರ್ಸರಿಯಿಂದ ಪದವಿವರೆಗಿನ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೇ ತನ್ನ ಕಾರ್ಯಬಾಹುಳ್ಯವನ್ನು ಕನಕಪುರದವರೆಗೂ ವಿಸ್ತರಿಸಿದೆ. ದೆಹಲಿಯ ಸಿ.ಬಿ.ಎಸ್.ಇ ಪಠ್ಯಕ್ರಮದಲ್ಲಿ ನರ್ಸರಿಯಿಂದ ಪ್ರೌಢಶಾಲೆಯವರೆಗೂ ಶಿಕ್ಷಣ ನೀಡುವ ಎಡಿಫೈ ಶಾಲೆಯನ್ನು ಪ್ರಾರಂಭಿಸಿದೆ. ಶಾಲೆಯಲ್ಲಿ ಸುಮಾರು ಗ್ರಾಮಾಂತರದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಲು ಅನುಕೂಲವಾಗಿದೆ.

ಇಲಾಖೆಯ ಎಲ್ಲಾ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುತ್ತ ಬಂದಿರುವುದುರಿಂದಲೇ 2015 ರಲ್ಲಿ ಶಿಕ್ಷಣ ಇಲಾಖೆಯು ಕಡ್ಡಾಯ ಶಿಕ್ಷಣ ಪ್ರಶಸ್ತಿ(RTE)ಯನ್ನು ನೀಡಿ ಪುರಸ್ಕರಿಸಿದೆ. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಓದಿದ ಅಸಂಖ್ಯಾತ ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಾ ಉನ್ನತ ಸ್ಥಾನಮಾನಗಳಿಗೆ ಪಾತ್ರರಾಗಿ ಶಿಕ್ಷಣ ಸಂಸ್ಥೆಗೆ ಒಳ್ಳೆಯ ಹೆಸರನ್ನು ತರುತ್ತಿದ್ದಾರೆ.



ಡಾ॥ ಮಾನಂದಿ ಸುರೇಶ್
ಅಧ್ಯಕ್ಷರು

ತನ್ನ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳಿಗೂ ಒಳ್ಳೆಯ ವಿದ್ಯಾವಂತರಾಗಿ, ಸತ್ಪ್ರಜೆಗಳಾಗಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮಾರ್ಗದರ್ಶನ ನೀಡುವಂತೆ ಶಿಕ್ಷಕರೆಲ್ಲಾ ಸಂಕಲ್ಪ ಮಾಡಿ ಶ್ರಮಿಸುತ್ತಿದ್ದಾರೆ. ಇವರಿಗೆ ಸರಿಯಾದ ಸಮರ್ಪಕವಾದ ಮಾರ್ಗದರ್ಶನ ನೀಡಲೆಂದೇ ಡಾ॥ ಮಾನಂದಿ ಶ್ರೀ ಸುರೇಶ್ ಅವರ ನಾಯಕತ್ವದಲ್ಲಿ, ಕಾರ್ಯದರ್ಶಿಗಳಾದ ಬಿ.ಎಸ್.ಅರುಣ್ ಕುಮಾರ್ ರವರು, ಖಜಾಂಚಿಗಳಾದ ಡಾ॥ ಐ.ಎಸ್.ಪ್ರಸಾದ್ ಅವರೊಡನೆ ಶ್ರೀ ಶ್ರೀನಿವಾಸ, ಶ್ರೀ ಮುರಳೀಧರ್ ಇವರೇ ಮೊದಲಾದ ಸಮಾಜದ ಮುಖ್ಯಸ್ಥರು,



ಕುಟುಂಬ ವರ್ಗದವರು ಹೆಗಲುಕೊಟ್ಟು ಸಂಸ್ಥೆಯ ಪುರೋಭಿವೃದ್ಧಿಗಾಗಿ ಕಾಯೇನವಾಚಾ ಮನಸಾ ದುಡಿಯುತ್ತಿರುವುದರಿಂದ ಇದಕ್ಕೆ ಉತ್ತಮ ಭವಿಷ್ಯ ಖಂಡಿತ ಇರುತ್ತದೆ.

ಜ್ಯೋತಿ ಕೇಂದ್ರೀಯ ವಿದ್ಯಾಲಯ

556, ಯಲಚೇನಹಳ್ಳಿ, ಕನಕಪುರ ರಸ್ತೆ
ಬೆಂಗಳೂರು – 560 078

ಕನಕಪುರ ರಸ್ತೆಯ ಯಲಚೇನಹಳ್ಳಿಯಲ್ಲಿ ಜ್ಯೋತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಪ್ರತಿಷ್ಠಿತ ಶಾಲೆಯೇ ಜ್ಯೋತಿ ಕೇಂದ್ರೀಯ ವಿದ್ಯಾಲಯ. ನಿಸ್ವಾರ್ಥ ಹಾಗೂ ಸೇವಾಮನೋಭಾವನೆಯಿಂದ 1989 ರಲ್ಲಿ ಡಾ॥ಬಿ.ಎನ್.ವಿ. ಸುಬ್ರಮಣ್ಯ ಅವರು ತಮ್ಮ ಮಗಳು ಜ್ಯೋತಿಯ ಜ್ಞಾಪಕಾರ್ಥದಲ್ಲಿ ಸ್ಥಾಪಿಸಿದರು. ಡಾ॥ ಸುಬ್ರಹ್ಮಣ್ಯ ಅವರೇ ಸಂಸ್ಥಾಪಕ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ಟ್ರಸ್ಟಿಗಳು. ಮೌಲ್ಯಧಾರಿತ ಶಿಕ್ಷಣವನ್ನು ಕ್ರಿಯಾತ್ಮಕವಾಗಿ ಕಲಿಯುವ ಸದವಕಾಶವನ್ನು ಮಕ್ಕಳಿಗೆ ಕಲ್ಪಿಸುವ ಸದುದ್ದೇಶದಿಂದ ಪ್ರಾರಂಭವಾದ ಸಂಸ್ಥೆ ತನ್ನ ಯಶಸ್ಸಿನ ಕೀರ್ತಿ ಶಿಖರ ಮುಟ್ಟಿ ಪ್ರಜ್ವಲಿಸುತ್ತಿದೆ.



ಡಾ॥ ಬಿ.ಎನ್.ವಿ. ಸುಬ್ರಹ್ಮಣ್ಯ
ಸಂಸ್ಥಾಪಕ ಅಧ್ಯಕ್ಷರು

ಪರೋಪಕಾರಾಯ ಫಲಂತಿ ವೃಕ್ಷಾಃ, ಪರೋಪಕಾರಾಯ ವಹಂತಿ ನದ್ಯಃ
ಪರೋಪಕಾರಾಯ ದುಹಂತಿ ಗಾವಃ, ಪರೋಪಕಾರಾರ್ಥ ಮಿದಂ ಶರೀರಂ

ಪರೋಪಕಾರಕ್ಕಾಗಿ ಮರಗಳು ಹಣ್ಣು ಕೊಡುತ್ತವೆ, ಹೊಳೆಗಳು ಹರಿಯುತ್ತವೆ. ಹಸುಗಳು ಹಾಲನ್ನು ಕೊಡುತ್ತವೆ. ಈ ದೇಹವಿರುವುದು ಪರೋಪಕಾರಕ್ಕಾಗಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಯಾವುದೇ ಕ್ಷೇತ್ರದಲ್ಲಿ ಮಾಡಿದ ಸಾಧನೆ, ಸಲ್ಲಿಸಿದ ನಿಸ್ವಾರ್ಥ ಸೇವೆ, ಅದ್ವಿತೀಯ. ಅವರ ಆದರ್ಶ, ನಡೆ-ನುಡಿ, ಬದುಕು-ಬರಹ, ನೈಪುಣ್ಯತೆ ಅನುಕರಣೀಯ, ಇಂದಿನ ಯುವ ಪೀಳಿಗೆಗೆ ಸಮಾಜ ಸೇವೆ, ಧಾರ್ಮಿಕ ಸೇವೆ, ಶೈಕ್ಷಣಿಕ ಸೇವೆ ಸಲ್ಲಿಸಿದ ವಿಶಿಷ್ಟ ವ್ಯಕ್ತಿಗಳ ಕರ್ತವ್ಯ ನಿಷ್ಠೆಯನ್ನು ಅರ್ಪಣಾ ಮನೋಭಾವವನ್ನು ಶಿಸ್ತುಬದ್ಧ ಜೀವನವನ್ನು ಪರಿಚಯಿಸಬೇಕಾದ ಅಗತ್ಯವಿದೆ, ಅಂತಹ ಸಾಧಕರಲ್ಲಿ ಡಾ॥ ಬಿ.ಎನ್.ವಿ ಸುಬ್ರಹ್ಮಣ್ಯರವರು ಅಗ್ರಗಣ್ಯರು. ಬೆಟ್ಟದಪುರ ನಾರಾಯಣಸ್ವಾಮಿ ವೆಂಕಟಸುಬ್ರಹ್ಮಣ್ಯರವರು 15. 10. 1942 ರಂದು ಬೆಟ್ಟದಪುರದಲ್ಲಿ. ಶ್ರೀ ನಾರಾಯಣ ಸ್ವಾಮಿ ಮತ್ತು ಶ್ರೀಮತಿ ಕಾವೇರಮ್ಮ ದಂಪತಿಗಳ ಮಗನಾಗಿ ಜನಿಸಿದರು. 1959 ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿ 1959-61 ರಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಮುಗಿಸಿ ವಿವಿಧ ಕಾರ್ಖಾನೆಗಳಲ್ಲಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು.

ಶ್ರೀಯುತರು ತಮ್ಮ ಜೀವಿತಾವಧಿಯಲ್ಲಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದರು. 1971 ರಲ್ಲಿ ಜ್ಯೋತಿ ಇಂಡಸ್ಟ್ರೀಸ್ ಕಾರ್ಖಾನೆಯನ್ನು ಸ್ಥಾಪಿಸಿದರು. ಇಲ್ಲಿ ತಯಾರಾದ ಆಹಾರ ಸಂಸ್ಕರಣ ಯಂತ್ರಗಳು, ರಾಸಾಯನಿಕ ಮಿಶ್ರಣ ಮಾಡುವ ಯಂತ್ರಗಳಿಗೆ ದೇಶದೆಲ್ಲೆಡೆ ಮಾರುಕಟ್ಟೆಯಲ್ಲಿ ಬೇಡಿಕೆ ಬಂದು ರಾಜ್ಯ ಮತ್ತು ರಾಷ್ಟ್ರಮಟ್ಟದ ಉತ್ತಮ ತಯಾರಕರೆಂದು ಪ್ರಶಸ್ತಿ ಪುರಸ್ಕಾರಗಳು ಸಂದವು. ಮಾತೃಭಾಷೆಯಲ್ಲಿ ವೈದಿಕ ಸಾಹಿತ್ಯವನ್ನು ತಿಳಿಸುವ ಮಹೋದ್ದೇಶದಿಂದ 1982 ರಲ್ಲಿ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವನ್ನು ಸ್ಥಾಪಿಸಿ ಸಂಪೂರ್ಣ ಕೃಷ್ಣ ಯಜುರ್ವೇದ ಕನ್ನಡ ಅವತರಿಣಿಕೆ ಗ್ರಂಥವನ್ನು ಪ್ರಕಟಿಸಿದರು. ಸನಾತನ ವೈದಿಕ ಪರಂಪರೆಯನ್ನು ಉಳಿಸಿ ಬೆಳೆಸುವ ಸದುದ್ದೇಶದಿಂದ ಸನಾತನ ಗುರುಕುಲ ಪದ್ಧತಿಯಂತೆ ವೇದಾಧ್ಯಯನ ಮಾಡಬಯಸುವವರಿಗೆ 1983 ರಲ್ಲಿ ಶ್ರೀ ಮಲ್ಲಿಕಾರ್ಜುನ ಸಂಸ್ಕೃತ ವೇದ ಪಾಠಶಾಲೆಯನ್ನು ಸ್ಥಾಪಿಸಿ 40 ಕ್ಕೂ ಹೆಚ್ಚು ಮಕ್ಕಳಿಗೆ ತಮ್ಮ ಮನೆಯಲ್ಲಿಯೇ ಆಶ್ರಯ ಕೊಟ್ಟು ಉಚಿತವಾಗಿ ವೇದ ಮಂತ್ರ, ಸಂಸ್ಕೃತ ವಿದ್ಯಾಭ್ಯಾಸವನ್ನು ನೀಡುವ ವ್ಯವಸ್ಥೆ ಮಾಡಿದರು.

ವಿದ್ಯಾವಂತನಾದ ವ್ಯಕ್ತಿ ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಸತ್ಪ್ರಜೆಯಾಗಿ ಬಾಳುತ್ತಾನೆ. ಇಂತಹ ಮಹೋನ್ನತ ಧ್ಯೇಯದಿಂದ ಭವಿಷ್ಯದ ಆಸ್ತಿಯಾದ ಇಂದಿನ ಮಕ್ಕಳನ್ನು ಉತ್ತಮವಾದ ಮಾನವರನ್ನಾಗಿ ಮಾಡುವ ಉದ್ದೇಶದಿಂದ 1990 ರಲ್ಲಿ ಜ್ಯೋತಿ ಕೇಂದ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು. ಡಾ॥ ಸುಬ್ರಹ್ಮಣ್ಯರವರಿಗೆ ಶಿಕ್ಷಣ ಸಂಸ್ಥೆ ಸ್ಥಾಪಿಸಲು ನೆರವು ನೀಡಿದವರೆಂದರೆ ಶ್ರೀ. ಹೆಚ್.ಎಸ್. ನಾಗರಾಜು, ಶ್ರೀ ಸಮೀರಸಿಂಹ, ಶ್ರೀ ಎ.ವಿ. ಪ್ರಸನ್ನ, ಶ್ರೀ ಡಿ.ವಿ. ನಾಗೇಶ್, ಶ್ರೀ ಸಾವಂದಯ್ಯ ಮತ್ತು ಶ್ರೀ ನಾಗರಾಜು. ಒಂದರಿಂದ ನಾಲ್ಕನೆಯ ತರಗತಿವರೆಗೆ ಪ್ರಾರಂಭವಾದ ಶಾಲೆ ನಂತರ ಐದರಿಂದ 10ನೇ ತರಗತಿವರೆಗೆ ವಿಸ್ತರಿಲ್ಪಟ್ಟಿತು. ಪ್ರಪ್ರಥಮ ಪ್ರಾಂಶುಪಾಲರಾಗಿ ಶ್ರೀ ಎಂ. ಆರ್. ನಾಗರಾಜ ರಾವ್ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಅವರ ನಿವೃತ್ತಿ ನಂತರ ಶ್ರೀಮತಿ ಸುಮಾ ಜಗದೀಶ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆ ಬೆಳೆದಂತೆ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕಾಗಿ 1997 ರಲ್ಲಿ ಪದವಿ ಪೂರ್ವ ಹಂತದವರೆಗೆ ವಿಸ್ತರಿಸಲ್ಪಟ್ಟಿದೆ. ಕೇವಲ ನೂರು ಮಂದಿ ವಿದ್ಯಾರ್ಥಿಗಳಿಂದ ಆರಂಭವಾದ ಶಾಲೆಯಲ್ಲಿ ಇಂದು ಸುಮಾರು 3000 ಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸಂತಸದ ಸಂಗತಿ. ಬಿ.ಎನ್.ವಿ ಯವರು 2004 ರಲ್ಲಿ ಹೆಣ್ಣು ಮಕ್ಕಳ ವಸತಿ ಸೌಕರ್ಯಕ್ಕಾಗಿ ಜ್ಯೋತಿ ವಿದ್ಯಾರ್ಥಿನಿ ನಿಲಯವನ್ನು ಸ್ಥಾಪಿಸಿದರು. 2005 ರಲ್ಲಿ ಜ್ಯೋತಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜ್ಯೋತಿ ಈಜುಕೊಳವನ್ನು ಸ್ಥಾಪಿಸಲಾಯಿತು. ಬಿ.ಎನ್.ವಿ ಅವರ ಬಹುದಿನದ ಕನಸಾಗಿದ್ದ ವಿಪ್ರರ ಇಂಜಿನಿಯರಿಂಗ್ ಕಾಲೇಜ್ 2011 ರಲ್ಲಿ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ತಾತಗುಣಿಯಲ್ಲಿ ಸುಮಾರು 12 ಎಕರೆ ವಿಶಾಲ ವಿಸ್ತೀರ್ಣದಲ್ಲಿ ಐದು ವಿಭಾಗಗಳನ್ನು ಒಳಗೊಂಡ ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್, ಕಂಪ್ಯೂಟರ್ ಸೈನ್ಸ್, ಇನ್ಫರ್ಮೇಶನ್ ಸೈನ್ಸ್ ಮತ್ತು ಸಿವಿಲ್ ಇಂಜಿನಿಯರಿಂಗ್ ವಿಷಯ ಬೋಧಿಸುವ ಜ್ಯೋತಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಪ್ರಾರಂಭಿಸಿದರು. ಈ ಕಾಲೇಜಿನಿಂದ ಅತ್ಯುತ್ತಮ ಇಂಜಿನಿಯರ್‌ಗಳು ಉನ್ನತ ಮಟ್ಟದ ಅಂಕಗಳೊಂದಿಗೆ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಬೆಂಗಳೂರಿನ ಬಸವನಗುಡಿಯ ಡಿ.ವಿ.ಜಿ ರಸ್ತೆಯಲಿರುವ ಅಬಲಾಶ್ರಮದ ಅಧ್ಯಕ್ಷರಾಗಿ ಅನಾಥ ಹೆಣ್ಣು ಮಕ್ಕಳ ವಿವಾಹದಲ್ಲಿ ಪಿತೃ ಸ್ಥಾನದಲ್ಲಿ ನಿಂತು

ಧಾರೆಯೆರೆದು ಕನ್ಯಾಸೆರೆ ಬಿಡಿಸಿ ಎಲ್ಲ ಹೆಣ್ಣುಮಕ್ಕಳ ಯೋಗಕ್ಷೇಮದ ರೂವಾರಿಯಾಗಿದ್ದರು. 1988–94, 2001–2005, 2012 ರಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ಐದು ಬಾರಿ ಆಯ್ಕೆಯಾಗಿದ್ದರು. ಇವರ ಅಧ್ಯಕ್ಷ ಅವಧಿಯಲ್ಲಿ ರಾಜ್ಯಮಟ್ಟದ 6ನೇ ಮತ್ತು 7ನೇ ಸಮ್ಮೇಳನಗಳನ್ನು ಮತ್ತು ಗಾಯತ್ರಿ ರಥಯಾತ್ರೆಯನ್ನು ನಡೆಸಿದರು. ಎಂಟನೇ ಅಖಿಲ ಕರ್ನಾಟಕ ವಿಪ್ರ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ 1 ಕೋಟಿ ರೂ. ಗಳನ್ನು ಮಹಿಳಾ ವಸತಿ ನಿಲಯಕ್ಕಾಗಿ ಮೀಸಲಾಗಿಟ್ಟು ವಿಪ್ರವಾಸಿನಿ ವಿಪ್ರ ಮಹಿಳಾ ವಿದ್ಯಾರ್ಥಿನಿ ನಿಲಯವನ್ನು ಕಟ್ಟಿ ವಿಪ್ರ ಸಮಾಜಕ್ಕೆ ಅರ್ಪಿಸಿದರು. ಬಿ.ಎಸ್.ವಿ ಯವರು ತಮ್ಮ ಪ್ರಾಂಜಲವಾದ ಆಯಸ್ಕಾಂತ ಸದೃಶ ವ್ಯಕ್ತಿತ್ವದಿಂದ ಸರ್ವರನ್ನು ಆಕರ್ಷಿಸುತ್ತ ಸಮಾಜಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡ ನಿಷ್ಕಾಮಯೋಗಿ ಎನಿಸಿದ್ದಾರೆ. ಇವರ ನಿಸ್ವಾರ್ಥ ಸೇವೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. 1991 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1995 ರಲ್ಲಿ ರಾಜೀವ್ ಗಾಂಧಿ ನ್ಯಾಷನಲ್ ಯೂನಿಟಿ ಅವಾರ್ಡ್, 2002 ರಲ್ಲಿ ಬ್ರಾಹ್ಮಣ ಸಂಘ ಸಂಸ್ಥೆಗಳಿಂದ ವಿಪ್ರ ಭಾಸ್ಕರ, 2006 ರಲ್ಲಿ ಆರ್ಯಭಟ ಪ್ರಶಸ್ತಿ, 2011 ರಲ್ಲಿ ನಾಡಪ್ರಭು ಕೆಂಪೇಗೌಡ



ಪ್ರಶಸ್ತಿ, 2012 ರಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, 2012 ರಲ್ಲಿ ಪರಮಪೂಜ್ಯ ಶ್ರೀ ಶೃಂಗೇರಿ ಸ್ವಾಮೀಜಿ ಅವರಿಂದ ಧಾರ್ಮಿಕ ಪ್ರವರ ಪ್ರಶಸ್ತಿ ಮತ್ತು ಧರ್ಮ ಸಂರಕ್ಷಕ, ವಿಪ್ರತೇಜ, ಸಮಾಜ ಸೇವಾ ವ್ರತಿ ಇತ್ಯಾದಿ.

ಬಿ.ಎನ್.ವಿ. ಯವರಂತವರು ವಿರಳರಲ್ಲಿ ವಿರಳರು. ಇತರರು ಇವರಿಂದ ಕಲಿಯಬೇಕಾದದ್ದು ಹಿಮಾಲಯದಷ್ಟು. ಸಮಾಜದಿಂದ ಗಳಿಸಿದ ಸಂಪತ್ತನ್ನು ಪುನಃ ಸಮಾಜಕ್ಕೆ ಅರ್ಪಿಸಿದ ತ್ಯಾಗಜೀವಿ. ಈ ಮಹತ್ಕಾರ್ಯದಲ್ಲಿ ಶ್ರೀಮತಿ ಸೀತಮ್ಮನವರ ಕೊಡುಗೆ ಅಪಾರವಾದುದು. ಪತಿಯ ಎಲ್ಲಾ ಉದಾರ ಯೋಜನೆಗಳಿಗೆ ಜೊತೆಯಾಗಿ ಸಹಕಾರ ನೀಡಿದ್ದರಿಂದ ಇಂತಹ ಅನುಪಮ ಸೇವೆಯು ನಡೆಯುವಂತಾಗಲು ಕಾರಣೀಭೂತವಾಯಿತು. ಜೀವನದಲ್ಲಿ ಅಮೃತತ್ವವನ್ನು ಪಡೆದ ಧೀಮಂತ ಸಾಧಕ, ವಿಪ್ರ ಸಮುದಾಯದ ಪ್ರಚಂಡ ಶಕ್ತಿಯ ಪ್ರತೀಕವಾಗಿದ್ದ, ಸಮಾಜದ ಸರ್ವತೋಮುಖ ಬೆಳವಣಿಗೆಗೆ ಪ್ರಾಮಾಣಿಕವಾಗಿ ಯಾವುದೇ ಪ್ರತಿಫಲಾಪೇಕ್ಷೆ, ಪ್ರಚಾರವಿಲ್ಲದೆ ತಮ್ಮ ತನು-ಮನ-ಧನವನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು, ಹಲವಾರು ಶಕ್ತಿ, ಸಾಮರ್ಥ್ಯಗಳನ್ನು ಹೊಂದಿದ್ದು ಹಾಗೂ ಸರ್ವಗುಣ ಸಂಪನ್ನರಾಗಿದ್ದ ಶ್ರೀಯುತರು ನಮ್ಮಿಂದ ಭೌತಿಕವಾಗಿ ಮರೆಯಾಗಿದ್ದರೂ ಬೌದ್ಧಿಕವಾಗಿ ಮರೆಯಲಾಗದ ವ್ಯಕ್ತಿ ಮತ್ತು ಶಕ್ತಿ. ನಂತರ ಸಂಸ್ಥೆಯ ಜವಾಬ್ದಾರಿಯನ್ನು ಶ್ರೀಮತಿ ಬಿ.ವಿ ಸೀತಾ ಮತ್ತು ಎಂ.ನರಸಿಂಹನ್ ಅವರು ವಹಿಸಿಕೊಂಡು ಮುನ್ನಡೆಸುತ್ತಿದ್ದಾರೆ.



ಶ್ರೀಮತಿ. ಬಿ. ವಿ. ಸೀತಾ

ಸೌಂದರ್ಯ ಶಿಕ್ಷಣ ಸಂಸ್ಥೆಗಳು

ಸೌಂದರ್ಯ ರಸ್ತೆ, ಹಾವನೂರ್ ಎಕ್ಸ್‌ಟೆನ್‌ಷನ್, ಹೆಸರಘಟ್ಟ ಮುಖ್ಯ ರಸ್ತೆ,
ನಾಗಸಂದ್ರ ಅಂಚೆ, ಬೆಂಗಳೂರು – 560 073

ಕೆಂಪೇಗೌಡರಿಂದ ಸ್ಥಾಪಿತವಾದ ಬೆಂಗಳೂರು ನಗರ ಕಲ್ಪನೆಗೆ ಎಟುಕದೇ ತನ್ನ ಕಬಂಧಬಾಹುಗಳನ್ನು ಎಲ್ಲ ದಿಕ್ಕುಗಳಲ್ಲಿ ಪಸರಿಸುತ್ತ ಹೋದಂತೆ ನಾಗರಿಕರ ವಾಸಸ್ಥಳ ನಿರ್ಮಾಣಕ್ಕಾಗಿ ಹಲವಾರು ಪ್ರಸಿದ್ಧ ಬಿಲ್ಡರ್ಗಳು ಮತ್ತು ಡೆವಲಪರ್ಗಳು ತಮ್ಮ ಕೌಶಲ್ಯದಿಂದ ಹಲವಾರು ನವೀನ ಮಾದರಿ ಬಡಾವಣೆಗಳನ್ನು ನಿರ್ಮಾಣ ಮಾಡತೊಡಗಿದರು. ಈ ರೀತಿ ಅಸ್ತಿತ್ವಕ್ಕೆ ಬಂದ ಬಡಾವಣೆಗಳಲ್ಲಿ ವಾಸಮಾಡತೊಡಗಿದ ನಾಗರಿಕರ ಮಕ್ಕಳ ಶಿಕ್ಷಣಕ್ಕಾಗಿ ಹೊಸ ಹೊಸ ಶಿಕ್ಷಣ ಸಂಸ್ಥೆಗಳು ತಲೆದೋರಿದವು. ಹೀಗೆ ಹೆಸರುಘಟ್ಟ ಮುಖ್ಯರಸ್ತೆಯಲ್ಲಿ ಬೃಹದಾಕಾರವಾಗಿ ಬೆಳೆದು ನಿಂತ ಶಿಕ್ಷಣ ಸಂಸ್ಥೆಯೇ ಸೌಂದರ್ಯ ಸಮೂಹ ಶಿಕ್ಷಣ ಸಂಸ್ಥೆ. ಇದರ ಸಂಸ್ಥಾಪಕರೇ ಶ್ರೀ ಸೌಂದರ್ಯ ಮಂಜಪ್ಪ ಅವರು.


ಶ್ರೀ. ಮಂಜಪ್ಪ

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ ॥

ಎನ್ನುವ ಡಿವಿಜಿಯವರ ಈ ಕಗ್ಗದ ಸಾಲು ಎಷ್ಟು ಔಚಿತ್ಯಪೂರ್ಣ ಎನ್ನುವುದಕ್ಕೆ ಈ ಒಬ್ಬ ಸಾಧಕನ ಜೀವನವೇ ಸಾಕ್ಷಿ. ಮುತ್ತುಗಳು ಬೆಳೆದ ಮುತ್ತೂರು ಕಾಲಕ್ರಮೇಣ ಜನರ ಬಾಯಲ್ಲಿ ಪುತ್ತೂರಾಯಿತು.ಪುತ್ತೂರಿನಲ್ಲಿ ಜನಿಸಿದ ಸೌಂದರ್ಯ ಶ್ರೀ. ಮಂಜಪ್ಪ ಪುತ್ತೂರಿನ ಒಂದು ಮುತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗದು.

ದಕ್ಷಿಣ ಕನ್ನಡ ಜಿಲ್ಲೆಯ ದೊಡ್ಡ ಪಟ್ಟಣವಾದ ಪುತ್ತೂರು ಮಂಗಳೂರಿನಿಂದ ಸುಮಾರು 52 ಕಿ.ಮೀ ದೂರದಲ್ಲಿದ್ದು ಮಂಗಳೂರು ಮೈಸೂರಿನ ಹೆದ್ದಾರಿಯ ಪಶ್ಚಿಮ ಘಟ್ಟಗಳ ಮಧ್ಯೆ ನೈಸರ್ಗಿಕ ಸೊಬಗನ್ನು ಹೊಂದಿರುವ ಕನ್ನಡ ತುಳು ಭಾಷೆಗಳನ್ನು ಮಾತನಾಡುವ ಒಂದು ಸಾಂಸ್ಕೃತಿಕ ಹಳ್ಳಿ ಕುಡಿಪಾಡಿ. ಈ ಗ್ರಾಮದಲ್ಲಿ ಶ್ರೀಯುತ ಪೂವಪ್ಪ ಮತ್ತು ಶ್ರೀಮತಿ ಸೀತಮ್ಮ ಎಂಬ ದಂಪತಿಗಳಿಗೆ ಮಗುವಾಗಿ 15 ನವೆಂಬರ್ 1959 ರಲ್ಲಿ ಜನಿಸಿದರು. ತಾಯಿ ಸೀತಮ್ಮ ಇವರಿಗೆ ಸದ್ವಿದ್ಯೆ ಸದಾಚಾರ ಸುಸಂಸ್ಕಾರವನ್ನು ಕೊಡುವುದರ ಮೂಲಕ ನೂರು ಶಿಕ್ಷಕರಿಗಿಂತ ಜಾಣೆ ತಾಯಿ ಮೇಲು ಎಂಬುದನ್ನು ದೃಢಪಡಿಸಿದರು. ಬಡ ಕುಟುಂಬದಲ್ಲಿ ಬೆಳೆದ ಶ್ರೀಯುತ ಮಂಜಪ್ಪನವರು ಸರ್ಕಾರಿ ಶಾಲೆಯಲ್ಲಿ ಶಿಕ್ಷಣವನ್ನು ಪ್ರಾರಂಭಿಸಿದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಬಾಲ್ಯದಲ್ಲಿ ಆಟ ಪಾಠ ಓದು ಬರಹ ಮಾತು ಇವುಗಳಲ್ಲಿ ಮುಂದಿರುತ್ತಿದ್ದರು. ಆರ್ಥಿಕ ತೊಂದರೆಯಾಗಿ ಏಳನೇ ತರಗತಿ ಶಿಕ್ಷಣ ಮುಗಿದ ಮೇಲೆ ಶಿಕ್ಷಣ ಸ್ಥಗಿತಗೊಳ್ಳುವ ಹಂತದಲ್ಲಿತ್ತು. ಆದರೆ ಎಲ್ಲ ಬಾಗಿಲುಗಳು ಮುಚ್ಚಿದರೂ ಯಾವುದೋ ಒಂದು ಕಿಟಕಿಯ ರಂಧ್ರದಿಂದ ಬೆಳಕು ಹರಿದು ಬರುವಂತೆ ಇವರ ಪ್ರತಿಭೆಯನ್ನು ಗುರುತಿಸಿದ ಕುಡಿಪಾಡಿ ಶಾಲೆಯ ಶಿಕ್ಷಕಿಯಾದ ಶ್ರೀಮತಿ ಮುತ್ತಮ್ಮನವರು ಇವರ ಮಾರ್ಗದರ್ಶಕರಾಗಿ ಬಂದರು. ಎಂಟನೇ ತರಗತಿಗಾಗಿ ಮಂಜಪ್ಪನವರನ್ನು ತಮ್ಮ ಖರ್ಚಿನಲ್ಲಿ ಧರ್ಮಸ್ಥಳಕ್ಕೆ ಕರೆದುಕೊಂಡು ಹೋದರು. ಆದರೆ ಆ ದಿನ ಶ್ರೀ ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದಲ್ಲಿ ಇಲ್ಲದ ಕಾರಣ ನಿರಾಶರಾದರು. ಇಂದಿನ ದುಃಖ

ಮುಂದಿನ ಸುಖವೆಂಬಂತೆ ಮರುದಿನವೇ ಶಿಕ್ಷಕಿಯವರು ಶ್ರೀ ಮಂಜಪ್ಪನವರನ್ನು ಹೆಗ್ಗಡೆ ಅವರ ಬಳಿ ಕರೆದುಕೊಂಡು ಹೋಗಿ ಎಂಟನೇ ತರಗತಿಗೆ ದಾಖಲಾತಿ ಮಾಡಿಕೊಳ್ಳುವಂತೆ ವಿನಂತಿಸಿಕೊಂಡರು. ಹೆಗ್ಗಡೆ ಅವರ ಕೃಪೆಯಿಂದ ಎಂಟನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಮಂಜುನಾಥೇಶ್ವರ ಶಾಲೆಯಲ್ಲಿ ಶಿಕ್ಷಣ ಮುಂದುವರೆಯಿತು. ಪದವಿಪೂರ್ವ ಶಿಕ್ಷಣವನ್ನು ಪುತ್ತೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಡೆದುಕೊಂಡರು. ಮುಂದಿನ ವಿದ್ಯಾಭ್ಯಾಸ ಸಾಧ್ಯವಾಗದೇ ಏನಾದರೂ ಸಾಧಿಸಿಯೇ ಸಾಧಿಸುತ್ತೇನೆ ಎಂಬ ಕೆಚ್ಚಿನ ಮನಸ್ಸಿನ ಮುಂದೆ ಯಾವುದು ನಿಲ್ಲಲಾರದು ಎಂಬಂತೆ ಏನಾದರೂ ಮಾಡಲೇಬೇಕು ಎಂಬ ಛಲ ಮತ್ತು ಉತ್ಸಾಹ ಇದ್ಧರೂ ಹಣ ಮಾತ್ರ ಇರಲಿಲ್ಲ. ಸೊನ್ನೆಯಿಂದಲೇ ಕೊಟ್ಯಾಧಿಪತಿಗಳಾದ ದಿಗ್ಗಜರು ಅವರ ಕಣ್ಣ ಮುಂದೆ ಬಂದು ಹೋದರು.

ಇನ್ನು ಊರಲ್ಲಿರುವುದು ವ್ಯರ್ಥ ಎಂದು ಉದ್ಯಾನ ನಗರಿ ಬೆಂಗಳೂರಿನ ಕಡೆಗೆ ಬರಿ ಕೈಯಲ್ಲಿ ಪ್ರಯಾಣ ಬೆಳೆಸಿದರು. ಉಪ್ಪು ನೀರಿನಲ್ಲಿ ಬಾಲ್ಯವನ್ನು ಕಳೆದ ಇವರಿಗೆ ಸಿಹಿ ನೀರಿನಲ್ಲಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. ಈ ಸಿಹಿ ನೀರಿನಲ್ಲಿ ಬದುಕಲು ಸಿಹಿಯಾಗಿಸಿಕೊಳ್ಳಲು ಒಂದು ಕಾರ್ಖಾನೆಯಲ್ಲಿ ವೃತ್ತಿ ಪ್ರಾರಂಭಿಸಿದರು. ಇಲ್ಲಿ ಇಂಡಿಯನ್ ಓವರ್ಸೀಸ್ ಬ್ಯಾಂಕ್ ಚೇರ್ಮನ್ ಶ್ರೀಯುತ ವಿಷ್ಣುಮೂರ್ತಿ ಎರ್ಕಾಡಿತ್ತೈಯ ಇವರಿಗೆ ಪ್ರೇರಣೆ ನೀಡಿದರು. ಶ್ರೀಯುತರು ಬೆಂಗಳೂರಿಗೆ ಬಂದ ಆ ದಿನಗಳು ಅಷ್ಟೊಂದು ಸುಖಕರವಾಗಿರಲಿಲ್ಲ. ಧನಾತ್ಮಕ ಎಲ್ಲದರಲ್ಲೂ ಅವಕಾಶವನ್ನು ಕಂಡುಕೊಳ್ಳುತ್ತದೆ ಎಂಬಂತೆ ಬೇರೆ ಬೇರೆ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ಸಾಗುತ್ತಿದ್ದ ಇವರ ಜೀವನ ರಥಕ್ಕೆ ಎರಡು ಕೈ ಸೇರಿದರೆ ಚಪ್ಪಾಳೆ ಎಂಬಂತೆ 1989ರ ಮೇ ತಿಂಗಳಿನಲ್ಲಿ ಸದ್ಗುಣ ಸಂಪನ್ನೆಯಾದ, ಶ್ರೀಮತಿ ಸುನಿತಾ ಅವರೊಂದಿಗೆ ವೈವಾಹಿಕ ಜೀವನ ಮೊದಲಾಯಿತು. ಅನ್ನವಿದ್ದರೆ ಉಪವಾಸವಿಲ್ಲ, ಶಿಕ್ಷಣವಿದ್ದರೆ ವನವಾಸವಿಲ್ಲ ಎಂದು ತಿಳಿದ ಮಂಜಪ್ಪನವರು ಮಾನವನಿಗೆ ಮೂಲಭೂತವಾಗಿ ಬೇಕಾಗಿರುವುದು ವಿದ್ಯೆ ಎಂದು ತಿಳಿದು ದಾಸರಹಳ್ಳಿ ಸಮೀಪದಲ್ಲಿ ಮಹನೀಯರೊಬ್ಬರ ನೆರವಿನೊಂದಿಗೆ ಅಜ್ಞಾನವನ್ನು ಹೋಗಲಾಡಿಸುವ ಅಂಧಕಾರವನ್ನು ಹೊಡೆದೋಡಿಸುವ ಜ್ಞಾನದ ಬೆಳಕನ್ನು ನೀಡುವ ಶಾಲೆಯನ್ನು ಸ್ಥಾಪಿಸಲು ಯೋಚಿಸಿದರು.

1993 ರಲ್ಲಿ 64 ಮಕ್ಕಳೊಂದಿಗೆ ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಶಾಲೆ ಪ್ರಾರಂಭಿಸಿದರು. ಜಗದ್ಗುರು ಶಂಕರಾಚಾರ್ಯರ ಸೌಂದರ್ಯ

ಲಹರಿಯಿಂದ ಪ್ರಭಾವಿತರಾಗಿದ್ದ ಶ್ರೀಯುತ ಮಂಜಪ್ಪನವರು ತಮ್ಮ ವಿದ್ಯಾ ಸಂಸ್ಥೆಗೆ 'ಸೌಂದರ್ಯ ಶಿಕ್ಷಣ ಸಂಸ್ಥೆ' ಎಂದು ನಾಮಕರಣ ಮಾಡಿದರು. ಶ್ರೀ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಗಳ ಅಮೃತ ಹಸ್ತದಿಂದ ಶುಭ ದಿನದಂದು ಶಾಲೆ ಉದ್ಘಾಟಿಸಲ್ಪಟ್ಟಿತು. ಹೀಗೆ ಪ್ರಾರಂಭವಾದ ಸಂಸ್ಥೆ ಬೃಹದಾಕಾರವಾಗಿ ಬೆಳೆದು ಪೂರ್ವ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಬೋಧನೆಯನ್ನು ಮಾಡುತ್ತಿದೆ. ಪ್ರಸ್ತುತ ಸೌಂದರ್ಯ ಸಮೂಹ ಶಿಕ್ಷಣ ಸಂಸ್ಥೆಯು ಒಳಗೊಂಡಿರುವ ಅಂಗ ಸಂಸ್ಥೆಗಳೆಂದರೆ ಪೂರ್ವ ಪ್ರಾಥಮಿಕದಿಂದ ತೊಡಗಿ ಮೆಟ್ರಿಕ್ಯುಲೇಶನ್ ಹಂತದವರೆಗೆ ರಾಜ್ಯ ಮತ್ತು ಕೇಂದ್ರೀಯ ಪಠ್ಯಕ್ರಮದ ಶಾಲೆಗಳು, ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಸೌಂದರ್ಯ ವಿಜ್ಞಾನ ಮತ್ತು ನಿರ್ವಹಣಾ ಕಾಲೇಜು, ಸೌಂದರ್ಯ ಕಾನೂನು ಕಾಲೇಜು, ಸೌಂದರ್ಯ ಸಂಜೆ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, ಸೌಂದರ್ಯ ಪದವಿ ಕಾಲೇಜು, ಸೌಂದರ್ಯ ಸ್ನಾತಕೋತ್ತರ ಕಾಲೇಜು (ಎಂ.ಕಾಂ ಮತ್ತುಎಂ.ಬಿ.ಎ), ಇದರ ಜೊತೆ ಪತ್ರಿಕೋದ್ಯಮ, ಚಾರ್ಟರ್ಡ್ ಅಕೌಂಟೆಂಟ್ ಕೋರ್ಸ್ ಗಳಿಗೂ ತರಬೇತಿಯನ್ನು ನೀಡುವ ಸೌಲಭ್ಯವನ್ನು ಕೂಡ ಈ ಶಿಕ್ಷಣ ಸಂಸ್ಥೆ ಹೊಂದಿದೆ.




ತಮ್ಮ ಇಬ್ಬರು ಸುಪುತ್ರರು ಸಂಸ್ಥೆಯ ಬೆಳವಣಿಗೆಗೆ ಕಾರ್ಯಪ್ರವೃತ್ತರಾಗಿದ್ದಾರೆ. ಶ್ರೀಯುತ ಕೀರ್ತನ್ ಕುಮಾರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದರೆ ಶ್ರೀಯುತ ವರುಣ್ ಕುಮಾರ್ ಮತ್ತೊಬ್ಬರು ಟ್ರಸ್ಟಿಯಾಗಿದ್ದು ಕ್ರೀಡೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ ಕ್ರೀಡಾ ಸಾಧನೆಗೈಯ್ಯಲು ಸಹಕರಿಸುತ್ತಿದ್ದಾರೆ.

ಹೀಗೆ ಬೆಂಗಳೂರು ಉತ್ತರ ವಿಭಾಗದಲ್ಲಿ ಅತ್ಯುನ್ನತ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಾ ವಿದ್ಯಾ ಕಾಶಿಯಾಗಿ ಬೆಳೆಯುತ್ತಿರುವ ಸೌಂದರ್ಯ ಶಿಕ್ಷಣ ಸಂಸ್ಥೆಯಲ್ಲಿ ಪ್ರಸ್ತುತ ಸುಮಾರು 7,000ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ಏಳು ನೂರಕ್ಕೂ ಹೆಚ್ಚು ಬೋಧಕ ಬೋಧಕೇತರರಿದ್ದು ಜನಮೆಚ್ಚುಗೆಯನ್ನು ಪಡೆದಿದ್ದಾರೆ. 'ಜನಸೇವೆಯೇ ಜನಾರ್ದನ ಸೇವೆ' ಎಂದು ನಂಬಿರುವ ಸೌಂದರ್ಯ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಶ್ರೀಯುತ. ಸೌಂದರ್ಯ ಪಿ. ಮಂಜಪ್ಪನವರ ಜೀವನ ಸಾಧನೆ ನಮಗೆಲ್ಲರಿಗೂ ಆದರ್ಶಪ್ರಾಯವಾಗಿದೆ.

ಪ್ರಜ್ಞಾ ಭಾರತಿ ವಿದ್ಯಾಲಯ

63, ದೊಡ್ಡಕಲ್ಲಸಂದ್ರ, ನಾರಾಯಣನಗರ 3ನೇ ಬ್ಲಾಕ್
ಕನಕಪುರ ರಸ್ತೆ, ಬೆಂಗಳೂರು–560062

ಬೆಂಗಳೂರು ಪ್ರೌಢಶಾಲೆಯಲ್ಲಿ ವೈ.ವೆಂಕಟರಮಣರವರು(ಶಾಲಾ ಸಂಸ್ಥಾಪಕರು) ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ನಂತರ, ಮಕ್ಕಳು ಹಾಗೂ ಪೋಷಕರ ಸಮಸ್ಯೆಗಳ ಅರಿವಿದ್ದ ಕಾರಣ, ಮಕ್ಕಳು ಹಾಗೂ ಪೋಷಕರಿಗೆ ಸಹಕಾರಿಯಾಗುವ ಸಲುವಾಗಿ, ಅರ್ಥಿಕವಾಗಿ ಹೆಚ್ಚು ಹೊರೆಯಾಗದಂತೆ ಹಾಗೂ ಮೌಲ್ಯಾಧಾರಿತ ಶಿಕ್ಷಣ ದೊರೆಯಲು ಅನುವಾಗುವಂತೆ ಸರ್ವ ಸ್ನೇಹಿ ವಿದ್ಯಾ ಸಂಸ್ಥೆಯನ್ನು, ಪ್ರಾರಂಭಿಸಬೇಕೆಂಬ ಬಹು ವರ್ಷಗಳ ಆಸೆ ಹಾಗೂ ಕನಸನ್ನು ಸಾಕಾರಗೊಳಿಸಲು 1993 ನೇ ಇಸವಿಯಲ್ಲಿ ದೊಡ್ಡಕಲ್ಲಸಂದ್ರದಲ್ಲಿ ತಾವು ಖರೀದಿಸಿದ್ದ ನಿವೇಶನದಲ್ಲಿ 'ಪ್ರಜ್ಞಾ ಭಾರತಿ ಟ್ರಸ್ಟ್' ಎಂಬ ಸಂಸ್ಥೆಯನ್ನು ನೊಂದಾಯಿಸಿ ಅದರಮೂಲಕ ಪ್ರಜ್ಞಾ ಭಾರತಿ ವಿದ್ಯಾಲಯ ಎಂಬ ವಿದ್ಯಾ



ಶ್ರೀ ವೈ ವೆಂಕಟರಮಣ
ಸಂಸ್ಥಾಪಕರು

ಸಂಸ್ಥೆಯನ್ನು ಪ್ರಾರಂಭಿಸಿದರು. ಮನೆ ಮನೆಗೆ ಭೇಟಿ ನೀಡುವುದರೊಡನೆ ಅವರಿಗೆ ಸಹಕಾರಿಯಾಗುವಂತಹ ಪರಿಸರ ನಿರ್ಮಾಣ ಮಾಡಿ ಶಾಲೆಯನ್ನು ನಡೆಸಲಾರಂಭಿಸಿದರು. ಪ್ರಾರಂಭಿಕ ಹಂತದಲ್ಲಿ ತಮ್ಮ ಕುಟುಂಬ ಸದಸ್ಯರ ಸಹಾಯದಿಂದ ಶಾಲೆಯನ್ನು ಬೋಧನೆ, ಹಣಕಾಸು ನಿರ್ವಹಣೆ, ಮಕ್ಕಳ ಹಾಗೂ ಪೋಷಕರ ಸಹಾಯದಿಂದ ಶಾಲೆಯನ್ನು ನಡೆಸಲಾರಂಭಿಸಿದರು. ಮೊದಲು ನರ್ಸರಿ, ಹಾಗೂ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ನಂತರ ಪ್ರೌಢಶಾಲೆಯನ್ನು ಪ್ರಾರಂಭಿಸಿ ಪ್ರಸ್ತುತ ನರ್ಸರಿ ಯಿಂದ ಪ್ರೌಢಶಾಲೆ ವರೆಗೆ ಶಿಕ್ಷಣ ನೀಡುತ್ತಾ ಪರಿಸರ ಹಾಗೂ ಜನಸ್ನೇಹಿ ವಾತಾವರಣದೊಡನೆ ಶಾಲೆಯನ್ನು ನಡೆಸುತ್ತಿದ್ದಾರೆ. ಬಂದ ಶಾಲಾ ಶುಲ್ಕದ ಸಹಾಯದಿಂದ ಹಾಗೂ ತಮ್ಮ ಗಳಿಕೆಯ ಹಣದಿಂದ ಶಾಲಾ ಕಟ್ಟಡವನ್ನು ವಿಸ್ತರಿಸಿ ಎಲ್ಲಾ ತರಗತಿಗಳಿಗೂ, ಎಲ್ಲಾ ಮಕ್ಕಳಿಗೂ ಅನುಕೂಲವಾಗುವ ರೀತಿಯಲ್ಲಿ ಬೋಧನಾ ಕೊಠಡಿಗಳನ್ನು ನಿರ್ಮಿಸಿ ಕಾರ್ಯಕ್ರಮ ನಡೆಸಲು ಒಂದು ಸಭಾಂಗಣ ಹಾಗೂ ಒಂದು ಆಟದ ಮೈದಾನವನ್ನು ಅಕ್ಕಪಕ್ಕದ ನಿವೇಶನಗಳನ್ನೂ ಖರೀದಿಸುವದರ ಮೂಲಕ ಅಳವಡಿಕೆ ಮಾಡಿಕೊಂಡಿದ್ದಾರೆ.

ಶಾಲಾ ಶಿಕ್ಷಣದ ಜೊತೆಗೆ ಮೌಲ್ಯಧಾರಿತ ಹಾಗೂ ಕರಾಟೆ, ಸಂಗೀತ ಸಂಸ್ಕೃತ, ನೃತ್ಯ ಮುಂತಾದ ಸಹ ಪಠ್ಯ ಚಟುವಟಿಕೆಗಳನ್ನು, ಶಾಲಾ ಅವಧಿಯಲ್ಲಿಯೇ ಅಳವಡಿಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಾ, ಪ್ರಜ್ಞಾ ಹಿ ಪರಮಾ ಗತಿ: ಎಂಬ ಧ್ಯೇಯವಾಕ್ಯವನ್ನು ಇಟ್ಟುಕೊಂಡು, ಮಕ್ಕಳನ್ನು ಪ್ರಜ್ಞಾವಂತರನ್ನಾಗಿ ಮಾಡಲು ಶ್ರಮಿಸಿದರು. ಶ್ರೀಯುತ ವೆಂಕಟರಮಣ ಅವರ ಮರಣದ ನಂತರ ಶಾಲೆಯ ಜವಾಬ್ದಾರಿ ಶ್ರೀಮತಿ ಮನೋರಮ ವಹಿಸಿಕೊಂಡರು. ಯಜಮಾನರ ಕನಸು ಸಾಕಾರಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಶಾಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಮಕ್ಕಳು ಹಾಗೂ ಪೋಷಕರು ಅವರ ಕಾರ್ಯವೈಖರಿಯಿಂದ ತೃಪ್ತರಾಗಿ



ಶ್ರೀಮತಿ ಮನೋರಮಾ




ಸಹಕಾರ ನೀಡುತ್ತಿದ್ದಾರೆ. ಕರೋನ ರೋಗಕ್ಕಿಂತ ಮುಂಚೆ 400 ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಪ್ರಸ್ತುತವಾಗಿ 230 ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. 2021-22 ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿನಿ ಇಂಚರ ಹಿರೇಮಠ ಶೇಖಡ 98+ ಅಂಕಗಳನ್ನು ಪಡೆದು, ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದು ಶಾಲೆಗೆ ಹೆಸರು ತಂದಿರುತ್ತಾಳೆ. ಪ್ರಸ್ತುತ ಶ್ರೀಮತಿ ಮನೋರಮಾ ಹಾಗೂ ಅವರ ಮಗಳು ಶ್ರೀಮತಿ ಸವಿತಾ ರಾಜೀವ್ ಸಂಸ್ಥೆಯ ಜವಾಬ್ದಾರಿ ನೋಡಿಕೊಳ್ಳುತ್ತಿದ್ದಾರೆ.

ಮೌರ್ಯ ಪಬ್ಲಿಕ್ ಸ್ಕೂಲ್

79, 4ನೇ ಮುಖ್ಯ ರಸ್ತೆ, ಮಾರುತಿ ನಗರ,
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079

ಮಾಗಡಿ ರಸ್ತೆಯ ಹೌಸಿಂಗ್ ಬೋರ್ಡ್ ಕಾಲೋನಿ ಮತ್ತು ಸುಂಕದಕಟ್ಟೆಯ ನಡುವೆ ಅಂದಿನ ಕುಗ್ರಾಮ ಇಂದು ಪ್ರಬುದ್ಧವಾಗಿ ಬೆಳೆದಿರುವ ಕಾಮಾಕ್ಷಿಪಾಳ್ಯ ಸ್ಥಳೀಯರು ಶ್ರೀಮಂತರಾಗಿದ್ದರೂ



ಶ್ರೀ ಸಿದ್ಧರಾಮಯ್ಯ



ಶ್ರೀಮತಿ ಜಲಜಾಕ್ಷಿ

ಹೊರಗಿನಿಂದ ವಲಸೆ ಬಂದು ನೆಲೆಸಿರುವ ಮಧ್ಯಮ ವರ್ಗದ ಜನರೇ ಇಲ್ಲಿ ಹೆಚ್ಚಾಗಿದ್ದಾರೆ. ಅಂದರೆ ಸಣ್ಣಮಟ್ಟ ವ್ಯಾಪಾರ ಮಾಡುವ, ಆಟೋ ಓಡಿಸುವ ಜನರೇ ಇಲ್ಲಿ ಹೆಚ್ಚಾಗಿದ್ದಾರೆ. ಇಂತಹವರಿಗೆ ಅನುಕೂಲವಾಗಲೆಂದು ಎ.ಪಿ.ಜೆ. ಅಬ್ದುಲ್ ಕಲಾಂರ ಹೇಳಿಕೆಯಂತೆ ಶಿಕ್ಷಣದ ಉದ್ದೇಶ ಕೌಶಲ್ಯ ಮತ್ತು ಪರಿಣತಿಯೊಂದಿಗೆ ಒಳ್ಳೆಯ ಮನುಷ್ಯರನ್ನು ಸಮಾಜಕ್ಕೆ ನೀಡಬೇಕೆಂಬ ಸದುದ್ದೇಶದಿಂದ ಶ್ರೀಮತಿ. ಜಲಜಾಕ್ಷಿ ಮತ್ತು ಶ್ರೀ. ಸಿದ್ದರಾಮಯ್ಯನವರು 1996ರಲ್ಲಿ "ಮೌರ್ಯ ಪ್ರಾಥಮಿಕ ಶಾಲೆ" ಯನ್ನು ಸ್ಥಾಪಿಸಿದರು. ಇದರ ಅಸ್ತಿತ್ವಕ್ಕೆ ಕಾರಣರಾದವರು ಶ್ರೀಮತಿ ಜಲಜಾಕ್ಷಿಯವರ ತಂದೆ ಛೇರ್ಮನ್ ರಾಮಲಿಂಗೇಗೌಡರು. ಈ ಶಾಲೆಗೆ ನಿವೇಶನ ನೀಡಿ ಉಪಕರಿಸಿ ಉಪಕೃತ್ಯರಾಗಿದ್ದಾರೆ. ಪರಿಣಾಮವಾಗಿ ಶಾಲೆ ಬೃಹತ್ತಾಗಿ ಬೆಳೆದಿದೆ.

ಶ್ರೀ ಸಿದ್ಧರಾಮಯ್ಯನವರು ವಿ.ವಿ.ಪುರಂನ ಒಕ್ಕಲಿಗರ ಸಂಘದ ವಿದ್ಯಾಸಂಸ್ಥೆಯೊಂದರಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಜಲಜಾಕ್ಷಿ ಸಭ್ಯ ಗೃಹಿಣಿಯಾಗಿದ್ದಾರೆ. ಇವರಿಂದ ಸಣ್ಣ ಕೊಠಡಿಯಲ್ಲಿ 15–20 ವಿದ್ಯಾರ್ಥಿಗಳನ್ನೊಳಗೊಂಡು ಕನ್ನಡ ಮಾಧ್ಯಮ ಶಾಲೆಯಾಗಿ ಸ್ಥಾಪಿತಗೊಂಡದ್ದು 2006 ರಲ್ಲಿ ಆಂಗ್ಲ ಮಾಧ್ಯಮ ಮೌರ್ಯ ಪಬ್ಲಿಕ್ ಶಾಲೆಯಾಗಿ ಪರಿವರ್ತನೆಗೊಂಡಿದೆ. ಇಂದು 700ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಹಾಗೂ 30ಕ್ಕಿಂತ ಹೆಚ್ಚು ಶಿಕ್ಷಕರನ್ನು ಒಳಗೊಂಡಿದ್ದು, ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ.

ಈ ಮುನ್ನಡೆಗೆ ಸಮಾಜಕ್ಕೆ ತಮ್ಮ ಕೈಲಾದ ಸೇವೆಯನ್ನು ನೀಡಬೇಕೆಂಬ ಶ್ರೀಮತಿ ಮತ್ತು ಶ್ರೀ ಸಿದ್ಧರಾಮಯ್ಯ ಕುಟುಂಬದವರ ತುಡಿತವೇ ಕಾರಣ. ಈ ತುಡಿತದ ಸಾಫಲ್ಯಕ್ಕೆ ಇಬ್ಬರೂ ಶ್ರಮಿಸಿದ್ದಾರೆ. ಇವರ ಶ್ರಮ ಸಾರ್ಥಕವಾಗಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಶಾಲೆಯ ಪ್ರಗತಿಯನ್ನು ಕಂಡು ಆಕರ್ಷಿತರಾಗುತ್ತಿದ್ದಾರೆ. ಈ ಆಕರ್ಷಣೆಯು ಇನ್ನೂ ಹೆಚ್ಚಾಗಲೆಂಬುದು ನಮ್ಮ ಹಾರೈಕೆ.

ಈ ದಂಪತಿಗಳ ಕನಸಿನ ಕೂಸಾದ ಮೌರ್ಯ ಪಬ್ಲಿಕ್ ಶಾಲೆಯು ಇಂದು ಬೃಹದಾಕಾರವಾಗಿ ಬೆಳೆದಿದೆ. ಶ್ರೀಮತಿ. ಜಲಜಾಕ್ಷಿಯವರು ಹಲವು ವರ್ಷಗಳ ಕಾಲ ಆಡಳಿತದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿ,



ಶ್ರೀ ರಾಘವೇಂದ್ರ
ಕಾರ್ಯದರ್ಶಿಗಳು

ಪ್ರಸ್ತುತ ತಮ್ಮ ಸುಪುತ್ರ ಶ್ರೀ. ರಾಘವೇಂದ್ರ ಅವರಿಗೆ ಹಸ್ತಾಂತರಿಸಿದ್ದಾರೆ. ಶ್ರೀ ರಾಘವೇಂದ್ರರವರು ತಮ್ಮ ತಂದೆ ತಾಯಂದಿರ ಆಶಯದಂತೆ ಸಮರ್ಥವಾಗಿ ಶಾಲೆಯನ್ನು ಮುನ್ನಡೆಸುತ್ತಿದ್ದಾರೆ. ದಕ್ಷ ಅನುಭವಿ ಸಿಬ್ಬಂದಿ ವರ್ಗ ಇವರಿಗೆ ಸಾಥ್ ನೀಡುತ್ತಿದೆ.

ಕೂಲಿ ಕಾರ್ಮಿಕರು, ಆಟೋ ಚಾಲಕರು, ಗಾರ್ಮೆಂಟ್ಸ್ ನೌಕರರೇ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಮೌರ್ಯ ಪಬ್ಲಿಕ್ ಶಾಲೆಯು ಅವರಿಗೊಂದು ವರದಾನವಾಗಿ ಉತ್ತಮ ಶಿಕ್ಷಣವನ್ನು ನೀಡುತ್ತಿದೆ.

ಈ ಶಾಲೆಯಲ್ಲಿ ದುಬಾರಿ ಶುಲ್ಕವಿಲ್ಲ. ಸಾರ್ವಜನಿಕರ ಸಾಮರ್ಥ್ಯಕ್ಕನುಸಾರವಾಗಿ ಶುಲ್ಕ ವಿನಾಯಿತಿಯನ್ನು ಈ ಶಾಲೆ ನೀಡುತ್ತಿದೆ. ವಿದ್ಯಾರ್ಥಿಗಳ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತಮ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟಿರುವ ಈ ಶಾಲೆಯ ಗುರಿ ಶ್ಲಾಘನೀಯ. ಪಠ್ಯ ಚಟುವಟಿಕೆಗಳ ಜೊತೆಗೆ ಎಲ್ಲ ಶಾಲೆಗಳಂತೆ ಈ ಶಾಲೆಯೂ ಪಠೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ರೆಮಿಡಿಯಲ್ ತರಗತಿಗಳನ್ನು ಏರ್ಪಡಿಸುವುದರ ಮೂಲಕ 2010 ರಿಂದ 2014 ರವರೆಗೆ ಎಸ್.ಎಸ್.ಎಲ್.ಸಿ ಯಲ್ಲಿ ನೂರಕ್ಕೆ ನೂರು ಫಲಿತಾಂಶ ಬಂದಿರುವುದು ಈ ಶಾಲೆಯ ಹೆಗ್ಗಳಿಕೆ. 2021–22, 2022–23ರಲ್ಲಿ ಇದೇ ಫಲಿತಾಂಶ ಪುನರಾವರ್ತನೆಯಾಗಿರುವುದು ಶಾಲೆಯ ಸಾಧನೆಯ ಮೈಲಿಗಲ್ಲು.

ಕ್ರೀಡಾ ಚಟುವಟಿಕೆಗಳಾದ ಕಬಡ್ಡಿ ಮತ್ತು ಕೊಕ್ಕೋಗಳಲ್ಲಿ ಹಲವು ಬಾರಿ ಪ್ರಶಸ್ತಿಗಳನ್ನು ಗಳಿಸಿರುವುದು ಹೆಮ್ಮೆಯ ಸಂಗತಿ. ರೆಗ್ಯುಲರ್ ಶಿಕ್ಷಣದ ಜೊತೆಗೆ ಗಣಕಯಂತ್ರ ಮತ್ತು ಯೋಗಗಳ ಬಗ್ಗೆ ವಿಶೇಷ ಜ್ಞಾನ ಗಳಿಕೆಗೆ ಈ ಶಾಲೆಯು ಪ್ರೋತ್ಸಾಹ ನೀಡುತ್ತಿದೆ. ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು

ಆಚರಿಸುವುದರ ಜೊತೆಗೆ ಯೋಗಾಭ್ಯಾಸ ಮತ್ತು ಸಂಸ್ಕೃತ ಶ್ಲೋಕ ಕಂಠಪಾಠದ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಇದುವರೆಗೂ ಈ ಶಾಲೆಯಲ್ಲಿ ಲಕ್ಷೋಪಲಕ್ಷ ಸಂಖ್ಯೆ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಪಡೆದಿದ್ದಾರೆ. ಸಮಸ್ಯಾತ್ಮಕ ಮಕ್ಕಳಿಗೆ (ಪ್ರಾಬ್ಲಮ್ ಚೈಲ್ಡ್) ಪೋಷಕರನ್ನು ಕರೆಸಿ ಕೌನ್ಸಲಿಂಗ್ ನೀಡಿ ಸಮಸ್ಯೆಗಳನ್ನು ಪರಿಹರಿಸಿ ಅಂತಹ ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಅವಕಾಶ ಮಾಡಿಕೊಡುತ್ತಿದೆ ಈ ಮೌರ್ಯ ಪಬ್ಲಿಕ್ ಶಾಲೆ.

ಈ ಶಾಲೆಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದು ಸರ್ಕಾರಿ ಸೇವೆಯಲ್ಲಿ ಸಾಫಲ್ಯ ಹೊಂದಿದ್ದಾರೆ. ತಮ್ಮ ಬದುಕನ್ನು ಬಂಗಾರವಾಗಿಸಿಕೊಂಡಿದ್ದಾರೆ. ತಾವೂ ಬದುಕಿ, ಇತರರ ಬದುಕಿಗೂ ಸಹಾಯಕರಾಗಿದ್ದಾರೆ. ಇಲ್ಲಿ ಕಲಿತ ಅನೇಕರು ಸಮಾಜದ ಸತ್ಪ್ರಜೆಗಳಾಗಿ,




ಸಮಾಜಕ್ಕೆ ಕೊಡುಗೆಯಾಗಿದ್ದಾರೆ. ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಒಳ್ಳೆಯ ಹೊಂದಾಣಿಕೆಯಿದ್ದು ಶಾಲೆಯ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಶ್ರಮಿಸುತ್ತಿದೆ ಈ ಮೌರ್ಯ ಪಬ್ಲಿಕ್ ಶಾಲೆ.

ಮೌರ್ಯ ಪಬ್ಲಿಕ್ ಶಾಲೆಯು ತನ್ನ ವಿದ್ಯಾದಾನದ ಮೂಲಕ ಸಕಲ ಶ್ರೇಯಸ್ಸನ್ನು ಹೊಂದಲಿ, ವಿದ್ಯಾಕಾಂಕ್ಷಿಗಳ ಪಾಲಿಗೆ ಕಾಮಧೇನುವಾಗಲೆಂಬುದು ನಮ್ಮೆಲ್ಲರ ಹಾರೈಕೆ.

ನ್ಯೂ ಕಾರ್ಮೆಲ್ ಶಾಲೆ
(ಚಿನ್ಮಯಿ ಎಜುಕೇಷನ್ ಟ್ರಸ್ಟ್)

1ನೇ ಮುಖ್ಯ ರಸ್ತೆ, ಮುನೇಶ್ವರ ಲೇಔಟ್, ಲಕ್ಷ್ಮಣ್ ನಗರ,
ಹೆಗ್ಗನಹಳ್ಳಿ, ಬೆಂಗಳೂರು – 560 091

ತುರುವೇಕೆರೆ ತಾಲ್ಲೂಕಿನ ಹೆಗ್ಗೆರೆಯಲ್ಲಿ ಜನನ. ತಂದೆ ರಾಜಶೇಖರಯ್ಯ, ತಾಯಿ ಶಾಂತಮ್ಮ. ಬಡತನದಲ್ಲಿಯೇ ಜೀವನ. ಐವರು ಮಕ್ಕಳ ಪೈಕಿಯಲ್ಲಿ ಮಲ್ಲಿಕಾರ್ಜುನಯ್ಯ ಕೊನೆಯವರು. ಹೀಗಾಗಿ ಇಡೀ ಕುಟುಂಬಕ್ಕೆ ಪ್ರೀತಿ ಪಾತ್ರರು. ಅಜ್ಜಿ ಮನೆ ಗುಬ್ಬಿ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಪ್ರಾಥಮಿಕ ಹಾಗೂ ತುಮಕೂರಿನ ಸಿದ್ದಗಂಗಾ ಮಠದ ಆಶ್ರಯದಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿದ ಮಲ್ಲಿಕಾರ್ಜುನಯ್ಯ ನಂತರ ಮೆಕ್ಯಾನಿಕಲ್ ವಿಭಾಗದಲ್ಲಿ ಐ.ಐ.ಟಿ ತರಬೇತಿ ಪಡೆದರು. ಜೀವನೋಪಾಯಕ್ಕಾಗಿ ನೌಕರಿಯನ್ನು ಹುಡುಕುತ್ತಾ ಬೆಂಗಳೂರು ಸೇರಿದರು. ಸುಮಾರು ವರ್ಷಗಳ ಕಾಲ ವಿವಿಧ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಾ ಸ್ವಂತ ಉದ್ಯಮ ಆರಂಭಿಸುವ ಕನಸು ಕಾಣತೊಡಗಿದರು.



ಶ್ರೀ. ಹೆಚ್.ಆರ್.ಮಲ್ಲಿಕಾರ್ಜುನಯ್ಯ
ಸ್ಥಾಪಕರು

ಇದರ ಫಲವೇ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾದ ರೇಖಾ ಇಂಜಿನಿಯರಿಂಗ್. ಇದು ಈ ಕೈಗಾರಿಕಾ ಪ್ರದೇಶದಲ್ಲಿ ದೊಡ್ಡ ಉದ್ಯಮವಾಗಿ ಬೆಳೆದು ನಿಂತಿದೆ. ಸ್ವಂತ ಬಲದ ಮೇಲೆ ಬದುಕು ಕಟ್ಟಿಕೊಳ್ಳುವುದು ಸುಲಭದ ಮಾತಲ್ಲ. ಆದರೆ ದೃಢಚಿತ್ತ, ಪರಿಶ್ರಮ ಇದ್ದರೆ ಅದು ಅಸಾಧ್ಯವೂ ಅಲ್ಲ ಎಂಬುದನ್ನು ಶ್ರೀ. ಮಲ್ಲಿಕಾರ್ಜುನಯ್ಯ ಅವರು ನಿರೂಪಿಸಿದ್ದಾರೆ.

ಉದ್ಯಮ ರಂಗದಲ್ಲಿ ಸಾಕಷ್ಟು ಬೆಳೆಯುತ್ತಿದ್ದಂತೆ, ಶಿಕ್ಷಣ ರಂಗದಲ್ಲಿ ಶ್ರೀ ಮಲ್ಲಿಕಾರ್ಜುನಯ್ಯನವರ ಮನ ತಿರುಗಿತು. ಮುಂದೆ ಅವರ ಜೀವನ ಪಯಣವೇ ಒಂದು ಮಾದರಿಯಾಯಿತು. ಅಶಕ್ತರಿಗೂ ಶಿಕ್ಷಣ ಅವಕಾಶ ಕಲ್ಪಿಸಬೇಕು ಎಂಬ ಮಹಾದಾಸೆಯೊಂದಿಗೆ ವಿದ್ಯಾಕಾಂಕ್ಷಿಗಳಾದ ಶ್ರೀ. ಮಲ್ಲಿಕಾರ್ಜುನಯ್ಯ ನವರು ಚಿನ್ಮಯಿ ಎಜುಕೇಷನ್ ಟ್ರಸ್ಟ್ ಸ್ಥಾಪಿಸಿದರು. ಇವರ ಶ್ರೀಮತಿಯವರಾದ ಭಾರತಿ ಮಲ್ಲಿಕಾರ್ಜುನಯ್ಯನವರು ಈ ಕಾರ್ಯದಲ್ಲಿ ಕಾರ್ಯದರ್ಶಿಗಳಾಗಿ ಸಹಾಯ ಮಾಡುತ್ತಿದ್ದಾರೆ.

ಚಿನ್ಮಯಿ ಎಜುಕೇಷನ್ ಟ್ರಸ್ಟ್ ಮುಖೇನ 2004 ರಲ್ಲಿ ಹೆಗ್ಗನಹಳ್ಳಿಯಲ್ಲಿ ನ್ಯೂ ಕಾರ್ಮೆಲ್ ಶಾಲೆ ಆರಂಭವಾಯಿತು. ಸುಮಾರು 250 ಮಕ್ಕಳಿಂದ ಆರಂಭವಾದ ಶಾಲೆ ಇಂದು ಸುಮಾರು 1800ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕು ನೀಡುತ್ತಿದೆ. 'ಶಾಲೆ ಸ್ಥಾಪಿಸಲು ಸಿದ್ದಗಂಗೆ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳೇ ಮೂಲ ಪ್ರೇರಣೆ, ಅವರ ಆಶೀರ್ವಾದದ ಬಲವೇ ಈ ಶಾಲೆ ಇಂದು ಉತ್ತರೋತ್ತರವಾಗಿ ಬೆಳೆಯಲು ಕಾರಣವಾಗಿದೆ'. ಕಳೆದ ವರ್ಷದಿಂದ ಸಿ.ಬಿ.ಎಸ್.ಇ ಶಾಲೆ ಹಾಗೂ ಕಾರ್ಮೆಲ್ ಪಿಯು ಕಾಲೇಜ್ ಸಹ ಆರಂಭವಾಗಿದ್ದು ಮುಂದಿನ ದಿನಗಳಲ್ಲಿ ಪದವಿ ಕಾಲೇಜು ತೆರೆಯುವ ಉದ್ದೇಶವಿದೆ. ಇದಲ್ಲದೆ ನಾಗರಭಾವಿಯ ಮಾತಾ ನ್ಯಾಷನಲ್ ಪಬ್ಲಿಕ್ ಶಾಲೆಯನ್ನು ಚಿನ್ಮಯಿ ಎಜುಕೇಷನ್ ಟ್ರಸ್ಟ್ ಅಡಿಯಲ್ಲಿ ನಡೆಸುತ್ತಿದ್ದು ಇಲ್ಲಿಯೂ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಗ್ರಾಮಾಂತರ ಪ್ರದೇಶದಿಂದ ಬಂದಿರುವ ಮಲ್ಲಿಕಾರ್ಜುನಯ್ಯ ಅವರು ಹಿಂದುಳಿದ ಪ್ರದೇಶಗಳ ಮಕ್ಕಳಿಗೆ ಶಿಕ್ಷಣ ಸವಲತ್ತು ಒದಗಿಸುವ ಸದುದ್ದೇಶ ಹೊಂದಿದ್ದಾರೆ. ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು




ಅಭಿವೃದ್ಧಿ ಪಡಿಸುವುದು, ಹೆಣ್ಣು ಮಕ್ಕಳಿಗೆ ಕಂಪ್ಯೂಟರ್ ಮತ್ತು ಟ್ಯಾಲಿ ಲೆಕ್ಕ ತಂತ್ರಾಂಶದ ಕುರಿತು ತರಬೇತಿ ನೀಡುವುದು, ಯುವಜನರಿಗೆ ತಾಂತ್ರಿಕ ತರಬೇತಿ ನೀಡುವುದು, ಶಿಕ್ಷಕರ ತರಬೇತಿ ಸಂಸ್ಥೆ ಸ್ಥಾಪಿಸುವುದು, ಇದೇ ಮುಂತಾದ ಯೋಜನೆಗಳನ್ನು ಅವರು ಹಮ್ಮಿಕೊಂಡಿದ್ದಾರೆ.

ಶ್ರಮ ಜೀವಿಗಳಾಗದೆ ಯಾರು ಬದುಕಿನಲ್ಲಿ ಮುಂದೆ ಬರಲು ಸಾಧ್ಯವಿಲ್ಲ ಎಂಬುದು ಅವರ ಅಚಲವಾದ ನಂಬಿಕೆ. ಜೀವನದಲ್ಲಿ ಸ್ಪಷ್ಟವಾದ ಗುರಿ ಇರಬೇಕು ಮತ್ತು ಕಠಿಣ ಪರಿಶ್ರಮ, ಶ್ರದ್ಧೆ, ಪ್ರಾಮಾಣಿಕತೆ ಮೂಲಕ ಆ ಗುರಿ ಈಡೇರಿಸಿಕೊಳ್ಳಬೇಕು ಎಂಬುದು ಅವರ ಸಲಹೆ. ಇದೇ ವೇಳೆ ಶಿಕ್ಷಣ ಮುಗಿಸಿ ಕೆಲಸಕ್ಕೆ ಅರ್ಜಿ ಹಾಕಿ ತಮ್ಮ ಅಮೂಲ್ಯವಾದ ಸಮಯ ಹಾಳುಮಾಡಿಕೊಳ್ಳದೇ ಸ್ವಂತ ಉದ್ಯೋಗ ಆರಂಭಿಸಲು ಯುವಕರು ಮುಂದಾಗಬೇಕು ಎಂದು ಅವರು ಹೇಳುತ್ತಾರೆ. ಉದ್ಯೋಗ ಅರಸುವುದು ಬಿಟ್ಟು ಉದ್ಯೋಗದಾತರಾಗುವ ಕಡೆ ಎಲ್ಲರೂ ಗಮನ ಹರಿಸಿದರೆ ಅದರಿಂದ ಸಮಾಜದ ಅಭಿವೃದ್ಧಿ ಸಾಧ್ಯ ಎನ್ನುವುದು ಯುವ ಜನತೆಗೆ ಅವರ ಕಿವಿ ಮಾತು.

ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆ

ಸೈ ನಂ. 77/2, 77/3ಬಿ, 77/4, 77/5, ಮುನ್ನೇಕೊಳಲು,
ಮಾರತಹಳ್ಳಿ ಅಂಚೆ, ಬೆಂಗಳೂರು – 560 037

ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಶ್ರೀ ಕೆ. ಹರೀಶ್ ಅವರು. ಇವರು ಶ್ರೀಯುತ ಕೃಷ್ಣಮೂರ್ತಿ ಹಾಗೂ ಶ್ರೀಮತಿ ಸುಂದರಮ್ಮ ಅವರ ಮಗ. ಶ್ರೀಯುತರ ಜನನ 05.11.1966. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ನ ಪದವೀಧರರು. ಇವರು ಶಾಲಾ ವಿದ್ಯಾಭ್ಯಾಸ ಮಾಡುತ್ತಿದ್ದಾಗಿನಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಕಾರ್ಯಕರ್ತರು. ಸ್ವಂತ ಪರಿಶ್ರಮದಿಂದ ಬೆಳೆದು ಬಂದ ಇವರು ಜೀವನೋಪಾಯಕ್ಕಾಗಿ ವಿವಿಧ ಕೆಲಸಗಳಲ್ಲಿ ವಿನಮ್ರವಾಗಿ ತೊಡಗಿಸಿಕೊಂಡಿದ್ದರು, ಇಂದು ತಮ್ಮ ಕಾರ್ಯಕ್ಷಮತೆಯಿಂದ ಸಮಾಜ ಹಾಗೂ ದೇಶಕ್ಕೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿದ್ದಾರೆ. ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ನಲ್ಲಿ ಪದವಿಯನ್ನು ಪಡೆದ ನಂತರ ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ಬಾಹ್ಯಕಾಶ ಸಂಸ್ಥೆ



ಶ್ರೀ ಕೆ. ಹರೀಶ್
ಸಂಸ್ಥಾಪಕ ಅಧ್ಯಕ್ಷರು

(ಇಸ್ರೋ) ದಲ್ಲಿ ತಮ್ಮ ಔದ್ಯೋಗಿಕ ಜೀವನವನ್ನು ಆರಂಭಿಸಿದರು. ಇಲ್ಲಿ ಸುಮಾರು ಹದಿನೇಳು ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಇಸ್ರೋದ ಅನೇಕ ಬಾಹ್ಯಾಕಾಶ ಯೋಜನೆಗಳಿಗೆ ಮಹತ್ತರ ಕೊಡುಗೆಗಳನ್ನು ಸಲ್ಲಿಸಿದ್ದಾರೆ.

ಒಬ್ಬ ವಿಜ್ಞಾನಿಯಾಗಿ ಇಸ್ರೋ ಸಂಸ್ಥೆಯಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿದ ತರುವಾಯ, ಶ್ರೀ ಹರೀಶ್ ಕೃಷ್ಣಮೂರ್ತಿಯವರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ಸದುದ್ದೇಶದಿಂದ ವಾಗ್ದೇವಿ ವಿಲಾಸ ಸಮೂಹ ಶಿಕ್ಷಣ ಸಂಸ್ಥೆಗೆ ಅಡಿಪಾಯ ಹಾಕಿದರು. ತನ್ಮೂಲಕ ಶಿಕ್ಷಣದಲ್ಲಿ ಮೌಲ್ಯಾಧಾರಿತ ಹಾಗೂ ಭಾರತೀಯ ಸಂಸ್ಕೃತಿಗೆ ಒತ್ತು ನೀಡಿ ಸಮಾಜವು ಸದಾ ಸ್ಮರಿಸುವಂತಹ ಕಾರ್ಯವನ್ನು ಮಾಡಿದ್ದಾರೆ. ಇದಕ್ಕೂ ಒಂದು ಘಟನೆ ಕಾರಣ: ತಮ್ಮ ಪುತ್ರನಿಗೆ ಕಾನ್ವೆಂಟ್ ಶಾಲೆಯ ಅತಿಯಾದ ಶಿಸ್ತು ಹಿಂಸೆ ಕೊಡುವುದನ್ನು ಗಮನಿಸಿದ ಅವರು ಶಾಲಾ ಮುಖ್ಯಸ್ಥರನ್ನು ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಅವರಾಡಿದ ಮಾತುಗಳನ್ನು ಅರಗಿಸಿಕೊಳ್ಳಲಾಗದೆ ಹರೀಶ್ ಅವರು ಹೊಸ ಶಾಲೆ ಆರಂಭಿಸುವುದಕ್ಕೆ ದೃಢವಾದ ಸಂಕಲ್ಪ ಮಾಡಿ ತಮ್ಮ ವೃತ್ತಿಗೆ ರಾಜೀನಾಮೆ ನೀಡಿದರು. ಶಾಲೆಗೆ ಸೇರಿಸಿ ಎಂದು ನಾವು ಮನವಿ ಮಾಡಿಲ್ಲ ನೀವಾಗಿಯೇ ಹುಡುಕಿ ಬಂದು ಶಾಲೆ ಆಯ್ಕೆ ಮಾಡಿಕೊಂಡಿದ್ದೀರಿ, ಇಲ್ಲಿರುವ ಎಲ್ಲ ಕಟ್ಟಳೆಗಳನ್ನು ಒಪ್ಪಿಕೊಳ್ಳಲೇಬೇಕು' ಎಂದು ಕಾನ್ವೆಂಟ್ ಶಾಲೆಯ ಆಡಳಿತ ಮಂಡಳಿ ಮುಖ್ಯಸ್ಥರು ಹೇಳಿದ ಮಾತಿಗೆ ಉತ್ತರವಾಗಿಯೆ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆ 2004 ರಲ್ಲಿ ಉದಯವಾಯಿತು.

ಕೂಲಿ ಮಾಡುವವರಿಗೆ, ಆಟೋ ಓಡಿಸುವವರಿಗೆ ಬೀದಿ ವ್ಯಾಪಾರಿಗಳಿಗೆ ನಿತ್ಯ ಜೀವನ ಸಾಗಿಸುವುದೇ ಸವಾಲಾಗಿರುವ ಈ ಕಾಲದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಎಷ್ಟೇ ಬೆವರು ಹರಿಸಿ ದುಡಿದರೂ ಸಾಕಾಗುವುದಿಲ್ಲ. ಅದರಲ್ಲೂ ಸಿ.ಬಿ.ಎಸ್.ಇ ಪಠ್ಯಕ್ರಮ ಪದ್ಧತಿಯಲ್ಲಿ ಶಿಕ್ಷಣ ನೀಡುವ ಶಾಲೆಗಳತ್ತ ಯೋಚನೆ ಇದ್ದರೂ ಹಣ ಇಲ್ಲದೆ ಸಂಕಷ್ಟ ಅನುಭವಿಸುತ್ತಿರುವ ನೂರಾರು ಪಾಲಕರಿಗೆ ಈ ವಾಗ್ದೇವಿ ವಿಲಾಸ ಶಿಕ್ಷಣ ಸಮೂಹ ಸಂಸ್ಥೆಯು ಆಶಾಕಿರಣವಾಗಿ ಪರಿಣಮಿಸಿತು.

ನಂತರ ಅವಕಾಶ ವಂಚಿತ ಬಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ಒದಗಿಸಲೆಂದೇ ವರ್ತೂರಿನಲ್ಲಿಯೂ ವಾಗ್ದೇವಿ ವಿಲಾಸ ಸೂಪರ್ ಶಾಲೆಯೊಂದನ್ನು ಪ್ರಾರಂಭಿಸಲಾಯಿತು. ಈ ರೀತಿಯ ಶಾಲೆಯು ರಾಜ್ಯದಲ್ಲೇ ಪ್ರಥಮ

ಇರಬಹುದು. ಈ ಶಾಲೆಯನ್ನು ತೆರೆಯುವ ಉದ್ದೇಶದ ಹಿಂದೆ ಮಾನವೀಯ ದೃಷ್ಟಿಕೋನವಿದೆ ಬಡವರಲ್ಲೂ ಎಷ್ಟೋ ಮಕ್ಕಳು ಪ್ರತಿಭಾವಂತರಿರುತ್ತಾರೆ, ಆದರೆ ಸರಿಯಾದ ವೇದಿಕೆ ಅವರಿಗಿರುವುದಿಲ್ಲ. ಈ ನಿಟ್ಟಿನಲ್ಲಿ ಅಧ್ಯಕ್ಷರು ಬಡ ಪ್ರತಿಭಾನ್ವಿತ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸುವ ಅಭಿಲಾಷೆಯಿಂದ ಈ ಉಚಿತ ಶಿಕ್ಷಣದ ಯೋಜನೆ ಪ್ರಾರಂಭಿಸಿದ್ದಾರೆ. ಇದಕ್ಕಾಗಿಯೇ ವಾಗ್ದೇವಿ ವಿಲಾಸ ಸೂಪರ್ ಸ್ಕೂಲ್ ಎಜ್ಯುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವ ಕಾರ್ಯ ಪ್ರಾರಂಭಿಸಿದರು.

ಕೆ. ಹರೀಶ್ ಅವರ ಇಚ್ಛಾಶಕ್ತಿ ದೂರದೃಷ್ಟಿ ಬಡ ಮತ್ತು ಮಧ್ಯಮ ವರ್ಗಗಳ ಬಗ್ಗೆ ಅವರಿಗಿರುವ ಕಳಕಳಿಯ ಪರಿಣಾಮ ಇಂದು ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯು ಕ್ರಮೇಣ ಸಮೂಹವಾಗಿ ಬೆಳೆದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯ ಶಾಲೆಗಳು, ಮಾರತಹಳ್ಳಿ, ಬಿಡದಿ ಹಾಗೂ ವರ್ತೂರಿನಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಸಿದ್ದಾರೆ. ಮಾಂಟೆಸ್ಸರಿ ಮತ್ತು ಕಿಂಡರ್ ಗಾರ್ಡನ್ ಶಿಕ್ಷಣ ಪದ್ಧತಿ ಅಳವಡಿಸಿಕೊಳ್ಳಲಾಗಿದೆ. ಹಲಸಹಳ್ಳಿಯಲ್ಲಿ ವಾಗ್ದೇವಿ ವಿಲಾಸ ಪದವಿಪೂರ್ವ ಮತ್ತು ಪದವಿ ಕಾಲೇಜು ಇದೆ. ವಿದ್ಯಾರ್ಥಿಗಳಿಗೆ ಸಂಗೀತ ಕಲಿಸಲು ವಾಗ್ದೇವಿ ವಿಲಾಸ ಸಂಗೀತ ಕಲಾ ಮಂದಿರ ಆರಂಭಿಸಲಾಗಿದೆ. ಮುಖ್ಯವಾಗಿ ಪೂರ್ವ ಪ್ರಾಥಮಿಕ ಶಾಲೆಗಳ ಶಿಕ್ಷಕರ ಬೋಧನಾ ಕೌಶಲ್ಯ ವೃದ್ಧಿಸುವುದಕ್ಕಾಗಿ ವಾಗ್ದೇವಿ ವಿಲಾಸ ಶಿಕ್ಷಕರ ತರಬೇತಿ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಲ್ಲಿ ಮಾಂಟೆಸ್ಸರಿ, ಕಿಂಡರ್ ಗಾರ್ಡನ್ ಶಿಕ್ಷಣದ ಬಗ್ಗೆ ಒಂದು ವರ್ಷ ಸರ್ಟಿಫಿಕೇಟ್ ಕೋರ್ಸ್ ತರಬೇತಿ ನೀಡಲಾಗುತ್ತದೆ. ಈ ರೀತಿ ಒಂಭತ್ತು ಸಿ.ಬಿ.ಎಸ್.ಇ ಶಾಲೆಗಳು, ಮೂರು ಪಿ.ಯು.ಸಿ ಹಾಗೂ ಒಂದು ಪದವಿ ಕಾಲೇಜಿನ ಜೊತೆಗೆ ಮಲೇಶಿಯಾದ ಕೌಲಾಲಂಪೂರ್ ನಲ್ಲಿ ಒಂದು ಶಾಲೆ ವಿದ್ಯಾರ್ಥಿಗಳ ಸಮರ್ಥ ವ್ಯಕ್ತಿತ್ವ ವಿಕಾಸಕ್ಕೆ ಇಂಬು ಕೊಡುವ ಶಿಕ್ಷಣದ ಪರಿಸರವನ್ನು ನಿರ್ಮಾಣ ಮಾಡಿದೆ. ಈ ಎಲ್ಲ ಕೀರ್ತಿ ಅಧ್ಯಕ್ಷರಾದ ಕೆ. ಹರೀಶ್ ಅವರಿಗೆ ಸಲ್ಲುತ್ತದೆ.

ವಾಗ್ದೇವಿ ವಿಲಾಸ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ, ಶ್ರೀ. ಹರೀಶ್ ಕೃಷ್ಣಮೂರ್ತಿ ಯವರು ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ವೈಯಕ್ತಿಕವಾಗಿ ಗಮನಹರಿಸಿ ಅದು ಸುಗಮವಾಗಿ ನೆರವೇರುವಂತೆ

ನಿಗಾವಹಿಸುತ್ತಾರೆ. ಈ ರೀತಿಯಾಗಿ ಶಿಕ್ಷಣ ಸಂಸ್ಥೆಗಳನ್ನು ಹೇಗೆ ಸುಲಲಿತವಾಗಿ ಕಾರ್ಯ ನಿರ್ವಹಿಸುವಂತೆ ಮಾಡಬಹುದು ಎನ್ನುವ ವಿಚಾರದಲ್ಲಿ ಇವರು ದೇಶದ ಇತರ ಶಿಕ್ಷಣ ಸಂಸ್ಥೆಗಳಿಗೆ ಮಾದರಿಯಾಗಿದ್ದಾರೆ.

ಎಂಜಿನಿಯರಿಂಗ್ ವೃತ್ತಿ ಆರಂಭಿಸಿ, ಪ್ರವೃತ್ತಿಯಲ್ಲಿ ಶಿಕ್ಷಣ ತಜ್ಞರಾದ ಶ್ರೀಯುತ ಹರೀಶ್ ಅವರು ಸಾಹಿತ್ಯದ ಆಳವಾದ ಅಧ್ಯಯನವನ್ನು ಮಾಡಿ, ಶಿಕ್ಷಣ, ಪರಿಸರ ಹಾಗೂ ಅಧ್ಯಾತ್ಮಿಕ ವಿಚಾರಗಳ ಕುರಿತು ಅಂಕಣ ಬರಹಗಳನ್ನು, ಅನೇಕ ಕವನಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದಾರೆ. ಇವರು ರಚಿಸಿರುವ ವೈವಿಧ್ಯಪೂರ್ಣ ಕವಿತೆಗಳನ್ನು ಒಳಗೊಂಡ 'ಚಿಗುರು' ಎನ್ನುವ ಕವನ ಸಂಕಲನವನ್ನು ದಿವಂಗತ ಪ್ರೊ. ನಾರಾಯಣಾಚಾರ್ಯರು ಬಿಡುಗಡೆಗೊಳಿಸಿದ್ದಾರೆ.

ರಾಷ್ಟ್ರೀಯತೆಯ ವಿಚಾರದಲ್ಲಿ ಯಾರೊಂದಿಗೂ ರಾಜಿ ಮಾಡಿಕೊಳ್ಳದ ಶ್ರೀಯುತ ಹರೀಶ್ ಅವರು ಶಿಕ್ಷಣ ಹಾಗೂ ಸನಾತನ ಮೌಲ್ಯಗಳ ಸಂರಕ್ಷಣೆ



ಹಾಗೂ ಪೋಷಣೆಗಾಗಿ ಸಲ್ಲಿಸಿದ ಸುದೀರ್ಘ ಸೇವೆಯನ್ನು ಪರಿಗಣಿಸಿ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವುಗಳೆಂದರೆ:

- ಭಾರತೀಯ ವಿಜ್ಞಾನ ಸಂಸ್ಥೆಯಿಂದ ಆಯೋಜಿಸಲಾದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪುರಸ್ಕಾರ.
- ಜಲ ಸಂರಕ್ಷಣೆಯಲ್ಲಿ ತೋರಿದ ಮುಂದಾಳತ್ವಕ್ಕೆ ಬೆಂಗಳೂರು ಜಲಮಂಡಳಿಯಿಂದ ಕೊಡಲಾದ ಜಲಋುಷಿ ಪ್ರಶಸ್ತಿಗೆ ಭಾಜನರು.
- ಅದಮ್ಯ ಚೇತನ ಸಂಸ್ಥೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರಿಗೆ ನೀಡಲಾಗುವ ಪುರಸ್ಕಾರವನ್ನು 2015 ರಲ್ಲಿ ಶ್ರೀಮತಿ ಸ್ಮೃತಿ ಇರಾನಿಯವರಿಂದ, 2016 ರಲ್ಲಿ ಜೆ.ಪಿ. ನಡ್ಡಾ ಅವರಿಂದ ಸ್ವೀಕಾರ.
- ವಿಶ್ವ ದರ್ಶನ ಟ್ರಸ್ಟ್ ನಿಂದ 2023 ರಲ್ಲಿ ನೀಡಲಾದ ವಿಶ್ವದರ್ಶನ ಪ್ರಶಸ್ತಿ – 2023ರ ಪುರಸ್ಕೃತರು.

ವಿಷನ್ ಸಮೂಹ ಸಂಸ್ಥೆ

802, 9ನೇ ಬಿ ಮುಖ್ಯರಸ್ತೆ ಹೆಚ್.ಆರ್.ಬಿ.ಆರ್ ಲೇಔಟ್,
ಕಲ್ಯಾಣನಗರ 1ನೇ ಬ್ಲಾಕ್, ಬಾಣಸವಾಡಿ, ಬೆಂಗಳೂರು – 560 043

ವಿದ್ಯಾರ್ಥಿಗಳ ಕಲಿಕೆಯ ಆಸಕ್ತಿ ಹಾಗೂ ಪೋಷಕರ ಕನಸು ಅವರ ಇಚ್ಚೆಯನ್ನು ಅರಿತು, ಅವರ ಶಿಕ್ಷಣ ವೈಯಕ್ತಿಕ ಗುರಿಗಳನ್ನು ಸಾಧಿಸಲು, ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯವನ್ನು ವೃದ್ಧಿಗೊಳಿಸಿ ಅವರ ಮುಂದಿನ ಭವಿಷ್ಯವನ್ನು ಸಾಕಾರಗೊಳಿಸಿಕೊಳ್ಳಲು ವಿಷನ್ ಸಂಸ್ಥೆ 2006 ರಲ್ಲಿ ಕಲ್ಯಾಣ ನಗರದಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯ ಅಧ್ಯಕ್ಷರು ಶ್ರೀ. ರಾಮ ಮನೋಹರ ರೆಡ್ಡಿ. ಶ್ರೀಯುತ ರೆಡ್ಡಿಯವರು ಗಣಿತ, ವಿಜ್ಞಾನ ವಿಷಯಗಳಲ್ಲಿ ಪದವಿಯನ್ನು, AMIE ಎಂಜಿನಿಯರಿಂಗ್ ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಆಸಕ್ತಿ ಬೆಳೆಸಿಕೊಂಡರು. ಭಾರತದಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಉತ್ಸುಕತೆ ಹೊಂದಿ, 1991ರಲ್ಲಿ ಅನ್ವೇಷಣಾ ಮಾಂಟೆಸ್ಸರಿ ಹೌಸ್ ಆಫ್ ಚಿಲ್ಡ್ರನ್ಸ್ ಎಂಬ ಶಿಕ್ಷಣ ಸಂಸ್ಥೆಯನ್ನು


ಶ್ರೀ ರಾಮ ಮನೋಹರ ರೆಡ್ಡಿ

ಶ್ರೀಯುತರು ಸ್ಥಾಪನೆ ಮಾಡಿದರು. ನಂತರ 2006ರಲ್ಲಿ ವಿಷನ್ ಎಜುಕೇಷನ್ ಗ್ರೂಪ್ ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿ ಈ ಸಂಸ್ಥೆಯ ಮುಖಾಂತರ ವಿದ್ಯಾರ್ಥಿಗಳ ಉನ್ನತ ಭವಿಷ್ಯಕ್ಕಾಗಿ ಶ್ರಮಿಸಿ ಇಂದು ಕರ್ನಾಟಕದಲ್ಲಿ ವಿಷನ್ ಸಂಸ್ಥೆಯು ಮನೆ ಮಾತಾಗಿ ಸಾಧನೆ ಮಾಡಿದೆ. ರಾಮ ಮನೋಹರ ರೆಡ್ಡಿಯವರು ದೇಶಾದ್ಯಂತ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಸಲಹೆ, ಸೂಚನೆ ಮತ್ತು ತಿಳುವಳಿಕೆ ಕೊಡುತ್ತಾ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇವರ ಜೊತೆ ಜೋಡೆತ್ತುಗಳಂತೆ ಶ್ರೀಯುತ ರಾವಣ ಹಾಗೂ ಇಡಮಕಂಟಿ ಲಕ್ಷ್ಮಿರೆಡ್ಡಿ ಸಹಕರಿಸುತ್ತಿದ್ದಾರೆ.


ಶ್ರೀ ರಾವಣ ಬೊಡ್ಡು

ಶ್ರೀ ರಾವಣ ರವರು ಭಾರತ, U.S ಮತ್ತು U.K ಯಲ್ಲಿ 20 ವರ್ಷಗಳು ವೃತ್ತಿಪರ ಅನುಭವವನ್ನು ಹೊಂದಿದ್ದು ವಿಷನ್ ಸಂಸ್ಥೆಯಲ್ಲಿ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವಲ್ಲಿ ಇವರ ಅಪಾರ ಪ್ರಮಾಣದ ಜ್ಞಾನ ಮತ್ತು ಪರಿಣಿತಿಯ ಮಹತ್ವ ಪಾತ್ರವನ್ನು ವಹಿಸಿರುತ್ತದೆ. ರಾವಣ ರವರು NIT ಅಲಹಾಬಾದ್ ನಿಂದ ಇಂಜಿನಿಯರಿಂಗ್ ಪದವಿಯನ್ನು ಹಾಗೂ ಹೈದರಾಬಾದ್ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ನಲ್ಲಿ ಎಂ.ಟೆಕ್ ಪದವಿಯನ್ನು ಪಡೆದಿರುತ್ತಾರೆ ಮತ್ತು ಈ ಹಿಂದೆ ಐಸಾಫ್ಟ್ ಇಂಡಿಯಾದಲ್ಲಿ ಸಿ.ಇ.ಓ ಆಗಿ ಸೇವೆ ಸಲ್ಲಿಸಿರುತ್ತಾರೆ. ಭಾರತದಲ್ಲಿ R&D ಕೇಂದ್ರವನ್ನು ಇವರ ಮುಖ್ಯಸ್ತೆಯಲ್ಲಿ ಪ್ರಾರಂಭಿಸಿತು, ಇವರ ನಾಯಕತ್ವದಲ್ಲಿ ಕಂಪನಿಯ 1500 ವೃತ್ತಿಪರರಿಗೆ ಉದ್ಯೋಗವನ್ನು ಕಲ್ಪಿಸಿದ್ದಾರೆ. ರಾವಣ ರವರ ಈ ಶ್ರೇಷ್ಠ ಸಾಧನೆಗೆ ಹಲವಾರು ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಇದರ ಜೊತೆಗೆ ಅನ್ವೇಷಣೆಯಲ್ಲಿರುವ ಯುವ ಉದ್ಯಮಗಳಿಗೆ ಮಾರ್ಗದರ್ಶನ ಸಲಹೆ ಸಹಕಾರ ನೀಡಿ ಬೆನ್ನು ತಟ್ಟಿ ಅವರ ಏಳಿಗೆಗೆ ಸಹಕಾರಿಯಾಗಿದ್ದಾರೆ.

ಇಡಮಕಂಟಿ ಲಕ್ಷ್ಮಿ ರೆಡ್ಡಿ ರವರು ನಮ್ಮ ಸಂಸ್ಥೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಹಾಗೂ ಉತ್ತಮ ದಿಕ್ಕಿನೆಡೆ ಸಾಗಲು, ತಮ್ಮ ಕೌಶಲ್ಯ




ಶ್ರೀ ಇಡಮಕಂಟಿ ಲಕ್ಷ್ಮಿ ರೆಡ್ಡಿ

ಮತ್ತು ಅನುಭವವನ್ನು ತಮ್ಮ ಕಾರ್ಯತಂತ್ರದ ಮೂಲಕ ಅಳವಡಿಸಿ ಸಂಸ್ಥೆಯು ಏಳಿಗೆಗೆ ಅಪಾರ ಕೊಡುಗೆಯನ್ನು ನೀಡುತ್ತಿದ್ದಾರೆ. ಇಡಮಕಂಟಿ ಲಕ್ಷ್ಮಿ ರೆಡ್ಡಿ ರವರು 1987 ರಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಲವಾರು ಮೂಲ ಸೌಕರ್ಯ ಅಭಿವೃದ್ಧಿಯನ್ನು ಕಲ್ಪಿಸುವ ಯೋಜನೆಗಳು ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಅನುಭವವನ್ನು ಹೊಂದಿದ್ದು, ಇದರ ಜ್ಞಾನವನ್ನು ಸಂಸ್ಥೆಯ ಮೂಲಸೌಕರ್ಯವನ್ನು ಒದಗಿಸುವ ನಿಟ್ಟಿನಲ್ಲಿ ಇವರ ಕಾರ್ಯ ಮಹತ್ವದ್ದಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ನೆರವಾಗುವಲ್ಲಿ ಮತ್ತು ಅರ್ಹರಿರುವ ವಿಶೇಷವಾಗಿ ಗ್ರಾಮೀಣ ಭಾಗದ, ಹಿಂದುಳಿದ ಪ್ರದೇಶಗಳು ಹಾಗೂ ನಿರ್ಲಕ್ಷಿತ ಕುಟುಂಬಗಳ ವಿದ್ಯಾರ್ಥಿಗಳಿಗೆ ಜಾಗತಿಕ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಇವರ ಪಾತ್ರವು ಮಹತ್ವದ್ದಾಗಿದೆ. ಇವರ ಸಮಾಜ ಕಾಳಜಿಯೂ ಸಹ ಸಂಸ್ಥೆಯನ್ನು ಸ್ಥಾಪಿಸಲು ಕಾರಣವಾಯಿತು. ವಿಭಿನ್ನ ಹಿನ್ನಲೆ ವಿವಿಧ ಜನಾಂಗ ವಿವಿಧ ವರ್ಗ ಜನರುಗಳ ಮೂಲಕ ಬೆರೆತು ಎಲ್ಲ ಸಮುದಾಯಕ್ಕೂ ಶಿಕ್ಷಣವನ್ನು ಅದನ್ನು ತಲುಪಿಸಲು ಬಲವಾದ ಆಸೆಯನ್ನು ಹೊಂದಿ ಶಿಕ್ಷಣವನ್ನು ವಿಷನ್ ಸಂಸ್ಥೆಯ ಮೂಲಕ ನೀಡುತ್ತಿದ್ದಾರೆ. ಈ ಉತ್ತೇಜನದಿಂದ ವಿಷನ್ ಎಜುಕೇಷನಲ್ ಗ್ರೂಪ್ ಅನ್ನು ಸ್ಥಾಪಿಸಲು ಸಹ ಕಾರಣವಾಯಿತು. ಇಡಮಕಂಟಿ ಲಕ್ಷ್ಮಿ ರೆಡ್ಡಿ ರವರು ಭಾರತದ ನೆಲೆಯ ಶ್ರೀಮಂತ ಕಲೆ, ಪರಂಪರೆ, ಸಂಸ್ಕೃತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಲವಾರು ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ.

2006ರಲ್ಲಿ 60 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡು ಮೊದಲ ವರ್ಷದಲ್ಲಿಯೇ ಅತ್ಯುತ್ತಮ ಫಲಿತಾಂಶವನ್ನು ಪಡೆದು ಸಿ.ಇ.ಟಿ ಸ್ಪರ್ಧಾತ್ಮಕ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಪ್ರತಿಷ್ಠಿತ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಮ್ಮ ವಿದ್ಯಾರ್ಥಿಗಳು ಪ್ರವೇಶ ಪಡೆದರು.

ಈ ವಿದ್ಯಾರ್ಥಿಗಳ ಪ್ರೇರಣೆ ಹಾಗೂ ಉತ್ತಮ ಫಂತಾಂಶ, ಸಾಧನೆಗಳಿಂದ ಉತ್ತೇಜನಗೊಂಡು 17 ವಸಂತಗಳನ್ನು ಪೂರೈಸಿ ಈಗ 18ನೇ ವಸಂತಕ್ಕೆ 3000 ವಿದ್ಯಾರ್ಥಿಗಳೊಂದಿಗೆ ದಾಪುಗಾಲು ಇಡುತ್ತಿದ್ದೇವೆ. ಹಳೆಯ ವಿಧ್ಯಾರ್ಥಿಗಳ




ಉತ್ತಮ ಸಾಧನೆ ಮತ್ತು ಸಂಸ್ಥೆಯ ಬಗ್ಗೆ ಉತ್ತಮ ಪ್ರತಿಕ್ರಿಯೆ, ಸಂಸ್ಥೆಗೆ ಉತ್ತಮ ಹೆಸರು, ಕೀರ್ತಿ ತಂದಿದ್ದ ವಿದ್ಯಾರ್ಥಿಗಳ ಪ್ರವೇಶಾತಿಗಳಲ್ಲಿ ಗಣನೀಯವಾಗಿ ಹೆಚ್ಚಳವಾದರಿಂದ ನಮ್ಮ ಸಂಸ್ಥೆ ಈಗ ಬೆಂಗಳೂರಿನಲ್ಲಿ ಮೂರು (3) ಕ್ಯಾಂಪಸ್ ಗಳನ್ನು (ಕಾಲೇಜು) ಹೊಂದಿದ್ದು, ಇದರಿಂದ ರಾಜ್ಯಾದ್ಯಂತ ಪ್ರವೇಶಕ್ಕೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ನಮ್ಮ ಸಂಸ್ಥೆಯಲ್ಲಿ (ಕಾಲೇಜಿನಲ್ಲಿ) ಕಲಿತ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಇರುವಂತಹ ಪ್ರತಿಷ್ಠಿತ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದು ಪದವಿ ಗಳಿಸಿದ್ದಾರೆ ಮತ್ತು ಕರ್ನಾಟಕದಲ್ಲಿರುವ ಪ್ರತಿಯೊಂದು ವೈದ್ಯಕೀಯ ಕಾಲೇಜಿನಲ್ಲಿಯೂ ನಮ್ಮ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ, ಹಾಗೂ ಇಲ್ಲಿಯವರೆಗೂ ನಮ್ಮ ಕಾಲೇಜಿನ 4500 ವಿದ್ಯಾರ್ಥಿಗಳಿಗೂ ಅಧಿಕ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜಿನಲ್ಲಿ ಸೀಟು ದೊರತಿದೆ. ಇಲ್ಲಿಯವರೆಗೂ ಮೆಡಿಕಲ್ ಪದವಿ ಪಡೆದವರ ಸಂಖ್ಯೆ 4500 ಗಡಿ ದಾಟಿದ್ದು ಇದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಚಾರ.

ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಹಳೆಯ ವಿದ್ಯಾರ್ಥಿಗಳು ಕರ್ನಾಟಕದ ಪ್ರತಿಷ್ಠಿತ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಅಕ್ಷರಶಃ ಪ್ರತಿ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ಪ್ರವೇಶ ಪಡೆದು ಪದವಿ ಪಡೆದಿದ್ದಾರೆ. ಇಂಜನಿಯರಿಂಗ್ (ತಾಂತ್ರಿಕ) ಶಿಕ್ಷಣ ವಿಷಯಕ್ಕೆ ಬಂದರೆ ಕರ್ನಾಟಕದಲ್ಲಿ ಪ್ರಖ್ಯಾತಿಯನ್ನು ಪಡೆದಿರುವಂತಹ ತಾಂತ್ರಿಕ ವಿದ್ಯಾಲಯಗಳಲ್ಲಿ ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ. ಪದವಿ ಪಡೆದವರು ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗದಲ್ಲಿ ಇರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಚಾರ ಹಾಗೂ ಗೌರವದ ವಿಷಯ. ಇಷ್ಟೆಲ್ಲಾ ವಿದ್ಯಾರ್ಥಿಗಳ ಉತ್ತಮ ಸಾಧನೆ, ಕೀರ್ತಿ, ಯಶಸ್ಸುಗಳನ್ನು ನೋಡಿ ನಮ್ಮ ಸಂಸ್ಥೆಯ ಸಾಧನೆಗೆ ಹಾಗೂ ನಮ್ಮ ಸಂಸ್ಥೆಯ ಬೆಳವಣಿಗೆ ಹಾಗೂ ಯಶಸ್ಸಿಗೆ ಮುನ್ನುಡಿ ಬರೆದಿದೆ.

ಶ್ರೀ ವಿದ್ಯಾ ಕೇಂದ್ರ (ರಿ)

ದಿ ಸ್ಮಾರ್ಟ್ ಸ್ಕೂಲ್, ಎಸ್. ನಂ 77/2, ಮಾಚೋಹಳ್ಳಿ, 17ನೇ ಕಿ.ಮೀ.
ಮಾಗಡಿ ರಸ್ತೆ, ಬಾಪಗ್ರಾಮ ಅಂಚೆ, ಬೆಂಗಳೂರು – 560 091

ಶ್ರೀ ವಿದ್ಯಾ ಕೇಂದ್ರವು 2008ರಲ್ಲಿ ನೋಂದಣಿಯಾಗಿರುವ ಟ್ರಸ್ಟ್, ಇದು 2009 ರಿಂದ ದಿ ಸ್ಮಾರ್ಟ್ ಸ್ಕೂಲ್ ಎಂಬ ಶಾಲೆಯನ್ನು ನಡೆಸುತ್ತಾ ಬಂದಿದೆ. ಈ ಶಾಲೆಗೆ ಸಿ.ಬಿ.ಎಸ್.ಇ ಇಂದ ಮಾನ್ಯತೆ ದೊರಕಿದ್ದು



ಶಾಮಸುಂದರ ಶರ್ಮ ದಂಪತಿಗಳು

ಸ್ಥಾಪಕರು

ಎಲ್.ಕೆ.ಜಿ. ಇಂದ ಹನ್ನೆರಡನೇ ತರಗತಿವರೆಗೆ ಪಾಠ ಪ್ರವಚನಗಳು ನಡೆಯುತ್ತಿವೆ. ಈ ಶಾಲೆಯ ಸ್ಥಾಪಕರು ಅನುಭವಿ ಶಿಕ್ಷಕರಾದ ಶ್ರೀ ಎಲ್.ಎಸ್.ಶಾಮಸುಂದರ ಶರ್ಮರವರು.

ಅವರ ಜೊತೆ ಕೈ ಜೋಡಿಸಿದವರು ಅವರ ಧರ್ಮಪತ್ನಿ ಶ್ರೀಮತಿ ಬಿ.ಮಂಜುಳಾಂಬ ಹಾಗೂ ಇತರ ಟ್ರಸ್ಟಿಗಳು. ಶ್ರೀ ಶರ್ಮಾಜೀಯವರು ಈ ಹಿಂದೆ ಶ್ರೀ ವಾಣಿ ವಿದ್ಯಾ ಕೇಂದ್ರದ ರಾಜಾಜಿನಗರ, ಬಸವೇಶ್ವರನಗರ ಹಾಗೂ ಮಾಚೋಹಳ್ಳಿ ಈ ಮೂರೂ ಶಾಲೆಗಳ ಸೀನಿಯರ್ ಪ್ರಿನ್ಸಿಪಾಲ್ ಆಗಿದ್ದು ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ್ದವರು. ಇದಲ್ಲದೇ ಹೊಸದಾಗಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿದ್ದರು. ನುರಿತ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಯಾಗಿ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಸಂಘ ಸಂಸ್ಥೆಗಳೊಡನೆ ಸಂಪರ್ಕ ಹೊಂದಿದ್ದರು. ಅವರ ಈ ಹಿನ್ನಲೆ ಹೊಸತೊಂದು ಶಾಲೆಯ ಉದಯಕ್ಕೆ ಪೂರಕವಾಯಿತು.

ದಿ ಸ್ಮಾರ್ಟ್ ಶಾಲೆಯು ಪ್ರಾರಂಭವಾದಾಗ ಅಲ್ಲಿದ್ದವರು ಕೇವಲ ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು. ಆದರೆ ಇಂದು ಈ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 1750ರ ಆಸುಪಾಸಿನಲ್ಲಿದೆ. ಈ ಮಟ್ಟದ ಬೆಳವಣಿಗೆಗೆ ಅನೇಕ ಅಂಶಗಳು ಕಾರಣವಾಗಿವೆ. ಅವುಗಳಲ್ಲಿ ಕೆಲವನ್ನು ಈಗ ಗಮನಿಸೋಣ. ಈ ಶಾಲೆ ಇರುವ ಜಾಗವನ್ನು 2004ರಲ್ಲಿ ಕೊಂಡುಕೊಂಡಾಗ ಅದು ತುಂಬಾ ಇಳಿಜಾರಿನಿಂದ ಕೂಡಿ ಹೆಚ್ಚು ಕಡಿಮೆ ಬೀಳು ಬಿದ್ದ ಜಾಗವಾಗಿತ್ತು. ಅದರಲ್ಲಿ ಮುಳ್ಳು ಕಂಟಿಗಳು ತುಂಬಿದ್ದವು. ಮೊದಲು ಇಲ್ಲೊಂದು ಕ್ರೀಡಾ ಶಾಲೆಯನ್ನು ಸ್ಥಾಪಿಸುವ ಆಲೋಚನೆ ಇತ್ತು. ಆದರೆ ಅನುಭವಿ ತಜ್ಞರು ಇಲ್ಲಿ ಕ್ರೀಡಾ ಶಾಲೆಗಿಂತ ಸಿ.ಬಿ.ಎಸ್.ಇ ಶಾಲೆ ನಡೆಸಲು ಸಲಹೆ ನೀಡಿದರು. ಹೀಗಾಗಿ ಈ ಶಾಲೆ ರೂಪುಗೊಂಡಿತು.

2006ರಲ್ಲಿ ನಿಧಾನವಾಗಿ ಈ ಶಾಲೆಯ ಆರು ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಕೆಲಸ ಪ್ರಾರಂಭವಾಯಿತು. ನಂತರ ಒಂದು ಕೊಳವೆಬಾವಿ, ಸುತ್ತಲೂ ಗೋಡೆ ಮುಂತಾದ ಕೆಲಸಗಳು ಪ್ರಾರಂಭವಾದವು. ವಿವಿಧ ಜಾತಿಯ ಅನೇಕ ಮರಗಿಡಗಳನ್ನು ಇಲ್ಲಿ ನೆಡಲಾಯಿತು. ಇವು ಮುಂದೆ ಅಭಿವೃದ್ಧಿಯಾದ ಶ್ರೀಚಂದನ ನಾಲೆಡ್ಜ್ ಪಾರ್ಕಿನ ಬೆಳವಣಿಗೆಯ ಭಾಗವಾದುವು. ಆದರೆ ನಿಜವಾದ ಕೆಲಸ ಪ್ರಾರಂಭವಾಗಿದ್ದು 2008ರ ನಂತರ ಸರ್ಕಾರಿ ಅನುಮತಿ ಪತ್ರ

ಪಡೆಯಲು ಪ್ರಯತ್ನ ಪ್ರಾರಂಭವಾಯಿತು. ಸಾಕಷ್ಟು ಕಾಲದ ನಂತರ ಅನುಮತಿ ಸಿಕ್ಕಿತು. ಈ ಮಧ್ಯೆ ಅಕ್ಷಯ ತೃತೀಯದ ದಿನ ಗುದ್ದಲಿ ಪೂಜೆ ಸಹ ನೆರವೇರಿತು. ಆನಂತರ ಸಿ.ಬಿ.ಎಸ್.ಇ ಶಾಲೆ ನಡೆಸಲು ರಾಜ್ಯ ಸರ್ಕಾರದ ನಿರಾಪೇಕ್ಷಣಾ ಪತ್ರ ಪಡೆಯಲು ಸಾಕಷ್ಟು ಕಾಗದ ಪತ್ರಗಳನ್ನು ಹೊಂದಿಸಿಕೊಂಡು ಅರ್ಜಿ ಸಲ್ಲಿಸಲಾಯಿತು. ಮುಂದೆ ಅದನ್ನು ಪಡೆದುದು ಆಯಿತು.

ನಂತರದ ದಿನಗಳಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಯಿತು. ಇದಕ್ಕಾಗಿ ಒಂದು ಮಾಸ್ಟರ್ ಪ್ಲಾನ್ ಮಾಡಲಾಯಿತು. ತುಂಬಾ ಇಳಿಜಾರಿದ್ದ ಕಾರಣ ಅಲ್ಲಲ್ಲಿ ಬೇರೆ ಬೇರೆ ಹಂತಗಳ ವಿಂಗಡಣೆಯಾಯಿತು, ಒಂದು ದೊಡ್ಡ ಆಟದ ಮೈದಾನ ಹಾಗೂ ತೋಟ ರೂಪುಗೊಂಡವು. ಬಹುಮಹಡಿ ಕಟ್ಟಡವಾದ ಕಾರಣ ಭೂಮಿಯ ಮಣ್ಣು ಪರೀಕ್ಷೆ, ಭದ್ರವಾದ ಬುನಾದಿ ಇವಕ್ಕೆಲ್ಲಾ ಸಾಕಷ್ಟು ಹಣ ವೆಚ್ಚವಾಯಿತು. ಹೀಗೆ ಹಣ ಹೊಂದಿಸಲು ನೆರವಾದ ಎಲ್ಲರನ್ನೂ ಶರ್ಮಾಜೀ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

2009 ರ ಜೂನ್ ನಲ್ಲಿ ಶಾಲೆ ಪ್ರಾರಂಭವಾಗಬೇಕು. ಆಗಿನ್ನೂ ತಳಮಹಡಿ ಮುಗಿಸಿ ನೆಲಮಹಡಿಯ ತಾರಸಿ ಮಾತ್ರ ಸಿದ್ಧವಾಗಿತ್ತು. ಆಗ ಮಾರ್ಚ್ ಇಪ್ಪತ್ತರಂದು ಶ್ರೀ ಭಂಡಾರಕೇರಿ ಮಠದ ಶ್ರೀ ಶ್ರೀಗಳವರು ಶಾಲೆ ಕಟ್ಟಡದಲ್ಲಿ ಪೂಜೆ ಸಲ್ಲಿಸಿ ಭಿಕ್ಷೆ ಸ್ವೀಕರಿಸಲು ದಯಮಾಡಿ ಒಪ್ಪಿಕೊಂಡರು. ಅವರ ಆಶೀರ್ವಾದ ಶಾಲೆಯ ಬೆಳವಣಿಗೆಗೆ ನಾಂದಿಯಾಯಿತು.

ಮುಂದೆ ಶಾಲೆಯ ಕೆಲಸಗಳು ಭರದಿಂದ ಸಾಗುತ್ತ ಜೂನ್ ವೇಳೆಗೆ ಕಟ್ಟಡದ ಕೆಲಸ ಒಂದು ಹಂತಕ್ಕೆ ಬಂತು. ಶರ್ಮಾಜಿಯವರ ಹೆಸರಿನ ಬಲದಿಂದ ಒಂದಷ್ಟು ಪೋಷಕರು ಹೊಸ ಶಾಲೆಯೆನ್ನದೇ ತಮ್ಮ ಮಕ್ಕಳನ್ನು ಸೇರಿಸಿದರು. ಬೆಂಗಳೂರಿನ ಹೊರವಲಯದಲ್ಲಿದ್ದ ಶಾಲೆಗೆ ವಾಹನ ಸೌಕರ್ಯ ಬೇಕಿತ್ತು. ಅದಕ್ಕಾಗಿ ಕೆಲವು ಬಸ್ಗಳನ್ನು ಕೊಂಡುಕೊಳ್ಳಲಾಯಿತು. ಅನೇಕ ಶಾಲೆಗಳಲ್ಲಿ ಮಕ್ಕಳು ದೂರದಿಂದ ಬಂದಾಗ ತಾವು ತಂದ ಆಹಾರದ ಡಬ್ಬಿ ಕೆಲವರಿಗೆ ಇಷ್ಟವಾಗುತ್ತಿರಲಿಲ್ಲ. ಅದು ಹಾಳಾದರೆ ಬೇರೇನೂ ಸಿಗುತ್ತಿರಲಿಲ್ಲ. ಹೀಗೆ ಅನೇಕ ಮಕ್ಕಳಿಗೆ ಆಟ - ಪಾಠಗಳಲ್ಲಿ ಆಸಕ್ತಿ ಉಳಿಯುತ್ತಿರಲಿಲ್ಲ. ಇದನ್ನೆಲ್ಲಾ ಗಮನಿಸಿ ಶಾಲೆಯಲ್ಲೇ ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಊಟವನ್ನು ನೀಡುವ ವ್ಯವಸ್ಥೆ ಮಾಡಲಾಯಿತು. ಇದರ ಪ್ರಯೋಜನ ಮಕ್ಕಳಿಗಷ್ಟೇ ಅಲ್ಲದೇ ಶಾಲೆಯ

ಶಿಕ್ಷಕರು, ಎಲ್ಲಾ ಸಿಬ್ಬಂದಿ ಹಾಗೂ ಅಭ್ಯಾಗತರಿಗೂ ದೊರಕಿತು. ಇದಕ್ಕಾಗಿ ಸ್ವಚ್ಛ ಆರೋಗ್ಯಕರ ವಾತಾವರಣದಲ್ಲಿ ಅಡುಗೆ ಮಾಡಿ ಬಡಿಸುವ ಜವಾಬ್ದಾರಿ ಹೊರಬೇಕಾಗಿತ್ತು. ಹೀಗೆ ಅಡುಗೆ ಶಾಲೆ, ನುರಿತ ಬಾಣಸಿಗರು, ಗುಣಮಟ್ಟದ ದವಸ ಧಾನ್ಯ, ತರಕಾರಿಗಳು, ಹಾಲು, ಮೊಸರು ಹೀಗೆ ಎಲ್ಲವನ್ನೂ ಯೋಜನಾ ಬದ್ಧವಾಗಿ ಏರ್ಪಾಡು ಮಾಡಲಾಯಿತು. ಈ ವ್ಯವಸ್ಥೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. 2020ರಲ್ಲಿ ಕರೋನಾ ಸಂಕಷ್ಟದಿಂದ ಶಾಲೆಯಲ್ಲಿ ತರಗತಿಗಳು ನಡೆಯದೇ ಎಲ್ಲರಿಗೂ ತಿಂಡಿ, ಊಟ ನೀಡುವ ವ್ಯವಸ್ಥೆ ನಿಂತು ಹೋಯಿತು. ಅದು ಮತ್ತೆ ಪ್ರಾರಂಭವಾಗಲಿಲ್ಲ.

ಶಾಲೆ ಬೆಳೆಯುತ್ತಿದ್ದಂತೆ ಮಕ್ಕಳು ಮತ್ತು ಶಿಕ್ಷಕರ ಸಂಖ್ಯೆಯು ಬೆಳೆಯಿತು. ಅದಕ್ಕೆ ತಕ್ಕಂತೆ ಅಗತ್ಯವಾದ ಸಲಕರಣೆಗಳು, ಪೀಠೋಪಕರಣಗಳು ಮತ್ತು ಇತರ ಸಾಮಗ್ರಿಗಳು ಸೇರ್ಪಡೆಯಾಗುತ್ತಾ ಹೋಗಿ ಇಂದು ಈ ಶಾಲೆ ಬೆಂಗಳೂರಿನ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿದೆ. ಕಳೆದ ಹನ್ನೆರಡು ವರ್ಷಗಳಿಂದ ಹತ್ತನೇ ತರಗತಿಯಲ್ಲಿ ನಿರಂತರವಾಗಿ ನೂರಕ್ಕೆ ನೂರು ಮಕ್ಕಳು ತೇರ್ಗಡೆಯಾಗುತ್ತಿದ್ದಾರೆ. ಹನ್ನೆರಡನೇ ತರಗತಿಯಲ್ಲೂ ಉತ್ತಮ ಫಲಿತಾಂಶ ಬರುತ್ತಿದೆ. ಇದಕ್ಕೆಲ್ಲಾ



ಶಾಲೆಯ ಶಿಕ್ಷಕ ವರ್ಗ ಹಾಗೂ ಎಲ್ಲಾ ಸಿಬ್ಬಂದಿಗಳ ಶ್ರಮ ಕಾರಣ. ಇದಲ್ಲದೇ ಪೋಷಕರ ಸಹಕಾರ, ನಂಬಿಕೆ ಈ ಶಾಲೆಗೆ ಸದಾ ದೊರಕಿದೆ.

ಸ್ಮಾರ್ಟ್ ಶಾಲೆಯಲ್ಲಿ ಹೆಸರಿಗೆ ತಕ್ಕಂತೆ ಮಾಹಿತಿ ತಂತ್ರಜ್ಞಾನದ ಹಾಗೂ ಇತರ ಹೊಸ ಹೊಸ ಉಪಕರಣಗಳನ್ನು ಕಾಲ ಕಾಲಕ್ಕೆ ತಕ್ಕಂತೆ ಅಳವಡಿಸಲಾಗಿದೆ. ಇದೀಗ ಕೃತಕ ಬುದ್ಧಿಮತ್ತೆಯ ಪ್ರಯೋಗಾಲಯವೂ ಸೇರ್ಪಡೆಯಾಗಿದೆ. ಶಾಲೆಯ ಹೆಗ್ಗಳಿಕೆ ಎಂದರೆ ಇದರ ಆವರಣದಲ್ಲಿರುವ ಶ್ರೀಚಂದನ ನಾಲೆಡ್ಜ್ ಪಾರ್ಕ್. ಇಲ್ಲಿ ಮುನ್ನೂರಕ್ಕೂ ಹೆಚ್ಚು ವಿವಿಧ ಜಾತಿಯ ದೇಶ - ವಿದೇಶಗಳ ಮರ ಗಿಡಗಳಿವೆ. ಒಂದು ವಿಜ್ಞಾನವನ, ಭೂವನ, ಜೀವ ವೈವಿಧ್ಯ ಉದ್ಯಾನ ಇವು ಅನೇಕ ಪ್ರವಾಸಿಗರನ್ನು ವರ್ಷವಿಡೀ ಆಕರ್ಷಿಸುತ್ತಿವೆ. ಶಾಲೆಯ ಮಕ್ಕಳಿಗೆ ಉತ್ತಮ ಮೌಲ್ಯಗಳನ್ನು ಕಲಿಸುವ ಧ್ಯೇಯ ಈ ಶಾಲೆಯದು. ಹೀಗಾಗಿ ಶಾಲೆಯು "Indian soul with global outlook" ಎಂಬ ಗುರಿಯನ್ನು ಹೊಂದಿದೆ. "ಪೂರ್ಣಮೇವಾವಶಿಷ್ಯತೇ" ಎಂಬ ಈಶಾವಾಸ್ಯದ ನುಡಿ ಈ ಶಾಲೆಯ ಧ್ಯೇಯ ವಾಕ್ಯ. ಶಾಲೆಯ ವಿವಿಧ ಚಟುವಟಿಕೆಗಳು, ಇಲ್ಲಿ ಆಚರಿಸುವ ವಿಶೇಷ ಉತ್ಸವಗಳು ಇವೆಲ್ಲಾ ಮನೆ ಮಾತಾಗಿವೆ. ಶಾಲೆಯ ಬೆಳವಣಿಗೆಗೆ ಕೈ ಜೋಡಿಸಿದ ಎಲ್ಲರ ಕೊಡುಗೆ ಪ್ರಶಂಸನೀಯ.

ಕನ್ನಡ ನಾಡಿನಲ್ಲಿ ಶಿಕ್ಷಣ ರಂಗಕ್ಕೆ ಸಂಬಂಧಿಸಿದಂತೆ ಸಾವಿರಾರು ಗ್ರಂಥಗಳು ಪ್ರಕಟವಾಗಿವೆ. ಆ ಪೈಕಿ ಶಾಲಾ ಕಾಲೇಜುಗಳ ಸ್ಥಾಪನೆಗೆ, ವಿದ್ಯಾ ಪ್ರಸಾರಕ್ಕೆ ಶ್ರಮಿಸಿದವರು, ಅದಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟು ದುಡಿದವರು, ಮಡಿದವರು ಹತ್ತಾರು ಮಂದಿ. ಏಕಾಂಗಿಗಳಾಗಿ ತಮ್ಮ ಕುಟುಂಬ ಜೀವನ ನಡೆಸುವುದೇ ಕಷ್ಟವಾಗಿದ್ದರೂ ಲೆಕ್ಕಿಸದೇ ಕನ್ನಡ ಮಕ್ಕಳು ವಿದ್ಯಾವಂತರಾಗ ಬೇಕೆಂದು ತನು ಮನ ಧನಗಳಿಂದ, ಅಹೋರಾತ್ರಿ ಶ್ರಮಿಸಿದ ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಜೀವನ-ಸಾಧನೆ, ಎಲ್ಲ ಕಾಲಕ್ಕೂ ಆದರ್ಶಪ್ರಾಯವಾಗಿದೆ, ಸ್ಫೂರ್ತಿದಾಯಕವಾಗಿದೆ. ಆದರೆ ಹಿಂದಿನ ತಲೆಮಾರಿನ ಆ ಮಹಾಪುರುಷರ ತ್ಯಾಗ, ಜೀವನಾದರ್ಶಗಳು ಇಂದಿನ ಯುವ ಜನಾಂಗಕ್ಕೆ ತಿಳಿದಿಲ್ಲ. ಇದನ್ನು ತಿಳಿಸುವ ಕಾರ್ಯದ ಅಂಗವಾಗಿ ಒಂದು ಕಿರು ಪ್ರಯತ್ನವಾಗಿ ಬೆಂಗಳೂರು ನಗರದಲ್ಲಿರುವ ಹಳೆಯ, ಹಿರಿಯ, ಗಣ್ಯ ಶಾಲಾ-ಕಾಲೇಜುಗಳ ಸ್ಥಾಪಕರನ್ನು ಹತ್ತಾರು ಮಂದಿಯ ಜೀವನ ಮತ್ತು ಸಂಸ್ಥೆಗಳಿಗೆ ಶ್ರಮಿಸಿದ ಪರಿಯನ್ನು ಜನರ ಮುಂದಿಡಬೇಕು. ನೆನ್ನೆಯಿಂದ ಇಂದು, ಇಂದಿನಿಂದ ನಾಳೆ ಎಂಬ ತತ್ವದ ಅನುಸಾರ ನಿನ್ನೆಯ ಇತಿಹಾಸ ಇಂದಿಗೆ ಸ್ಫೂರ್ತಿ, ಮುಂದಿನ ಜನಕ್ಕೆ ಬುನಾದಿ ಎಂಬ ದೃಷ್ಟಿಯಿಂದ ನಮಗೆ ಸಾಧ್ಯವಾದಷ್ಟು ಹಿರಿಯ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ಪರಿಚಯವನ್ನು ನೀಡುವ ಶಿಕ್ಷಣ ಗ್ರಂಥವನ್ನು ಸಂಪಾದಿಸಿದ್ದೇವೆ. ಇನ್ನೂ ಅನೇಕ ವಿದ್ಯಾಸಂಸ್ಥೆಗಳ ಸಂಸ್ಥಾಪಕರನ್ನು ಗುರುತಿಸಬೇಕಾಗಿದೆ. ಅವರ ಬಗ್ಗೆ, ಅವರು ಕಟ್ಟಿದ ಸಂಸ್ಥೆಗಳ ಇತಿಹಾಸದ ಬಗ್ಗೆ ಗ್ರಂಥಗಳು ಬರಬೇಕಾಗಿದೆ. ಆ ದಿಸೆಯಲ್ಲಿ ಈ ಗ್ರಂಥ ಒಂದು ಅಳಿಲ ಸೇವೆ.

ಪ್ರಕಾಶಕರು

ವಿನಯ್ ಫೌಂಡೇಷನ್

ನಂ. ೪೨, ಲತಾಕುಂಜ, ೧೪ನೇ ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ, ಎಸ್.ಎಸ್. ಪಾಳ್ಯ
ಬಿಟಿಎಂ ಲೇಔಟ್ ೨ನೇ ಹಂತ, ಬೆಂಗಳೂರು - ೭೬